
ಸಿದ್ಧಗಂಗಾ




ಜೂನ್-ಸೆಪ್ಟಂಬರ್

1974



ಶ್ರೀ ಎಂ. ಚಿಕ್ಕಣ್ಣಯ್ಯಪ್ಪನವರು
ಪ್ರಿನ್ಸಿಪಾಲ್

ಕಾಲೇಜಿನ ತಾಂತ್ರಿಕ ಕಾರ್ಯಾಗಾರ




ಸಿದ್ಧಗಂಗಾ ಇಂಜನಿಯರಿಂಗ್ ಕಾಲೇಜ್
ತುಮಕೂರು

ವಿದ್ಯಾರ್ಥಿಗಳಿಗೆ ಕಾರ್ಯಜ್ಞಾನ
ನೀಡುವ ತಾಂತ್ರಿಕ ವಿಭಾಗ



ನಿರ್ಮಾಣಗೊಳ್ಳುತ್ತಿರುವ
ವಿದ್ಯಾರ್ಥಿನಿಲಯ



ಲೇಖನ: ಪುಟ 24

'ಸಿದ್ಧಗಂಗಾ'
[ತ್ರೈಮಾಸಿಕ]

ಜೂನ್ - ಸೆಪ್ಟೆಂಬರ್ ೧೯೭೪

ಪ್ರಕಾಶಕರು :

ಶ್ರೀ ಹೆಚ್. ಬಿ. ಗಂಗಾಧರಯ್ಯ,
ಬಿ. ಎಸ್‌ಸಿ,; ಬಿ. ಇಡಿ.
ಹಳೆಯ ವಿದ್ಯಾರ್ಥಿಗಳ ಸಂಘದ ಪರವಾಗಿ,
ಶ್ರೀ ಸಿದ್ಧಗಂಗಾ ಕ್ಷೇತ್ರ.

ಸಂಪಾದಕರು :

ಶ್ರೀ ಚನ್ನಪ್ಪ ಎರೇಸೀಮೆ, ಪ್ರ. ಸಂಪಾದಕ.
ಹಿ. ಚಿ. ಶಾಂತವೀರಯ್ಯ, ಎಂ.ಎ. ಬಿ.ಇಡಿ.
ಟಿ. ಆರ್. ಮಹದೇವಯ್ಯ, ಎಂ. ಎ.
ಆರ್. ರಾಚಪ್ಪ, ಎಂ. ಎ.
ಪಿ. ಆರ್. ತಿಪ್ಪೇಸ್ವಾಮಿ, ಬಿ. ಎ.
ಎಂ. ರೇಣುಕಾರಾಧ್ಯ.

ಮುದ್ರಕರು :

ಶ್ರೀಮತಿ ಹೆಚ್. ಸಿ. ಗೌರಮ್ಮ,
ಶ್ರೀ ನಿರಂಜನ ಪ್ರಿಂಟರ್ಸ್, ರಾಜಾಜಿನಗರ,
ಬೆಂಗಳೂರು-10.

ಪತ್ರಿಕೆ ಪ್ರಕಟವಾಗುವ ಸ್ಥಳ :

ಶ್ರೀ ಸಿದ್ಧಗಂಗಾ ಕ್ಷೇತ್ರ

ಪತ್ರಿಕೆ ಹೊರಡುವ ಮಾಸಗಳು :
ಮಾರ್ಚ್, ಜೂನ್, ಸೆಪ್ಟೆಂಬರ್, ಡಿಸೆಂಬರ್

ಚಂದಾ ವಿವರ :

ಬಿಡಿ ಸಂಚಿಕೆ	ರೂ. 1	50
ವಾರ್ಷಿಕ ಚಂದಾ	6	00

ಬಿಡಿ ಸಂಚಿಕೆಗಳಿಗೆ ಅಂಚೆ ವೆಚ್ಚ ಪ್ರತ್ಯೇಕ. ಚಂದಾದಾರನಿಗೆ ಅಂಚೆ ವೆಚ್ಚವಿಲ್ಲ.

ಶ್ರೀವಾಣಿ

ಭಾರತೀಯರ ಭವ್ಯ ನಾಗರೀಕತೆಯು ಅತ್ಯಂತ ಪ್ರಾಚೀನ ಕಾಲದಿಂದಲೂ ಕರ್ತವ್ಯಪಾಲನೆ ಹಾಗೂ ಕರ್ತವ್ಯದ ಹಿರಿಮೆಗಳಿಗೆ ಆಧ್ಯ ಸ್ಥಾನವನ್ನು ಕೊಟ್ಟಿದೆ. ಆದರೂ ಸಹ ಯಾವ ಕಾರಣದಿಂದಲೋ, ನಮ್ಮ ಜನತೆಯಲ್ಲಿ ಕರ್ತವ್ಯದತ್ತ ಒಲವು ಕಾಣದಾಗುತ್ತಿದೆ. ಕರ್ತವ್ಯಲೋಪ ಎಲ್ಲೆಲ್ಲೂ ಗೋಚರಿಸುತ್ತಿದೆ. ಹಕ್ಕು ಬಾಧ್ಯತೆಗಳು ಕೇವಲ ನಾವು ಪಾಲಿಸಿದ ಕರ್ತವ್ಯದ ಫಲವಾಗಿ ಮಾತ್ರ ದೊರೆಯಲು ಸಾಧ್ಯ ಎಂಬುದರ ಅರಿವಿಲ್ಲದೆ ನಮ್ಮ ಜನತೆ ಇಂದು ಹಕ್ಕುಗಳಿಗೆ ಮಾತ್ರ ಆಶೆ ಪಡುತ್ತಿದೆ. ಉಳುಮೆ ಮಾಡದೆ, ಭೀಜ ಬಿತ್ತದೆ ಬೆಳೆಯ ಫಸಲನ್ನು ಬಯಸುವ ರೈತರನ್ನು ಕಾಣುತ್ತಿದ್ದೇವೆ. ಕಾರ್ಮಿಕ ಕಾರ್ಖಾನೆಯಲ್ಲಿ ಶ್ರಮಿಸದೆ ಹೆಚ್ಚು ಸಂಬಳ ಸಾರಿಗೆಗಳನ್ನು ಪಡೆದು, ಸೌಖ್ಯವಾಗಿರಲು ಅಪೇಕ್ಷಿಸುತ್ತಾನೆ. ವ್ಯಾಸಂಗವೂ ಬೇಡ, ಪರೀಕ್ಷೆಯೂ ಬೇಡ ಉತ್ತೀರ್ಣರಾಗಬೇಕು ಎಂದು ಇಚ್ಛಿಸುತ್ತಿದ್ದಾರೆ ವಿದ್ಯಾರ್ಥಿಗಳು. ಕರ್ತವ್ಯವನ್ನು ನೆರವೇರಿಸದೆ ಹಕ್ಕುಗಳಿಗೆ ಕಾದಾಡುವ ಪ್ರವೃತ್ತಿ ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಬಹಳವಾಗಿ ಹರಡುತ್ತಿರುವುದು ನಮ್ಮ ದುರ್ದೈವ ಇತರರನ್ನು ದುಡಿಯುವಂತೆ ಮಾಡಿ ಅವರ ದುಡಿತದ ಫಲವನ್ನು ತಾವು ಅನುಭವಿಸಬೇಕೆಂಬ ಹಂಬಲ ಹಲವ

ಕರ್ತವ್ಯ ಪ್ರಜ್ಞೆ

ರಿಗಿದೆ. ಈ ದುಷ್ಟ ಹವ್ಯಾಸಗಳನ್ನು ಸನಾತನ ಧರ್ಮವೆಂದು ಬಣ್ಣಿಸುವುದು ಒಂದು ವಾಡಿಕೆಯಾಗಿಬಿಟ್ಟಿದೆ. ಈ ವಾದವು ಸತ್ಯಕ್ಕೆ ಬಹು ದೂರವಾದುದು. ಭಾರತೀಯ ಧರ್ಮವು ಎಂದೂ, ಯಾವ ಸನ್ನಿವೇಶದಲ್ಲೂ ಸೋಮಾರಿತನ, ನಿರುತ್ಸಾಹ, ಕರ್ತವ್ಯಭ್ರಷ್ಟತೆಗಳನ್ನು ಪೋಷಣೆ ಮಾಡಿಲ್ಲ. ಬದಲಾಗಿ ನಮ್ಮ ಧರ್ಮವು ಕ್ಷಣ ಕ್ಷಣದಲ್ಲೂ ಸತ್ವಪೂರ್ಣ, ಕರ್ತವ್ಯನಿಷ್ಟ, ಸಶಕ್ತ ಹಾಗೂ ಉತ್ಸಾಹಪೂರ್ಣ ಜೀವನವನ್ನು ಸಾಗಿಸಲು ಜನತೆಯನ್ನು ಪ್ರೇರೇಪಿಸುತ್ತಾ ಬಂದಿದೆ. ಕರ್ತವ್ಯನಿಷ್ಠನಾದ ವ್ಯಕ್ತಿ ಮಾತ್ರ ಜೀವಿಸಿರಲು ಅರ್ಹನೆಂದು ಉಪನಿಷತ್ತು ಸಾರುತ್ತಿದೆ: "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಗ್ಂ ಸಮಾಃ"— ಅಹರ್ನಿಶಿ

ದುಡಿದು, ಅವಿಶ್ರಾಂತವಾಗಿ ಶ್ರಮಿಸಿ ಶತ ವರ್ಷಗಳು ಬಾಳ್ವಿಕೆ ನಡೆಸಬೇಕೆಂಬ ಉತ್ಕಟೇಚ್ಛೆಯನ್ನು ಪ್ರತಿಯೋರ್ವನೂ ಹೊಂದಬೇಕು. ಉದ್ಯೋಗಶೀಲತ್ವವೇ ಪುರುಷ ಲಕ್ಷಣವು. ಎಡೆಬಿಡದೆ ಉದ್ಯೋಗದಲ್ಲಿ ತೊಡಗಿದ್ದು ಆಸಕ್ತಿಯಿಂದ ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ನೆರವೇರಿಸುವುದಾಗಬೇಕು. "ನಿಯತಂ ಕುರು ಕರ್ಮತ್ವ, ಕರ್ಮಜ್ಯಾಯೋಹ್ಯ ಕರ್ಮಣಃ" ಎಂಬುದಾಗಿ ಭಗವದ್ಗೀತೆಯಲ್ಲಿ ಪರಮಾತ್ಮನು ಅಪ್ಪಣೆ ಕೊಡಿಸಿರುವಂತೆ ಕರ್ತವ್ಯಪಾಲನೆಯು ಕ್ರಮಬದ್ಧವಾಗಿಯೂ ನಿರಂತರವಾಗಿಯೂ ನಿಯಮಬದ್ಧವಾಗಿಯೂ ನೆರವೇರಿಸಲ್ಪಡಬೇಕು. ಕರ್ತವ್ಯನಿಷ್ಠ ವ್ಯಕ್ತಿಯೇ ಶಿಷ್ಟನು. ಕರ್ತವ್ಯಭ್ರಷ್ಟ ವ್ಯಕ್ತಿಯೇ ದುಷ್ಟನು ಎಂಬ ಮನೋಭಾವ ಸಮಾಜದಲ್ಲಿ ಬೆಳೆಯಬೇಕು. ಜಗಜ್ಜ್ಯೋತಿ ಬಸವೇಶ್ವರರು "ಕಾಯಕವೇ ಕೈಲಾಸ"ವೆಂಬ ಮಂತ್ರವನ್ನು ಘೋಷಿಸಿ ಕಾಯಕದ ಮಹತ್ವವನ್ನು ಜಗತ್ತಿಗೇ ಸಾರಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕಾಯಕದ ಗಳಿಕೆಯಲ್ಲಿಯೇ ಜೀವನ ಸಾಗಿಸಬೇಕು. ಇತರರ ಕೃಪೆಗೆ ಕಾಯ್ವುದು ಹೇಯವಾದುದು. ತನ್ನ ಕರ್ತವ್ಯವನ್ನು ನ್ಯಾಯ ನಿಷ್ಠೆಗಳಿಂದ ಪ್ರಾಮಾಣಿಕವಾಗಿ ಪರಿಪಾಲಿಸುವುದೇ ಪ್ರತಿಯೋರ್ವ ಜೀವಿಯ ಆದರ್ಶ ಧ್ಯೇಯವಾಗಬೇಕು.

ಈ ಸಂಚಿಕೆಯಲ್ಲಿ

ಚಾರಿತ್ರಿಕ ಹೇಳಿಕೆ

1974, ಮೇ 31 ರಂದು ಶ್ರೀ ಶ್ರೀಗಳವರು ಪತ್ರಿಕಾಪ್ರತಿನಿಧಿಗಳನ್ನು ಕರೆಸಿ ತಾವು ತಳೆದ ಐತಿಹಾಸಿಕ ನಿಲುವನ್ನು ವಿವರಿಸಿದರು. ತಮ್ಮ ಲಿಖಿತ ಹೇಳಿಕೆಯನ್ನು ಪ್ರತಿನಿಧಿಗಳಿಗಿತ್ತರು. ಅದರ ಪೂರ್ಣಪಾಠವನ್ನು ಕೆಳಗೆ ಕೊಡಲಾಗಿದೆ.



ಶ್ರೀಸಿದ್ಧಗಂಗಾ ಮಠದಲ್ಲಿ ನಡೆಯುತ್ತಿರುವ ಉಚಿತ ವಿದ್ಯಾರ್ಥಿನಿಲಯದ ಬಗ್ಗೆ ಕೆಳಕಂಡ ಹಲವು ಮುಖ್ಯ ವಿಷಯಗಳನ್ನು ಮಹಾಜನಗಳ ಅವಗಾಹನೆಗೆ ತರಬಯಸುತ್ತೇವೆ.

ನಿಲಯವು ರೂಪಿಸಿ ತೋರಿಸಿದ ಆದರ್ಶ

ನಿಲಯವು 1917ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು. ವಿದ್ಯಾರ್ಥಿ ನಿಲಯಗಳನ್ನು ಕೋಮುವಾರು ರೀತ್ಯಾ ಸ್ಥಾಪಿಸಿ ನಡೆಸಲು ಸರ್ಕಾರಗಳೇ ಉತ್ತೇಜನನೀಡುತ್ತಿದ್ದ ಕಾಲವದು. ಆದಾಗ್ಯೂ ಪ್ರಾರಂಭದ ದಿನದಿಂದಲೂ ನಿಲಯವು ಎಲ್ಲಾ ಕೋಮಿನ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಿತು. ಜಾತಿರಹಿತ, ವರ್ಗರಹಿತ ಸಮಾಜ ಸ್ಥಾಪನೆಯಾಗಬೇಕೆಂಬ ಮಹದಾಶೆಹೊಂದಿ ಆದರ್ಶವನ್ನು ರೂಪಿಸಿ ತೋರಿಸಿತು. ಅಂದು ನಿಲಯವು ಸರ್ಕಾರದಿಂದ ಯಾವುದೇ ಸಹಾಯವನ್ನು ಹೊಂದುತ್ತಿರಲಿಲ್ಲ.

ಸರಕಾರ ನೀಡಿದ ನೆರವು : 1936ನೇ ಇಸವಿಯ ವೇಳೆಗೆ ಸರ್ಕಾರವು ಸಹಾಯಧನವನ್ನು ನೀಡಲು ಮುಂದಾಯಿತು. ಆಗ ನಿಲಯದಲ್ಲಿದ್ದ ನೂರಾರು ವಿದ್ಯಾರ್ಥಿಗಳ ಪೈಕಿ ಕೇವಲ 16 ಮಂದಿಗೆ ತಲಾ ಮಾಹೆಯಾನ 1 ರೂ. 50 ಪೈಸೆಯಂತೆ ಸಹಾಯಧನ ನೀಡಲಾಗುತ್ತಿತ್ತು. ಕ್ರಮೇಣ ಈ ಸಹಾಯಧನವನ್ನು ತಲಾ 3 ರೂ.ಗಳಿಗೆ ಹೆಚ್ಚಿಸಲಾಯಿತು. ಉಳಿದ ಹೆಚ್ಚಿನ ವೆಚ್ಚವನ್ನು ನಿಲಯವು ಭರಿಸುತ್ತಿತ್ತು. ಕ್ರಮಕ್ರಮವಾಗಿ ಜೀವನದ ವೆಚ್ಚವು ಏರುತ್ತಿರುವ ವಿಷಯವನ್ನು ಪರಿಶೀಲಿಸಿದ ಸರ್ಕಾರವು ಶ್ರೀ ಬಿ. ಡಿ. ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದ ಸಮಯದಲ್ಲಿ ಮಾಹೆಯಾನ ಸಹಾಯಧನವನ್ನು 3 ರೂ.ಗಳಿಂದ 10ರೂ.ಗಳಿಗೆ ಏರಿಸಿತು. ನಿಲಯದ ಶಿಸ್ತಿನ ಜೀವನ ಮಕ್ಕಳ ಬೆಳವಣಿಗೆಗೆ ಪೋಷಕ ವಾತಾವರಣ, ಉತ್ತಮ ಜ್ಞಾನಪ್ರಸರಣಗಳಿಂದ ಆಕರ್ಷಿತಗೊಂಡ ಜನತೆ ವರ್ಷ ವರ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸುತ್ತಾ ಬಂದು ಸಂಖ್ಯೆಯು ಅತ್ಯಂತ ಕಡಿಮೆ ಅವಧಿಯಲ್ಲಿಯೇ ಬೃಹತ್ಪ್ರಮಾಣಕ್ಕೇರಿತು. ನಿಲಯದಲ್ಲಿ ಆಶ್ರಯಹೊಂದಿದ್ದ ಸುಮಾರು 3600ಕ್ಕೂ ಮಿಗಿಲಾದ ವಿದ್ಯಾರ್ಥಿವೃಂದದ ಪೈಕಿ 1944 ವಿದ್ಯಾರ್ಥಿಗಳಿಗೆಮಾತ್ರ ಸರ್ಕಾರದವರು ತಲಾ ಮಾಹೆಯಾನ 10 ರೂ.ನಂತೆಸಹಾಯ ಧನವನ್ನುನೀಡುತ್ತಿದ್ದರು. ಅಂದೂ ಸಹಜೀವನವೆಚ್ಚವು ಸಾಕಷ್ಟು ಅಧಿಕವಾಗಿಯೇ ಇತ್ತು. ತಲಾ ಒಬ್ಬಾತನಿಗೆ ನಿಲಯದಲ್ಲಿ ಕನಿಷ್ಠವೆಚ್ಚ 30 ರೂ. ಆಗುತ್ತಿತ್ತು. ಹೀಗೆ ಸಹಾಯಧನಕ್ಕೆ ಸೇರ್ಪಡೆಯಾಗಿದ್ದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮೂರನೆ ಎರಡು ಭಾಗದಷ್ಟು ಮತ್ತು ಎರಡು ಸಾವಿರ ವಿದ್ಯಾರ್ಥಿಗಳ ಸಂಪೂರ್ಣ ವೆಚ್ಚವನ್ನೂ ಶ್ರೀ ಮಠದಿಂದಲೇ ತೂಗಿಸಲಾಗುತ್ತಿತ್ತು. ಈ ವೆಚ್ಚದ ಪ್ರಮಾಣ ಎಷ್ಟೆಂಬುದನ್ನು ಎಲ್ಲರೂ ಸುಲಭವಾಗಿ ಊಹಿಸಬಹುದಾಗಿದೆ.

ಸಾರ್ವಜನಿಕರ ನೆರವೇ ಮಠದ ಸಂಪತ್ತು :

ಸುಮಾರು ಎರಡು ಮೂರು ವರ್ಷಗಳಿಂದ ಜಿವನದ ವೆಚ್ಚವು ಗಗನಕ್ಕೇರುತ್ತಿರುವ ವಿಷಯವನ್ನು ಗಮ

ನಿಸಿದ ಸರ್ಕಾರ, ಸಹಾಯಧನವನ್ನು ತಲಾ 20ರೂ.ಗಳಿಗೆ ಹೆಚ್ಚಿಸಿತು. ಆದರೆ ಈ ವೇಳೆಗೆ ಸರಾಸರಿ ಮಾಹೆಯಾನ ವೆಚ್ಚವು 45 ರೂ.ಗಳಿಗೂ ಮೀರುವಂತಾಯಿತು. ಸಹಾಯಧನಕ್ಕೆ ಸೇರ್ಪಡೆಯಾಗಿದ್ದ ವಿದ್ಯಾರ್ಥಿಗಳ ಅರ್ಧಕ್ಕೂ ಮಿಗಿಲಾದ ವೆಚ್ಚವೂ ದುಬಾರಿಯಾಗಿದ್ದರಿಂದ ಮತ್ತು ಉಳಿದ ವಿದ್ಯಾರ್ಥಿಗಳ ಸಂಪೂರ್ಣವೆಚ್ಚವೂ ಸೇರಿದಂತೆ ನಿರ್ವಹಣೆಯು ದುಸ್ಸಾಧ್ಯವಾಗಿತ್ತು. ಇಷ್ಟು ಅಧಿಕ ಪ್ರಮಾಣದ ವೆಚ್ಚವನ್ನು ಸರಿತೂಗಿಸಲು ಶ್ರೀ ಮಠಕ್ಕೆ ಯಾವುದೇ ರೀತಿಯ ಮೂಲ ನಿಧಿಯಾಗಲೀ, ಅಪಾರ ಆಸ್ತಿಯಾಗಲೀ ಇಲ್ಲದಿರುವುದನ್ನು ಗಮನಿಸಬೇಕಾಗಿದೆ. ಸಾರ್ವಜನಿಕರ ನೆರವೇ ಈ ಶ್ರೀಮಠದ ಮುಖ್ಯ ಸಂಪತ್ತು. ಸಂಸ್ಥೆಯ ನಿರ್ವಹಣೆಯ ಶ್ರಮವನ್ನು ಆಲೋಚನಾಪರರು ಊಹಿಸಬಹುದು.

ಜಾತ್ಯತೀತತೆಯನ್ನಾಧರಿಸಿ ನಡೆದಿದೆ

ಹಿಂದೆಯೇ ಹೇಳಿರುವಂತೆ, ಆದಿಯಿಂದಲೂ ಜಾತ್ಯತೀತತೆಯನ್ನು ಆಧರಿಸಿ ನಡೆದು ಬಂದಿರುವ ಈ ಸಂಸ್ಥೆಯಲ್ಲಿ 50 ಕ್ಕೂ ಹೆಚ್ಚು ಮತ ಜಾತಿಗಳ ವಿದ್ಯಾರ್ಥಿಗಳು ಆಶ್ರಯವನ್ನು ಹೊಂದಿದ್ದರು. ಯಾವುದೇ ಕೋಮಿನ ಪ್ರಾಬಲ್ಯತೆ ಇರಲಿಲ್ಲವೆಂಬುದು ಲಗತ್ತಿಸಿರುವ ಪಟ್ಟಿಯಲ್ಲಿ ಸ್ಪಷ್ಟವಾಗಿದೆ.

ವಿದ್ಯಾ ಸಚಿವರ ಹೇಳಿಕೆ :

ಇತ್ತೀಚೆಗೆ ನಮ್ಮ ರಾಜ್ಯದ ಮಾನ್ಯ ವಿದ್ಯಾಮಂತ್ರಿಗಳು ವಿಧಾನ ಸಭೆಯಲ್ಲಿ ಅನಾಥಾಲಯಗಳಲ್ಲಿ ಲೂಟಿ, ದರೋಡೆ ಇತ್ಯಾದಿಯಾಗಿ ಆರೋಪಿಸಿದ್ದಾರೆ. ಎಲ್ಲಾ ನಿಲಯಗಳನ್ನು ಒಟ್ಟಾಗಿಯೇ ದೂಷಿಸಿದ್ದಾರೆ. ದೂಷಿಸುವಾಗ ಬಹಳ ಮಾಡಿ, ಮಠಗಳಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಕೆಲವು ಸಂಸ್ಥೆಗಳಲ್ಲಿ ಸಚಿವರ ಆರೋಪಣೆಗಳಿಗೆ ಸತ್ಯಾಂಶ ಇರಬಹುದು. ಆದರೆ ಎಲ್ಲಾ ಸಂಸ್ಥೆಗಳಿಗೂ ಅನ್ವಯಿಸುವಂತೆ ಮಾಡಿರುವ ಆರೋಪಣೆಗಳು ಅವರಿಗೆ ಶೋಭೆ ತರಲಾರವು. ಸುಮಾರು ದಶಕಗಳು ಶ್ರದ್ಧಾನಿಷ್ಠೆಗಳಿಂದ ಸೇವಾಮನೋಭಾವನೆಯಿಂದ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ನಿಲಯಗಳಿಗೆ ನಿಜಕ್ಕೂ ವ್ಯಥೆಯಾಗುವಂತೆ ಅವರು ವರ್ತಿಸಿದ್ದಾರೆಂಬುದು ಸತ್ಯಸಂಗತಿಯಾಗಿದೆ. ಮಿಗಿಲಾಗಿ ಸಾರ್ವಜನಿಕ ಸಂಸ್ಥೆಗಳನ್ನು ನಡೆಸುತ್ತಿರುವಾಗ ಸಣ್ಣ ಪುಟ್ಟ ಪ್ರಮಾಧಗಳಿರಬಹುದೇ ವಿನಾ ಮತ್ತಾವುದೇ ರೀತಿಯ ದೋಷಗಳಿಗೆ ಎಡೆಯಿರುವುದಿಲ್ಲ. ಇಂದು ಸರ್ಕಾರದಿಂದ ನಡೆಸಲ್ಪಡುತ್ತಿರುವ ಅನೇಕ ಸಂಸ್ಥೆಗಳ ಪೈಕಿ ಹಲವು ಅನೇಕ ಲೋಪ ದೋಷಗಳಿಂದ ಕೂಡಿರುವುದನ್ನು ಕಾಣುತ್ತಿಲ್ಲವೇ ? ಇಷ್ಟಾದರೂ ಸ್ವಂತ ಹಿತವನ್ನು ಕಡೆಗಣಿಸಿ ಸಾರ್ವಜನಿಕ ಹಿತಸಾಧನೆಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳ ಸತತ ಸೇವೆಯನ್ನು ಗುರುತಿಸಲಾರದಂತಹ ಧೋರಣೆಯನ್ನು ಸಚಿವರಾಗಲೀ ಸರ್ಕಾರವಾಗಲೀ ಹೊಂದುವುದು ಸಾಧುವಲ್ಲ.

ಹರಿಜನೇತರರೆಲ್ಲರೂ ಶ್ರೀಮಂತರಲ್ಲ :

ಸಚಿವರ ದೃಷ್ಟಿಯಲ್ಲಿ ಹರಿಜನರು ಮಾತ್ರ ಬಡವರು. ಉಳಿದವರೆಲ್ಲರೂ ಬಲ್ಲಿದರು. ಹರಿಜನ ಬಂಧುಗಳ ಮೇಲೆ ಯಾರಿಗೂ ದ್ವೇಷವಿಲ್ಲ. ಸರ್ಕಾರ ಹಾಗೂ ಹರಿಜನ ಮುಖಂಡರುಗಳು ನಿಮ್ನ ವರ್ಗದವರ ಅಭಿವೃದ್ಧಿಯನ್ನು ಗಮನಿಸುತ್ತಿರುವ ಈ ಹತ್ತಾರುವರ್ಷಗಳ ಹಿಂದೆಯೇ ಈ ಸಂಸ್ಥೆಯಿಂದ ಅನೇಕ ಮಂದಿ ಹರಿಜನ ವಿದ್ಯಾರ್ಥಿಗಳು ವಿದ್ಯೆಯನ್ನು ಹೊಂದಿ ಹೊರಬಂದಿದ್ದಾರೆ. ಇಂದಿಗೂ ನಿಲಯದಲ್ಲಿ ಸಾಕಷ್ಟು ಮಂದಿ ಹರಿಜನ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಆದರೆ, ಇತರೆ ಕೋಮುಗಳಲ್ಲಿಯೂ ಬಡತನದ ಬವಣೆ ಭೀಕರವಾಗಿರುವುದು ಪ್ರಾಯಃ ವಿದ್ಯಾಮಂತ್ರಿಗಳ ಗಮನಕ್ಕೆ ಬಂದಂತಿಲ್ಲ. ಈ ನಿಲಯದ ನೂರಾರು ವಿದ್ಯಾರ್ಥಿಗಳು (500-600) ಒಂದೇ ಅಂಗಿ ಒಂದೇ ನಿಕ್ಕರ್‌ಗಳಲ್ಲಿ ವಾಸಿಸುತ್ತಿರುವುದು ವಾಸ್ತವ ವಿಚಾರ. ಒಂದು ಮನೆಯ ಇಬ್ಬರು ಒಂದೇ ಚಾಪೆಯ ಮೇಲೆ ಮಲಗುತ್ತಾರೆ. ಎರಡು ದೇಹಗಳಿಗೂ ಅರ್ಧ ಚಾಪೆ, ಅರ್ಧ ನೆಲ. ಕಂಡವರ ಕಣ್ಣಲ್ಲಿ ನೀರು ತರಿಸುವಂತಹ ದೃಶ್ಯ. ಸಹಸ್ರಾರು ಮಂದಿ ನಿರ್ಗತಿಕರ ಮಕ್ಕಳು ಈ ನಿಲಯದಲ್ಲಿ ಆಶ್ರಯವನ್ನು ಪಡೆದಿದ್ದಾರೆ. ಪ್ರಯುಕ್ತ ಹರಿಜನೇತರರೆಲ್ಲರೂ ಶ್ರೀಮಂತರು ಎನ್ನುವ ವಾದ ಸರಿಯಲ್ಲ. ಅದು ಕೇವಲ ತಪ್ಪು ಕಲ್ಪನೆ. ನಿಲಯದಲ್ಲಿ ಆಶ್ರಯ ದೊರೆಯದೇ ಇದ್ದ ಪಕ್ಷದಲ್ಲಿ ಮನೆಯಲ್ಲಿರಿಸಿಕೊಂಡಾಗಲೀ, ನಗರಗಳಲ್ಲಿರಿಸಿಯಾಗಲೀ ವ್ಯಾಸಂಗ ಮಾಡಿಸಲು ಚೈತನ್ಯವಿಲ್ಲದ ಬಡಜನತೆ ತನ್ನ ಮಕ್ಕಳ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸಬೇಕಾಗುತ್ತಿತ್ತು. ಯಾರೇ ಆಗಲೀ ಸಂಸ್ಥೆಯತ್ತ ವಿಶಾಲ ದೃಷ್ಟಿಯಿಂದ ಅವಲೋಕಿಸಿ ವಾಸ್ತವ ವಿಷಯಗಳನ್ನು ಪರಿಶೀಲಿಸಿದಾಗ ಸತ್ಯಾಂಶ ಗೋಚರವಾಗುತ್ತದೆ.

ಸಂಪ್ರದಾಯಗಳ ಪಾಲನೆ ಮಠಮಾನ್ಯಗಳ ಆದ್ಯ ಕರ್ತವ್ಯ

ಈ ನಿಲಯದಲ್ಲಿ ಸಹಪಂಕ್ತಿ ಭೋಜನವಿಲ್ಲೆಂಬುದು ಒಂದು ಆರೋಪಣೆ. ಇದು ಸಾಂಪ್ರದಾಯಕ ಮಠ ಅನಾದಿಕಾಲದಿಂದಲೂ ಅನೂಚಾನವಾಗಿ ನಡೆದು ಬಂದಿರುವ ಪದ್ಧತಿಗಳನ್ನೂ ಸಂಪ್ರದಾಯಗಳನ್ನೂ ಕಾಯ್ದುಕೊಂಡು, ಉಳಿಸಿ ಬೆಳೆಸಿಕೊಂಡು ಬರಬೇಕಾದುದು ಮಠಮಾನ್ಯಗಳ ಆದ್ಯ ಕರ್ತವ್ಯವಾಗಿದೆ. ವಿದ್ಯಾರ್ಥಿನಿಲಯವು ಮಠದ ಒಂದು ಅಂಗವಾಗಿ ನಡೆಯುತ್ತಿದೆ. ಬೇರ್ಪಡಿಸುವುದು ಸದ್ಯಕ್ಕೆ ಸಾಧ್ಯವಿಲ್ಲವಾಗಿದೆ. ಪ್ರತ್ಯೇಕ ವ್ಯವಸ್ಥೆಗಳಿಗೆ ಸುಮಾರು ಲಕ್ಷಗಳಷ್ಟು ಹಣ ವಿನಿಯೋಗಿಸಬೇಕಾಗುತ್ತದೆ. ಪ್ರಯುಕ್ತ ಒಂದೇ ಸ್ಥಳದಲ್ಲಿ ಅಡುಗೆಯನ್ನು ತಯಾರ್ಮಾಡಿ ಲಿಂಗಾಯಿತರಿಗೂ ಇತರೆಯವರಿಗೂ ಪ್ರತ್ಯೇಕ ಅಂಗಣಗಳಲ್ಲಿ ನೀಡಲಾಗುತ್ತಿದೆ. ಬ್ರಾಹ್ಮಣರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿದೆ. ಅಡುಗೆಯಲ್ಲಿ ಅಂಗಣದಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ; ಪಕ್ಷಪಾತವಿಲ್ಲ. ಒಟ್ಟಾಗಿ ಕೂಡಿಸುವುದು ಮಠದಲ್ಲಿ ಸಾಧ್ಯವಿಲ್ಲ. ಮಠವು ತನ್ನ ಸಂಪ್ರದಾಯವನ್ನು ಬಿಡುವುದು ಸಾಧ್ಯವಿಲ್ಲ. ವಿದ್ಯಾರ್ಥಿನಿಲಯವನ್ನೇ ರದ್ದುಪಡಿಸಿದರೂ ಸರಿಯೇ ಮಠ ತನ್ನ ಕರ್ತವ್ಯವನ್ನು ಬಿಡಲಾರದು. ಈ ಭಾವನೆಯ ಮಹತ್ವವು ಸಾಕಷ್ಟು ಅರಿವುಳ್ಳವರು ಹೃದಯ ವೈಶಾಲ್ಯತೆಯಿಂದ ಆಲೋಚಿಸಿದಾಗ ಅರಿವಾಗಬಲ್ಲುದು. ಜೊತೆಯಲ್ಲಿ ಕುಳಿತು ಭೋಜನ ಮಾಡಿದಾಕ್ಷಣವೇ ಭಾವೈಕ್ಯವಾಗಲಾರದೆಂಬುದು ಸ್ಪಷ್ಟವಾದ ಮಾತು. ಇಂದು ಸಭೆ ಸಮಾರಂಭಗಳಲ್ಲಿ ಕೈ ಕೈ ಕುಲಾಯಿಸಿ ಸಹಭೋಜನ ಸ್ವೀಕರಿಸುತ್ತಿರುವ ರಾಜಕೀಯ ವ್ಯಕ್ತಿಗಳೆಷ್ಟು ಮಂದಿ ತಮ್ಮ ತಮ್ಮ ಜಾತಿಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿಲ್ಲ? ಜಾತಿಯ ಸಮ್ಮೇಳನಗಳನ್ನಾಚರಿಸುತ್ತಿಲ್ಲ ? ರಾಜಕೀಯ ಕಾರಣಗಳಿಗಾಗಿ ಇಂದು ಜಾತೀಯತೆಯನ್ನು ಉಳಿಸಿಕೊಂಡು ಬರಲಾಗುತ್ತಿದೆ. ಅಲ್ಲದೆ ಅದನ್ನು ಹೆಚ್ಚೆಚ್ಚು ಪ್ರಚಲಿತಗೊಳಿಸಲಾಗುತ್ತಿದೆ. ಜಾತೀಯತೆ ಎಂಬುದು ನಶಿಸಿ ಹೋಗದಂತೆ ರಾಜಕೀಯರಂಗದಲ್ಲಿ ಎಚ್ಚರವಹಿಸಲಾಗುತ್ತಿದೆ. ಆದರೆ ವೇದಿಕೆಗಳ ಮೇಲೆ ಬರೀ ಭಾಷಣಗಳಲ್ಲಿ ಮಾತ್ರ ಜಾತ್ಯತೀತತೆಯ ಸೋಗು ನಡೆಯುತ್ತಿದೆ. ಬಾಹ್ಯದ ಬಣ್ಣದ ಆಡಂಬರ ಪ್ರದರ್ಶಿತವಾಗುತ್ತಿದೆ. ಈ ಸಂದರ್ಭದಲ್ಲಿ ಪುರಾತನಸಂದೇಶಗಳನ್ನು ಗಮನಿಸಬಹುದು.

ಸಿದ್ಧಗಂಗಾ, 1-6-74.

ಕ್ರಿಯಾದ್ವೈತಂ— ನ ಕರ್ತವ್ಯಂ
ಭಾವಾದ್ವೈತಂ ಸಮಾಚರೇತ್

ಬಳಸದಿರದ್ವೈತವನು ಬಾಹ್ಯದಲ್ಲಿ
ನಿನ್ನೊಳಗೇಕೋ ಭಾವನೆಯೊಡಗೊಡು

ಸರ್ಕಾರದ ಸಹಾಯ ಧನದ ನಿರಾಕರಣೆ

ಸರ್ಕಾರವು ಅಲವು ಮಂದಿಯ ಭ್ರಾಂತಿಯ ಭಾವನೆಗಳ ಪ್ರಭಾವಗಳಿಂದಾಗಿ ಸಂಸ್ಥೆಯು ಐವತ್ತು ವರ್ಷಗಳಿಗೂ ಮಿಗಿಲಾದ ಪ್ರಾಮಾಣಿಕ ಸೇವೆಯನ್ನು ಗುರುತಿಸಲು ಪ್ರಯತ್ನಿಸದೆ ಬದಲಾಗಿ ಧಿಕ್ಕರಿಸಿ ಹಲವು ಅಡೆ ತಡೆಗಳನ್ನು ಇರಿಸುವ ಯತ್ನದಲ್ಲಿರುವುದನ್ನು ಅತೀವ ವ್ಯಥೆಯಿಂದ ತಿಳಿಸಬೇಕಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಸರ್ಕಾರದಿಂದ ವಿದ್ಯಾರ್ಥಿನಿಲಯಕ್ಕೆ ದೊರಕುತ್ತಿದ್ದ ಸಹಾಯಧನವನ್ನು 1 – 6 – 74ರಿಂದ ನಿರಾಕರಿಸಿ ಸ್ವಂತ ಆಧಾರದ ಮೇಲೆ ಸಾಧ್ಯವಾದಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಉತ್ತಮ ಶಿಕ್ಷಣ ಮತ್ತು ಶಿಸ್ತುಗಳಿಗೆ ಹೆಚ್ಚಿನ ಗಮನ ಕೊಟ್ಟು ಜ್ಞಾನದಾನ ಮಾಡುವ ನಿಶ್ಚಯಕ್ಕೆ ಬರಲಾಗಿದೆ. ಸನ್ನಿವೇಶಗಳ ಒತ್ತಡದಿಂದಾಗಿ ಕೈಗೊಂಡಿರುವ ಈ ನಿರ್ಣಯದ ಹಿನ್ನೆಲೆಯನ್ನು ಮಹಾಜನಗಳು ಅರಿಯುವರಾಗಿ ನಂಬಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲೆ ಮಕ್ಕಳಿಗೆ ಆಶ್ರಯನೀಡಲು ಅವಕಾಶವಿಲ್ಲದಿರುವುದು ವಿಷಾದಕರ. ಈ ಮುಖೇನ ಉಂಟಾಗಿರತಕ್ಕ ಸಹಸ್ರಾರು ಮಂದಿ ಪರಮಕ್ಕಳ ಕಣ್ಣೀರನ್ನು ಅನಿವಾರ್ಯವಾಗಿ ಸಹಿಸಿಕೊಳ್ಳಬೇಕಾಗಿದೆ.

ಪಾವಿತ್ರ್ಯ ರಕ್ಷಣೆಗಾಗಿ ಕಾಲೇಜು ರದ್ದು

ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದಿಶ್ಯ ಮತ್ತು ಪವಿತ್ರ ವಾತಾವರಣದಲ್ಲಿಯೇ ಶಿಸ್ತು ಸಂಯಮಗಳ ಪರಿಪಾಲನೆಯಲ್ಲಿಯೇ ಸಂಸ್ಥೆಯು ಮುಂದುವರಿಯಬೇಕೆನ್ನುವ ಉದ್ದೇಶದಿಂದ ಶ್ರೀಮಠದಲ್ಲಿ ಜೂನಿಯರ್ ಕಾಲೇಜನ್ನು ಮುಚ್ಚಬೇಕೆನ್ನುವ ನಿರ್ಧಾರವನ್ನು ಅತೀ ವಿಷಾದದಿಂದ ತಿಳಿಸಬೇಕಾಗಿದೆ. ತುಮಕೂರಿಗೆ ವರ್ಗಾಯಿಸಬೇಕೆನ್ನುವ ಯೋಜನೆಯು ಇದೆ. ಒಂದು ವಾರದಲ್ಲಿ ಖಚಿತವಾಗಿ ತಿಳಿಸುವುದಾಗುತ್ತೆ. ಹೇಗಾದರೂ ಪಿ. ಯು. ಸಿ. ಎರಡನೇ ತರಗತಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಅನುಕೂಲತೆಗಳನ್ನು ತಾವು ಮಾಡಿಕೊಳ್ಳಬೇಕೆನ್ನುವ ವಿಷಯವನ್ನು ಸೂಚಿಸಲಾಗಿದೆ.

ಶ್ರೀ ಶಿವಕುಮಾರಸ್ವಾಮಿಗಳು,
ಶ್ರೀ ಸಿದ್ಧಗಂಗಾ ಮಠ.

ತುಮಕೂರು ಡಿ|| ಶ್ರೀ ಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗೇಶ್ವರ ಆರ್ಫನೇಜ್ ನಲ್ಲಿ ೧೯೭೩ - ೭೪ನೆಯ ಸಾಲಿನಲ್ಲಿದ್ದ ಕೋಮುವಾರು ಸಂಖ್ಯೆಯ ವಿವರ :

1	ಲಿಂಗಾಯಿತರು	1635	19	ಕುಂಬಾರ	17	37	ನಾಯ್ಡುಗಳು	3
2	ಒಕ್ಕಲಿಗರು	1054	20	ಈಡಿಗ	10	38	ವೆಲ್ಲಗೌಡ	1
3	ವಿಶ್ವಕರ್ಮ	65	21	ಡೋಬಿ	22	39	ಕ್ರಿಶ್ಚಿಯನರು	4
4	ದೇವಾಂಗ	20	22	ಶೆಟ್ಟಿ	16	40	ಆದಿಕರ್ನಾಟಕ	17
5	ವೈಶ್ಯ	12	23	ಉಪ್ಪಾರ	8	41	ಆದಿದ್ರಾವಿಡ	8
6	ಕ್ಷತ್ರಿಯ	13	24	ಬ್ರಾಹ್ಮಣರು	17	42	ಬೋವಿ	22
7	ತಿಗಳರು	28	25	ಮುಸ್ಲಿಮರು	13	43	ಕಾಡುಕುರುಬ	38
8	ವಾಲ್ಮೀಕಿ	39	26	ರಜಪೂತ್	1	44	ಎಳವ	1
9	ಮರಾಠಿಗರು	12	27	ಬಣಗಾರ್	2	45	ಲಂಬಾಣಿ	2
10	ಸಾದರು	20	28	ಅರಸು	2	46	ಬುಡುಬುಡಿಕೆ	1
11	ಬಣಜಿಗ	17	29	ಬೇಡರು	9	47	ಹಳ್ಳಿಕಾರ್	2
12	ಕುರುಬ	62	30	ಪಟ್ಟಸಾಲೆ	1	48	ಸಿಳ್ಳೇಕ್ಯಾತ	1
13	ನಾಯಕರು	19	31	ನಗರ್ತ	1	49	ದೊಂಬಿದಾಸರು	1
14	ಪುದ್ವಾಲ್	1	32	ಗಾಣಿಗ	4	50	ತಮಿಳರು	1
15	ಈರಾ	1	33	ಕಾಡುಗೊಲ್ಲರು	65	51	ಕೊರಮ	10
16	ಜೈನ	4	34	ವೀರರು	1	52	ಕೂರ್ಗಿ	1
17	ಬಾರ್ ಬರ್	13	35	ಪೂಜಾರರು	1	53	ಯಾದವ	1
18	ಬಿಳಿಮಗ್ಗದವರು	5	36	ಪಾಳ್ಯೆಗಾರರು	I			

ಸಂಪಾದಕೀಯ

ಶ್ರೀ ಸಿದ್ಧಗಂಗಾಕ್ಷೇತ್ರವೊಂದು ಭವ್ಯ ಪರಂಪರೆಯ ಸ್ವತಂತ್ರಕ್ಷೇತ್ರ. ಕ್ರಿ. ಶ. ೧೩೦೦ರಿಂದ ಅದರ ಚರಿತ್ರೆ ಬೆಳೆದು ಬಂದಿದೆ. ಅಲ್ಲಿ ಏನು ನಡೆಯುತ್ತದೆ? ಹೇಗೆ ನಡೆಯುತ್ತದೆ ? ಎಂಬ ಬಗೆಗೆ ಊಹಿಸಲೂ ಶಕ್ಯವಿಲ್ಲದ ಮಹಾಮನೆಯದೆಂದುಗ ಅಲ್ಲಿಯದು. ಸಾಮಾನ್ಯ ಮಾನವನಊಹೆಗಳೆಲ್ಲ ಸುಳ್ಳಾಗುತ್ತವೆ; ಏಕೆಂದರೆ. ಯಾವುದೋ ಅಗೋಚರ ಶಕ್ತಿಯು ತೆರೆಯಮರೆಯಲ್ಲಿ ನಿಂತು ತನ್ನ ಕಾರುಣ್ಯ ಹಸ್ತವನ್ನು ಚಾಚುತ್ತದೆ. ಅದನ್ನು ನೋಡಲು ಶ್ರದ್ಧೆಯ ಕಣ್ಣುಬೇಕು. ಅದಿಲ್ಲದವರ ಊಹೆ ಸುಳ್ಳಾಗುತ್ತವೆ. ಅದು ಮಾಡುವ ಕೆಲಸ ಕೈಲಾದ ಮಟ್ಟಿಗೆ ಅಲ್ಲ; ಶಕ್ತಿಮೀರಿ ದೀನದಲಿತರ ಉದ್ಧಾರಕ್ಕಾಗಿ ಏನು ಮಾಡಬೇಕೋ ಅಷ್ಟೆಲ್ಲವನ್ನು ಮಾಡುತ್ತ ಬಂದಿದೆ. ಮುಂದೆಯೂ ಅದೇ ಶ್ರೇಷ್ಠ ಪರಂಪರೆಯನ್ನು ರಕ್ಷಿಸಿಕೊಂಡು ಹೋಗುತ್ತದೆ. ಲಕ್ಷಾಂತರ ಜನ ಜಾತಿಮತ ಭೇದವಿಲ್ಲದೆ ಈ ಕ್ಷೇತ್ರದ ಉದಾರ ಸಹಾಯವನ್ನು ಪಡೆದು ಇಂದು ಜೀವನರಂಗದ ನಾನಾ ಕ್ಷೇತ್ರಗಳಲ್ಲಿ ವಿವಿಧ ಉದ್ಯೋಗಗಳನ್ನಾಶ್ರಯಿಸಿ ಮರ್ಯಾದೆಯಿಂದ ಬಾಳುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಸರಕಾರವೇ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಹಿಂದೆಮುಂದೆ ನೋಡಿ ವಿವಿಧ ಕೋಮಿನ ಬೇರೆಬೇರೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುತ್ತಿದ್ದಾಗ ಕ್ಷೇತ್ರದ ಮಹಾ ತಪಸ್ವಿಗಳೂ ದೀನದಲಿತೋದ್ಧಾರಕ್ಕಾಗಿ ಹಗಲಿರುಳು ಶ್ರಮಿಸಿದವರೂ ಆದ ಪುಣ್ಯಶ್ಲೋಕ ಲಿಂ|| ಉದ್ದಾನ ಶಿವಯೋಗಿಗಳು ೧೯೧೭ರಲ್ಲಿಯೇ ಅಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ಸ್ಥಾಪಿಸಿದ್ದಾರೆ. ಅದಕ್ಕೆ ಹಿಂದಿನಿಂದಲೂ ಇದು ದಾಸೋಹ ಕ್ಷೇತ್ರವೇ ಆಗಿತ್ತು. ಅದಷ್ಟೇ ಅಲ್ಲ. ಸಂಸ್ಕೃತ ಭಾಷೆಯನ್ನು ಎಲ್ಲರೂ ಕಲಿಯಬಹುದು. ಅದಕ್ಕೆ ಜಾತಿಮತಗಳ ಕಟ್ಟಿಲ್ಲ. ವರ್ಣಾಶ್ರಮಗಳ ಕಟ್ಟುಪಾಡುಗಳ ಪ್ರತಿಬಂಧಕವಿಲ್ಲವೆಂದು ಮೊದಲು ಸಾರಿ, ಅದರಂತೆ ಸರ್ವಜನರು ತಮ್ಮ ಜ್ಞಾನಭಾಂಡಾರವನ್ನು ಸಂಸ್ಕೃತದ ಮೂಲಕ ಬೆಳೆಸಿಕೊಳ್ಳಲು ಅವಕಾಶವನ್ನು ಮಠದಲ್ಲಿ ಕಲ್ಪಿಸಿದವರು ಇವರೇ. ಆ ಭವ್ಯ ಪರಂಪರೆಯನ್ನೇ ಇಂದಿನ ಶ್ರೀಗಳವರು ಉಳಿಸಿಕೊಂಡು ಬೆಳೆಸಿಕೊಂಡು ಸಹಸ್ರ ಸಹಸ್ರ ಸಂಖ್ಯೆಯ ಬಡಮಕ್ಕಳ ಯೋಗಕ್ಷೇಮೈಕ ದೃಷ್ಟಿಯಿಂದಲೇ ಹಗಲಿರುಳು ಶ್ರಮಿಸುತ್ತಲಿದ್ದಾರೆ. ಇತ್ತೀಚಿನ ಕೆಲವು ವಿದ್ಯಮಾನಗಳಿಂದ ಶ್ರೀಗಳವರು ವಿಚಲಿತರಾಗುವುದಿಲ್ಲ. ಈಗಲೂ ಧೈರ್ಯದಿಂದ ತಮ್ಮ ಧ್ಯೇಯೋದ್ದೇಶಗಳನ್ನು ಅಂದರೆ ಸರ್ವಸಮಾಜಗಳವರ ಮಕ್ಕಳ ಯೋಗಕ್ಷೇಮವನ್ನೇ ಮುಂದುವರಿಸಿಕೊಂಡು ಬರಲು ಕಾರ್ಯೋನ್ಮುಖರಾಗಿದ್ದಾರೆಂಬುದು ಪ್ರಕೃತಮಠದ ಕಾರ್ಯವ್ಯಾಪ್ತಿಯಿಂದ ತಿಳಿಯಬಹುದಾಗಿದೆ. ಅವರ ಸೇವಾ ಮನೋಭಾವ ಸ್ಪರ್ಧಾಮನೋಭಾವವೇ ಅಲ್ಲ. ತಮ್ಮ ಧ್ಯೇಯ ಸಾಧನಾ ಮಾರ್ಗದಲ್ಲಿ ಬರುವ ಯಾವ ಅಗ್ನಿಪರೀಕ್ಷೆಯಲ್ಲೂ ತೇರ್ಗಡೆ ಹೊಂದುವ ಪ್ರಬಲ ಮನೋದಾರ್ಢ್ಯವನ್ನು ತ್ರಿಕರಣಪೂರ್ವಕವಾಗಿ ಅವರು ಸಾಧಿಸುತ್ತಿರುವ ಲಿಂಗ ತಪಸ್ಸಿನ ಮೂಲಕ ಪಡೆದಿದ್ದಾರೆ. ಅವರು ಇಂಥ ಎಷ್ಟೋ ಅಗ್ನಿ ಪರೀಕ್ಷೆಗಳನ್ನು ಈ ಹಿಂದೆ ಅನುಭವಿಸಿ ಅವುಗಳನ್ನೆಲ್ಲ ದಾಟಿದ್ದಾರೆ. ಅವರು ಯಾವಾಗಲೂ ದೀನದಲಿತರ ಪಕ್ಷದವರೇವಿನಾ ಶ್ರೀಮಂತ ಪಕ್ಷದವರಲ್ಲ. ಜನತೆಯ ಕಷ್ಟನಷ್ಟಗಳಿಗಾಗಿ ಅದೆಷ್ಟೋ ಸಲ ಕಣ್ಣೀರು ಮಿಡಿದಿದ್ದಾರೆ. ಊಟೋಪಚಾರಗಳನ್ನು ಬಿಟ್ಟಿದ್ದಾರೆ. ಮಠ ಕಟ್ಟಲು ಸ್ವತಃ ಕಲ್ಲು ಹೊತ್ತಿದ್ದಾರೆ. ಹೊಲದಲ್ಲಿ ಗದ್ದೆಗಳಲ್ಲಿ ದುಡಿದಿದ್ದಾರೆ. ಕಪಿಲೆಯ ಹಗ್ಗ ಹಿಡಿದು ನೀರು ಜಗ್ಗಿ ಗದ್ದೆಗೆ ನೀರು ಹಾಯಿಸಿದ್ದಾರೆ. ಸದಾ ಕಾರ್ಯೋನ್ಮುಖರಾಗಿಯೇ ಇದ್ದಾರೆ. ಇಂಥ ಸತತೋದ್ಯೋಗ ನಿರತ ತ್ರಿಕರಣಪೂರ್ವಕ ಸರ್ವಸಮಾಜಗಳ ಯೋಗಕ್ಷೇಮಕ್ಕಾಗಿ ಹೆಣಗುವ ಶ್ರೀಗಳವರ ಕಾರ್ಯವ್ಯಾಪ್ತಿಗೆ ದೈವದ ಸಹಾಯವು ಅವಶ್ಯವಾಗಿ ಮುಂದೆ ಬಂದೇ ಬರುತ್ತದೆ, ಬಂದಿದೆ. ಅದನ್ನೇ ತೆರೆಯಮರೆಯ ಮಹಾಶಕ್ತಿ ಕಾರುಣ್ಯ ಹಸ್ತವೆಂದು ಈ ಪೂರ್ವದಲ್ಲಿ ಹೇಳಿದುದು. ಸಿದ್ಧಗಂಗಾ ಕ್ಷೇತ್ರವೂ ಶ್ರೀಮಂತ ಕ್ಷೇತ್ರವೇನಲ್ಲ. ಅಲ್ಲಿನ ಕಾರ್ಯವ್ಯಾಪ್ತಿ ಶ್ರೀಮಂತಿಕೆಯಿಂದ ನಡೆಯುವುದೂ ಅಲ್ಲ. ಸಂಸ್ಥಾನಮಠವಂತೂ ಮೊದಲೇ ಅಲ್ಲ. ಶ್ರೀ ಕ್ಷೇತ್ರದ ಬೃಹತ್ತು ಮಹತ್ತುಗಳನ್ನು ಕಣ್ಣಾರ ಕಂಡ ಉದಾರಿಗಳಾದ ಸಮಸ್ತ ಕೋಮಿನ ಜನರೂ ದಾನ ಧರ್ಮಗಳನ್ನು ಮಾಡಿದ್ದಾರೆ. ಹಿಡಿಯಿಂದ ಪಡಿಯವರೆಗೆ ಧವಸ ಧಾನ್ಯಗಳನ್ನು ಕೊಟ್ಟಿದ್ದಾರೆ. ಕಾಸಿನಿಂದ ಸಾಸಿರದವರೆಗೆ ಹಣಕಾಸನ್ನು ಸಲ್ಲಿಸಿದ್ದಾರೆ. ತಾವು ತಂದುಕೊಟ್ಟು ತಾವೇ ಊಟಮಾಡಿಕೊಂಡು ಬಂದಿದ್ದಾರೆ. ಮಠದ ಹೊಟ್ಟೆ ಒಂದೇ ಅಲ್ಲಿನ ಸರ್ವವಿನಿಯೋಗ ಸರ್ವರಿಗೆ ಶ್ರೀ ಕ್ಷೇತ್ರಕ್ಕೆ ಹೊರಗಿನಿಂದ ಏನೇ ಐಶ್ವರ್ಯ ಹರಿದು ಬರಲಿ, ಎಷ್ಟೇ ಭಾಗ್ಯ ಬರಲಿ ಅದೆಲ್ಲ

ಸಾರ್ವಜನಿಕರಿಗಾಗಿ ವಿನಿಯೋಗವಾಗಿದೆ, ಆಗುತ್ತಿದೆ ವಿನಾ ಅನ್ಯಥಾ ಇಲ್ಲ ಎಂಬುದನ್ನು ಸಾರ್ವಜನಿಕರು ತಮ್ಮ ಶ್ರದ್ಧೆಯ ಕಣ್ಣು ತೆರೆದು ನೋಡಿದರೆ ಸಾಕು. ನೋಡುವ ಕಣ್ಣಿನಲ್ಲಿ ಶುದ್ಧಿಯಿದ್ದರೆ ಸತ್ಯ ಬೆಳಕಾಗಿ ಹೊಳೆಯುತ್ತದೆ.

ಕಳೆದ ಐದು ವರ್ಷಗಳಿಂದ ರಾಷ್ಟ್ರಪತಿ ಸ್ಥಾನಾಲಂಕಾರ ಮಾಡಿದ್ದ ಶ್ರೀ ಗಿರಿಯವರು ನಿವೃತ್ತರಾಗಿ ಆಸ್ಥಾನವನ್ನು ನಿಷ್ಠಾವಂತ ಗಾಂಧಿವಾದಿಗಳೂ ರಾಜಕೀಯ ಚತುರರೂ ಆದ ಶ್ರೀ ಫಕ್ರುದ್ದೀನ ಆಲಿ ಅಹಮ್ಮದ್ ಅವರು ಅಲಂಕರಿಸಿದ್ದಾರೆ. ಅದರಂತೆ ಉಪರಾಷ್ಟ್ರಪತಿ ಶ್ರೀ ಜಿ. ಎಸ್. ಪಾಠಕ್ ಅವರು ನಿವೃತ್ತರಾದ ಮೇಲೆ ಅವರ ಸ್ಥಾನವನ್ನು ಶ್ರದ್ಧಾವಂತರೂ, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳೂ, ಬಿಹಾರದ ರಾಜಪಾಲರೂ ಆಗಿದ್ದ ಶ್ರೀಮಾನ್ ಬಿ. ಡಿ. ಜತ್ತಿಯವರು ಅಲಂಕರಿಸಿದ್ದಾರೆ. ಈ ಎಲ್ಲ ಮಹನಿಯರಿಗೂ ಅಭಿನಂದನೆಗಳು.

ಕಾಗದ ಅಭಾವದಿಂದಲೂ ಇನ್ನಿತರ ಕೆಲವು ತೊಂದರೆಗಳಿಂದಾಗಿ ಪತ್ರಿಕೆ ಪ್ರಕಟವಾಗುವುದು ತಡವಾಯಿತು. ಚಂದಾದಾರರು ದಯವಿಟ್ಟು ಕ್ಷಮಿಸಬೇಕಾಗಿ ವಿಜ್ಞಾಪನೆಗಳು. ಈ ಸಲದ ಈ ಪತ್ರಿಕೆ ಜೂನ್ ಮತ್ತು ಸೆಪ್ಟಂಬರ್ ತಿಂಗಳ ಎರಡೂ ಸಂಚಿಕೆಯಾಗಿ ಹೊರಬಂದಿದೆ. ಚಂದಾದಾರರು ಸಹಕರಿಸಬೇಕಾಗಿ ವಿಜ್ಞಾಪನೆಗಳು.

ಮಾನ್ಯ ಚಂದಾದಾರರಲ್ಲಿ ವಿನಂತಿ

ಈ ಸಾಲಿನ ಚಂದಾ ಹಣ ಕೊಡಬೇಕಾದವರು ಎಂ. ಓ, ಮೂಲಕ, ಪ್ರಕಾಶಕರು, ಸಿದ್ಧಗಂಗಾ (ತ್ರೈಮಾಸಿಕ) ಸಿದ್ಧಗಂಗಾ ಮಠ. ತುಮಕೂರು ಜಿಲ್ಲಾ, ಇವರಿಗೆ ಕಳುಹಿಸಿ ಪತ್ರಿಕೆಯು ಸರ್ವತೋಮುಖ ಪ್ರಗತಿಗೆ ನೆರವಾಗಬೇಕಾಗಿ ಪ್ರಾರ್ಥನೆ.

ರಾಜ್ಯ ಸರ್ಕಾರದ ವಿದ್ಯಾ ಇಲಾಖೆಯ ಡೈರೆಕ್ಟರ್‌ರವರು ಸಿ. ಎಲ್. 417-4/65-66, ತಾ|| 29-4-66ನೆಯ ಆರ್ಡರ್ ಪ್ರಕಾರ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳೂ ಹಾಗೂ ಸಾರ್ವಜನಿಕ ಗ್ರಂಥ ಭಂಡಾರಗಳು ಕೊಂಡುಕೊಳ್ಳಬಹುದೆಂದು ಆಜ್ಞೆ ಹೊರಡಿಸಿದ್ದಾರ.

ಸರಳ ವಿವಾಹಗಳು ಸಂಪ್ರದಾಯಬಾಹಿರವೇ?

—ಕೆ. ಎನ್. ಶಿವರಾಜ್.

ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ಎಲ್ಲೆಲ್ಲೂ ಸಾಮೂಹಿಕ ವಿವಾಹಗಳು ನಡೆಯುತ್ತಿವೆ. ಯಾವುದೇ ಸಂಪ್ರದಾಯವನ್ನು ಮೂಲೆಗೆ ಸರಿಸಿ ಹೊಸ ಪದ್ಧತಿಯತ್ತ ಯೋಚನೆ ಹರಿಸಿದಾಗ, ಯೋಜನೆಹಾಕಿದಾಗ, ಕಾರ್ಯಗತಗೊಳಿಸಲು ಯತ್ನಿಸಿದಾಗ ಸಮಾಜದಲ್ಲಿನ ಅನೇಕರ ಪ್ರತಿಭಟನೆಯನ್ನು ಎದುರಿಸಬೇಕಾದ್ದು ಅನಿವಾರ್ಯವಾಗುತ್ತದೆ. ವಿವಾಹಗಳು ಅದ್ದೂರಿಯಾಗಿ ಹತ್ತಾರು ದಿನಗಳು ನಡೆಯುತ್ತಿದ್ದ ಕಾಲವೂ ಒಂದಿತ್ತು. ಕ್ರಮೇಣ ಒಂದೆರಡು ದಿನಗಳ ಅವಧಿಯ ಅದ್ದೂರಿಯನ್ನು ಕಂಡೆವು. ಅವಧಿಗೆ ಬಿದ್ದ ಕಡಿವಾಣ ಅದೇಕೋ ಆಡಂಬರದ ವೆಚ್ಚಗಳಿಗೆ ಬೀಳದೆ ಹೋಯಿತು. ಆದ್ದರಿಂದಲೇ ಮದುವೆ ಎಂದರೆ ವೈ ಜುಂ ಎನ್ನುವ ಕಾಲ ಸನ್ನಿಹಿತವಾಗಿದೆ.

ಇಂದು ಜೀವನ ನಿರ್ವಹಣೆ ಅತಿಕಷ್ಟವಾಗಿದೆ. ಎಂದೂ ಅನುಭವಿಸದ ಆರ್ಥಿಕ ಸಂಕಷ್ಟವನ್ನನುಭವಿಸಬೇಕಾಗಿದೆ. ಎಲ್ಲೆಮೀರಿ ಏರುತ್ತಿರುವ ಬೆಲೆಗಳು ಮನುಷ್ಯನಿಗೆ ಮಾರಕವಾಗಿವೆ. ಜೀವನಾವಶ್ಯಕವಾದ ಪ್ರತಿಯೊಂದು ಸಾಮಾನು-ಸಾಮಗ್ರಿಗಳು ದೊರೆಯದಾಗುತ್ತಿವೆ. ಪ್ರತಿಯೊಂದಕ್ಕೂ ಮಾರುಕಟೆಯಲ್ಲಿ ಅಭಾವವಿದೆ. ಏನೇ ಕೊಳ್ಳಬೇಕಾದರೂ ಒಬ್ಬರೊಂದಿಗೊಬ್ಬರು ಸ್ಪರ್ಧಿಸಬೇಕಾದ್ದು ಅನಿವಾರ್ಯವಾಗುತ್ತಿದೆ. ಬೆಲೆಗಳ ಏರಿಕೆಯನ್ನು ತಡೆಗಟ್ಟುವ ಸಾಮರ್ಥ್ಯ ಯಾರಿಗಿದೆ ? ಬೆಲೆಗಳನ್ನಿಳಿಸುವಷ್ಟರ ಮಟ್ಟಿಗೆ ಉತ್ಪನ್ನ ಏರಿಸಲು ಎಷ್ಟು ಶತಮಾನಗಳು ಬೇಕಾಗಬಹುದು ? ನೂರಾರು ಪ್ರಶ್ನೆಗಳು ಉದ್ಭವಿಸುತ್ತಿವೆ. ಉತ್ತಮ ದರ್ಜೆಯ ಜನಗಳಿಗೆ ಜೀವನ ನಿರ್ವಹಣೆಯ ಈ ದುರ್ಭರತೆಯ ಬಿಸಿ ತಾಕಿರುವಾಗ ಮಧ್ಯಮ ಹಾಗೂ ಮೂರನೇ ದರ್ಜೆಯವರ ಬಾಳ್ವೆ ನಡೆಸುವುದೆಂತು ? ಅಂದಿಗಂದಿನ ಜೀವನ ಸಾಗಿಸುವುದೇ ಕಷ್ಟಸಾಧ್ಯವಾಗುತ್ತಿರುವಾಗ ಮಧ್ಯೆ ತೂರಿಬರುವ ಹಬ್ಬಹರಿದಿನಗಳೂ, ಮದುವೆ ಮುಂಜಿಗಳು, ರೋಗರುಜಿನಗಳು ಅನೇಕ ಸಂಸಾರಗಳು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡುತ್ತಿವೆ.

ಮದುವೆ ಜೀವನದಲ್ಲಿ ಒಂದೇಬಾರಿಗೆ ಒದಗುವ ಮಹತ್ವದ ಘಟನೆ ನಿಜ. ಅದರ ಹಿರಿಮೆ ಹಿರಿದು; ಅದರ ಆಚರಣೆಗೆ ಆದ್ಯತೆ ನೀಡಬೇಕು. ಇಲ್ಲದಿದ್ದಲ್ಲಿ, ಅವುಗಳಿಗೆ ಯೋಗ್ಯಬೆಲೆ ದೊರೆಯಲಾರದು. ಹೀಗೆಂದು ವಾದಿಸುವವರ ಮಾತಿನಲ್ಲೂ ಸತ್ಯವಿದೆ. ಆದರೆ ಮದುವೆಗಳ ಮಹತ್ವವನ್ನು ವೃದ್ಧಿಸಿಕೊಂಡು ಬರಲು ಅದ್ದೂರಿಯಾಗಿಯೇ ನಡೆಸಬೇಕೆಂಬ ನಿಯಮವಿದೆಯೇ ? ಹಣ ಪೋಲುಮಾಡದ ಹೊರತು ಯಾವುದೂ ಮಹತ್ವದ್ದಾಗಲಾರದೇನು ? ಆಡಂಬರದ ಪ್ರದರ್ಶನಗಳು ಏಕೆ ? ಮದುವೆಗಳನ್ನು ತಮ್ಮ ತಮ್ಮ ಹಣ, ಅಂತಸ್ತು, ಗೌರವಗಳನ್ನು ಪ್ರದರ್ಶಿಸಲು ಯೋಗ್ಯ ಸಮಯಗಳೆಂದು ಭಾವಿಸಲಾಗುತ್ತಿದೆ. ಸ್ಪರ್ಧಾತ್ಮಕ ಮನೋಭಾವ ಬೆಳೆಯುತ್ತಿದೆ. ಸಮಾಜದಲ್ಲಿ ತನ್ನ ಕೀರ್ತಿ ಪ್ರತಿಷ್ಠೆಗಳನ್ನು ಗಳಿಸಲು ಮತ್ತು ಸ್ಥಾನಮಾನಗಳನ್ನು ನಿರ್ಣಯಿಸಿಕೊಳ್ಳಲು ವಿವಾಹಗಳು ಸಾಧನಗಳಾಗುತ್ತಿವೆ. ಆರ್ಥಿಕವಾಗಿ ಕ್ಷೀಣಸ್ಥಿತಿಯಲ್ಲಿರುವ ಕುಟುಂಬಗಳೂ ಸಹ ಮೇಲ್ಮಟ್ಟದವರೊಂದಿಗೆ ಸ್ಪರ್ಧಿಸಲೆತ್ನಿಸಿಯೋ ಅಥವಾ ಪರಿಸ್ಥಿತಿಯ ಒತ್ತಡದಿಂದ ಸ್ಪರ್ಧೆಗೆ ಇಳಿದು ಸಾಲ ಮಾಡುತ್ತಾರೆ. ಆಸ್ತಿಪಾಸ್ತಿಗಳನ್ನು ಹರಾಜು ಮಾಡುತ್ತಾರೆ. ವಸ್ತು ವಡವೆಗಳನ್ನು ಗಿರವಿ ಇಡುತ್ತಾರೆ. ಜೀವನ ಸಾಗಿಸುವುದೇ ಸಾಧ್ಯವಿಲ್ಲದಿರುವಾಗ ಸಾಲಮಾಡಿದ ಸಂಸಾರಗಳು ಮತ್ತೆ ಎಂದಿಗೂ ಮೇಲೇಳಲಾರದಾಗುತ್ತವೆ. ಸಾವು ನೋವುಗಳ ದವಡೆಗೆ ತುತ್ತಾಗುತ್ತವೆ. ವಿವಾಹಗಳ ದುಷ್ಪರಿಣಾಮಗಳು ಇಷ್ಟೇ ಅನ್ನುವಂತಿಲ್ಲ

"ಡೌರಿ" ಎಂಬುದು ಹಿಂದೆ ಜನ ಹೇಳುತ್ತಿದ್ದ "ಮಾರಿ"ಯಾಗಿ ಸಮಾಜವನ್ನು ಹಿಂಸಿಸುತ್ತಿದೆ. ತರುಣರು ತಾವು ಪಡೆದ "ಡೌರಿ"ಯ ಪ್ರಮಾಣವು ತಮ್ಮ ಅಂತಸ್ತನ್ನು ನಿರ್ಣಯಿಸುತ್ತೆಂಬ ಹುಚ್ಚು ಕಲ್ಪನೆಗೆ ಬಲಿ

ಯಾಗಿದ್ದಾರೆ. ಈ ಪ್ರವೃತ್ತಿ ವಿದ್ಯಾವಂತ–ಹಾಗೂ–ಅವಿದ್ಯಾವಂತ ಇವರೀರ್ವರಲ್ಲೂ ವಿಪರೀತವಾಗಿ ಬೆಳೆದಿದೆ. ವರದಕ್ಷಿಣೆಯಿಲ್ಲದೆ ವರನ ದರ್ಶನವೇ ಪಡೆಯಲಾಗದೆಂಬ ಭಾವನೆ ವಧುಗಳ ತಂದೆ–ತಾಯಂದಿರಲ್ಲಿ ಬಂದಿದೆ. ಹಲವು ಯುವಕರು ವಿವಾಹದ ನಂತರದ ಪೂರ್ಣ ಜೀವನವು ವರದಕ್ಷಿಣೆಯಲ್ಲೇ ಸಾಗುವಂತಿರಬೇಕು ಎಂದು ಅಪೇಕ್ಷಿಸಿದರೆ, ಮತ್ತೆ ಹಲವರು ಪೂರ್ವ ಭಾವಿ ಭರವಸೆಗಳನ್ನಿತ್ತು ವಿವಾಹಪೂರ್ವದ ಜೀವನಕ್ಕೂ ನೆರವು ಪಡೆಯುವ ಹಂಬಲ ಹೊಂದಿರುತ್ತಾರೆ. ಎಪ್ಪತ್ತೊಂದರ ಜನಗಣತಿಯಲ್ಲೇ ಎರಡು ಮಿಲಿಯನ್ ಹೆಂಗಸರ ಸಂಖ್ಯೆ ಕಡಿಮೆ ಇದ್ದು ಮುಂಬರುವ ದಶಕದಲ್ಲಿ ವಧುಗಳ ಅಭಾವವಾದೀತು; ವಧುದಕ್ಷಿಣೆ ಬಂದೀತು ಎಂಬುದು ಹಲವು ಸಮಾಜಶಾಸ್ತ್ರಜ್ಞರ ಅಭಿಪ್ರಾಯ. ಯಾವುದು ಬಂದರೂ ಸಮಾಜದ ಪರಿಸ್ಥಿತಿ ಯಥಾರೀತಿ– ಚಿಂತಾಜನಕ ಸ್ಥಿತಿ.

ಸರಳಗೊಳಿಸುವುದರಿಂದ ಮದುವೆಗಳ ಮಹತ್ವಕ್ಕೆ ಎಳ್ಳಷ್ಟೂ ಚ್ಯುತಿಬಾರದು. ಬದಲಾಗಿ, ಕನ್ಯೆಯ ಆಯ್ಕೆಯಲ್ಲಿ ಪೂರ್ಣಸ್ವಾತಂತ್ರವಿದ್ದು, ಸರ್ವರ ಸಹ ಬಾಳ್ವೆಗಾಗಿ ಸಂಪೂರ್ಣ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಅವಕಾಶಗಳಿದ್ದಲ್ಲಿ, ಈರ್ವರಿಗೂ ಸಮಾನ ಸ್ಥಾನಮಾನಗಳು ದೊರಕಿದಲ್ಲಿ ಸಾಂಸಾರ ಜೀವನಗಳು ಎಡರು–ತೊಡರುಗಳಿಲ್ಲದೆ ಬಹುಕಾಲ ಬೆಳಗುತ್ತವೆ ಈ ಕಾರಣ ವಿವಾಹಗಳನ್ನು ಸರಳಗೊಳಿಸುವ, ಒಂದು ಮಧ್ಯಾಹ್ನ ಅಥವಾ ಒಂದೆರಡು ಘಂಟೆಗಳಿಗೆ ಸೀಮಿತಗೊಳಿಸುವ ದಿಶೆಯಲ್ಲಿ ವಿದ್ಯಾವಂತ ತರುಣರು, ವಿಚಾರಶೀಲ ಹಿರಿಯರು ಕೂಡಿ ಯೋಚಿಸಬೇಕು, ಯೋಚಿಸಬೇಕು.

ಸಗ್ಗ ಸೊಂಪಿನ ಚಿತ್ರ

—ಕುಂ. ವೀರಭದ್ರಪ್ಪ

ನೆನಪಿನೀ ಗುಡಿಯಲ್ಲಿ
ಅಡಗಿರುವ ಓ ದೇವ
ಎನ್ನೆದೆಯ ಬಡಮಡಿಲ ತುಂಬಿ ಬಾರ.
ನೀ ಬರುವ ದಾರಿಯಲಿ
ಮಲ್ಲಿಗೆಯು ಅರಳುತಿದೆ
ಪೆಸೆಪೆಸೆಗೆ ಮಕರಂದ ತುಂಬಿ ತಾರ.

ಮುಂಗಾರು ಮಳೆಯಂತೆ
ತಂಗಾಳಿ ಸುಳಿದಂತೆ
ಬೆಳದಿಂಗಳಲೆಯಂತೆ ಉಲಿಯುತೇಲಿ
ಸಿಡಿಲ ಗೊಂಚಲದಂತೆ
ಕರಿಮೋಡ ಬಸಿರಿಂದ
ಹನಿಯಂತೆ ತೊನೆತೆನೆದು ಹೂವ ಚೆಲ್ಲಿ.

ನಿಮ್ಮ ನೆನಪೆಡೆಯಿಂದ
ಒಣಕೊರಡು ಚಿಗುರುತಿದೆ
ಹೊಂಗೆ ತೊಂಗಲ ಭೃಂಗಿಕುಣಿಯುತ್ತಾಡಿ

ಮರಬಳ್ಳಿ ನೆಲದ್ಹುಲ್ಲು
ಮೆಲ್ಲುಲಿಯುತಿರೆ ಅಲ್ಲಿ
ಕಲ್ಲೊಡಲ ಉಡಿಲಿಂದ ಶಶಿಯು ಮೂಡಿ.

ಆಗಸದ ಹಸಿಕೆಸರ
ತುಳುತುಳಿದು ಕೊಸರಾಡಿ
ಆಡುತೇಳುತ ಬಂತು ನಿಮ್ಮ ನೆನಪು
ಶಶಿಯಂತೆ ಉಸಿರಂತೆ
ಬಸಿರ ಬಂಧನದಂತೆ
ಹಸಿರುಲ್ಲಿನೆಳಗಣ್ಣ ತೆರೆದ ತಂಪು.

ನಿನ್ನಲ್ಲಿ ಬೇವಿಲ್ಲ
ಬೆಲ್ಲ ತುಂಬಿದೆ ಎಲ್ಲ
ಸಿಹಿನೆನಪ ಹಸಿರಂತೆ ಎದೆಯ್ಹುಲಕಡು
ನಿಮ್ಮ ನೆನಪೇ ಚೈತ್ರ
ಸಗ್ಗ ಸೊಂಪಿನ ಚಿತ್ರ
ವರುಷದೊಳ್ ಹರುಷವನು ನೀನು ನೀಡು.

ನೆರವು

ಜಿ. ಶಾರದಾ ರಾಜಶೇಖರ್

ತನ್ನ ಹೆಂಡತಿ ಕಮಲೆಗಿಂತಲೂ ಚೆಲುವೆಯಾದ ಅವಳ ತಂಗಿ ಸುಧಾ ತನ್ನ ಮನೆಗೇ ಬರಲು ಬಯಸಿದಾಗ ದಿನೇಶ್ "ಹೂಂ" ಎಂದನು. ಆದರೆ ಆದದ್ದೇನು ?

ತಂಗಿಯ ಒಲವಿನ ಪತ್ರವನ್ನು ಕಂಡು ತುಂಬ ಸಂತಸ ಉಂಟಾಯ್ತು ಕಮಲೆಗೆ, ಮತ್ತೆ ಮತ್ತೆ ತಂಗಿಯ ಪತ್ರವನ್ನು ಓದಿದಳು, ಮುಖದಲ್ಲಿ ಸಂತಸದ ಛಾಯೆ ಅರಳಿತು. ಮನವಲ್ಲಿ ಏನೋ ಒಂದು ವಿಧದ ಆನಂದ, ಉತ್ಸಾಹ ಹರಿದಾಡಿತು. ಆತುರಾತುರವಾಗಿ ಎರಡು ಮೂರು ಬಾರಿ ಓದಿದ್ದಳು ಆದರೂ ಮನಸ್ಸಿಗೆ ಸಮಾಧಾನ ಉಂಟಾಗಲಿಲ್ಲ, ಮತ್ತೊಮ್ಮೆ ಸಾವಧಾನವಾಗಿ ಓದ ತೊಡಗಿದಳು.

"ಅಕ್ಕಾ, ನಾನು S.S.L.C.ಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ಉತ್ತೀರ್ಣಳಾಗಿದ್ದೇನೆ. ಅಪ್ಪ, ಅಮ್ಮ ನಾನು ಉತ್ತೀರ್ಣಳಾದುದನ್ನು ಅರಿತು ತುಂಬ ಸಂತಸಪಟ್ಟರು· ಆದರೆ ಅವರಿಗೆ ನಾನು ಇಷ್ಟು ಓದಿದ್ದೆ ಸಾಕಂತೆ, ನನಗೆ ಮಾತ್ರ ಕಾಲೇಜಿಗೆ ಸೇರಬೇಕೆಂಬ ತುಂಬ ಹಂಬಲ ಉಂಟು, ಈ ಊರಲ್ಲಿ ಕಾಲೇಜು ಇಲ್ಲವೆಂಬುದು ನಿನಗೂ ತಿಳಿದ ವಿಷಯವೇ, ನನಗೆ ಮುಂದೆ ಓದುವ ಹಂಬಲ. ಆದರೆ ಅಪ್ಪ, ಅಮ್ಮನಿಗೆ ನಾನು...ನಿನ್ನಂತೆ ಮದುವೆ ಮಾಡಿಕೊಳ್ಳಲಿ ಎಂಬ ಬಯಕೆ, ಸಧ್ಯಕ್ಕೆ ನನಗೆ ವಿವಾಹವಾಗುವ ಬಯಕೆ ಇಲ್ಲ, ಡಿಗ್ರಿ ಪಡೆದ ನಂತರ ವಿವಾಹದ ಯೋಚನೆ, ನನ್ನ ಗೆಳತಿಯರಾದ, ರತ್ನ, ಮಯೂರ, ಆಶಾ, ಶೀಲ, ಸಂಧ್ಯಾ ನೇತ್ರ ಎಲ್ಲಾ ಓದಲು ನಿಮ್ಮ ಊರಾದ ಬೆಂಗಳೂರಿಗೆ ಹೋಗುವರು...ಆದರೆ ನಾನೇನು ಮಾಡಲಿ ? ನನ್ನ ಆಸೆ ಪೂರೈಸುವೆ ಎಂದು ಭಾವಿಸಿರುವೆ.

ಇತಿ ನಿನ್ನ ಒಲವಿನ ಸೋದರಿ,

ಸುಧಾ.

ಸುಧಾಳ ಕೊನೆಯ ಸಾಲು "ನನ್ನ ಆಸೆ ಪೂರೈಸುವೆ" ಎಂಬುದು ಕಮಲೆಗೆ ವಿಚಾರ ಮಾಡುವಂತಾಗಿ ತನ್ನ ಒಲವಿನ ಸೋದರಿ ಸುಧಾ S.S.L.C. ಉನ್ನತ ಮಟ್ಟದಲ್ಲಿ ತೇರ್ಗಡೆ ಹೊಂದಿರುವಳು. ಅವಳ ಎಳೆ ಮನದ ಬಯಕೆಯನ್ನು ಚಿವುಟುವಂತೆಯೂ ಇಲ್ಲ, ಸುಧಾಳನ್ನು ತನ್ನ ಮನೆಯಲ್ಲಿಯೇ ಇರಿಸಿಕೊಂಡು ಮುಂದಕ್ಕೆ ಏಕೆ ಓದಿಸಬಾರದು ? ನನ್ನ ಸಲಹೆಗೆ ಅವರೆಂದೂ ನಕಾರಾತ್ಮಕವಾದ ಉತ್ತರವನ್ನು ನೀಡರು· ಅಪ್ಪ, ಅಮ್ಮನನ್ನು ಹೇಗಾದರೂ ಒಪ್ಪಿಸಬಹುದು· ನನ್ನಂತೆ ಈ ಸಣ್ಣವಯಸ್ಸಿಗೇ ಸುಧಾ ಸಂಸಾರದ ಸಂಕೋಲೆಯೊಳಗೆ ಸಿಲುಕಿಕೊಳ್ಳುವುದು ಬೇಡ ಎಂದುಕೊಂಡಳು ಕಮಲಾ.

ಸಂಜೆ ಕಮಲಳ ಪತಿ ದಿನೇಶ್ ಆಫೀಸು ಮುಗಿಸಿಕೊಂಡು ಮನೆಗೆ ಬಂದ........ಕುರ್ಚಿಯ ಮೇಲೆ ಕುಳಿತು ತನ್ನ ಷೂ ಲೇಸನ್ನು ಬಿಚ್ಚತೊಡಗಿದನು.... ಕಾಲುಚೀಲ ಮತ್ತು ಷೂವನ್ನು ಒಂದು ಬದಿಯಲ್ಲಿಟ್ಟು ತಾನು ತೊಟ್ಟಿದ್ದ ಉಣ್ಣೆಯ ಕೋಟನ್ನು ಕಳಚಿ ಹ್ಯಾಂಗರ್‌ಮೇಲೆ ಹಾಕಿ....ಪ್ಯಾಂಟನ್ನು ಬಿಚ್ಚಿ ಪಂಚೆಯನ್ನುಟ್ಟು......... ಹೆಗಲಿನ ಮೇಲೆ ಶುಭ್ರವಾದ ಟರ್ಕಿ ಟವಲನ್ನು ಹಾಕಿಕೊಂಡು ಮುಖಮಾರ್ಜನೆ ... ಸ್ನಾನಗೃಹದತ್ತ ತೆರಳಿದ....

ಅಷ್ಟರಲ್ಲಿ ಕಮಲಾ ಹೊಗೆಯಾಡುತ್ತಿರುವ ಬಿಸಿ ಬಿಸಿ ಉಪ್ಪಿಟ್ಟನ್ನು ತಂದಿಟ್ಟಳು....

ದಿನೇಶ ಕುರ್ಚಿಯಮೇಲೆ ಕುಳಿತು ಸ್ವಾಧಿಷ್ಟವಾದ ಉಪ್ಪಿಟ್ಟನ್ನು ತಿನ್ನತೊಡಗಿದ....

"ಕಮಲಾ, ಉಪ್ಪಿಟ್ಟು ಈ ದಿನ ತುಂಬ ರುಚಿಯಾಗಿದೆ."

"ಹೌದೇ ?" ಹುಬ್ಬೇರಿಸಿ ಕೇಳಿದಳು. ನಂತರ ಬಿಸಿ ಕಾಫಿಯ ಸೇವನೆಯೂ ಮುಗಿಯಿತು....

"ಸಂಜೆ....ಹಾಗೆ ಸುತ್ತಾಡಿಕೊಂಡು ಬರೋಣ ಬರ್ತೀಯಾ, ಕಮಲಾ" ಎಂದ ದಿನೇಶ.

"ಪಾಪ, ಈಗ್ತಾನೆ ಆಫೀಸಿನಿಂದ ಬಂದಿದ್ದೀರಿ. ಒಂದು ಘಳಿಗೆ ಹಾಗೇ ಸುಧಾರಿಸಿಕೊಳ್ಳಿ, ನೋಡೀಂದ್ರೆ

ನಮ್ಮ ಸುಧಾಳ ಪತ್ರ ಬಂದಿದೆ." ಎಂದೆನ್ನುತ್ತಾ ಕಮಲಾ ಜಾಕೀಟಿನ ಒಳಗಡೆಯೇ ಇಟ್ಟುಕೊಂಡಿದ್ದ ಪತ್ರವನ್ನು ದಿನೇಶನ ಕೈಗಿತ್ತಳು....ಪತ್ರ ಸುಕ್ಕುಸುಕ್ಕಾಗಿದ್ದಿತು. ಅದನ್ನು ನಿಧಾನವಾಗಿ ಬಿಡಿಸಿ ಮನದಲ್ಲಿಯೇ ಓದತೊಡಗಿದ.

ಓದುತ್ತಲೇ "ಓ, ಪರ್ವಾಗಿಲ್ಲ ನಿನ್ನ ತಂಗಿ ಸುಧಾ, ಫಸ್ಟ್‌ಕ್ಲಾಸನ್ನೇ ಗಿಟ್ಟಿಸಿ ಬಿಟ್ಟಿದ್ದಾಳೆ ಬಿಡು" ಎಂದ

"ಫಸ್ಟ್‌ಕ್ಲಾಸ್ ಗಿಟ್ಟಿಸಿದರೂನೂವೆ, ಅವಳು ಮುಂದೆ ಓದಲಿಕ್ಕೆ ಅಪ್ಪ, ಅಮ್ಮ ಸಮ್ಮತಿಸೋಲ್ಲ.... ಬೇಗ ಮದುವೆ ಮಾಡಬೇಕೂಂತ, ಅಪ್ಪ, ಅಪ್ಮನ ಯೋಚನೆ."

"ಹೋಗಲಿ,ಬಿಡು, ಒಳ್ಳೆ ಸಂಬಂಧ ದೊರಕಿದರೆ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿಬಿಡಲಿ."

"ನೀವು ಸರಿಯೇ, ಅಲ್ಲಾ ನಮ್ಮ ಸುಧಾಗೆ ಇನ್ನು ಹದಿನೇಳು ವರ್ಷ....ಮದುವೆಗೆ ಏನು ಆತುರ....ಡಿಗ್ರಿ ತೆಗೆದುಕೊಳ್ಳಲಿ ಬಿಡಿ....ಚೆನ್ನಾಗಿ ಓದೋ ಹುಡುಗಿ.... ಹಾಳಾದ್ದು ಅವರ ಊರಲ್ಲಿ ಕಾಲೇಜು ಇಲ್ಲ....ಕಾಲೇಜು ಮಾಡ್ತೀವಿ, ಮಾಡ್ತೀವೀಂತ ಹತ್ತು ವರ್ಷದಿಂದ ಹೇಳ್ತಾನೆ ಇದ್ದಾರೆ ಅಲ್ಲಿನ ಮುನಿಸಿಪಾಲಿಟಿಯವರು. ಅದು ಯಾವಾಗ ಮಾಡ್ತಾರ್‍ಯೋ, ಏನೋ....ನನ್ನ ಓದೂ ಹೀಗೇ ಆಯ್ತು....ಸುಧಾನಾದ್ರು ಓದಲಿ.... ಅಲ್ಲಾ.......ರೀ......."

"ಏನು ?"

"ಒಂದು ವಿಷಯ ?"

"ಏನು ಹೇಳೀ ಮಹರಾಯ್ತಿ.......ಮುನ್ನುಡಿ ಅನಂತರವಾಗಲಿ, ಮುಖ್ಯ ವಿಷಯ ಏನು ಹೇಳು ?"

"ಅಲ್ರೀ.......ನಮ್ಮ ಸುಧಾನ ನಮ್ಮಲ್ಲೇ ಇಟ್ಟುಕೊಂಡು ಏಕೆ ಓದಿಸಬಾರದು....ನನಗೂ ಒಬ್ಬಳೇ ಇದ್ದು ಇದ್ದು ಬೇಸರ ಆಗಿದೆ.......ನನಗೂ ಕೊಂಚ ನೆರವಾದ ಹಾಗೂ ಆಗುತ್ತೆ....ಹಾಸ್ಟೆಲ್....ಪಾಸ್ಟೆಲ್ ಅಂದ್ರೆ ಅಮ್ಮ, ಅಪ್ಪ ಒಪ್ಪೋಲ್ಲ ನೀವೇನಂತೀರಿ."

"ನಿ....ನ್ನ....ಇಷ್ಟ" ಚುಟುಕಾಗಿ ಉತ್ತರಿಸಿ ಸುಮ್ಮನಾದ ದಿನೇಶ."

ಹಾಗಾದರೆ ಸುಧಾಗೆ ಪತ್ರ ಬರೀಲೇಂಡ್ರೆ....ಅಪ್ಪ ಅಮ್ಮನಿಗೂ, ಬರೀತೀನಿ, ಸುಧಾನ ಮುಂದೆ ಓದಿಸಿ. ಇಲ್ಲಿಗೆ ಕಳುಹಿಸಿಕೊಡೂಂತ.......ಸುಧಾ ತುಂಬಾ ಜಾಣೇರಿ...."

"ಊಂ...." ಎಂದಷ್ಟೇ ನುಡಿದ ದಿನೇಶ.

ಬೆಳಗ್ಗೆ ಆಫೀಸಿಗೆ ಹೋಗುವ ಆತುರದಲ್ಲಿ ದಿನೇಶ ದಿನ ಪತ್ರಿಕೆಯನ್ನು ಓದಲಾಗುತ್ತಿರಲಿಲ್ಲ. ಮೇಲಿನ ಹೆಡ್‌ಲೈನ್ಸ್ ಮಾತ್ರ ಗ್ಲಾನ್ಸ್‌ಮಾಡಿ ತೆರಳುತ್ತಿದ್ದ.... ಸಂಜೆ ಹೊರಗೆಲ್ಲೂ ಸುತ್ತಾಡಲು ಹೋಗದ ದಿನ ಪತ್ರಿಕೆಯನ್ನು ಓದತೊಡಗುತ್ತಿದ್ದ....ಈ ದಿನವೂ.... ಮೇಜಿನ ಮೇಲಿದ್ದ ಪತ್ರಿಕೆಯನ್ನು ತೆಗೆದುಕೊಂಡು ಓದತೊಡಗಿದ.

ಇದರಿಂದ ಕಮಲೆಗೆ ತುಸು ಬೇಸರವೆನಿಸದಿರಲಿಲ್ಲ 'ಊಂ' ಎಂದಷ್ಟೇ ನುಡಿದು ಸುಮ್ಮನಾಗಿದ್ದ....ಬೇರೆ ವಿಷಯವಾಗಿದ್ದಿದ್ದರೆ ಹರಳು ಉರಿದಂತೆ ಮಾತನಾಡುತ್ತಿದ್ದವನು, ಸುಧಾಳ ವಿಷಯವನ್ನು ಪ್ರಸ್ತಾಪಿಸಿದಾಗ ಚುಟುಕಾಗಿ ಉತ್ತರವನ್ನು ನೀಡಿದ್ದು ಕಮಲೆಯ ಉತ್ಸಾಹಕ್ಕೆ ಭಂಗ ಉಂಟು ಮಾಡಿದಂತೆಯೇ ಆಗಿತ್ತು, ...ತನ್ನ ಪತಿಗೆ ಸುಧಾ ಇಲ್ಲಿಗೆ ಬರುವುದು ಇಷ್ಟವಿಲ್ಲವೇನೋ ಎಂದುಕೊಂಡಳು....ನನ್ನ ಮಾತಿಗೆ ಕಟ್ಟುಬಿದ್ದು ಒಪ್ಪಿಗೆಯನ್ನು ಸೂಚಿಸಿರಬಹುದಲ್ಲವೇ ?

ಸ್ಪಷ್ಟವಾಗಿ 'ಬೇಡ' ಎನ್ನಬೇಕಿತ್ತು....ಎಂದುಕೊಂಡಳು....ಪಶ್ಚಿಮದ ದಿಗಂತದಲ್ಲಿ ಸೂರ್ಯ ಅಸ್ತಂಗತನಾಗತೊಡಗಿದ್ದ. ಕತ್ತಲೆ ಎಲ್ಲ ಕಡೆಯೂ ಪಸರಿಸತೊಡ

ಎಲ್ಲಿ ಸಿರೀಕ್ಕೆ ಅತಿಯಾಗಿರುತ್ತದೋ

ಅಲ್ಲೇ ನಿರಾಶೆ ಅತಿಯಾಗುವುದು

ಅನುಭವಿ

ಗಿತ್ತು....ಮಬ್ಬು ಮಬ್ಬು ಕತ್ತಲು....ಕಮಲಾ ಎದ್ದು ಸ್ವಿಚ್ಚನ್ನು ಅದುಮಿದಳು....ಮನೆಯಲ್ಲಾ ಬೆಳಕು ಪಸರಿಸಿತು. ಕಮಲಾಳ ಕಣ್ಣು ಗೋಡೆಯ ಮೇಲಿದ್ದ ಗಡಿಯಾರದ ಕಡೆಗೆ ಹೊರಳಿತು. ಆಗಲೇ ಆರು ಮುಕ್ಕಾಲು....ಸಂಜೆಯ ಅಡಿಗೆಗಾಗಿ ಅಡಿಗೆ ಮನೆಯತ್ತ ನಡೆದಳು ಕಮಲಾ.....

ಕಮಲಾ ಅಡಿಗೆ ಕೆಲಸದಲ್ಲಿ ತೊಡಗಿದ್ದರೂ ಮನ ಏನನ್ನೋ ಯೋಚಿಸುತ್ತಲೇ ಇತ್ತು....

ಕಮಲೆಗೆ ಮೊದಲಿನಿಂದಲೂ ತನ್ನ ತಂಗಿ ಸುಧಾಳನ್ನು ಕಂಡರೆ ತುಂಬ ಅಕ್ಕರೆ. ಅಕ್ಕರೆಯ ತಂಗಿ ಬಳಿಯಲ್ಲಿರಲಿ ಎಂದು ಒಂದು ಮನ ಬಯಸುತ್ತಿತ್ತು.... ತಂಗಿಯ ಏಳ್ಗೆಯನ್ನು ನೆನೆ ನೆನೆದು ಮನ ಹಿರಿ ಹಿರಿ ಹಿಗ್ಗುತ್ತಿತ್ತು....ಗರಿಗೆದರಿ ಕುಣಿಯುತ್ತಿತ್ತು.

ಆದರೆ ಅದರ ಹಿಂದೆಯೇ ಮತ್ತೊಂದು ಮನ ಕಮಲೆಯ ಮನವನ್ನು ಎಚ್ಚರಿಸುವ ರೀತಿಯಲ್ಲಿ.... ಯೌವನದ ರೂಪವತಿಯಾದ ತಂಗಿಯನ್ನು ಕರೆತಂದು ನಿನ್ನ ಮನೆಯಲ್ಲಿಟ್ಟುಕೊಳ್ಳುವುದು ಅಪಾಯವಾದೀತು ಎಂದು ಮನದ ಮೂಲೆಯ ಯಾವುದೋ ಒಂದು ಕಡೆಯಿಂದ ಕೂಗಿ ಎಚ್ಚರಿಸಿದಂತಾಯ್ತು ಕಮಲೆಗೆ.

ನೆರವು ಬಯಸಿದ ತಂಗಿಗೆ ನೆರವು ನೀಡಲಾರದಾದ ನೀನು ಎಂಥ ಅಕ್ಕ ಎಂದು ಒಂದು ಮನ, ಪ್ರೀತಿ ಒಂದು ಕಡೆ ಉಕ್ಕಿ ಹರಿಯುತ್ತಿದ್ದರೆ, ಮತ್ತೊಂದು ಕಡೆ ಸಂಶಯದ ಸುಳಿಗಾಳಿ ಬೀಸುತ್ತಿತ್ತು.

ಮನದಲ್ಲಿ ಈ ರೀತಿಯ ವಿಪ್ಲವ ನಡೆಯುತ್ತಿರುವಾಗಲೇ ಕಮಲೆಯ ನೆನಪು ಹಿಂದಕ್ಕೆ ಓಡಿತು.......

ಅಂದು ದಿನೇಶ....ಕಮಲೆಯ ಊರಿಗೆ ಬಂದಿದ್ದರು, ಕಮಲಾ....ಆ ದಿನವೇ ಹೊರಗಾಗಿದ್ದಳು.... ಸಂಪ್ರದಾಯ ಬದ್ಧರಾದ ಕಮಲೆಯ ತಾಯಿ....ಗೆ ಕಮಲಾ ಮೂರು ದಿನವೂ ಹೊರಗೇ ಕೂತಿರಬೇಕು. ತುಂಬ ಮಡಿ ಸ್ವಭಾವದವರು....

ಇನ್ನು ಮನೆಯಲ್ಲಿ ಕಮಲೆಯ ತಂದೆ, ತಾಯಿ ಸುಧಾ....ನ ಬಿಟ್ಟರೆ ಮತ್ಯಾರು ಇಲ್ಲ. ಕಮಲೆಯ ತಾಯಿ ಅಳಿಯನ ಮುಂದೆ ಸುಳಿಯಿತ್ತಲೂ ಇರಲಿಲ್ಲ ಮಾತನಾಡುವುದಂತೂ ಮೊದಲೇ ಇಲ್ಲ ಹೀಗಾಗಿ.... ಪರಿಸ್ಥಿತಿಗೆ ಕಟ್ಟುಬಿದ್ದು ಸುಧಾಳೇ ಭಾವನ ಸೇವೆಗೆ ಟೊಂಕ ಕಟ್ಟಿ ನಿಂತಳು, ಭಾವನಿಗೆ ತಿಂಡಿ ಕಾಫಿ ಸ್ನಾನಕ್ಕೆ ಬಿಸಿ ನೀರಿನಿಂದ ಹಿಡಿದು ಹಾಸಿಗೆ ಹಾಸುವ ಕೆಲಸವೆಲ್ಲಾ ಸುಧಾಳ ಪಾಲಿಗೆ ಬಿದ್ದಿತ್ತು....

ಸುಧಾ ಸಂಕೋಚವಿಲ್ಲದೆ ಭಾವನ ಸೇವೆ ಮಾಡುತ್ತಿದ್ದಳು.

ಸಂಜೆ ದಿನೇಶ ಕಮಲೆಯನ್ನು ಕುರಿತು "ಕಮಲಾ ....ಬೆಳಗಿನಿಂದ ಮನೇಲೇ ಕುಳಿತು ಬೇಸರವಾಗಿದೆ.... ನೀನಂತೂ ಹೊರಗೆ ಬರೋ ಹಾಗಿಲ್ಲ ಹೋಗಲಿ ಸುಧಾನ ಕರಕೊಂಡು ಪಿಕ್ಚರ್‌ಗಾದ್ರೂ ಹೋಗ್ಬಿಟ್ಟು ಬರ್ತೀನಿ" ಎಂದಾಗ ಕಮಲೆಯ ಮನಸ್ಸು ಕಸಿವಿಸಿಗೊಂಡಿತ್ತು.

"ಅಮ್ಮ....ಬೇಡ ಅಂತಾರೆ....ಸುಧಾನ ನಿಮ್ಮ ಜೊತೆ ಕಳಿಸೋಲ್ಲ...." ಎಂಮ ನುಡಿದಾಗ ದಿನೇಶ ಅಸಮಾಧಾನಗೊಂಡಿದ್ದ....

ಈ ಅಸಮಾಧಾನದ ಛಾಯೆಯನ್ನು ಮುಖದಿಂದಲೆ ಗಮನಿಸಿದ್ದಳು ಸೂಕ್ಷ್ಮಮತಿಯಾದ ಕಮಲಾ.

ದಿನೇಶ ಪುನಃ ಸುಧಾಳನ್ನು ಕಳುಹಿಸುವಂತೆ ಒತ್ತಾಯಪಡಿಸದಿದ್ದರೂ....ಆತನ ನೋಟ ಸುಧಾಳತ್ತ ಹರಿಯುತ್ತಿದ್ದುದನ್ನು ಗಮನಿಸಿದಳು ಕಮಲಾ.

ಈ ವಿಚಾರಗಳ ನೆನಪು ಕಮಲಳ ಮನಃಪಟಲದ ಮೇಲೆ ಹಾದು ಹೋದಾಗ....ಮನ ಅಧೀರಗೊಂಡಿತ್ತು ಒಳಗೊಳಗೆ....

ದಿನೇಶ ಪತ್ರಿಕೆಯನ್ನು ಓದುತ್ತಾ ಕುಳಿತಿದ್ದರೂ ಸಹ ಮನದ ಸ್ವಾಸ್ಥ್ಯ ಕಳೆದುಕೊಂಡಿದ್ದ, ಮನಸ್ಸು ಸುಧಾಳ ಬಗ್ಗೆ ಯೋಚಿಸತೊಡಗಿತು.

ಸುಧಾ....ಕಮಲೆಗಿಂತ ರೂಪವತಿ ಜೊತೆಗೆ ಸರಸಿ ಬೇರೆ ಸುಧಾಳ ಮಾತುಕತೆ ಮನಸ್ಸಿಗೆ ಆಪ್ಯಾಯಮಾನ, ಸುಧಾ ಇಲ್ಲಿಗೆ ಬಂದರೆ ಅವಳು ಮುಂಗಸಿಯಂತೆ ಮೂಲೆಯಲ್ಲಿ ಕೂಡುವವಳು ಅಲ್ಲ. ಮಾತುಗಾರ ಮಲ್ಲಿ, ಸುಧಾ ನನ್ನೊಡನೆ ಮಾತನಾಡಲು ಬಂದೇ ಬರುವಳು ....ನಮ್ಮಿಬ್ಬರ ಸಹಜವಾದ ಮಾತುಕತೆಯೇ ಕಮಲೆ ಮನದಲ್ಲಿ ಸಂಶಯಕ್ಕೆ ಎಡೆಗೊಡುವಂತಾಗಬಾರದಲ್ಲವೇ ಕಮಲೆ ಒಳ್ಳೆಯವಳು....ಗುಣದಲ್ಲಿ ಚಿನ್ನ....ತಂಗಿ ಎಂದರೆ ತುಂಬವ್ಯಾಮೋಹ....ಆ ವ್ಯಾಮೋಹದಲ್ಲಿ ಸಿಲುಕಿಕೊಂಡು ತನ್ನ ಸಂಸಾರಕ್ಕೆ ತಾನೇ ಮುಳುವಾಗಬಾರದಲ್ಲವೇ ? ಇದನ್ನೆಲ್ಲಾ ಕಮಲೆಗೆ ಬಿಡಿಸಿ ಹೇಳಲಿಕ್ಕೂ ಸಾಧ್ಯವಿಲ್ಲ.......ಸಹಜವಾಗಿ ಎಲ್ಲ ಹೆಣ್ಣು ಮಕ್ಕಳಂತೆ ಇವಳಿಗೂ ತೌರಿನಕಡೆಯ ಹಂಬಲ ತಪ್ಪಿದ್ದಲ್ಲ.

ಶಾಂತ ಪ್ರವಾಹದಂತೆ ಹರಿಯುತ್ತಿರುವ ನಮ್ಮ ಸಂಸಾರದಲ್ಲಿ ಸುಧಾಳ ಆಗಮನದಿಂದ ಬಿರುಗಾಳಿ ಬೀಸಬಾರದಲ್ಲವೇ ? ಅದರಿಂದಲೇ ನಾನು ಕಮಲೆಗೆ ನಿನ್ನಿಷ್ಟ ಎಂದು ತಿಳಿಯಹೇಳಿದ್ದು....ನನ್ನ ಮನಸ್ಸಿನ ಸ್ವಾಧೀನ ತಪ್ಪಿ....ನಾನೇ ಪರಿಸ್ಥಿತಿಯ ಸಂದರ್ಭಕ್ಕೆ ಒಳಗಾದರೆ.... ಛೆ....ಸುಧಾ ಇಲ್ಲಿಗೆ ಬರದೆ ಇರುವುದೇ ಒಳಿತು....... ಎಂದುಕೊಂಡ ದಿನೇಶ....ಮನಕ್ಕೆ ಕಡಿವಾಣ ಬಿಗಿದ....

ಇತ್ತ ಸುಧಾಳ ಮಾತಾಪಿತೃಗಳು ಸುಧಾಳ ಆಸೆಗೆ ಹೆಚ್ಚಿನ ಬೆಂಬಲವನ್ನು ನೀಡಲು ಇಚ್ಛಿಸುತ್ತಿರಲಿಲ್ಲ....ವಯಸ್ಸಿಗೆ ಬಂದ ಹೆಣ್ಣುಮಗಳನ್ನು ಭಾವನ ಮನೆಯಲ್ಲಿ ಬಿಡಲು ಅವರಿಗೆ ಇಷ್ಟವಿಲ್ಲ ಆದರೆ ಸುಧಾಳ ಮನದ ಬಯಕೆ....ಮುಂದೆ ಓದುವ ಇಚ್ಛೆ ಮುರಿಯಲು ಇಷ್ಟವಿಲ್ಲದೆ ಮನದಲ್ಲಿಯೇ ಮರುಗುತ್ತಿದ್ದರು........ ಹಾಸ್ಟೆಲ್‌ನಲ್ಲಿ ಬಿಡಲು ಮನ ಒಪ್ಪದು. ಕಮಲೆ ಇದಕ್ಕೆ ಸಮ್ಮತಿಸಳು, ತಂಗಿಗೆ ತಾನು ನೆರವು ನೀಡಲಾರೆನೆ ಎಂದು ನಮ್ಮನ್ನೇ ದೂರಿಯಾಳು ಎಂದು ಯೋಚಿಸತೊಡಗಿದರು.

ಇತ್ತ ಸುಧಾ ಪತ್ರದ ಆಗಮನಕ್ಕಾಗಿ ಕಾಯತೊಡಗಿದಳು.....ಅಕ್ಕ ತನಗೆ ನೆರವು ನೀಡೇ ನೀಡುವಳೆಂಬ ಆತ್ಮವಿಶ್ವಾಸವಿತ್ತು ಸುಧಾಳಿಗೆ ಆದ್ದರಿಂದಲೇ ತನ್ನ ಒಲವಿನ ಅಕ್ಕನಿಗೆ ತನ್ನ ಮನದ ಅಭಿಲಾಷೆಯನ್ನು ತೋಡಿಕೊಂಡು ಪತ್ರ ಬರೆದಿದ್ದಳು. ಅವಳಿಗೆ ತನ್ನ ಭಾವನ ಬಗ್ಗೆ ಸಹಜವಾದ ವಾತ್ಸಲ್ಯದ ಮುಂದೆ ಏನು ಇರಲಿಲ್ಲ. ತನ್ನ ಅಕ್ಕನ ಗಂಡ ಎಂಬ ಅಭಿಮಾನ ದಿನೇಶನನ್ನು ಕಂಡರೆ ಅಷ್ಟೆ........ಅದಕ್ಕಿಂತ ಹೆಚ್ಚಾಗಿ ಸುಧಾ ಒಂದು ದಿನವೂ ತನ್ನ ಭಾವನ ಬಗ್ಗೆ ಯೋಚಿಸಿರಲಿಲ್ಲ.

ಓದುವ ಹಂಬಲ ಹೊತ್ತ ಸುಧಾ ಹತ್ತಿಕ್ಕಿದ ಆಸೆಯನ್ನು ತಡೆಯಲಾರದೆ ತಂದೆ ತಾಯಿಗಳಿಂದ ಆದ ನಿರಾಶೆಯನ್ನು ತನ್ನ ಅಕ್ಕನ ಮುಂದೆ ತೋಡಿಕೊಂಡಿದ್ದಳು. ಬೆಂಗಳೂರಿಗೆ ಹೋಗಿ ಮಹಾರಾಣಿ ಕಾಲೇಜಿನಲ್ಲಿ ಓದುವ ಕನಸು ಕಾಣತೊಡಗಿದ್ದಳು....ಕುಳಿತರೆ, ನಿಂತರೇ, ಎದ್ದರೆ ಅವಳಿಗೆ ಅದೇ ಧ್ಯಾನ, ಉನ್ನತ ವ್ಯಾಸಂಗ ಮಾಡಿ ಡಾಕ್ಟರಾಗುವ ಬಯಕೆ ಹೊತ್ತಿದ್ದಳು........

ಮೂರು ನಾಲ್ಕು ದಿನಗಳಾದರೂ ಅಕ್ಕನಿಂದ ಪತ್ರ ಬರಲಿಲ್ಲ........ಅಂಚೆ ಪೇದೆ ಮನೆಯ ಮುಂದೆ ಹೋದರೆ ಆಸೆಯ ಕಣ್ಣುಗಳಿಂದ ಪತ್ರದ ಆಗಮನಕ್ಕಾಗಿ ಕಾತುರದಿಂದ ಕಾಯತೊಡಗಿದಳು.....

ಪತ್ರ ಬರಲು ವಿಳಂಬವಾದಾಗ....ನಿರಾಸೆಯ ಛಾಯೆ ಮನದಲ್ಲಿ ಮೂಡತೊಡಗಿತು. ತನ್ನ ಆಸೆಗೆ ತಿಲಾಂಜಲಿ ಅರ್ಪಿಸುವುದೇ ಲೇಸೆನಿಸಿತು. ಯಾರಿಗೆ ಯಾರೂ ನೆರವು ನೀಡರು....ಪ್ರೀತಿ ಎಲ್ಲಾ ತೋರಿಕೆ ಎಂದು ಮನದಲ್ಲಿಯೇ ತನ್ನ ಅಕ್ಕನನ್ನು ನಾಲ್ಕಾರು ಬಾರಿ ಹಳಿದುಕೊಂಡಳು.....

ಆ ದಿನ ಸುಧಾಳ ತಂದೆ ಪೇಟೆಗೆ ಹೋಗಿದ್ದವರು ಅತಿ ಹರ್ಷದಿಂದಲೇ ಮನೆಗೆ ಬಂದರು. ಬಂದವರೆ ಹೊರ ಬಾಗಿಲಿನಿಂದಲೇ

"ಸುಧಾ, ಸುಧಾ" ಎಂದು ಕರೆದರು ಯಾವುದೋ ಕಾದಂಬರಿಯನ್ನು ಓದುವುದರಲ್ಲಿ ಮಗ್ನಳಾಗಿದ್ದ ಸುಧಾ ತಂದೆಯ ಕರೆಯುವಿಕೆಯಿಂದ ಎಚ್ಚೆತ್ತು ಕೈಲಿ ಪುಸ್ತಕವನ್ನು ಹಿಡಿದೇ ಹೊರಕ್ಕೆ ಬಂದಳು.

"ಏನಪ್ಪಾಜಿ ? ಕರೆದಿರಲ್ಲಾ ?"

"ಸುಧಾ, ನಿನ್ನ ಅದೃಷ್ಟ ಅಂದ್ರೆ ಏನು ಹೇಳಲಿ.... ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದು ಹಾಲು ಅನ್ನ"

ಒಮ್ಮೆ ಕಾಲೇಜಿನ ಉಪಾಧ್ಯಾಯರೊಬ್ಬರಿಗೆ ಒಂದು ಪತ್ರ ಬಂತು. ಅದರಲ್ಲಿ ದಪ್ಪಕ್ಷರಗಳಲ್ಲಿ ಫೂಲ್ ಎಂದು ಬರೆಯಲಾಗಿತ್ತು. ತೆರೆದು ನೋಡಿ ಹಾಗೇ ಇಟ್ಟರು.

ಮರುದಿನ ತರಗತಿಯಲ್ಲಿ ಅವರು ಪಾಠಮಾಡುತ್ತಾ ಹೇಳಿದರು. "ಈವರೆಗೆ ಪತ್ರ ಬರೆದು ಸಹಿ ಮಾಡಲು ಮರೆಯುತ್ತಿದ್ದವರನ್ನು ಕಂಡಿದ್ದ. ಆದರೆ ನಿನ್ನೆ ಒಬ್ಬಾತ ಸಹಿಮಾಡಿ ಪತ್ರ ಬರೆಯುವುದನ್ನೇ ಮರೆತು ಪೋಸ್ಟ್ ಮಾಡಿದ್ದಾನೆ."

"ಏನಪ್ಪಾಜಿ ಅಕ್ಕನಿಂದ ಪತ್ರ ಬಂದಿದೆಯೇ ! ಬಾ ಅಂತ ಬರಿದಿದಾಳ್ಯೇ ?"

"ಇಲ್ಲಮ್ಮಾ..."

ನಿರಾಶೆಗೊಂಡಳು ಸುಧಾ....ಮುಖ ಕಳೆಗುಂದಿತು....ನಿಸ್ತೇಜ ಮುಖದಿಂದ ಒಳ ನಡೆಯತೊಡಗಿದಳು....

"ಸುಧಾ....ಬಾಯಿಲ್ಲಿ" ಮತ್ತೆ ಕರೆದರು ಸುಧಾಳ ತಂದೆ ಗಣಪತಿರಾಯರು.

"ಹೋಗಪ್ಪಾಜಿ....ಏನೋ ಹೇಳ್ತೀರಿ ಅಂತ.

"ಹೇಳೋವರೆಗೂ ಕೊಂಚ ನಿಧಾನಿಸು...." ಎಂದರು

"ಬೇಗ ಹೇಳಿ....ನಾನು ಕಾದಂಬರಿ ಓದಬೇಕು"

"ಕಳ್ಳಿ....ನೀನು ಕಾಲೇಜಿಗೆ ಸೇರಬೇಕೂಂತ ತಾನೆ ನಿನ್ನಿಷ್ಟ"

"ಹೌದು....ರಿಜಲ್ಟ್ ಬಂದಾಗಿನಿಂದ ಅದೇ ಚಿಂತೆ ಹಾಗಾದ್ರೆ ನನ್ನ ಓದಿಸಲಿಕ್ಕೆ ಬೆಂಗಳೂರಿಗೆ ಕಳಿಸುತ್ತೀರಾ ಅಪ್ಪಾಜಿ."

"ಇಲ್ಲ"

"ಮತ್ತೆ....ಆಸೆ ತೋರಿಸೋದು ಯಾಕೋ" ತುಸು ಮುನಿಸಿನಿಂದಲೇ ನುಡಿದಳು ಸುಧಾ.

"ನೀನು ಕಾಲೇಜಿಗೆ ಸೇರಮ್ಮಾ."

"ಹೇಗಪ್ಪಾಜಿ ?....ಬೆಂಗಳೂರಿಗೆ ಕಳಿಸೋಲ್ಲಾಂತೀರಿ ಕಾಲೇಜಿಗೆ ಸೇರು ಅಂತೀರಿ....ನಿಮ್ಮ ಮಾತಿನ ಅರ್ಥವೇ ಆಗೋಲ್ಲ...."

"ಸುಧಾ........ಈಗ ನಮ್ಮೂರಲ್ಲೇ ಕಾಲೇಜು ಪ್ರಾರಂಭಿಸುತ್ತಾರಂತಮ್ಮ ಮುನಿಸಿಪಾಲಿಟಿಯವರು. ಅದೂ ಈ ವರ್ಷವೇ... ಅದಕ್ಕೇನೇ ಹೇಳಿದ್ದು ನಿನ್ನ ಅದೃಷ್ಟ ಅಂತ."

"ಹಾಂ ! ನಿಜಾನೇನಪ್ಪಾಜಿ.... ನನ್ನ ಮನದ ಬಯಕೆ ದೇವರಿಗೆ ಅರ್ಥ ಆಗಿರಬೇಕು...."

"ನಿಮ್ಮ ಅಕ್ಕನಿಗೆ ಕಾಗದ ಬರೆದು ಹಾಕು ನಾನ ಇಲ್ಲೇ ಕಾಲೇಜಿಗೆ ಸೇರ್ತೀನೀಂತ."

"ಹಾಗೇ...... ಹಾಗಲಣ್ಣ"

ಕಮಲೆಗೆ ಪತ್ರ ಮುಟ್ಟಿತು....ಈ ಸಮಾಚಾರವನ್ನು ದಿನೇಶನಿಗೂ ಅರುಹಿದಳು.

"ಹೂಂ" ಎಂದಷ್ಟೇ ನುಡಿದು ಸುಮ್ಮನಾದ ಕಮಲೆಗೆ ಪತಿಯ 'ಹೂಂ' ಒಡೆಯಲಾರದ ಒಗಟಾಯ್ತು.....

ನಂಜಯ್ಯನ ಪದಗಳು

ನಂಜಯ್ಯ ಹುಟ್ಟಿದಾಗ ನಂಜನಗೂಡು ಕಟ್ಟಿದಾಗ
ಮಂಚು ಕಾಲೆಮ್ಮೆಯ ಕೂಡುವಾಗ–ದೇವಿರಮ್ಮ
ಕಂಚಿನಡೇಲಿ ಕರುವ ಬಿಡುತ್ತಾಳೆ

ಕಂಚಿನಂಡೆಗೆ ಏನೇನೋ ಸರಮುತ್ತು
ರೇಖಮಾಣಿಕದ ಕಡೆ ಹಗ್ಗ ತಕ್ಕೊಂಡು
ರೂಪಸ್ತೆ ಮೊಸರ ಕಡೆದಾಳು

ಕಡೆಯ ಕಂಬಕೆ ಮುತ್ತು ನಡುಮನೆಗೆ ರಂಗೋಲೆ
ನಡೆಯ ಬಾಗಿಲಿಗೆ ತಾ ರತ್ನ–ನಂಜಯ್ಯ
ನಿನ್ನ ಮಡದಿಯರು ಇನ್ನೆಷ್ಟ ಚೆಲುವೇರು

ನಂಜನಗೂಡಲ್ಲಿ ನಾಲ್ಕೈದು ಬಾಗಿಲು
ನಂದಿಕೋಲೈದು ಪಟವೈದು–ದೇವಿರಮ್ಮ
ಮಂಗಳಾರತಿ ಹದಿನೈದು

ನಂಜನಗೂಡು ಚೆಂದ ಜಂಗಮರ ಮಠ ಚೆಂದ
ಲಿಂಗಕಟ್ಟಿದವರ ಎದೆ ಚೆಂದ–ನಂಜಲಗೂಡು
ವಿಭೂತಿ ಧರಿಸಿದವರ ಹಣೆ ಚೆಂದ

ನಂಜಲಗೂಡಲ್ಲಿ ನಮಗ್ಯಾರು ನೆಂಟರು
ನಂಜಪ್ಪಸ್ವಾಮಿ ಮನೆದೇವರು – ಗೊಂಬೆ
ತೇರಿಗೆ ಬರುವೆನು.
ಆ ಕಡೆ ಅಮ್ಮನ ತೇರು ಈ ಕಡೆ ಅಯ್ಯನ ತೇರು.

ರಾಟ್ವಾಣ ತೇರು ಪುರ್ಯ್‌ದೇರು–ದೂಪದಂಗಡಿಗೆ
ಹರಿದೇವ ದೂಪದ ತೇರುಬಂದು ತೋಪಲ್ಲಿ ನಿಂತ್ರೈತೆ
ಯಾಕೆ ನಂಜಯ್ಯ ಹೊರಗಡೆ ಇದ್ದೀಯೆ
ದೂಪದಂಗಡಿಗೆ ಬರಬೇಕು–ಯಾಕಡೆ ನೋಡಿದಕು
ಎಳೆಯ ತೆಂಗಿನಮರ ಸುತ್ತ ನೋಡಿದರೂ ಹೊಳೆಸಾಲು
ಬಂದು ನೋಡಿದರೆ ಕೈಲಾಸ

ನಂಜಲಗೂಡಲ್ಲಿ ಏನೇನು ಮಾರುಂಟು
ಸಣ್ಣ ರುದ್ರಾಕ್ಷೆ ಕೈಲಿಂಗ–ಮಾರುಂಟು
ಅಣ್ಣ ನಂಜಯ್ಯನ ಗುಡಿಯಲ್ಲಿ -

ಬಂದು ಮಂಚದ ಮೇಲೆ ಒಬ್ಬಳೆ ದೇವಿರಮ್ಮ
ಎದ್ದು ನೋಡಿಯಾಳು ಎಡ ಬಲ–ಎದ್ದು ದೇವಿರಮ್ಮ
ಕದ್ದು ಹೋಗೋದ ತಿಳಿಯಾದೆ

ದುಂಡಿ ದೇವಿರಮ್ಮ ನಿನ್ನ ಗಂಡ ಎಲ್ಲಿಗೆ ಹೋದ
ನಂಜಲಗೂಡಾಚೆ ನಡು ಹೊಳೆ–ದೇವಿರಮ್ಮ
ಚೆಂಡಾಡಕ್ಹೋಗಿ ಬರಲಿಲ್ಲ

ಅರಸಿ ದೇವಿರಮ್ಮ ನಿನ್ನ ಪುರುಷ ಎಲ್ಲಿಗೋದ
ನರಸಿಯಪುರದಾಚೆ ನಡುಹೊಳೆ–ದೇವಿರಮ್ಮ
ಸರಸವಾಡಲು ಹೋಗಿ ಬರಲಿಲ್ಲ.

—ಪಿ. ಆರ್. ತಿಪ್ಪೇಸ್ವಾಮಿ

ಛತ್ರಪತಿ ಶಿವಾಜಿ

—ಎಚ್. ರೇವಣಸಿದ್ದಪ್ಪ, ಎಂ. ಎ.

ಭಾರತೀಯ ಕ್ಷಾತ್ರತೇಜದ ಉದ್ದೀಪಕನಾಗಿ, ಮರಾಠಾ ಸ್ವರಾಜ್ಯ ಸ್ಥಾಪಕನಾಗಿ, ಹಿಂದೂಧರ್ಮದ ರಕ್ಷಕನಾಗಿ, ಸರ್ವಧರ್ಮ ಪರಿಪಾಲಕನಾಗಿ, ದುಷ್ಟಶಿಕ್ಷಕನಾಗಿ, ಶಿವಾಜಿಯು ಭಾರತೀಯ ಇತಿಹಾಸದ ಮಹಾಪುರುಷರಲ್ಲಿ ಒಬ್ಬನಾಗಿದ್ದಾನೆ.

ಭಾರತೀಯ ಇತಿಹಾಸದಲ್ಲಿ ಮರಾಠರ ಹೆಸರು ಶಿವಾಜಿಯಿಂದಲೇ ಆರಂಭವಾಗುತ್ತದೆ. ಆದ್ದರಿಂದ ಮರಾಠರ ಪ್ರಥಮ ಇತಿಹಾಸ ಪುರುಷ ಶಿವಾಜಿ. ಇವನ ತಂದೆ ಷಾಜಿ ಭೋಸ್ಲೆಯು (1594-1664) ಪೂನಾದ ಜಹಗೀರುದಾರ. ತಂದೆಯ ಕಡೆಯಿಂದ ಶಿವಾಜಿಯು ಉದಯಪುರದ ರಾಜಪೂತರ ವಂಶಕ್ಕೆ ಸೇರಿದವನು. ತಾಯಿಯಾದ ಜೀಜಾಬಾಯಿಯ ಕಡೆಯಿಂದ ಯಾದವ ವಂಶಕ್ಕೆ ಸೇರಿದವನು. ಷಾಜಿಭೋಸ್ಲೆಯು ಬಿಜಾಪುರದ ಅದಿಲ್‌ಷಹನ ದಳಪತಿಯಾಗಿ ದಕ್ಷಿಣ ಭಾರತದಲ್ಲಿ ದಿಗ್ವಿಜಯವನ್ನು ಪಡೆದು ಸಿರಾ, ಬೆಂಗಳೂರು, ಕೋಲಾರ, ತಂಜಾವೂರು ಮೊದಲಾದ ಜಹಗೀರುಗಳನ್ನು ಪಡೆದಿದ್ದನು. ಈ ವಿಜಯಗಳನ್ನು ಮರಾಠರ ನಾಯಕನಾಗಿ ಪಡೆಯದೇ ಬಿಜಾಪುರದ ದಳಪತಿಯಾಗಿ ಪಡೆದದ್ದರಿಂದ ಮರಾಠರ ಹೆಸರು ಬೆಳಕಿಗೆ ಬರಲಿಲ್ಲ. ಆದರೂ, ಈ ವಿಜಯಗಳು ಶಿವಾಜಿಯ ಕಾಲದಲ್ಲಿ ಮರಾಠಾ ರಾಜ್ಯ ವಿಸ್ತರಣೆಗೆ ಅನುಕೂಲ ಮಾಡಿಕೊಟ್ಟವು. ಮುಸ್ಲಿಮರ ಪ್ರಭಾವವನ್ನು ಮೊಟಕುಗೊಳಿಸಿದವು.

ಶಿವಾಜಿಯು 1627ರ ಏಪ್ರಿಲ್ 6ರಂದು ಶಿವನೇರು ದುರ್ಗದಲ್ಲಿ ಜನಿಸಿದನು. ಪರಕೀಯರ ಸೇವೆಯಲ್ಲಿದ್ದ ಷಾಜಿಯ ಮಗನಾಗಿ ಜನಿಸಿದ ಶಿವಾಜಿಯನ್ನು ಪರಕೀಯರ ಸೇವಾಭಾವನೆಯಿಂದ ದೂರಮಾಡಿ, ಸ್ವಾತಂತ್ರ್ಯ ಪ್ರಜ್ಞೆ ಮೂಡಿಸುವ ಉದ್ದೇಶಕ್ಕಾಗಿಯೇ ಎನ್ನುವಂತೆ ತಾಯಿ ಮತ್ತು ಮಗನನ್ನು ತಂದೆ ಷಾಜಿಯಿಂದ ಭಗವಂತನೇ ದೂರಮಾಡಿದನೆಂದು ತೋರುತ್ತದೆ. ಷಾಜಿಯು ತನ್ನ ಕಿರಿಯ ಪತ್ನಿ ತುಕಾಬಾಯಿ ಮತ್ತು ಅವಳ ಮಗ ವೆಂಕೋಜಿಯಲ್ಲಿ ಹೆಚ್ಚು ಅನುರಕ್ತನಾಗಿದ್ದನೆಂದು ತಿಳಿದು ಬರುತ್ತದೆ. ಆದರೂ, ಜೀಜಾಬಾಯಿಯ ಮೊದಲ ಮಗನಾದ, ಶಿವಾಜಿಯ ಅಣ್ಣನಾದ ಸಾಂಬಾಜಿಯನ್ನು ತನ್ನ ಬಳಿಯೇ ಬೆಳೆಸಿದನು ಶಿವಾಜಿಯನ್ನು ಜೀಜಾಬಾಯಿಯು ಪೂನಾದ ಜಹಗೀರಿನಲ್ಲಿ ಅಕ್ಕರೆಯಿಂದ ಬೆಳೆಸಿದಳು. ತಾಯಿಯ ಧರ್ಮಶ್ರದ್ಧೆ ಮಗನಲ್ಲಿ ಸ್ಫುಟಗೊಂಡಿತು. ಅವಳು ರಾಮಾಯಣ ಮಹಾಭಾರತದ ಮಹಾವೀರರ, ಗೋ–ಬ್ರಾಹ್ಮಣ–ರಕ್ಷಕರ ಕಥೆಗಳನ್ನು ಹೇಳಿ ಮಗನಿಗೆ ವೀರರ ಪರಂಪರೆಯ, ಧರ್ಮರಕ್ಷಣೆಯ ದೀಕ್ಷೆ ಕೊಟ್ಟಳು. ಶಿವಾಜಿಯನ್ನು ನವ ಅಭಿಮನ್ಯುವಾಗಿ ಬೆಳೆಸಿದಳು. ಜೊತೆಗೆ, ಗುರು ದಾದಾಜಿ ಕೊಂಡದೇವರಲ್ಲಿ ವಿದ್ಯಾಭ್ಯಾಸ ಮಾಡಿಸಿದಳು. ಗೋ ಬ್ರಾಹ್ಮಣರ ರಕ್ಷಣೆ, ಪರನಾರೀ ಸೋದರತ್ವ ದುಷ್ಟಶಿಕ್ಷಣ, ಶಿಷ್ಟರಕ್ಷಣದ ಪ್ರತಿರೂಪ ಶಿವಾಜಿಯಲ್ಲಿ ಮೂಡಿತು, ಈ ದಿವ್ಯ ಹಿನ್ನೆಲೆಯಲ್ಲಿ ಶಿವಾಜಿಯ ಭವ್ಯ ವ್ಯಕ್ತಿತ್ವ ರೂಪುಗೊಂಡಿತು. ಹಿಂದೂ ಸ್ವರಾಜ್ಯ ಸ್ಥಾಪನೆಯ ಕನಸು ಶಿವಾಜಿಯ ಅಂತರಂಗದಲ್ಲಿ ಬೀಜಾಂಕುರವಾಯಿತು.

ಇದೇ ಜೂನ್ ಮಾಹೆ ಎರಡರಂದು (ಜೇಷ್ಠ ಶುದ್ಧ ತ್ರಯೋದಸಿ) ಶಿವಾಜಿ ಮಹಾರಾಜರ 300ನೇ ವರ್ಷದ ಸಿಂಹಾಸನಾರೋಹಣ ದಿನೋತ್ಸವವನ್ನು ಭಾರತಾದ್ಯಂತ ಆಚರಿಸಲಾಗುತ್ತಿದೆ. ಆ ಪ್ರಯುಕ್ತ ಈ ವಿಶೇಷ ಲೇಖನ.

ಯೌವನದಲ್ಲಿ ಶಿವಾಜಿಯು ಮಾವಳಿ ಯುವಕರ ಒಡನಾಟದಲ್ಲಿ ಕುದರೆಸವಾರಿ, ಯುದ್ಧಕಲೆ (ಗನೀಮ ಕಾವಾ: ಗೆರಿಲ್ಲಾ ಯುದ್ಧ), ರಾಜಕೀಯ ಚಾಣಾಕ್ಷತೆಗಳನ್ನು ಬೆಳೆಸಿಕೊಂಡನು. ಸಹ್ಯಾದ್ರಿಯ ಬೆಟ್ಟಗಳನ್ನು ಸರಾಗವಾಗಿ ಏರಿಳಿಯುತ್ತಿದ್ದುದರಿಂದ ಔರಂಗಜೇಬನಿಂದ 'ಬೆಟ್ಟದ ಇಲಿ' ಎನಿಸಿಕೊಂಡನು. ಮಾವಳರ ಪ್ರಭಾವದಲ್ಲಿದ್ದ ಶಿವಾಜಿಯು ಕೊಬ್ಬಿದ ಶ್ರೀಮಂತ ಜಾಗೀರುದಾರಳನ್ನು (ವತನ್‌ದಾರರನ್ನು) ಸುಲಿಗೆ ಮಾಡುವುದಲ್ಲಿ ಭಾಗಿಯಾದನು. ಆದರೆ ಸ್ತ್ರೀಯರ ಮಾನಭಂಗವಾಗದಂತೆ, ವೃದ್ಧರ ಬಾಲಕರ ಪೀಡನೆಯಾಗದಂತೆ ನೋಡಿಕೊಂಡನು. ಮಾವಳಿ ಯುವಕರ ನಾಯಕನಾಗಿ ಪ್ರವರ್ಧಮಾನಕ್ಕೆ ಬಂದನು. ಮಾವಳಿ ಯುವಕರನ್ನೊಳಗೊಂಡ ಸೈನ್ಯವನ್ನು ಸಂಘಟಿಸಿದನು.

ಕೇವಲ 19ನೇ ವಯಸ್ಸಿನಲ್ಲಿ ಶಿವಾಜಿಯು ತನ್ನ ದಿಗ್ವಿಜಯಗಳನ್ನು ಆರಂಭಿಸಿದನು. 1646ರಲ್ಲಿ ತೋರಣಗಡವನ್ನು ಮೊಗಲರಿಂದ ವಶಪಡಿಸಿಕೊಂಡನು. ತೋರಣಗಡದ ವಿಜಯವು ಹಿಂದೂ ಸ್ವರಾಜ್ಯ ಸ್ಥಾಪನೆಗೆ ತೋರಣ ಕಟ್ಟಿದಂತಾಯಿತು. ಹಿಂದೂ ಧರ್ಮ ಸಂಕೇತವಾದ ನಸುಗೆಂಪಿನ ಭಗವಾಧ್ವಜವು ತೋರಣಗಡದ ಕೋಟೆಯ ಮೇಲೆ ಪ್ರಥಮವಾಗಿ ಹಾರಾಡತೊಡಗಿತು. ನಂತರ ಪುರಂದರಗಡ, ಕೊಂಡಣ, ರಾಯಗಡ ಮೊದಲಾದವುಗಳನ್ನು ಮೊಗಲರಿಂದಲೂ, ಬಿಜಾಪುರದ ಸುಲ್ತಾನನಿಂದಲೂ ವಿಮುಕ್ತಗೊಳಿಸಿದನು. ಬಿಜಾಪುರದಲ್ಲಿ ದಳಪತಿಯಾಗಿದ್ದ ತಂದೆ ಷಾಜಿಗೆ ಶಿವಾಜಿಯ ವಿರುದ್ಧ ದೂರು ಮುಟ್ಟಿತು. ಆದರೆ ಹೆಂಡತಿ–ಮಗನನ್ನು ದೂರವಿಟ್ಟಿದ್ದ ಷಾಜಿಗೆ ಮಗನ ಮೇಲೆ ಯಾವ ಹಕ್ಕು ಉಳಿದಿರಲಿಲ್ಲ.

ಈ ಪರಿಸ್ಥಿತಿಯಲ್ಲಿ ಶಿವಾಜಿಯನ್ನು ತಡೆಯಲು ಬಿಜಾಪುರದ ಸರದಾರರನ್ನು ಹುರಿದುಂಬಿಸಲಾಯಿತು. ಅವರಲ್ಲಿ ಸೈಂಧವನಂತೆ ಇದ್ದ 7 ಅಡಿ ಎತ್ತರದ ಭುಜಬಲೋನ್ಮತ್ತನಾದ ಅಫಜಲ್‌ಖಾನನು ಮುಂದೆ ಬಂದನು. 1659ರಲ್ಲಿ ಶಿವಾಜಿಯನ್ನು ಕುಯುಕ್ತಿಯಿಂದ ಕೊಲ್ಲಲು ಪ್ರಯತ್ನಿಸಿ ತಾನೇ ಶಿವಾಜಿಯ 'ವಾಘ್ರನಖ'ಕ್ಕೆ ಬಲಿಯಾದನು. ಶಿವಾಜಿಯು ಆತ್ಮರಕ್ಷಣೆಗಾಗಿ ಅಫಜಲ್‌ಖಾನನನ್ನು ಕೊಲೆ ಮಾಡಬೇಕಾಯಿತು. ಈಘಟನೆಯನಂತರ ಶಿವಾಜಿಯ ಹೆಸರು ಕಾಳ್ಗಿಚ್ಚಿನಂತೆ ಮೊಗಲ್ ಸಾಮ್ರಾಜ್ಯದಲ್ಲೆಲ್ಲೂ, ಅಲ್ಲದೇ ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಹರಡಿತು ವಾಮನ ಸ್ವರೂಪದ ಶಿವಾಜಿಯು ಸಹ್ಯಾದ್ರಿ ಘಟ್ಟಗಳ ಅಪ್ರತಿಮ ವೀರನಾಗಿ ನಿಂತನು. ಅವನನ್ನು ಹಿಡಿಯಲು ಮೊಗಲರ ಚಕ್ರವರ್ತಿ ಔರಂಗಜೇಬನು (1558–1707) ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲಗೊಂಡವು. ಕುಹಕದಿಂದ ಶಿವಾಜಿಯನ್ನು 'ಬೆಟ್ಟದ ಇಲಿ' ಎಂದು ಕರೆಯುತ್ತಿದ್ದನು. ದ್ವೇಷ ಅಸೂಯೆಗಳಿಂದ, ಅಸಮಾಧಾನದಿಂದ ಕಂಗೆಟ್ಟನು. ಆದರೆ ಈ 'ಬೆಟ್ಟದ ಇಲಿ' ಪ್ರಬಲವಾದ ಮೊಗಲ್ ಸಾಮ್ರಾಜ್ಯದ ಬುಡವನ್ನೇ ಅಲುಗಿಸಿತು, ಉರುಳಿಸಿತು.

ವರ್ಷ ವರ್ಷವೂ, ಹೆಚ್ಚು ಹೆಚ್ಚು ಕೋಟೆಗಳನ್ನು ಮೊಗಲರಿಂದ ಬಿಜಾಪುರದವರಿಂದ ವಶಪಡಿಸಿಕೊಳ್ಳತೊಡಗಿದನು. ಜೊತೆಗೆ ಸುಲಿಗೆಗಳಿಂದ ಅಪಾರ ಸಂಪತ್ತು ಸ್ವರಾಜ್ಯದ ವಶವಾಯಿತು. ಪ್ರತಾಪಗಡವು ಶಿವಾಜಿಯ ಪ್ರಥಮ ರಾಜಧಾನಿಯಾಯಿತು.

ಇತ್ತ ಷಾಜಿಯು ಕರ್ನಾಟಕದ ಆಕ್ರಮಣದಲ್ಲಿ ನಿರತನಾಗಿದ್ದಾಗ ಹಠಾತ್ತನೆ ಬಸವಪಟ್ಟಣದ ಬಳಿ 1664ರಲ್ಲಿ ಮರಣಹೊಂದಿದನು. ನಂತರ ಶಿವಾಜಿಯು ಮರಾಠಾರಾಜ್ಯ ಸ್ಥಾಪನೆಯನ್ನು ಘೋಷಿಸಿದನು. ಅದೇ ವರ್ಷ ಔರಂಗಜೇಬನು ತನ್ನ ಸೋದರಮಾವನಾದ ಷಯಿಸ್ತಾಖಾನನನ್ನು ಸುಮಾರು ಒಂದು ಲಕ್ಷ ಸೈನ್ಯದೊಂದಿಗೆ ಶಿವಾಜಿಯ ವಿರುದ್ಧ ಕಳಿಸಿದನು. ಆ ಪರಿಸ್ಥಿತಿಯಲ್ಲಿ ಶಿವಾಜಿಯು ಯುಕ್ತಿಯೋಚಿತವಾಗಿ ಸಂಧಾನದ ನೆಪಹೂಡಿ, ರಕ್ತಪಾತವನ್ನು ತಪ್ಪಿಸಿದನು. ಸಮಯಸಾಧಿಸಿ, ಷಯಿಸ್ತಾಖಾನನ ಮೇಲೆ ಎರಗಿದನು. ಅದೃಷ್ಟಬಲದಿಂದ ಷಯಿಸ್ತಾಖಾನನು ಪ್ರಾಣಾಪಾಯ

ಕಾಡ್ಗಿಚ್ಚು ಹತ್ತಿ ಉರಿಯಲು
"ಬಿರುಗಾಳಿ" ಪ್ರೋತ್ಸಾಹಕಾರಿ,
"ಅದೇ ಗಾಳಿ" ಹಳ್ಳಿಗಳ
ಬಡಕೇರಿಗಳ ಮನೆಗಳಲಿ
ಬೆಳಕನೀಯುವ
ಎಣ್ಣೆ ಹಣತೆಗಳ ಉರಿಗೆ
ಆತಂಕಕಾರಿ !

—ಪಿ. ರುದ್ರಪ್ಪ

ದಿಂದ ತಪ್ಪಿಸಿಕೊಂಡು ಪಾರಾದನು. ಔರಂಗಜೇಬನು ಮತ್ತೊಮ್ಮೆ ಶಿವಾಜಿಯ ವಿರುದ್ಧ ಸೈನ್ಯವನ್ನು ರಾಜಾ ಜಯಸಿಂಗ್ ಮತ್ತು ರಾಜಕುಮಾರ ಮುಳಿಜಮನ ಆಧೀನದಲ್ಲಿ ಕಳಿಸಿದನು. ಶಿವಾಜಿಯು ಯುದ್ಧದಲ್ಲಿ ಶರಣಾಗತನಾಗಿ ಪುರಂಧರಗಡದ ಒಪ್ಪಂದವನ್ನು ಮಾಡಿಕೊಂಡನು (1665). ಅದರ ಪ್ರಕಾರ, 23 ಕೋಟೆಗಳನ್ನು ಮೊಗಲರಿಗೆ ವಾಪಸು ಕೊಡಲು ಒಟ್ಟು 5000 ದಳದ ಮೊಗಲ್ ಮನ್‌ಸಬ್‌ದಾರನಾದನು. ನಂತರ ಜಯಸಿಂಗನೊಂದಿಗೆ ಸೇರಿ ಬಿಜಾಪುರವನ್ನು ಮೊಗಲರ ಪರವಾಗಿ ಜಯಿಸಿದನು. ಶಿವಾಜಿಯನ್ನು ಗೌರವಿಸುವ ನೆಪದಲ್ಲಿ ದೆಹಲಿಗೆ ಆಹ್ವಾನಿಸಿದ ಔರಂಗಜೇಬನು ಶಿವಾಜಿಯನ್ನು ಅವಮಾನಿಸಿ ಬಂಧನದಲ್ಲಿಡಿಸಿದನು. ಶಿವಾಜಿಯು ತನಗೆ ಖಾಯಿಲೆಯಾದಂತೆ, ನಂತರ ವಾಸಿಯಾದಂತೆ ನಟಿಸಿ, ಹಣ್ಣು ಹಂಚುವ ಏರ್ಪಾಟು ಮಾಡಿ, ಹಣ್ಣಿನ ಬುಟ್ಟಿಯಲ್ಲಿ ಅವಿತು ತಪ್ಪಿಸಿಕೊಂಡು ತನ್ನ ರಾಜ್ಯವನ್ನು ಸೇರಿದನು.

ತನ್ನ ನೂತನ ರಾಜಧಾನಿಯಾದ ರಾಯಗಡದಲ್ಲಿ 1674ರಲ್ಲಿ ಜೂನ್ 6ರಂದು ಶಾಸ್ತ್ರೋಕ್ತವಾಗಿ ಸಿಂಹಾಸನಾರೋಹಣ ಮಾಡಿ, 'ಛತ್ರಪತಿ' ಎಂಬ ಬಿರುದನ್ನು ಧರಿಸಿ, ಮರಾಠಾ ರಾಜ್ಯದ ಭೋಸ್ಲೆ ರಾಜಮನೆತನವನ್ನು ಆರಂಭಿಸಿದನು. ಛತ್ರಪತಿ ಶಿವಾಜಿಗೆ ಬ್ರಿಟಿಷರೂ, ಬಿಜಾಪುರ ಸುಲ್ತಾನರೂ ಇತರರೂ ಉಡುಗೊರೆಗಳನ್ನು ಸಮರ್ಪಿಸಿದರು.

ಕೌಟಿಲ್ಯನ ಹಿಂದೂ ರಾಜ ಪದ್ಧತಿಯಂತೆ ಅಷ್ಟ ಪ್ರಧಾನರನ್ನು ನೇಮಿಸಿಕೊಂಡನು, ಆಡಳಿತ ವ್ಯವಸ್ಥೆಯನ್ನು ಆರಂಭಿಸಿದನು. ಮರಳಿ ಕೊಟ್ಟಿದ್ದ ಮೊಗಲರ ಕೋಟೆಗಳನ್ನು ಒಂದೊಂದಾಗಿ ವಶಪಡಿಸಿಕೊಂಡನು. ಸೂರತ್ ಬಗ್ಲಾನ, ಬೀದರ್, ಖಾಂದೇಶ್ ಪ್ರದೇಶಗಳನ್ನು ಕೊಳ್ಳೆಹೊಡೆದು ರಾಜ್ಯದ ಬೊಕ್ಕಸವನ್ನು ತುಂಬಿಸಿಕೊಂಡನು. ಮುಸ್ಲಿಮರ ದಬ್ಬಾಳಿಕೆಯಲ್ಲಿದ್ದ ಹಿಂದೂಗಳಿಂದ ಕರೆಬಂದ ಮೇಲೆ ಕೊಪ್ಪಳ, ಬಳ್ಳಾರಿ, ಸಿರಾ, ಜಿಂಜಿ ಮೊದಲಾದವುಗಳನ್ನ ಜಯಿಸಿ ಹಿಂದೂ ರಾಜ್ಯ ವ್ಯವಸ್ಥೆ ಏರ್ಪಡಿಸಿದನು.

ಹೊಸದಾಗಿ, 'ಚೌತ್', ಮತ್ತು 'ಸರ್‌ದೇಶ್ ಮುಖಿ' ಎಂಬ ಕಂದಾಯಗಳನ್ನು ವಿಧಿಸಿದನು. ಇವುಗಳನ್ನು ಜದುನಾಥ್ ಸರ್ಕಾರ್, ಸುರೇಂದ್ರನಾಥ ಸೇನ್ ಮೊದಲಾದವರು ಖಂಡಿಸಿದ್ದಾರೆ. ಜದುನಾಥ ಸರ್ಕಾರರು ಈ 'ಕಂದಾಯಗಳನ್ನು' ದರೋಡೆಗಳನ್ನು ತಪ್ಪಿಸಲು ಕೊಡುತ್ತಿದ್ದರೆಂದು ಅಭಿಪ್ರಾಯ ಪಡುತ್ತಾರೆ. ಸೇನರು ಶಿವಾಜಿಯ ಸೈನಿಕ ಸಹಾಯಕ್ಕಾಗಿ ರಕ್ಷಣೆಗಾಗಿ ಈ ಕಂದಾಯಗಳನ್ನು ಕೊಡುತ್ತಿದ್ದರೆಂದು ಅಭಿಪ್ರಾಯ ಪಡುತ್ತಾರೆ ಹಣದ ಅಗತ್ಯವಿದ್ದಾಗಲೆಲ್ಲಾ ಮೊಗಲರ ಪ್ರಾಂತಗಳನ್ನು, ಬಿಜಾಪುರ ಮತ್ತು ಕರ್ನಾಟಕದ ಭಾಗಗಳನ್ನು ಕೊಳ್ಳೆಹೊಡೆಯುತ್ತಿದ್ದನೆಂದು ಸಮಕಾಲೀನ ಆಧಾರಗಳಿಂದ ತಿಳಿದು ಬರುತ್ತದೆ. ಈ ದರೋಡೆಗಳ, ತೆರಿಗೆಗಳ ವಿಚಾರದಲ್ಲಿ ಶಿವಾಜಿಗೆ ಅಪಕೀರ್ತಿ ಬರುತ್ತದೆ. ಈ ದರೋಡೆಗಳ, ತೆರಿಗೆಗಳ ವಿಚಾರದಲ್ಲಿ ಶಿವಾಜಿಯ ಆಡಳಿತಯಲ್ಲಿ ಜನರು ವಿಶೇಷ ತೆರಿಗೆಗಳಿಂದ ನರಳುತ್ತಿದ್ದರೆಂದೂ, ಬಿಜಾಪುರ ರಾಜ್ಯಕ್ಕಿಂತಲೂ ಮರಾಠಾ ರಾಜ್ಯದಲ್ಲಿ ತೆರಿಗೆಗಳು ಹೆಚ್ಚೆಂದೂ ತಿಳಿದು ಬರುತ್ತದೆ.

ಸ್ವಾಮಿ ಸಮರ್ಥ ರಾಮದಾಸ, ಸಂತತುಕಾರಾಮ ಮೊದಲಾದವರ ಪ್ರಭಾವದಿಂದ ಶಿವಾಜಿಯು ಹಿಂದೂ ಸ್ವರಾಜ್ಯ ಸ್ಥಾಪಕನಾದನು. ಹಿಂದೂ ಸಂಸ್ಕೃತಿಯ ಮತ್ತು ಹಿಂದೂ ಧರ್ಮದ ಪೋಷಣೆಯ ಜೊತೆಗೆ ಮುಸ್ಲಿಮ ಹಾಗೂ ಇತರ ಧರ್ಮಗಳಿಗೆ ರಕ್ಷಣೆ ಕೊಡಲಾಯಿತು. ಹಿಂದೂ ಮುಸ್ಲಿಮ ಸಂತರೆಲ್ಲರನ್ನು ಸಮಾನ ಗೌರವದಿಂದ ಕಾಣಲಾಯಿತು. ಅಂದಿನ ಮುಸ್ಲಿಮ ಇತಿಹಾಸಕಾರನಾದ ಮಹಮ್ಮದ್‌ಹಷೀಮ್ ಖಾಫೀಖಾನನು ಶಿವಾಜಿಯನ್ನು ಆರ್ಥಿಕ ದೃಷ್ಟಿಯಿಂದ ದುರ್ವ್ಯವಹಾರಿ, ಎಂದೂ ಶೈತಾನ ಸಂತತಿಯವನೆಂದು ತೆಗಳಿದರೂ ಕೂಡಾ, ಧರ್ಮದ ದೃಷ್ಟಿಯಲ್ಲಿ ಮೆಚ್ಚಿಕೊಂಡಿದ್ದಾನೆ. "ಕೊಳ್ಳೆಹೊಡೆದಾಗಲೂ, ಮಸೀದಿಗಳನ್ನು, ಅಪವಿತ್ರಗೊಳಿಸುತ್ತಿರಲಿಲ್ಲ. ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣುತ್ತಿದ್ದನು. ಅವರ ಸೆರೆಬಿಡಿಸಲು ಹಣಕೊಡುವವರೆಗೆ ತನ್ನ ರಕ್ಷಣೆಯಲ್ಲಿರಿಸಿಕೊಂಡಿರುತ್ತಿದ್ದನು. ಪವಿತ್ರ ಖೊರಾನ್‌ಗ್ರಂಥ ಸಿಕ್ಕಾಗಲೂ, ಅದನ್ನು ಅತ್ಯಂತ ಗೌರವದಿಂದ ಮುಸ್ಲಿಮರಿಗೆ ಒಪ್ಪಿಸುತ್ತಿದ್ದನು.

ಅಧಿಕಾರಕ್ಕೆ ಬಂದು ಕೇವಲ 6 ವರ್ಷಗಳು ಮುಗಿಯುವುದರಲ್ಲಿ ಶಿವಾಜಿ ಖಾಯಿಲೆ ಬಿದ್ದು 1680ರಲ್ಲಿ ಏಪ್ರಿಲ್ 6 ರಂದು ದೇಹಾಂತಗೊಂಡನು. ಕ್ಷಾತ್ರ

ಜ್ಯೋತಿಯೊಂದು ನಂದಿತು. ಸುಮಾರು ಒಂದು ಸಾವಿರ ವರ್ಷಗಳಿಂದಲೂ ಇಸ್ಲಾಂ ಧರ್ಮ ಪ್ರವರ್ತನೆಯ ಕಾಲದಲ್ಲಿ, ಹಿಂದೂ ಧರ್ಮ ಔರಂಗಜೇಬನಂಥ ಅಸಹಿಷ್ಣುಗಳ ಕರಾಳದವಡೆಯಲ್ಲಿ ಸಿಲುಕಿ ನರಳುತ್ತಿದ್ದಾಗಲೂ, "ನವ ಹಿಂದೂ ಜನಾಂಗ ಮತ್ತೊಮ್ಮೆ ರಾಷ್ಟ್ರನಿರ್ಮಾಣ ಮಾಡಬಲ್ಲದು, ಮುಸ್ಲಿಮರನ್ನು ಸಮರದಲ್ಲೂ ಜಯಿಸಬಲ್ಲದು, ತನ್ನ ಧರ್ಮರಕ್ಷಣೆ ಮಾಡಿಕೆಕೊಳ್ಳಬಲ್ಲದು. ತನ್ನ ಸಾಹಿತ್ಯ, ಸಂಸ್ಕೃತಿ, ವಾಣಿಜ್ಯಗಳನ್ನು ಪುನರುಜ್ಜೀವನಗೊಳಿಸಬಲ್ಲದು, ತನ್ನದೇ ಆದ ನೌಕಾಪಡೆಯನ್ನು ಪಾಶ್ಚಾತ್ಯರ ಮಟ್ಟಕ್ಕೆ ರಚಿಸಬಲ್ಲದು, ಈಗಲೂ ತನ್ನ ಭವ್ಯಪರಂಪರೆಯ ಮಟ್ಟಕ್ಕೆ ಎದ್ದು ನಿಲ್ಲಬಲ್ಲದು ಎಂಬುದನ್ನು ಶಿವಾಜಿ ಮಹಾರಾಜನು ತೋರಿಸಿಕೊಟ್ಟನು.

ಇರವು

ಎರಡತ್ತು ಮೇಲೊಂದು ವರ್ಷ
ಕಳೆದಾದ ಮೇಲೆ ಗೊತ್ತು ನನಗೆ,
ನಾಬಂದಕರಾ ಮತ್ತು, ಯಾಕೆಂಬುದು
ಯಕ್ಷ ಪ್ರಶ್ನೆ ಉದ್ದಕ್ಕೂ ನಿರುತ್ತರ ||೧||

ಹುಡುಕಿ ತಡಕಿ, ತಡಕಿ ನಿರಾಶೆ
ಬರುವ ಬಯಸಲಿಲ್ಲ ನಾನು
ಇರವು ಕಡ್ಡಾಯದ ಹೇರು ||೨||

ಸಹಕಾರ, ಸಹಜೀವನ ಪರಿಸರ
ಸಾಗರ, ಮುಳುಗು, ತೇಲು, ದಿನಚರಿ
ವಿವಿಧತೆಯಲ್ಲಿ ಏಕತೆ ಅರುವಿನ ಇರವು ||೩||

ಸಂದೇಶ

ಪುಸ್ತಕ, ಪುರಾಣ, ವೇದ, ಉಪನಿಷತ್
ಈ ಎಲ್ಲದರಲ್ಲೂ ಅವನ ಇರುವ
ಪ್ರತಿಪಾದನೆ ಆರ್ಥೈಸುವ ಸಂದೇಶ
ವಿಚಾರಮಥನ, ತತ್ವಸಿದ್ಧಾಂತಗಳ ರಾಶಿ
ಕಸಿ-ವಿಸಿ, ಕಲಬೆರಿಕೆ ಅಲ್ಲಲ್ಲಿ
ಎಲ್ಲ ಅಕ್ಷರಮೋಕ್ಷ, ಸಂದೇಹ ಸಂದೇಶ
ಕಾಣುವ ಕಣ್ಣು ಕುರುಡಾಗಿ
ಛಲದ ಮನ ಚಲನೆ ನಿಂತು

ಹರಿತ ಬುದ್ಧಿ ಮಂಕಾಗಿ
ಶಬ್ದ, ಅಬ್ಬರ. ಉಬ್ಬರ ಕರಗಿ
ಏನೋ ಒಂದು ಯಾವುದೊ ಒಂದು
ಕೂಡಿನಲಿದಾಗ ಆದರಿವು
ಸಂದೇಹವಳಿದ ಅವನ ಸಂದೇಶ ||೧||

ರಾಜಕಾರಣಿ

ಸಮಸ್ಯೆಗಳ ಗಣಿಯಿಂದ ಹೊರತೆಗದ,
ಸಮಯಸಾಧಕ ಶಮಂತಕಮಣಿ
(ಈ) ರಾಜಕಾರಣಿ,
ಧರಿಸಲಾಗದ, ಭರಿಸಲಾಗದ
ಪಾದರಸ ಪ್ರಸಾದ ಇವನ ಕೊಡಿಗೆ.

—ಸಿ. ವಿ. ವಿಶ್ವನಾಥಯ್ಯ, ಚಿಕ್ಕಜಾಜೂರು.

"ಇಂದಿನ ಶಿಶು ನಾಳೆಯಪಿತ" ಎಂಬ ಗಾದೆ ಇದೆ. ಅವನನ್ನು ಸನ್ಮಾರ್ಗದಲ್ಲಿ ಬೆಳಸಿ ಸತ್ಪ್ರಜೆಯಾಗಿ ಮಾಡುವ ಅಮೋಘ ಕಾರ್ಯ ಮಾತೆಯದು. ಅನಾದಿ ಕಾಲದಿಂದಲೂ ಭಾರತದೇಶ ಹಿಂದೂ ಸಂಸ್ಕೃತಿಗೆ ತವರೂರು. ಸೀತೆ ಸಾವಿತ್ರಿ ದಮಯಂತಿ, ಅನುಸೂಯ ದ್ರೌಪದಿ, ನಳಾಯನಿ, ಇವರೆಲ್ಲರೂ ಭಾರತ ದೇಶದ ಆದರ್ಶ ಸತೀಮಣಿಗಳೆಂದು ಪರಿಗಣಿಸಲ್ಪಟ್ಟಿದ್ದಾರೆ- ಅವರ ಘನತೆ ಮತ್ತು ಆದರ್ಶ ಶೀಲ ಇವು ಸ್ತ್ರೀ ಜನಾಂಗಕ್ಕೆ ದಾರಿದೀಪವಾಗಿ ಬೆಳಗುತ್ತಿವೆ. ನಾಗರಿಕ ಸ್ತ್ರೀಯರು ಈ ಸತೀ ಮಣಿಗಳ ಧ್ಯೇಯಗಳನ್ನು ಸಾಧಿಸಿ ಅವರು ತೋರಿಸಿದ ಪಥದಲ್ಲಿ ನಡೆಯಬೇಕು. ರಾಮಾಯಣ ಮಹಾಕಾವ್ಯದಲ್ಲಿ ಸೀತೆಯ ಹಂಬಲಿನಲ್ಲಿ ತೊಳಲುತ್ತಿದ್ದ ರಾಮಚಂದ್ರನು ತನ್ನ ಸತಿಯ ಗುಣಗಾನ ಮಾಡುತ್ತಾ ತಮ್ಮನಾದ ಲಕ್ಷ್ಮಣನನ್ನು ಕುರಿತು "ಸೀತೆ ಆದರ್ಶ ಸತಿಯು ತನ್ನ ಗಂಡನ ಸಕಲ ಕಾರ್ಯಗಳಲ್ಲಿಯೂ ಆತನ ನೆರಳಿನಂತಿದ್ದು. ಆತನಿಗೆ ಸಲಹೆ ಕೊಡುವುದರಲ್ಲಿ ಮಂತ್ರಿಯಂತೆಯೂ, ಕಾರ್ಯಕಲಾಪಗಳಲ್ಲಿ ಸೇವಕಿಯಂತೆಯೂ, ಧರ್ಮವಿಷಯಗಳಲ್ಲಿ ಅರ್ಧಾಂಗಿಯಂತೆಯೂ, ಕ್ಷಮೆಯಲ್ಲಿ ಭೂಮಿಯಂತೆಯೂ, ವಾತ್ಸಲ್ಯದಲ್ಲಿ ಮಾತೆಯಂತೆಯೂ,

"ಭಾರತದ ಮಹಿಳೆ"

ಶಯನಾಗಾರದಲ್ಲಿ ದೇವಕನ್ನಿಕೆ ರಂಭೆಯಂತೆಯೂ, ಆಟಗಳಲ್ಲಿ ಸಂಗಾತಿಯಂತೆಯೂ ವರ್ತಿಸಿ ಶೋಭಿಸುತ್ತಾಳೆ" ಎಂದು ವರ್ಣಿಸಿದ್ದಾನೆ. ಇವು ಆದರ್ಶ ಸತೀ ಮಣಿಯ ಸದ್ಗುಣಗಳು.

ಆದರ್ಶಗೃಹ ಆದರ್ಶಸತಿಯಿಂದ ಬೆಳಗುತ್ತದೆ, ಗೃಹವೇ ನಿಜವಾದ ಒಂದು ಸಾಮಾಜಿಕ ಸಂಸ್ಥೆ. ಈ ಸಂಸ್ಥೆಯಲ್ಲಿ ಬೆಳೆದ ಪ್ರತಿಯೊಂದು ಮಗುವೂ ಆದರ್ಶ ವ್ಯಕ್ತಿಗಳಾಗುತ್ತಾರೆ. ಪರಮಾತ್ಮ ಸ್ತ್ರೀಯನ್ನುನಿರ್ಮಾಣ ಮಾಡಿರುವುದು ಆದರ್ಶ ಮಾತೆಯಾಗಿ, ಆದರ್ಶ ಪುತ್ರರನ್ನು ಪಡೆದು, ಪ್ರಪಂಚವನ್ನು ಬೆಳಗಲೆಂದು. ಗೃಹವನ್ನು ನಡೆಸಲು ಗಂಡಸಿನೊಬ್ಬನಿಂದಲೇ ಸಾಧ್ಯವಿಲ್ಲ. ಗೃಹಿಣಿ ಬೇಕೇ ಬೇಕು. ಸತ್ಪುತ್ರರನ್ನು ಪಡೆದು ಅವರಿಗೆ ಸದ್ಬುದ್ಧಿ ಕಲಿಸಿ, ಗೃಹಕೃತ್ಯವನ್ನು ಶಿಸ್ತಿನಿಂದ ನಡೆಸುವುದು ಗೃಹಿಣಿಯ

"ನಾರಿ ಮುನಿದರೆ ಮಾರಿ'' ಎನ್ನುತ್ತಾರೆ ಆದರೆ ಭಾರತದ ಮಹಿಳೆಯು ಮುನಿಯಲುಂಟೇ ?

ಆದ್ಯ ಕರ್ತವ್ಯ. ಈ ಸತ್ಪುತ್ರರು ಮುಂದೆ ಉನ್ನತ ವ್ಯಕ್ತಿಗಳಾಗಿ ಋಷಿ ಮುನಿಗಳು, ಚಕ್ರವರ್ತಿಗಳು, ರಾಷ್ಟ್ರಾಧ್ಯಕ್ಷರು, ಮಂತ್ರಿಗಳು, ರಾಜಕಾರಣಿಗಳು, ಅಧಿಕಾರಿಗಳು, ಯುದ್ಧವೀರರು, ವಾಣಿಜ್ಯೋದ್ಯಮಿಗಳು ; ಇತ್ಯಾದಿ, ಇತ್ಯಾದಿ, ರಂಗಗಳಲ್ಲಿ ಬೆಳಗುವಂತೆ ತಯಾರು ಮಾಡುವವಳು ಆದರ್ಶ ಮಾತೆ. ಆದುದರಿಂದ ಒಂದು ದೇಶದ ಅಭ್ಯುದಯದ ಜವಾಬ್ದಾರಿ, ಅಥವಾ ಅದರ ಅಡಿಗಲ್ಲು ಸ್ತ್ರೀ, ಹಿಂದೂ ಧರ್ಮ ಹಿಂದೂ ನಾಗರೀಕತೆ ಹಿಂದೂ ಸಂಸ್ಕೃತಿ ಅನೇಕ ಪರಕೀಯರ ದಬ್ಬಾಳಿಕೆಗೆ ಸಿಕ್ಕಿ ಆಘಾತಗಳನ್ನು ಪಡೆದಿದ್ದರೂ ಇಂದಿಗೂ ಅಚ್ಚಳಿಯದೆ ಬೆಳಗುತ್ತಿರುವುದು ಪುಣ್ಯ ಮೂರ್ತಿಗಳಾದ ಆದರ್ಶ ಸ್ತ್ರೀಯರಿಂದ ಎಂದು ಒತ್ತಿ ಹೇಳಬೇಕಾಗಿಲ್ಲ. ಇಂದಿಗೂ ಅಚ್ಚಳಿಯದೆ ಬೆಳಗುತ್ತಿರುವುದು ಪುಣ್ಯ ಮೂರ್ತಿಗಳಾದ ಆದರ್ಶ ಸ್ತ್ರೀಯರಿಂದ ಎಂದು ಒತ್ತಿ ಹೇಳಬೇಕಾಗಿಲ್ಲ. ಇಂದಿಗೂ ಪರದೇಶಗಳು ಶಾಂತಿಗಾಗಿ ಮನೋಸ್ಥೈರ್ಯಕ್ಕಾಗಿ, ಜ್ಞಾನಕ್ಕಾಗಿ, ಭಾರತ ದೇಶವನ್ನು ಆದರ್ಶ

ಎ. ವಿಜಯಾ, ಮತ್ತು ಎ. ಉಮಾ

ನಾಡೆಂದು ಕರೆಯುತ್ತಿರುವುದು ನಮ್ಮ ಹಿಂದೂ ಜನಾಂಗದ ಸ್ತ್ರೀ ಧರ್ಮದ ಗುಟ್ಟೆಂದರೆ ತಪ್ಪಾಗಲಾರದು

ಪಾಶ್ಚಾತ್ಯ ದೇಶದ್ವಾತಾವರಣವೇ ಬೇರೆ. ಅಲ್ಲಿ ಸ್ತ್ರೀಯು ಆಡಂಬರದ, ಮೆರಗಿನ, ಮಡದಿಯಾಗಿ ಗಂಡನಿಗೆ ಸಮಾನಳಾಗಿ. ಮೆರೆಯುತ್ತಾಳೆ. ಆಕೆಗೆ ಪ್ರತಿಯೊಂದು ರಂಗದಲ್ಲಿಯೂ ಗಂಡಸಿನೊಡನೆ ಪೈಪೋಟಿ ನಡೆಸುವ ಹಂಬಲ ಜಾಸ್ತಿ. ರಾಜಕಾರಣಿಯಾಗಿ,

ಕಾರ್ಯದರ್ಶಿಯಾಗಿ, ಕಾರ್ಮಿಕಳಾಗಿ, ವಿಮಾನ ಚಾಲಕಳಾಗಿ, ಸಿನಿಮಾ ತಾರೆಯಾಗಿ, ಹೀಗೆ ಎಷ್ಟೋ ರಂಗಗಳಲ್ಲಿ ಪೈಪೋಟಿ ನಡೆಸಿದರೂ ಆಕೆಗೆ ತೃಪ್ತಿಯಿಲ್ಲ. ಗಂಡನೊಡನೆ ತಾನೂ ದುಡಿದು ಸಂಪಾದಿಸಿದರು ಇಬ್ಬರ ಆದಾಯವೂ ಈಕೆಯ ಬೆಡಗು–ಬಿನ್ನಾಣಗಳ ಖರ್ಚಿಗೇ ಸಾಲದು ! ಮಕ್ಕಳನ್ನು ಹಡೆಯಲು ಆಕೆಗೆ ಇಷ್ಟವಿಲ್ಲ. ಒಂದು ಪಕ್ಷ ಹಡೆದರೂ ಅವನ್ನು ತಾನು ಸಾಕಲಾರಳು. ಆಸ್ಪತ್ರೆಯಲ್ಲೋ, ಶಿಶುಸಂರಕ್ಷಣಾಲಯದಲ್ಲೋ' ದಾದಿಗಳ ಪೋಷಣೆಯಲ್ಲೊ, ಬೆಳೆದ ಈ ಮಕ್ಕಳು ತಾಯಿಯ ಮಮತೆಯನ್ನು, ಶಿಕ್ಷಣವನ್ನು ನಾಗರೀಕತೆಯನ್ನು, ಶಿಸ್ತನ್ನು, ಶೀಲವನ್ನೂ ಅರಿಯರು ಕ್ರಮೇಣ ಇವರು ಬೆಳೆದಂತೆಲ್ಲಾ ಒಂದು ಯಾಂತ್ರಿಕ ಜೀವನವನ್ನು ನಡೆಸಿ ದುರಾಶೆ ಕ್ರೂರತನಕಾಮೋದ್ರೇಕ ಇನ್ನೂ ಅನೇಕ ದುರ್ನಡತೆಗಳಿಗೆ ಬಲಿಯಾಗುತ್ತಾರೆ. ಇದರಿಂದಾಗಿ ಅನೇಕ ಸುಖ ಭೋಗಗಳಿದ್ದರೂ ಧರ್ಮ ಶ್ರದ್ಧೆ ಮತ್ತು ಮನಃಶಾಂತಿ, ಎಂಬುವನ್ನು ಅರಿಯದೆ ತೊಳಲುತ್ತಾರೆ. ಈ ಕಾರಣದಿಂದಾಗಿ ಪಾಶ್ಚಾತ್ಯ ದೇಶದಲ್ಲಿನ ಗೃಹಜೀವನ ಯಾಂತ್ರಿಕವಾದದ್ದು. ದಾಂಪತ್ಯದಲ್ಲಿ ಇಬ್ಬರೂ ಅಸುಖಿಗಳು. ಇನ್ನು ಮಕ್ಕಳ ಮಾತೇನು। ವಿವಾಹ ವಿಚ್ಛೇದನಗಳು ಇಲ್ಲಿ ಸಾಮಾನ್ಯ. ಎಂತಹ ದುರಂತ! ಸ್ವಾತಂತ್ರ್ಯಕ್ಕಾಗಿ ತೊಳಲುವ ಈ ದೇಶಗಳಲ್ಲಿ ಸ್ತ್ರೀಯೂ ನಿಜವಾಗಿಯೂ ಸ್ವಾತಂತ್ರ್ಯಳಲ್ಲ ಆಕೆ ಬೆಡಗು ಬಿನ್ನಾಣಗಳ ದಾಸಿ !

ಭಾರತ ದೇಶದ ಸ್ತ್ರೀ ಸಹಜವಾಗಿಯೂ ಗಂಡಸಿಗಿಂತ ಯಾವ ವಿಧದಲ್ಲಿಯೂ ಕೀಳಲ್ಲ. ಆಕೆ ಗೃಹಲಕ್ಷ್ಮಿ, ಗಂಡನಿಗೆ ಸಂಗಾತಿ, ಮಕ್ಕಳಿಗೆ ಮಾತೆ, ಬಂಧುಗಳಿಗೆ ಭಗಿನಿ, ಸ್ನೇಹಿತರಿಗೆ ಸ್ನೇಹಮಯಿ. ಹಿಂದೂ ಸ್ತ್ರೀ ತ್ಯಾಗಮಯಿ. ಗಂಡನ, ಮಕ್ಕಳ ಬಂಧುಗಳ ಕಷ್ಟದಲ್ಲಿ, ಖಾಯಿಲೆಗಳಲ್ಲಿ, ಆಕೆಯ ಸೇವೆಯು ಹಿರಿದಾದುದು ಅವರ ಕಷ್ಟಗಳಲ್ಲಿ ತಾನೂ ಭಾಗಿಯಾಗಿ ಅವರ ಕಣ್ಣೀರನ್ನು ಒರೆಸಿ, ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದು, ಅವರ ಮೇಲ್ಮೆಗಾಗಿ ತನ್ನ ಸರ್ವಸ್ವವನ್ನೇ ತ್ಯಾಗ ಮಾಡುತ್ತಾಳೆ. ಮನೆಯ ಆಡಳಿತ ಜವಾಬ್ದಾರಿಯು ಎಲ್ಲಾ ಆಕೆಯದೇ. ಒಟ್ಟನಲ್ಲಿ ಆಕೆ ಮನೆಯ ಮಹಾಲಕ್ಷ್ಮಿ.

ಸ್ತ್ರೀಯರನ್ನು ಅಬಲೆಯರೆಂದು ಕರೆಯುವುದು ರೂಢಿ. ಇದು ಅವರ ದೇಹಶಕ್ತಿಯನ್ನು ಗಂಡಸಿನ ದೇಹಶಕ್ತಿಯೊಂದಿಗೆ ಹೋಲಿಸಿದಾಗ ಮಾತ್ರ. ಆದರೆ ನಿಜವಾಗಿಯೂ ಆಕೆಗೆ ನಿಗೂಢವಾದ ಶಕ್ತಿಗಳು ಅನೇಕ ಇವೆ. ಅವು ಅಧ್ಯಾತ್ಮ ಶಕ್ತಿ, ಸಹನ ಶಕ್ತಿ, ತ್ಯಾಗಶಕ್ತಿ ದಯಾ ಶಕ್ತಿ, ವಾತ್ಸಲ್ಯಶಕ್ತಿ, ಇತ್ಯಾದಿ, ಇತ್ಯಾದಿ. ಇದರಿಂದಲೇ ಆಕೆ ಶಕ್ತಿಸ್ವರೂಪಿಣಿ. ದೇಹಶಕ್ತಿ ಮಾತ್ರ ನಿಜವಾದ ಶಕ್ತಿಯಲ್ಲ. ಪ್ರಬಲ ದೇಹ ಸ್ಥಬಲಶಾಲಿಯಾದ ಗಂಡಸೋ ಹೆಂಗಸಿನ ಕೈಗೊಂಬೆ. ಸ್ತ್ರೀ ತನ್ನ ಈ ನಿಗೂಢ ಶಕ್ತಿಗಳ ಮಹಿಮೆಯಿಂದ ಗಂಡಸನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾಳೆ. ಇದಕ್ಕಾಗಿ ದೇವರು ಹೆಂಗಸಿಗೆ ರೂಪ, ಲಾವಣ್ಯ, ಮೃದು-ಮಧುರ ಸ್ವಭಾವ, ಇಂಪಾದ ಧ್ವನಿ, ವಯ್ಯಾರ, ಈ ಅಕರ್ಷಣೆಗಳನ್ನು ಕೊಟ್ಟಿದ್ದಾನೆ. ಈ ಸಲಕರಣೆಗಳಿಂದ ಸ್ತ್ರೀಯರು ತಮ್ಮ

ಈರ್ವರು ಮಿತ್ರರು ಒಮ್ಮೆ ಸಂಧಿದರು. ಒಬ್ಬಾತ ಉದ್ಯೋಗಸ್ಥನಾಗಿ ಸೌಖ್ಯದಿಂದಿದ್ದ. ಅನ್ನೊಬ್ಬ ಉದ್ಯೋಗಕ್ಕಾಗಿ ಇನ್ನೂ ತಿರುಗಾಡುತ್ತಿದ್ದ.

ಉದ್ಯೋಗಸ್ಥ -ಏನಯ್ಯಾ ಹೇಗಿದೆ ಜೀವನ

ನಿರುದ್ಯೋಗಿ-ಏನು ಜೀವನವಯ್ಯಾ ಉದ್ಯೋಗವೇ ದೊರೆತಿಲ್ಲ ಈವರೆಗೆ

ಉ-ಅಯ್ಯೋ ಪಾಪ. ನಾಳೆ ನಮ್ಮ ಕಂಪನಿಗೆಬಾರಯ್ಯಾ, ಯಾವುದಾದರೂ ಕೆಲಸವಿದ್ದರೆ ಕೊಡಿಸುತ್ತೇನೆ.

ನಿ-ನಾಳೆ ಒಂದು ದಿನ ಬಿಟ್ಟು ಬಂದರೆ ಆಗದೇನು ?

ಉ-ಏಕೆ ?

ನಿ-ನಾಳೆ-ನಿರುದ್ಯೋಗಿಗಳ ಮೆರವಣಿಗೆಯಲ್ಲಿ ನಾನು ಭಾಗವಹಿಸಬೇಕಾಗಿದೆ.

ಸ್ವಕಾರ್ಯಗಳನ್ನು ಸಾಧಿಸುತ್ತಾರೆ. ಇದು ದೈವ ಪ್ರಕೃತಿ.

ಒಟ್ಟಾಗಿ ಹೇಳುವುದಾದರೆ ಪ್ರಪಂಚದಲ್ಲಿ ಗಂಡಸರು ತಮ್ಮ ಶಕ್ತಿ–ಸಾಮಾರ್ಥ್ಯ, ಐಶ್ವರ್ಯ, ಆಡಂಬರಗಳಿಂದ ಪ್ರಸಿದ್ಧಿಯಾಗಿದ್ದರೆ, ಸ್ತ್ರೀಯರು ತಮ್ಮ ಸೌಜನ್ಯತೆ, ಕಾರ್ಯತತ್ಪರತೆ; ಭಕ್ತಿ, ಶ್ರದ್ಧೆ, ಮತ್ತು ದೈವಿಕ ಸಂಪತ್ತಿನಿಂದ ಅದೇ ಮಟ್ಟದಲ್ಲಿ ಬೆಳಗುತ್ತಾರೆ. ಚೂಡಲೆ ರಾಣಿಯಾಗಿದ್ದರೂ ಯೋಗಿನಿಯಾಗಿದ್ದಳು. ತನ್ನಗಂಡನಾದ ಶಿಖಿಧ್ವಜನ ಪರವಾಗಿ ಒಂದು ದೊಡ್ಡ ರಾಜ್ಯವನ್ನೇ ಆಳಿದಳು. ಸುಲಭ ಒಬ್ಬ ಬ್ರಹ್ಮವಾದಿನಿಯಾಗಿ ಆತ್ಮವಿಚಾರ ಮತ್ತು ಬ್ರಹ್ಮಚಿಂತನದಲ್ಲಿ

ತೊಡಗಿದ್ದಳು. ಸಾವಿತ್ರಿ ತನ್ನ ಆಧ್ಯಾತ್ಮ ಶಕ್ತಿಯಿಂದ ಮಡಿದ ಗಂಡನನ್ನು ಬದುಕಿಸಿದಳು. ಅನುಸೂಯ ತನ್ನ ಪಾತಿವ್ರತ್ಯ ಮಹಿಮೆಯಿಂದ ತ್ರಿಮೂರ್ತಿಗಳನ್ನು ಹಸುಳೆಗಳನ್ನಾಗಿ ಮಾಡಿ ಹಾಲುಣಿಸಿದಳು. ಗಾರ್ಗೇಯಿ ಒಬ್ಬ ದೊಡ್ಡ ಜ್ಞಾನಿಯಾಗಿದ್ದು ಜನಕರಾಜನ ಆಸ್ಥಾನದಲ್ಲಿ ನಗ್ನಳಾಗಿ ನಿಂತು ಋಷಿ ಯಾಜ್ಞವಲ್ಕ್ಯರೊಡನೆ ಆಧ್ಯಾತ್ಮ ವಿಚಾರದಲ್ಲಿ ತರ್ಕಮಾಡಿ ಗೆದ್ದಳು. ಮದಾಲಸೆ ಜ್ಞಾನದ ಜೋಗುಳವನ್ನು ಹಾಡುತ್ತಾ ತನ್ನ ಮಕ್ಕಳನ್ನು ಜ್ಞಾನಿಗಳನ್ನಾಗಿ ಮಾಡಿದಳು. ಅವ್ವೈಯಾರ್ ದೊಡ್ಡ ಜ್ಞಾನಿಯಾಗಿದ್ದಳು. ಆಂಡಾಳ್ ಒಬ್ಬ ದೊಡ್ಡ ಕವಿಯಾಗಿದ್ದಳು. ಶಾರದಮಣಿದೇವಿ ರಾಮಕೃಷ್ಣ ಪರಮಹಂಸರ ಆಧ್ಯಾತ್ಮ ಮಾತೆಯಾಗಿದ್ದರು. ಕಸ್ತೂರಿ ಬಾ ಗಾಂಧಿಯವರು ಒಬ್ಬ ಸರಳ, ನಿರಾಡಂಬರದ, ಸೇವಾ–ತತ್ಪರತೆಯ ಆದರ್ಶಸತಿ ಬೆಳಗಿದರು. ಇಂತಹ ಪುಣ್ಯ ಭೂಮಿಯಲ್ಲಿ ಜನಿಸಿದ ಸ್ತ್ರೀಯರು ನಾವೇಧನ್ಯರಲ್ಲವೇ ?

ಸ್ವಾಮಿ ವಿವೇಕಾನಂದ

ಕೇವಲ 39 ವರ್ಷಗಳಕಾಲ ಜೀವಿಸಿ, ಸ್ವಾರ್ಥ ತ್ಯಾಗ, ಆಧ್ಯಾತ್ಮಿಕ ಮತ್ತು ಉನ್ನತ ದೇಶಭಕ್ತಿಗಳಿಂದ ರಾಮಕೃಷ್ಣ ಪರಮ ಹಂಸರ ಕನಸನ್ನು ನನಸಾಗಿ ಮಾಡಿ ವಿದೇಶಗಳಲ್ಲಿಯೂ ಭಾರತದ ಕೀರ್ತಿ ಧ್ವಜವನ್ನು ಏರಿಸಿದ ಮಹಾನುಭಾವರಾದ ಶ್ರೀ ಸ್ವಾಮಿ ವಿವೇಕಾನಂದರ ಹೆಸರು ನಮ್ಮೆಲ್ಲರಿಗೂ ಪರಿಚಿತ. ಅವರ ಹೆಸರು ನಮಗೆ ಸ್ಫೂರ್ತಿದಾಯಕ. ಆದರೆ ಅವರ ತತ್ವಗಳ ಕಡೆ ನಮ್ಮ ಮನಸ್ಸು ಹರಿದಿದೆಯೇ? ನಮ್ಮ ನಿತ್ಯ ಜೀವನದಲ್ಲಿ ಮತ್ತು ಇಂದಿನ ಸಮಾಜದಲ್ಲಿ ಅವರ ಉಪದೇಶದ ಪ್ರಭಾವ ಕಾಣುತ್ತಿದ್ದೆವೆಯೇ ಎಂಬ ಪ್ರಶ್ನೆಗಳಿಗೆ ಸಹೃದಯರಾದವರು ಉತ್ತರವೀಯಬೇಕು.

ವಿದ್ಯಾರ್ಥಿಗಳಲ್ಲಿ ಅಶಿಸ್ತು ಎಂಬ ಕೂಗು ಇಂದು ಸರ್ವವ್ಯಾಪಿಯಾಗಿದೆ. ಇದಕ್ಕೆ ಕಾರಣವೇನು ಎಂಬುದನ್ನು ಪರಿಶೀಲಿಸಿದರೆ ವಿದ್ಯಾರ್ಥಿಗಳಲ್ಲಿ ನೈತಿಕ ಮತ್ತು ಧಾರ್ಮಿಕ ಶಿಕ್ಷಣವಿಲ್ಲವೆನ್ನುವುದು ಗೊತ್ತಾಗುತ್ತದೆ. ಪೋಷಕರು ಮತ್ತು ಉಪಾಧ್ಯಾಯರು ವಿವೇಕಾನಂದರಂತಹ ಮಹಾತ್ಮರ ಸಾಹಿತ್ಯವನ್ನು ಬಾಲ್ಯದಿಂದಲೇ ಬೋಧಿಸಿ ಆಚರಣೆಯಲ್ಲಿ ತರಬೇಕು. ಮನೆಯಲ್ಲಿ ಹಿರಿಯರ ಜೀವನ ಮಕ್ಕಳಿಗೆ ಮಾರ್ಗದರ್ಶನವಾಗಿರಬೇಕು. "ಸ್ವಾರ್ಥತೆಯಿಲ್ಲದ ಪರಿಶುದ್ಧರಾದ ಜನಗಳಿಂದ ಮಾತ್ರ ದೇಶವನ್ನು ಕಟ್ಟಬಹುದು" ಎಂಬ ವಿವೇಕಾನಂದರ ವಾಣಿ ಎಲ್ಲರಿಗೂ ಗೊತ್ತಿದೆ. ಆದರೆ ಅದರಂತೆ ನಡೆಯುವವರು ವಿರಳ ಸ್ವಾಮಿ ವಿವೇಕಾನಂದರ ಜಯಂತಿಯನ್ನು ವೈಭವದಿಂದ ಆಚರಿಸುತ್ತೇವೆ. ಅವರ ವಿಚಾರವಾಗಿ ಉಪನ್ಯಾಸಗಳನ್ನು ಕೇಳುತ್ತೇವೆ. ವಿವೇಕಾನಂದರ ಹೆಸರನ್ನು ಮತ್ತು ತತ್ವಗಳನ್ನು ಅಂದಿನ ಸಮಾರಂಭ ಮುಗಿಯುತ್ತಲೂ ಮರೆಯುತ್ತೇವೆ. ಇದು ನಮ್ಮಲ್ಲಿರುವ ದೊಡ್ಡ ದೋಷ.

ಸ್ವಾಮಿ ವಿವೇಕಾನಂದರು ಶ್ರೇಷ್ಠ ದೈವಭಕ್ತರು ಪರಮಾತ್ಮನಲ್ಲಿ ಅಚಲ ನಂಬಿಕೆಯನ್ನಿಟ್ಟು ದೈವ ಸಾಕ್ಷಾತ್ಕಾರ ಮಾಡಿಕೊಂಡ ಮಹಾನುಭಾವರು ಮನೆಯಲ್ಲಿ ತಂದೆ ತೀರಿಹೋಗಿ ಜೀವನಕ್ಕೆ ಕಷ್ಟವಾಗಿದ್ದಾಗ ಕಾಳಿಕಾದೇವಿಯನ್ನು ತಮ್ಮ ಕಷ್ಟ ಪರಿಹರಿಸೆಂದು ಮೂರು ಸಲ ಪ್ರಾರ್ಥಿಸಲು ಹೋಗಿ ದೇವರ ಮುಂದೆ ನಿಂತಾಗ ತಮ್ಮ ವಿಚಾರವನ್ನೇ ಮರೆತರು. ನನ್ನಂತೆ ಕಷ್ಟಪಡುವವರು ಪ್ರಪಂಚದಲ್ಲಿ ಎಷ್ಟು ಜನ ಇದ್ದಾರೊ, ದೇವರನ್ನು ಆ ರೀತಿ ಬೇಡಬಾರದು. ಬೇಡುವವರಿಗೆ ಮಾತ್ರ ದೇವರು ದಯ ತೋರುವನೇ ಎಂದು ಯೋಚಿಸಿದರು. ಆದರೆ ನಾವು ? ನಮಗೆ ದೇವರ ನೆನಪು ಬರುವುದು ಏನಾದರೂ ತೊಂದರೆಯಾದಾಗ ಮಾತ್ರ. ನಮ್ಮ ಗುರಿ–ದೇವರು ನಾವು ಕೇಳಿದ ಪ್ರಾಪಂಚಿಕ ವಸ್ತುಗಳನ್ನೆಲ್ಲಾ ಕೊಡಬೇಕು. ಒಂದು ಬಂದರೆ ಮನಸ್ಸು ಮತ್ತೊಂದನ್ನು ಬಯಸುತ್ತದೆ. ಮನಸ್ಸಿಗೆ ಶಾಂತಿಯೇ ಇಲ್ಲ. ಗಾಂಧೀಜಿಯವರು ಹೇಳಿರುವಂತೆ "ನಾವು ಸುಖವನ್ನು ಹುಡುಕಿಕೊಂಡು ಹೋದಂತಲ್ಲಾ ಅದು ನಮ್ಮಿಂದ ದೂರವಾಗುತ್ತದೆ. ನಿಜವಾದ ಸುಖವು ಆಂತರಿಕವಾಗಿದೆ" ಎಂಬ ವಿಚಾರವನ್ನು ನಾವು ಕಾರ್ಯಗತ

(ಮುಂದುವರಿಯುವುದು)

[ಬುದ್ಧನ ದಂತ ಕತೆಯೊಂದರ ಅನುವಾದ]

ಸುಮತಿಯ ಸತ್ಯಪ್ರಿಯತೆ

—ಶಾಂತಲಾ ವೆಂಕಟೇಶ್.

ಹಿಮಾಚಲದ ತಪ್ಪಲಲ್ಲಿ ಅಂಜೂರ ವೃಕ್ಷಗಳೇ ಹೇರಳವಾಗಿದ್ದ ವನವೊಂದಿದ್ದಿತು. "ಅತ್ತಿಯ ಹಣ್ಣು ಅಂಜೂರವೇ ?" ಎಂಬ ಚತುರೋಕ್ತಿಯನ್ನು ನಾವು ಮಾತಿನ ಮಧ್ಯೆ ಬಳಸುವುದು ವಾಡಿಕೆಯಾಗಿ ಬಿಟ್ಟಿದೆ. ಹೌದು ! ಅಂಜೂರವು ಎಂದಿಗೂ ಅತ್ತಿಯ ಅಣ್ಣಲ್ಲ ಅದು ಹಿಂದೊಮ್ಮೆ ಬಹು ಜನಪ್ರಿಯವಾಗಿದ್ದ ಫಲವೆನಿಸಿತ್ತು. ಮಾದಳ, ಅಂಜೂರ ಇಂಥಾ ಫಲಗಳನ್ನು ಈಗಿನ ಎಷ್ಟೋ ಜನರು ನೋಡಿದ್ದರೆ ಅದು ನಮ್ಮ ಪುಣ್ಯವೆಂದೇ ಹೇಳಬೇಕು. ಅದೊಂದು ಪುಷ್ಟಿದಾಯಕವಾದ ಫಲವೆಂದು ಹಿರಿಯರು ಹೇಳುತ್ತಾರೆ. ಅಂಜೂರವು ಪಕ್ಷಿಗಳಿಗೆ, ಅದರಲ್ಲೂ ಗಿಣಿಗಳಿಗೆ ಪ್ರಿಯ ಆಹಾರ. ಅಂಥಾ ಒಂದು ಅಂಜೂರ ವೃಕ್ಷದ ಪೊಟರೆಯೊಂದರಲ್ಲಿ ಸುಮತಿಯೆಂಬ ಗಿಣಿಯು ಕೆಲವು ಕಾಲದಿಂದಲೂ ವಾಸವಾಗಿದ್ದಿತು. ಆ ಮರದ ಹಣ್ಣುಗಳನ್ನು ತಿನ್ನುತ್ತಾ, ಗಂಗಾನದಿಯ ನೀರನ್ನು ಕುಡಿಯುತ್ತಾ ಆ ಗಿಣಿಯು ಸಂತೋಷವಾಗಿ ಕಾಲ ಕಳೆಯುತ್ತಿದ್ದಿತು. ಇದ್ದಷ್ಟರಲ್ಲೇ ತೃಪ್ತಿ ಪಡುವುದು ಕೆಲವರ ಸ್ವಭಾವ. ಇಲ್ಲದ್ದನ್ನೆಲ್ಲಾ, ಸಲ್ಲದ್ದನ್ನೆಲ್ಲಾ ಬಯಸುವ ಜನರೂ ಇರುತ್ತಾರೆ ಇಂಥವರ ಪಾಲಿಗೆ ನಿರಾಶೆ ನೋವುಗಳೇ ಕಾದಿರುತ್ತವೆ.

ಒಂದು ದಿನ ಸುಮತಿಯನ್ನು ಪರೀಕ್ಷಿಸಬೇಕೆಂದು ದೇವೇಂದ್ರನಿಗೆ ಇಷ್ಟವಾಯಿತು. ಇದ್ದಕ್ಕಿದ್ದಂತೆಯೇ ಅಂಜೂರ ವೃಕ್ಷಗಳ ತೋಟವೇ ಬಾಡಿ ಒಣಗತೊಡಗಿತು ಇದರಿಂದ ಗಿಣಿಗೆ ಆದ ದುಃಖ ಅಷ್ಟಿಷ್ಟಲ್ಲ. ತನಗೆ ಬಹಳ ಕಾಲದಿಂದ ಆಶ್ರಯಕೊಟ್ಟು, ಆಹಾರ ನೀಡುತ್ತಿದ್ದ ವೃಕ್ಷಕ್ಕೆ ಈ ಗತಿಯಾಯಿತಲ್ಲಾ ಎಂಬುದಾಗಿ ಗಿಣಿ ಚಿಂತಿಸತೊಡಗಿತು. ಧೂಳಿನಿಂದ ಕೂಡಿದ ಬಿಸಿಯ ಬಿರುಗಾಳಿ ಬೀಸತೊಡಗಿತು. ಉಳಿದ ಮರಗಳಲ್ಲಿದ್ದ ಗಿಣಿಗಳೆಲ್ಲವೂ ಬೇರೆ ಬೇರೆ ದಿಕ್ಕುಗಳಿಗೆ ಹಾರಿ ತೋಟದ ತೋಪುಗಳನ್ನು ಸೇರಿಕೊಂಡವು ಒಣಮರಗಳಲ್ಲಿ ಗಿಣಿಗಳಿಗೇನು ಕೆಲಸ ? ಆದರೆ ಸುಮತಿಯು ಹಾಗೆ ಯೋಚಿಸಲೂ ಇಲ್ಲ. ಸಿಕ್ಕಿದ ಸ್ವಲ್ಪ ಆಹಾರದಿಂದಲೇ ಗಿಣಿಯು ಇನ್ನೂ ಸ್ವಲ್ಪಕಾಲ ತಳ್ಳಿತು. ತನ್ನ ದುರ್ಗತಿಗಾಗಿ ಯಾರನ್ನಾಗಲೀ ಅಥವಾ ಯಾವ ದೈವವನ್ನಾಗಲೀ ಸಾಮಾನ್ಯರಂತೆ, ಅದು ದೂಷಿಸಲಿಲ್ಲ. "ತಾಳಿದವನು ಬಾಳಿಯಾನು" ಎಂಬ ನೀತಿಗನುಸಾರವಾಗಿ, ತನ್ನ ಹೆಸರಿಗನ್ವರ್ಥವಾಗಿ ಗಿಣಿಯು ಹಸಿವು ನೋವುಗಳನ್ನು ನುಂಗಿ ದೇವರನ್ನು ಪ್ರಾರ್ಥಿಸುತ್ತಾ ಕಾಲ ಕಳೆಯುತ್ತಿದ್ದಿತು.

ಸುಮತಿಯ ವಿಷಯವಾಗಿ ದೇವೇಂದ್ರನಿಗೆ ಕರುಣೆಯುಂಟಾಯಿತು. ಆದರೂ ಆ ಗಿಣಿಯನ್ನು ಪರೀಕ್ಷಿಸಬೇಕೆಂದು ದೇವೇಂದ್ರನು ಒಂದು ಸುಂದರವಾದ ಬಾತುಗೋಳಿಯ ರೂಪ ಧರಿಸಿ ಅಲ್ಲಿಗೆ ಬಂದು, "ಅಯ್ಯ ಸುಮತಿ, ಈ ಒಣಮರಗಳ ತೋಪಿನಲ್ಲಿ ನಿನಗೇನು ಕೆಲಸ ? ನೀನು ಹೀಗೆಯೇ ಇಲ್ಲಿದ್ದರೆ ಇನ್ನು ಕೆಲವೇ ದಿನಗಳಲ್ಲಿ ಹಸಿವಿನಿಂದ ಸಾಯಬೇಕಾಗುತ್ತದೆಯಷ್ಟೆ. ಫಲ ಪುಷ್ಪಗಳಿಂದ ಕೂಡಿದ ಬೇರೆ ತೋಟಕ್ಕೇಕೆ ನೀನು ಹೋಗಬಾರದು ?" ಎಂದು ಪ್ರಶ್ನಿಸಿದನು.

ಅದಕ್ಕೆ ಸುಮತಿಯು ಕೊಟ್ಟ ಉತ್ತರ ಆಶ್ಚರ್ಯಕರವಾಗಿದ್ದಿತು. "ಈ ತೋಟವು ಅದರಲ್ಲೂ ಈ ವೃಕ್ಷವು ನನಗೆ ಹುಟ್ಟಿದಂದಿನಿಂದಲೂ ಆಶ್ರಯ ಕೊಟ್ಟು ಪೋಷಿಸಿ ಇದುವರೆಗೆ ಯಾವ ಚಿಂತೆಯೂ ಇಲ್ಲದಂತೆ ಬೆಳೆಸಿದೆ ಆದರೆ ಅದೇನು ದೈವಲೀಲೆಯೋ ನನಗೆ ತಿಳಿಯದು. ಎಂದೂ ಇಂಥಾ ದುರ್ಗತಿಯನ್ನು ಈ ತೋಟ, ಈ ಮರವು ಕಂಡಿದ್ದೇ ಇಲ್ಲ. ಇಷ್ಟುದಿನಗಳಿಂದ ಆಶ್ರಯ ನೀಡಿ, ಆಧಾರವಾಗಿ ತಂದೆಯಂತಿದ್ದ ಈ ವೃಕ್ಷವನ್ನು ನಾನು ಹೇಗೆ ತೊರೆದು ಹೋಗಲಿ ? ನಂಬಿ ಸತ್ತರೂ ಚಿಂತೆಯಿಲ್ಲ, ದೂರ ಹೋಗುವುದಂತೂ

ನನ್ನಿಂದಾಗದು” ಎಂದು ನಿರ್ಧಾರದಿಂದ ಹೇಳಿತು.

ದೇವೇಂದ್ರನಿಗೆ ಸುಮತಿಯ ಮಾತುಗಳಿಂದ ಸಂಪ್ರೀತಿಯುಂಟಾಯಿತು. ತಕ್ಷಣವೇ ತನ್ನ ನಿಜರೂಪವನ್ನು ತೋರಿ ದೇವೇಂದ್ರನು, “ಇದೋ ನಾನು ದೇವೇಂದ್ರ ನಿನ್ನನ್ನು ಪರೀಕ್ಷಿಸಲು ಈ ರೀತಿ ಮಾಡಿದೆನಷ್ಟೆ. ನಿನ್ನಲ್ಲಿರುವಷ್ಟು ಪ್ರಾಮಾಣಿಕತೆಯನ್ನು ಎಷ್ಟೋ ಸಲ ಮನುಷ್ಯರಲ್ಲೂ ಕಾಣಲು ಸಾಧ್ಯವಿಲ್ಲ. ನಿನ್ನ ನ್ಯಾಯ-ನಿಷ್ಠೆಗಳಿಗೆ ನಾನು ಮೆಚ್ಚಿದ್ದೇನೆ. ಬೇಕಾದವರನ್ನು ಕೇಳಿಕೊ” ಎಂದನು.

ಸುಮತಿಯು ಅತ್ಯಾಶ್ಚರ್ಯಪಟ್ಟು ದೇವೇಂದ್ರನಿಗೆ ವಂದಿಸಿ, “ಎಲ್ಲೈ ಸ್ವಾಮಿಯೇ ! ಈ ತೋಟವು ಮತ್ತೆ ನಿನ್ನ ನಂದನದಂತೆ ಕಳಕಳಿಸಿ ಚಿರವಾಗಿರುವಂತೆ ಕರುಣೆದೋಱು. ಯಾರಿಂದ ನಾನು ಆಶ್ರಯ ಪಡೆದು ಬೆಳೆದು ಇಷ್ಟು ದೊಡ್ಡವನಾದೆನೋ ಆ ಮಾತಾಪಿತೃ ಸದೃಶವಾದ ಈ ತೋಟ, ಈ ವೃಕ್ಷಕ್ಕೆ ನನ್ನ ಅಲ್ಪ ಕೃತಜ್ಞತೆ ಸಲ್ಲಿಸಲು ನೆರವಾಗು !” ಎಂದು ದೈನ್ಯದಿಂದ ಬೇಡಿಕೊಂಡಿತು.

ದೇವೇಂದ್ರನು ಮುಗುಳುನಗುತ್ತಾ ಗಂಗಾನದಿಯ ನೀರನ್ನು ಆ ತೋಟದ ಕಡೆಗೆ ಪ್ರೋಕ್ಷಿಸಿದನು. ಏನು ಪರಮಾಶ್ಚರ್ಯ ! ಒಣಗಿ ಬಣ–ಬಣ ಸುರಿಯುತ್ತಿದ್ದ ಆ ಮರಗಳೆಲ್ಲವೂ ಹೂವು-ಹಣ್ಣುಗಳಿಂದ ಸುಗಂಧದಿಂದಲೂ, ನಯನ ಮನೋಹರವಾಗಿಯೂ ಕ್ಷಣಾರ್ಧದಲ್ಲಿ ಕಂಗೊಳಿಸಿದವು. ಸುಮತಿಗೆ ಅದರಿಂದಾದ ಆನಂದ ಅವರ್ಣನೀಯ. ನೋಡಿದಿರಾ ಗಿಣಿಯ ಪ್ರಾಮಾಣಿಕತೆ ಮತ್ತು ಕೃತಜ್ಞತೆಯನ್ನು ! ಪ್ರಾಮಾಣಿಕತೆಯೇ ಪರಮ ತತ್ವವಲ್ಲವೆ ? ಅನ್ನ ಕೊಟ್ಟು ಆಧಾರವಾಗಿರುವ ದೇವರನ್ನು ಮಾತ್ರ ಎಂದೆಂದಿಗೂ ಮರೆಯಬಾರದೆಂಬುದನ್ನು ನೆನಪಿಡಿ.

—oOo—

ಕನ್ನಡದ ದೀಪ

ಹೊತ್ತಿತೋ ಉರಿಯಿತೋ
ಕನ್ನಡದ ದೀಪಾ,
ಸತ್ತಿತೋ ಸರಿಯಿತೋ
ಕತ್ತಲೆಯ ಶಾಪ ! ||ಪ||

ಬಹುದಿನಗಳ ಹಂಬಲವದು
ಕನಸಾಯಿತು ನನಸು
ಹೆಸರಾಯಿತು “ಕರ್ನಾಟಕ” !
ಅದರೇಳ್ಗೆಗೆ ಶ್ರಮಿಸು ! ||೧||

ವರಪಂಪನ ಕವಿರನ್ನನ
ಕೃತಿರತ್ನಕೆ ನಮಿಸು
ಬಸವಣ್ಣನ ಸರ್ವಜ್ಞನ
ಅನುಭವವನು ನುತಿಸು ! ||೨||

ಬೇಲೂರಿನ ಹಳೆಬೀಡಿನ
ಬೆಳಗೊಳದಾ ಸೊಗಸು,
ಕನ್ನಡದಾ ಕಲೆಗಾರರ
ಭವ್ಯತೆಯನು ಸ್ಮರಿಸು ! ||೩||

ಇತಿಹಾಸದ ಕಡುಗಲಿಗಳ
ಹೆಸರನು ನೀ ಉಳಿಸು;
ಕನ್ನಡಿಗನೇ ನಿನ್ನೆದೆಯಲಿ
ಭಾವೈಕ್ಯತೆ ಬೆಳೆಸು ! ||೪||

—ಎಂ. ಜಿ. ವಿ.

ಖುಷ್ಕಿ ಬೇಸಾಯದ ಅಭಿವೃದ್ಧಿಗೆ ಸಮಗ್ರ ಯೋಜನೆ

ಲೇಖಕ : ಡಾ. ಎನ್. ಪಿ. ಪಾಟೀಲ
ಸಂಶೋಧನಾ ಡೈರೆಕ್ಟರ್, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು

ನಮ್ಮ ದೇಶದಲ್ಲಿ ಖುಷ್ಕಿ ಪ್ರದೇಶವೇ ಹೆಚ್ಚಾಗಿದ್ದು, ಈ ಪ್ರದೇಶವು ಮೇಲಿಂದ ಮೇಲೆ ಅಭಾವ ಪರಿಸ್ಥಿತಿಗೆ ತುತ್ತಾಗುವದು ಸರ್ವಶೃತವಿದೆ- ಆಗಾಗ ಭಾರತದಾದ್ಯಂತ ಈ ಪರಿಸ್ಥಿತಿಯು ತಲೆದೋರಿದ್ದು ಸರಕಾರದ ಮತ್ತು ಕೃಷಿ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲರ ಗಮನ ಸೆಳೆದಿದೆ. ಈ ಸಮಸ್ಯೆಯ ಪರಿಹಾರವಿಲ್ಲದೆ, ನಮ್ಮ ದೇಶದ ರೈತರ ಮತ್ತು ಈ ಪ್ರದೇಶದ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಲಾರದು. ಇದನ್ನರಿತೇ ಈ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸಲು ದೇಶದಾದ್ಯಂತ ಸಮಗ್ರ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಇಟ್ಟುಕೊಳ್ಳಲಾಗಿದೆ.

ಈ ಪ್ರದೇಶದ ಅಭಿವೃದ್ಧಿಯ ಗುಟ್ಟೆಂದರೆ

1. ಭೂಸಾರ ರಕ್ಷಣೆ ಮತ್ತು ನೀರಿನ ಪೂರೈಕೆಯನ್ನು ಹೆಚ್ಚಿಸುವದು, 2. ಭೂಮಿಯಲ್ಲಿ ಹಸಿ ಇರುವಾಗಲೇ ಅಲ್ಪಾವಧಿಯಲ್ಲಿ ಮಾಗುವ ಬೆಳೆಗಳನ್ನು ಬೆಳೆಯುವದು, 3. ರಾಸಾಯನಿಕ ಗೊಬ್ಬರಗಳ ಉಪಯೋಗ, 4. ಪ್ರದೇಶದ ಬೇಸಾಯಕ್ಕೆ ತಕ್ಕಂತೆ ಹೊಸ ಉಪಕರಣಗಳನ್ನು ಬಳಸುವದು, 5. ಲಾಭದಾಯಕವಾದ ಬೆಳೆಗಳನ್ನು ಬೆಳೆಯುವದು, 6. ಹೆಚ್ಚು ಆದಾಯ ಕೊಡುವ ಹೊಸ ಬೆಳೆಗಳನ್ನು ಬೆಳೆಯುವದು, 7. ಅಧಿಕ ಇಳುವರಿ ಕೊಡುವ ಮೇವಿನ ಬೆಳೆಗಳನ್ನು ಬೆಳೆಯುವದು, 8. ಮಿಶ್ರ ಬೆಳೆಗಳನ್ನು ಬೆಳೆಯುವದು, 9. ಮಿಶ್ರ ಬೇಸಾಯ, 10. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಉದ್ಯೋಗಕ್ಕೆ ಅವಕಾಶವನ್ನು ಕಲ್ಪಿಸಿಕೊಡುವದು.

ಭೂಸಾರ ಮತ್ತು ತೇವಿನ ರಕ್ಷಣೆ

ಖುಷ್ಕಿ ಬೇಸಾಯದ ಗುಟ್ಟೆಂದರೆ, ಭೂಮಿಯ ಫಲವತ್ತತೆ ಮತ್ತು ಅದರ ಹಸಿಯನ್ನು ಕಾಯ್ದುಕೊಂಡು ಹೋಗುವದು. ಇದಕ್ಕೆ ಹಲವಾರು ವಿಧಾನಗಳುಂಟು. ಇವುಗಳಲ್ಲಿ ಮುಖ್ಯವಾದವುಗಳೆಂದರೆ–1 ಶಾಸ್ತ್ರ ಸಮ್ಮತವಾದ ಒಡ್ಡುಗಳನ್ನು ಹಾಕುವದು, 2. ಭೂಮಿಯನ್ನು ಆಳವಾಗಿ ಉಳುವದು, 3. ಇಳಿಜಾರಿಗೆ ಅಡ್ಡವಾಗಿ ಬೆಳೆಯ ಸಾಗುವಳಿ ಮಾಡುವದು, 4. ಪಟ್ಟಿ ಬೇಸಾಯ, 5. ಮೇಲು ಹೊದಿಕೆಯಿಂದ ಭೂಮಿಯ ಹಸಿ ಕಾಯುವದು (mulching), 6. ಭೂಮಿಯಲ್ಲಿ ಸಣ್ಣ ಕುಣಿಗಳನ್ನು ತೆಗೆದು ನೀರು ಇಂಗುವಂತೆ ಮಾಡುವದು (scooping), 7. ಭೂಮಿಯ ಮೇಲ್ಮೈ ಮುಚ್ಚುವಂತೆ ಹೊದಿಕೆ ಬೆಳೆ ಬೆಳೆಯುವದು (growing cover crop).

ಅಲ್ಪಾವಧಿಯ ಬೆಳೆಗಳನ್ನು ಬೆಳೆಯುವದು

ಭೂಮಿಯಲ್ಲಿ ತೇವ ಇರುವಾಗಲೆ ಅಂದರೆ ಕಪ್ಪು ಭೂಮಿಯಲ್ಲಿ ಎರೆ ಬಿಡು ಸೆಳೆಯುವುದಕ್ಕಿಂತ ಮುಂಚೆಯೇ ಮಾಗುವ ಬೆಳೆಗಳನ್ನು ಬೆಳೆಯುವದು ಅವಶ್ಯ. ಇದಕ್ಕೆ ಹೈಬ್ರಿಡ್ ತಳಿಗಳ ನಿದರ್ಶನವನು ಕೊಡಬಹುದು.

ಹತ್ತಿ ಬೆಳೆಯಲ್ಲಿ ಅಲ್ಪಾವಧಿಯ ಬೆಳೆಗಳಿಲ್ಲ. ಅಲ್ಪಾವಧಿಯ ಹತ್ತಿಯ ತಳಿಗಳನ್ನು ಶೋಧಿಸಿ ತೆಗೆಯಬೇಕಾಗಿದೆ. ಖುಷ್ಕಿ ಪ್ರದೇಶದಲ್ಲಿ ಬೆಳೆಯುವ ಗೋಧಿ ಕಡಲೆಗಳು ಅಲ್ಪಾವಧಿಯ ಬೆಳೆಗಳಾಗಿವೆ.

ರಾಸಾಯನಿಕ ಗೊಬ್ಬರಗಳ ಬಳಕೆ

ಖುಷ್ಕಿ ಬೆಳೆಗೆ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿದರೆ, ಬೆಳೆಯು ಸುಟ್ಟು ಹೋಗುತ್ತದೆ ಎಂಬ ನಂಬಿಕೆ ಬಹಳಷ್ಟು ರೈತರ ಅಭಿಪ್ರಾಯವಿದೆ. ಆದರೆ ಇದು ತಪ್ಪು ಕಲ್ಪನೆ, ಆದರೆ ನನ್ನ ಅಭಿಪ್ರಾಯದಂತೆ, 'Fertilze to fight drought' ಅಂದರೆ “ಅಭಾವ ಪರಿಸ್ಥಿತಿಯನ್ನು ಎದುರಿಸಲು ರಾಸಾಯನಿಕ

ಗೊಬ್ಬರಗಳನ್ನು ಉಪಯೋಗಿಸಿ" ಇದು ಶಾಸ್ತ್ರ ಸಮ್ಮತವಾದ ಮಾತು. ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವದರಿಂದ ಬೇರುಗಳು ಆಳವಾಗಿ ಬೆಳೆದು ಭೂಮಿಯಲ್ಲಿ ಹೆಚ್ಚು ಭಾಗದ ತೇವವನ್ನು ಉಪಯೋಗಿಸಿ ಬೆಳೆಯಲು ಸಹಾಯವಾಗುತ್ತದೆ.

ಖುಷ್ಕಿ ಪ್ರದೇಶದ ಭೂಮಿಗಳು, ಬಾಯಾರಿಕೆ ಇರುವದಲ್ಲದೆ, ಅವು ಆಹಾರ ಕೊರತೆಯಿಂದ ಹಸಿದವುಗಳು (Both thursty and hungry) ಕೂಡಾ ಇರುತ್ತವೆ. ಕಾರಣ ರಾಸಾಯನಿಕ ಗೊಬ್ಬರಗಳನ್ನು ಕೊಡುವದು ಅವಶ್ಯ. ಈ ಜಮೀನುಗಳು ಮುಖ್ಯವಾಗಿ ಸಾರಜನಕ ಮತ್ತು ರಂಜನಕ ಮತ್ತು ರಂಜಕಗಳ ಕೊರತೆಯುಳ್ಳವುಗಳಾಗಿರುತ್ತವೆ. ಕಾರಣ, ರಾಸಾಯನಿಕ ಗೊಬ್ಬರಗಳನ್ನು ನಿರ್ಧಿಷ್ಟ ಪ್ರಮಾಣದಲ್ಲಿ ಕೊಡುವದು ಅವಶ್ಯ.

ರಾಸಾಯನಿಕ ಗೊಬ್ಬರವನ್ನು ಪಟ್ಟೆಯಲ್ಲಿ ಮತ್ತು ಆಳವಾಗಿ ತೊಡುವದರಂದ ಹೆಚ್ಚು ಉಪಯುಕ್ತವೆಂದು ಕಂಡು ಬಂದಿದೆ. ಇದರಿಂದ ಯಾವದೇ ಹೆಚ್ಚು ವೆಚ್ಚವಿಲ್ಲದೆ ಅಧಿಕ ಇಳುವರಿ ಪಡೆಯಲು ಸಾಧ್ಯವಾಗುತ್ತದೆ.

ಹೊಸ ಉಪಕರಣಗಳನ್ನು ಬಳಸುವದು

ಖುಷ್ಕಿ ಪ್ರದೇಶದಲ್ಲಿ ಹೊಸ ಉಪಕರಣಗಳನ್ನು ಉಪಯೋಗಿಸುವದು ಉಳಿದ ಎಲ್ಲ ಪ್ರಸಂಗಗಳಿಗಿಂತಲೂ ಅವಶ್ಯ. ಭೂಮಿಯ ಹದವರಿತು ಕೆಲಸ ಮಾಡಬೇಕಾಗುತ್ತದೆ. ಬಿತ್ತುವ ಒಂದು ದೃಷ್ಟಾಂತವನ್ನು ತೆಗೆದುಕೊಂಡರೆ, ಈ ಪ್ರದೇಶದಲ್ಲಿ ಭೂಮಿಯಲ್ಲಿ ಬಿತ್ತಲಿಕ್ಕೆ ಯೋಗ್ಯವಾದ ಹಸಿಯು ಕೆಲವೇ ದಿವಸಗಳವರೆಗೆ ಇರುತ್ತದೆ. ಈ ಅಲ್ಪಾವಧಿಯಲ್ಲಿ ಬಿತ್ತಬೇಕಾಗುತ್ತದೆ. ಇದಕ್ಕೆ ತೀವ್ರಗತಿಯಿಂದ ಕೆಲಸ ಮಾಡುವ ಉಪಕರಣಗಳು ಅವಶ್ಯ. ಬೀಜ ಮತ್ತು ಗೊಬ್ಬರಗಳನ್ನು ಒಮ್ಮೆಲೆ ಬಿತ್ತುವ ಯಂತ್ರ ಚಾಲಿತ ಉಪಕರಣಗಳನ್ನು ಉಪಯೋಗಿಸುವದು ಸೂಕ್ತ. ಈ ಪ್ರದೇಶದಲ್ಲಿ ಉಳಿದ ಪ್ರದೇಶಗಳಿಗಿಂತ ರೈತರ ಹಿಡುವಳಿಗಳು ದೊಡ್ಡದಿರವುದರಿಂದ ಇದು ಸಾಧ್ಯ.

ಶೀವ್ರ ಬೇಸಾಯುವನ್ನು ಸಾಧಿಸಲು ಬೀಜ ಮತ್ತು ಗೊಬ್ಬರಗಳನ್ನು ಒಮ್ಮೆಲೇ ಭೂಮಿಯಲ್ಲಿ ಬಿಡುವ ಯಂತ್ರೋಪಕರಣಗಳನ್ನು ಉಪಯೋಗಿಸಬಹುದು. ಇದರಂತೆ ಒಕ್ಕುವ ಯಂತ್ರ ಸಲಕರಣಗಳು ಕೂಡಾ ಸಹಾಯಕವಾಗಿವೆ.

ಲಾಭದಾಯಕ ಹೊಸ ಬೆಳೆಗಳನ್ನು ಬೆಳೆಯುವದು

ಕಪ್ಪು ಭೂಮಿಯಲ್ಲಿ ಪ್ರಚಲಿತವಿರುವ ಬೆಳೆಗಳಲ್ಲಿ ಗೋದಿ ಬೆಳೆಯುವದು ಲಾಭದಾಯಕವಲ್ಲವೆಂದು ಕಂಡು ಬಂದಿದೆ ಮತ್ತು ಕುಸುಮ ಬೆಳೆಯುವದು ಲಾಭದಾಯಕ. ಜೋಳ, ಕಡಲೆ ಬೆಳೆಗಳು ಉಪಯುಕ್ತವೆಂದು ಕಂಡುಬಂದಿದೆ. ಕೆಂಪು ಭೂಮಿಗಳಲ್ಲಿ ಸೇಂಗಾ ಬೆಳೆಯುವದು ಲಾಭದಾಯಕವಲ್ಲ. ಇದರ ಬದಲು ಸೂರ್ಯಕಾಂತಿ ಬೆಳೆ ಹೆಚ್ಚು ಉಪಯುಕ್ತವೆಂದು ಕಂಡುಬಂದಿದೆ. ಹಕ್ಕಲು ಮತ್ತು ಬಡ ಭೂಮಿಯಲ್ಲಿ ಔಡಲ ಬೆಳೆ ಉಪಯುಕ್ತವೆಂದು ಕಂಡು ಬಂದಿದೆ. ದ್ವಿದಳ ಧಾನ್ಯಗಳಲ್ಲಿ ಅಲ್ಪಾವಧಿಯ ಅಲಸಂದಿ, ತೊಗರಿ ಮತ್ತು ಹುರುಳಿ ಉಪಯುಕ್ತವೆಂದು ಕಂಡುಬಂದಿದೆ. ಇದಲ್ಲದೆ, ಈ ಬೆಳೆಗಳಲ್ಲಿ ಅಭಾವ ಪರಿಸ್ಥಿತಿಯನ್ನು ಎದುರಿಸುವ ಶಕ್ತಿ ಕೂಡಾ ಇದೆ.

ಸಾಂದ್ರ ಬೇಸಾಯ

ಸುಧಾರಿತ ಎಲ್ಲ ಕ್ರಮಗಳನ್ನು ಅಳಡಿಸಿದ ಬೇಸಾಯ ಮಾಡುವಿದೇ ಸಾಂದ್ರ ಬೇಸಾಯ. ಇದು ಮಣ್ಣಿನ ಹಸಿ ಕಾಯ್ದುಕೊಂಡು ಹೋಗುವದರಿಂದ, ಬೆಳೆ ಕಟಾವಿಗೆ ಬರುವವರೆಗೂ ತೆಗೆದುಕೊಳ್ಳಬೇಕಾದ ಅವಶ್ಯ ಕ್ರಮ. ಇದರಲ್ಲಿ ಸುಧಾರಿಸಿದ ಬೇಸಾಯದ ರಾಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಿಕೆಗಳ ಉಪಯೋಗ, ಸಮಯೋಜಿತ ಸಾಗುವಳಿ ಕ್ರಮಗಳು, ಮುಂತಾದವುಗಳು ಸಮಾವೇಶವಾಗಿವೆ. ಈ ಎಲ್ಲ ಕ್ರಮಗಳನ್ನು ಅನುಸರಿಸಿದಲ್ಲಿ, ಸಧ್ಯದ ಇಳುವರಿಯಲ್ಲಿ 2–3 ಪಟ್ಟು ಹೆಚ್ಚಿಗೆ ಇಳುವರಿ ಪಡೆಯಬಹುದೆಂದು ರೈತರ ಜಮೀನಿನಲ್ಲಿ ನಡೆಸಿದ ಅಭ್ಯಾಸಗಳಿಂದ ಕಂಡು ಬಂದಿದೆ. ಕಾರಣ, ಖುಷ್ಕಿ ಜಮೀನುಗಳಲ್ಲಿ ಬೆಳೆಗಳ ಇಳುವರಿಯನ್ನು ಹೆಚ್ಚಿಸಬೇಕಾದರೆ ಇದು ಅವಶ್ಯವಾಗಿ ತೆಗೆದುಕೊಳ್ಳಬೇಕಾದ ಮುಖ್ಯ ಕ್ರಮ.

ಮೇವಿನ ಬೆಳೆಗಳು

ಖುಷ್ಕಿ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಜಾನುವಾರುಗಳನ್ನು ಬೆಳೆಸುವದು, ಹಾಲು ಮತ್ತು ಹೈನದ ಅಧಿಕ ಉತ್ಪಾಧನೆ ಒಂದು ಮುಖ್ಯ ಅಂಗವಾಗಿದೆ. ಈ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಮೇವಿನ ಬೆಳೆಯನ್ನು ಹೆಚ್ಚಿಸುವದು ಅವಶ್ಯ.

ಮಿಶ್ರ ಬೆಲೆ ಮತ್ತು ಮಿಶ್ರ ಬೇಸಾಯ

ಮಿಶ್ರ 'ಬೆಳೆಗಳನ್ನು ಬೆಳೆಯುವದು ಸಾಮಾನ್ಯವಾದ ರೂಢಿಯಲ್ಲಿದೆ. ಮುಂಗಾರಿ ನಲ್ಲಾಗಲೀ ಇಲ್ಲವೆ ಹಿಂಗಾರಿನಲ್ಲಾಗಲೀ, ತೃಣ ಧಾನ್ಯಗಳ ಬೆಳೆಗಳೊಂದಿಗೆ ದ್ವಿದಳಧಾನ್ಯಗಳ ಇಲ್ಲವೇ ಎಣ್ಣೀ ಕಾಳುಗಳ ಮಿಶ್ರ ಬೆಳೆ ಬೆಳೆಯುವದು ರೂಡಿಯಲ್ಲಿದೆ. ಅದರೆ ಇತ್ತೀಚಿನ ಸಂಶೋಧನೆಯಿಂದ, ಆದಾಯದ ದೃಷ್ಟಿಯಿಂದ ಮಿಶ್ರ ಬೆಳೆಯಿಂದ ಹೆಚ್ಚು ಲಾಭದಾಯಕವಿಲ್ಲ, ಆದರೆ, ಅಭಾವ ಪರಿಸ್ಥಿತಿ ಮೂಲಕ ಒಂದು ಬೆಳೆ ಬರದೆ ಹೋದರೆ ಮತ್ತೊಂದು ಬೆಳೆ ಬರಬಹುದೆಂಬ ದೃಷ್ಟಿಯಿಂದ ಮತ್ತು ಮನೆಯ ಉಪಯೋಗಕ್ಕೆ ತೃಣ ಧಾನ್ಯಗಳ, ಬೇಳೆಕಾಳುಗಳ ಮತ್ತು ಎಣ್ಣೀಕಾಳುಗಳ ಪೂರೈಕೆಯ ದೃಷ್ಟಿಯಿಂದ, ಮಿಶ್ರ ಬೆಳೆ ಪದ್ಧತಿಯು ಹೆಚ್ಚು ಉಪಯುಕ್ತವೆಂದು ಕಂಡುಬಂದಿದೆ.

ಮಿಶ್ರ ಬೇಸಾಯದಲ್ಲಿ, ಬೆಳೆಗಳ ಮತ್ತು ಜಾನುವಾರುಗಳ ಅಭಿವೃದ್ಧಿ ಎರಡೂ ಅಡಕವಾಗಿವೆ. ಇದರಲ್ಲಿ, ಹಾಲು ಹೈನದ ಅಭಿವೃದ್ಧಿ, ಕೋಳಿ ಸಾಕಣಿಕೆ ಮೊದಲಾದವುಗಳು ಸಮಾವೇಶವಾಗಿವೆ. ಖುಷ್ಕಿ ಪ್ರದೇಶದಲ್ಲಿ ಮಿಶ್ರ ಬೇಸಾಯವು ಮೊದಲಿನಿಂದಲೂ ವಂಶಪರಂಕಿರೆಯಿಂದ ಬಂದಿದ್ದರೂ, ಇತ್ತೀಚೆಗೆ ಕೇದಲ ಬೆಳೆಯ ಅಭಿವೃದ್ಧಿಗೆ ಮಾತ್ರ ಲಕ್ಷ ಕೊಟ್ಟು ಜಾನುವಾರುಗಳ ಅಭಿವೃದ್ಧಿ ಕಡೆಗೆ ಹೆಚ್ಚು ಗಮನ ಕೊಟ್ಟಿರುವುದಿಲ್ಲ. ರೈತರ ಆದಾಯ ಹೆಚ್ಚಿಸುವ ಮತ್ತು ಪೌಷ್ಠಿಕ ಆಹಾರವನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುವ ದೃಷ್ಟಿಯಿಂದ, ಈ ಭಾಗದಲ್ಲಿ ಹೈನ, ಹಾಲು, ತತ್ತಿ, ಮುಂತಾದ ವಸ್ತುಗಳ ಅಧಿಕ ಉತ್ಪಾದನೆಯ ಕಡೆಗೆ ಹೆಚ್ಚು ಗಮನ ಕೊಡುವದು ಅವಶ್ಯ.

ಹೆಚ್ಚು ಉದ್ಯೋಗವಕಾಶ

ಇದೀಗ ನಮ್ಮೆಲ್ಲರ ಗಮನ ಸೆಳೆದ ಒಂದು ವಿಷಯುವೆಂದರೆ, ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಉದ್ಯೋಗವಕಾಶ ಕಲ್ಪಿಸಿಕೊಡುವದು. ಇದಕ್ಕಾಗಿ, ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗದ ಸಮಸ್ಯೆಗಳನ್ನು ಪರಿಹರಿಸುವದು ಅವಶ್ಯ. ಖುಷ್ಕಿ ಪ್ರದೇಶದಲ್ಲಾಗಲೀ ಇಲ್ಲವೆ ಇತರೇ ಪ್ರದೇಶಗಳಲ್ಲಾಗಲೀ, ಸಂಪೂರ್ಣ ನಿರುದ್ಯೋಗ ಪ್ರಸಂಗ ಅತಿ ಕಡಿಮೆ. ಇಲ್ಲವೆಂದೇ ಹೇಳಬಹುದು. ಆದರೆ ವರ್ಷಪೂರ್ತಿ ಪ್ರತಿ ದಿವಸ ಪೂರ್ಣ ಉದ್ಯೋಗವಕಾಶ ದೊರೆಯುವದು ಕಷ್ಟ ಸಾಧ್ಯ. ಅರೆ ಉದ್ಯೋಗ, ಇಲ್ಲವೆ ದಿನಂಪ್ರತಿ ಕೆಲವೇ ಘಂಟೆಗಳ ಉದ್ಯೋಗ, ಇಲ್ಲವೆ ವರ್ಷಗಳಲ್ಲಿ ಕೆಲವು ದಿವಸಗಳಲ್ಲಿ ಉದ್ಯೋಗ ಇಲ್ಲದೇ ಇರುವ ಪ್ರಸಂಗಗಳಿವೆ. ಇಂಥ ಪರಿಸ್ಥಿತಿಯನ್ನು ಹೋಗಲಾಡಿಸುವದು ಅವಶ್ಯ. ಈ ಉದ್ದೇಶವನ್ನು ಇಟ್ಟುಕೊಂಡೆ, ಈ ಭಾಗದ ಬೇಸಾಯದ ಅಭಿವೃದ್ಧಿ ಸಾಧಿಸುವ ಗುರಿ ಇಟ್ಟುಕೊಳ್ಳಬೇಕು. ಈಗಾಗಲೇ ವಿವರಿಸಿದ ಸಂಗತಿಗಳನ್ನು ಲಕ್ಷದಲ್ಲಿಟ್ಟುಕೊಂಡು ಪ್ರತಿ ಒಂದು ರೈತ ಕುಟುಂಬಕ್ಕೆ ಮತ್ತು ಅವರ ಮೇಲೆ ಅವಲಂಬಿಸಿರುವ ಕೂಲಿ ಜನರಿಗೆ ವರ್ಷದಾದ್ಯಂತ ಸಂಪೂರ್ಣ ಉದ್ಯೋಗ ದೊರೆಯಲು ಸಹಾಯಕವಾಗುವಂತೆ, ಪ್ರತಿ ರೈತರ ಇಡಿ ಹಿಡುವಳಿ (Farm Plan) ಉತ್ಪಾಧನಾ ಯೋಜನೆಯನ್ನು ತಯಾರಿಸುವದರಿಂದ ಈ ಗುರಿಯನ್ನು ಸಾಧಿಸಬಹುದು.

ಜನಪದ ಸಾಹಿತ್ಯ ಶಿಕ್ಷಣ–ಕೆಲವು ವಿಚಾರಗಳು

ನಾಗರೀಕತೆಯ ಬೊಬ್ಬೆಯಲ್ಲಿ ಅಳಿದು ಹೋಗುತ್ತಿರುವ ಅಮೂಲ್ಯವಾದ ಜನಪದ ಸಾಹಿತ್ಯವನ್ನು ಇಂದು ಜನಪದ ಸಾಹಿತ್ಯಪ್ರಿಯರು ವಿಶೇಷವಾಗಿ ಆಸೆಯಿಂದ ಸಂಗ್ರಹಿಸಿ ಪ್ರಕಟಸುತ್ತಿದ್ದಾರಷ್ಟೆ. ಇದು ಮೆಚ್ಚಬೇಕಾದ ವಿಷಯವೆ ಸರಿ. ಕನ್ನಡ ಜನತೆಯ ಸಂಸ್ಕೃತಿಯನ್ನು, ಜನತೆಯ ಆಸೆ ಆಕಾಂಕ್ಷೆಗಳನ್ನು ಸರಳ ಸಾಹಿತ್ಯ ರೂಪದಲ್ಲಿ ಚಿತ್ತರಿಸುವ ಜನಪದ

(20 ಪುಟದಿಂದ ಮುಂದುವರೆದಿದೆ)

ಮಕ್ಕಳೇ ! 'ಮಂಕುತಿಮ್ಮ' ಹೇಳಿದ್ದೇನು ?

—ಡಿ. ಚಂದ್ರಪ್ಪ, ಎಂ. ಎ.

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ ‖
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ।
ಯಿಗೆ ನೀನು ಬೇಡಿರೊಳೆ — ಮಂಕುತಿಮ್ಮ‖

ಈ ಕಗ್ಗವನ್ನು ಹಾಡಿದಾಗ ನಿಮಗೆ ಒಂದು ಸಿನೇಮಾ ಗೀತೆಯು ನೆನಪಿಗೆ ಬರುತ್ತದೆ. ರಾಜ್ ಅಭಿನಯ್ಕ ಶ್ರೀನಿವಾಸ್ ಹಾಡಿದ್ದು "ನಗು ನಗು ನಲಿ ನಲೀ, ಏನೇ ಆಗಲಿ"— ಹೌದು, ಇದು ನಿಜ, ಇದು ಸುಖ. ನಾಳೆ ದುಃಖ. ಸುಖ ದುಃಖಗಳ ಸಮ್ಮಿಲನವೇ ಜೀವನ. ಇಂತಿರಲು ಸುಖಬಂದಾಗ ಮರೆಯುವುದೇಕೆ ? ದುಃಖವೊದಗಿದಾಗ ಕೊರಗುವುದೇಕೆ ? ಅಗತ್ಯವಿಲ್ಲ', ಎರಡನ್ನೂ ಏಕದೃಷ್ಟಿಯಿಂದ ಕಾಣುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ದುಃಖದ ಪರಿಚಯವಿಲ್ಲದೆ ಸುಖದ ಅರಿವು ಉಂಟಾಗಲಾರದು. ಕಷ್ಟಗಳು ಎದುರಾದಾಗ ಅವುಗಳನ್ನೇ ಎದುರಿಸಿ ನಿಲ್ಲುವ ಧೈರ್ಯ ಹೊಂದಬೇಕು. ಪುರಂದರವಾಣಿಯಂತೆ ಈಸಬೇಕು ಇದ್ದು ಜೈಸಬೇಕು. ಜೀವನದಲ್ಲಿ ಜೈಸಬೇಕಾದರೆ ಬದುಕಿನಲ್ಲಿ ಉತ್ಸಾಹವಿರಬೇಕು. ಉತ್ಸಾಹವಿದ್ದ ಮನುಷ್ಯ ಯಾವಾಗಲೂ ಲವಲವಿಕೆಯೂ ನಮ್ಮ ಜೀವನದ ನವ ಚೈತನ್ಯ. ಯಾವಾಗಲೂ ಹಸನ್ಮುಖಿ. ಅವನಿಗೆ ಆನಂದದ ಲಹರಿಯಲ್ಲಿ ತೇಲುತ್ತಾ ಕಷ್ಟಗಳ ಕಹಿಯನ್ನೂ ಸುಲಭವಾಗಿ ಸ್ವೀಕರಿಸುತ್ತಾನೆ ಅಥವಾ ಮರೆತು ಬಿಡುತ್ತಾನೆ. ಅವನಿಗೆ ಜೀವನವೆಲ್ಲಾ ವಸಂತಮಾಸ. ಸುವಾಸನಾಮಯ. ಇಂತಹ ಆನಂದಮಯವಾದ ಜೀವನವನ್ನು ನಗುನಗುತ್ತಾ ಕಳೆಯುತ್ತಾ, ಬೇರೆಯವರು ನಗುತ್ತಾ ಕಳೆಯುವಂತೆ ಮಾಡಿದರೆ ಅದು 'ಚಂದ್ರೋದಯದಂತೆ ಆಹ್ಲಾದಕರವಲ್ಲವೇ ? ಈ ರೀತಿ ಬಾಳಿದರೆ ಬಾಳ ಮತ್ತೊಬ್ಬರಿಗೆ ಆದರ್ಶವಾಗುವುದಿಲ್ಲವೆ ? ಆದ್ದರಿಂದ ನೀವೊಂದು ಸಲ ನಕ್ಕು ನನ್ನನ್ನೂ ನಗಿಸಿ. ನಾವು ಜೀವನದಲ್ಲಿ ನಗುನಗುತ್ತಾ ಇದ್ದರೆ ಮಲ್ಲಿಗೆ ಹರಳಿದಂತೆ ಸುಂದರ. ಇಂತಿರುವಂತೆ ವರವೊಂದನ್ನು ದೇವರಲ್ಲಿ ಬೇಡುವೆ ಎನ್ನುತ್ತಾನೆ ಮಂಕುತಿಮ್ಮ.

—oOo—

ಜನಪದಸಾಹಿತ್ಯ ಶಿಕ್ಷಣ– ಕೆಲವು ವಿಚಾರಗಳು. (19ನೆಯ ಪುಟದಿಂದ ಮುಂದುವರಿದಿದೆ)

ಸಾಹಿತ್ಯ ಸಂಗ್ರಹಣೆಯ ಕಾರ್ಯ ಅತ್ಯಂತ ಮಹತ್ತರವಾದದ್ದು. ಹಿಂದಿನ ಕವಿಗಳು ಮತ್ತು ಪಂಡಿತಪಾಮರರಿಂದ (ಕೆಲವರನ್ನು ಬಿಟ್ಟು) ನಿರ್ಲಕ್ಷಿಸಲ್ಪಟ್ಟ ಜನಪದ ಸಾಹಿತ್ಯದ ಬಗ್ಗೆ ಈಗ ಎಲ್ಲರೂ ಆಸ್ತೆಯನ್ನು ವಹಿಸುತ್ತಿದ್ದಾರೆ. (ಜನಪದ ಸಂಸ್ಕೃತಿಯ ಒಂದು ಮುಖ)

ಈಚಿನ ಕೆಲವು ವರ್ಷಗಳಿಂದ ಕರ್ನಾಟಕದ ಮೂರು ವಿಶ್ವವಿದ್ಯಾಲಯಗಳಲ್ಲಿ ಜನಪದ ಸಾಹಿತ್ಯವನ್ನು ಕನ್ನಡ ಎಂ. ಎ. ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯವನ್ನಾಗಿ ಇಟ್ಟು ಜನಪದ ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹವನ್ನು ಕೊಡುತ್ತಿದೆ: ಅಲ್ಲದೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ಒಂದು ಅತ್ಯುತ್ತಮವಾದ ಜನಪದ ವಸ್ತು ಸಂಗ್ರಹಾಲಯವನ್ನು ಮಾಡಿದೆ. ಈಗೀಗ ಕನ್ನಡ ಎಂ. ಎ. ತರಗತಿಯಲ್ಲಿ ಜನಪದಸಾಹಿತ್ಯವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳಲು ಅನೇಕ ವಿದ್ಯಾರ್ಥಿಗಳು ಉತ್ಸಾಹದಿಂದ ಮುಂದೆ ಬರುತ್ತಿದ್ದಾರೆ. ಇವೆಲ್ಲವೂ ಜನಪದ ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಇತರರಿಗೆ ಇರುವ ಶ್ರದ್ಧಾಸಕ್ತಿಗಳನ್ನು ತೋರಿಸುತ್ತದೆ.

(ಮುಂದುವರೆಯುವುದು)

ಸೀನ ಸಾಹಿತಿ

—ಬಿ. ಶಾಮಸುಂದರ

ಸೀನ ಸೀರಿಯಸ್ಸಾಗಿ ತನ್ನ ಕಾದಂಬರಿಗೆ ಹೊಸ ವಸ್ತುವನ್ನು ಅರಸುತ್ತಿದ್ದ. ಎಷ್ಟು ಹುಡುಕಿದರೂ ಅವನ ಕನ್ನಡಕ ಹಾಕಿದ ಕಣ್ಣಿಗೆ ಹೊಸತು ಒಲಿಳುವ ಬದಲು ಹಳತೇ ಕಾಣುತ್ತಿತ್ತು. ಇದೇನು ನನ್ನ ಕನ್ನಡಕದ ದೋಷವೇ ಅಥವಾ ನನ್ನ ಕಣ್ಣಿನದೆ ಎಂಬ ಅನುಮಾನ ಸೀನನಿಗೆ ಬಂದು-ವೈದ್ಯರ ಹತ್ತಿರ ತನ್ನ ಕಣ್ಣು ಮತ್ತು ಕನ್ನಡಕ ಎರಡನ್ನೂ ಪರೀಕ್ಷಿಸಿದ. ಅವುಗಳಲ್ಲಿ ದೋಷವಿಲ್ಲವೆಂದು ತಿಳಿದ ಮೇಲೆ, ತನ್ನ ಬುದ್ಧಿ ಮತ್ತು ಮನಸ್ಸಿನ ಸ್ವಾಸ್ಥ್ಯಯ ಮೇಲೆ ಅನುಮಾನ ಬಂತು. ಮನಸ್ಸಿನ ಕೊರಗನ್ನು ಮುಚ್ಚಿಡಲಾರದೆ ಒದ್ದಾಡಲಾರಂಭಿಸಿದ. ಮನೆಯವರಿಗೆ ಹೆದರಿಕೆಯಾಗಿ ಅವನನ್ನು ಹತ್ತಿರದ ಹುಚ್ಚರಾಸ್ಪತ್ರೆಗೆ ತೋರಿಸಿದರು. ಅಲ್ಲಿಯೂ ಅವನಿಗೆ ಜಾಗ ದೊರೆಯಲಿಲ್ಲ. ನಿಮ್ಮ ಹುಡುಗ ಜಾಣ ಅವನ ಮೆದುಳು ಕೆಟ್ಟಿಲ್ಲ, ಎಂದು ಪರೀಕ್ಷಿಸಿದ ವೈದ್ಯರು ಹೇಳಿದ ಮೇಲೆ ಸೀನನಿಗೂ ಅವನ ತಂದೆಗೂ ಸಂತೋಷವಾಯಿತು. ಆದರೂ ತನ್ನ ಮನಸ್ಸಿನ ದೋಷ ತಿಳಿಯಬೇಕೆಂದು ಅವನ ಇಚ್ಛೆಯಾಯಿತು. ಹೆಸರಾಂತ ಮನಶ್ಶಾಸ್ತ್ರ ವೈದ್ಯರ ಹತ್ತಿರ ಸೀನನ ಪರೀಕ್ಷೆಯಾಯಿತು. ಸೀನನ ಸಾಹಿತ್ಯ ಪ್ರೇಮ ವೈದ್ಯರಿಗೆ ತಿಳಿದು "ಸೀನನ ಮನಸ್ಸು ಸಾಹಿತಿಯ ಮನಸ್ಸು" ಎಂದು ವೈದ್ಯರು ಹೇಳಿದಾಗ ಸೀನನಿಗೆ ಸ್ವರ್ಗ ಮೂರೇ ಗೇಣು. ಮನೆಗೆ ಬಂದವನೇ ಸೀನ ಇನ್ನೂ ಸೀರಿಯಸ್ಸಾದ. ತಲೆ ಗಡ್ಡ ಬೆಳೆಸಿದ, ಹೊಸದಾಗಿ ಪೈಜಾಮ ಜುಬ್ಬ ಹೊಲಿಸಿದ. ಇಲ್ಲಿಗೆ ನಾನು ಸಾಹಿತಿಯಾದೆ ಎಂದು ಅವನ ಮನಸ್ಸು ಸ್ತಿಮಿತಕ್ಕೆ ಬಂತು. ಮನೆಯವರು ಸರಾಗವಾಗಿ ಉಸಿರಾಡಿದರು. ಅಕ್ಕಪಕ್ಕದವರು 'ಅಯ್ಯೋಪಾಪ, ಕೆಲಸ ಸಿಕ್ಕದೆ ಹುಡುಗ ಒಂದು ತರಹ ಆಗ್ಬಿಟ್ಟ' ಎಂದುಕೊಂಡರು. ಕನ್ನಡ ಸಂಘಕ್ಕೆ ಹೋಗಿ ಸೀನ ತನ್ನ ಹೆಸರನ್ನು ಸೀನ ಸಾಹಿತಿ ಎಂದು ಬರೆದು ದಾಖಲಾದ. ಯಾರಾದರೂ ಏನಪ್ಪ ಸಾಹಿತಿ ಎಂದರೆ ಉಬ್ಬಿ ಹೋಗುತ್ತಿದ್ದ. ಬೀದಿ ಮಕ್ಕಳು ಸೀನ ಸಾಹಿತಿ ಎಂದು ಹೇಳಲು ಬಾರದೆ ಸೀನ ಸತ್ತಿ ಎಂದು ಹೇಳುತ್ತಿದ್ದರೂ ಸೀನನಿಗೆ ಸಂತೋಷವೇ ಆಗುತ್ತಿತ್ತು. ಅವನ ತಂಗಿ ಒಂದು ದಿನ 'ಅಣ್ಣ ಏಕೋ ಸುಮ್ನೆ ಬರೀತೀಯ–ಯಾವ ಪತ್ರಿಕೆಯವರೂ ನೀನು ಬರೆದದ್ದನ್ನು ಪ್ರಕಟಿಸರು" ಎಂದರೆ, ಸೀನ ಸಾಹಿತಿ ತನ್ನ ಸಾಹಿತ್ಯದ ಬಗ್ಗೆ ಒಂದು ಭಾಷಣವನ್ನೇ ಬಿಗಿಯುತ್ತಿದ್ದ "ನಿನಗ್ಗೊತ್ತಿಲ್ಲ, ಈ ಜಗತ್ತು ಈ ಪತ್ರಿಕೆಯವರು ಎಂಥವರು ಅಂಥ. ಈಗ ಬೇಡ, ಬೇಡ ಅಂಥಾರೆ, ಮುಂದೆ ನಮಗೆ ಕೊಡಿ, ಕೊಡಿ ಅಂಥಾರೆ. ಎಲ್ಲಾ ಸಾಹಿತಿಗಳ ಮೊದಲಂಕ ಹೀಗೇ ಕಣೆ, ನಿನಗೆ ಗೊತ್ತಿಲ್ವ ಮಹಾಕವಿಯೊಬ್ಬ ಸ್ಕೂಲ್‌ನಲ್ಲಿ ಡ್ರಿಲ್‌ಮಾಸ್ಟರ್ ಆಗಿದ್ದುದು. ಕೆಲವು ಹೆಸರಾಂತ ಕವಿಗಳು, ಸಾಹಿತಿಗಳು. ಸ್ಕೂಲ್ ನಲ್ಲಿ ಉಪಾಧ್ಯಾಯರಾಗಿಯೋ, ಗುಮಾಸ್ತರಾಗಿಯೋ ಜೀವನ ಸಾಗಿಸಿದ್ದು. ನೋಡ್ತಿರು, ನಂಗೂ ಒಂದು ಕಾಲ ಬಂದೇ ಬರುತ್ತೆ. ಎಲ್ಲಾ ಪತ್ರಿಕೇಲೂ ನನ್ನ ಫೋಟೋ, ನನ್ನ ಲೇಖನ, ಕಥೆ ತುಂಬಿರುತ್ತವೆ. ಎಲ್ಲಾ ಸಂಘಸಂಸ್ಥೆಯವರು ನನ್ನ ಅಧ್ಯಕ್ಷರಾಗಿ, ಬನ್ನಿ ಅಂತ ಗೋಗರಿತಾರೆ, ಅವರೆಲ್ಲ ಕಾರು ತಂದು ನನ್ನ ಕರ್ಕೊಂಡು ಹೋಗ್ತಾರೆ. ಹಾಗೇ ನನ್ನ ಮೇಲೆ ಅನೇಕ ಲೇಖನಗಳನ್ನು ಮರಿ–ಕಿರಿ ಸಾಹಿತಿಗಳು ಬರೀತಾರೆ. ನಾನು ಮಾಡಿದ ಭಾಷಣಗಳೂ, ನನ್ನ ಭಾವಚಿತ್ರ ಎಲ್ಲಾ ಪತ್ರಿಕೇಲೆ ಬರುತ್ತವೆ. ನಗಬೇಡ, ಮೊದಲು ರಾಜ್ಯಪುರಸ್ಕಾರ, ಅನಂತರ ರಾಷ್ಟ್ರ ಪುರಸ್ಕಾರ ಎನ್ನುತ್ತಿದ್ದ.

ಸೀನ ಸಾಹಿತಿಯ ಲೇಖನಗಳನ್ನು ಓದಿ ಬೇಸರಗೊಂಡಿದ್ದ ಒಂದು ಪತ್ರಿಕೆಯ ಸಂಪಾದಕರು ಸೀನ ಸಾಹಿತಿಯ ಕಥೆಯೊಂದನ್ನು ವಾಪಸ್ಸು ಕಳಿಸಿ–ಜೊತೆ

ಯಲ್ಲಿ 'ಸಾಹಿತಿಗಳೇ ನೀವು ಇನ್ನೂ ಅಭ್ಯಾಸ-ಅಧ್ಯಯನ ಮಾಡಬೇಕಾಗಿದೆ' ಎಂದು ಸೂಚಿಸಿದ್ದರು. ಸೀನ ಸಾಹಿತಿಗೆ ತನ್ನ ಲೇಖನ ವಾಪಸ್ಸು ಬಂದದ್ದಕ್ಕೆ ಯೋಚನೆ ಆಗಲಿಲ್ಲ. ಆದರೆ ಅವನ ತಾಯಿಗೆ ಯೋಚನೆ ಬಂತು. ಮತ್ತೆ ಆ ಕಥೆಯನ್ನು ಪತ್ರಿಕೆಗೆ ಕಳಿಸಲು ಅಂಚೆ ಖರ್ಚಿಗೆ ಹಣ ತೆರಬೇಕಲ್ಲ ಎಂದು. ಸಂಪಾದಕರ ಮಾತನ್ನು ಸೀನ ಸಾಹಿತಿ ಕೃತಿಗೆ ಇಳಿಸಿಯೇಬಿಟ್ಟ. ಅಧ್ಯಯನ–ಅಭ್ಯಾಸ ಶುರು ಮಾಡಿದ. ಸಾರ್ವಜನಿಕ ಗ್ರಂಥಾಲಯಕ್ಕೆ ಸದಸ್ಯನಾದ. ಅಲ್ಲಿ ದೊರಕುವ ಕಾದಂಬರಿಗಳನ್ನು ಓದಲು ಶುರುಮಾಡಿದ. ಹೊಸ ಪುಸ್ತಕಗಳನ್ನು ಕೊಳ್ಳಲು ಬಿಳಿಪೇಪರ್, ಶಾಯಿ, ಗ್ರಂಥಾಲಯದ ಸದಸ್ಯ ಶುಲ್ಕ ಇತ್ಯಾದಿಗೆ ಅವನ ತಂದೆ ತಮ್ಮ ತಿಂಗಳ ಬಜೆಟ್ಟಿನಲ್ಲಿ "ಸಾಹಿತಿಯ ಖರ್ಚು" ಎಂದು ಹೊಸದಾಗಿ ಸೇರಿಸಿಕೊಳ್ಳಬೇಕಾಯಿತು.

ತನ್ನ ಕಥೆಗೆ ಹೊಸ ವಿಷಯ ಹುಡುಕುವುದರಲ್ಲೇ ಸೀನಸಾಹಿತಿಗೆ ಕಾಲ ಕಳೆದು ಹೋಗುತ್ತಿತ್ತು. ಯಾವುದನ್ನು ಬರೆದರೂ ಅದು ಎಲ್ಲೊ ಒಂದೆಡೆ ಒಂದು ರೂಪದಲ್ಲಿ ಬಂದು ಇರುತ್ತಿತ್ತು. ಈ ಜಗತ್ತಿನಲ್ಲಿರುವುದೆಲ್ಲ ಹಳತೇ, ಹೊಸದೆನ್ನುವುದೆಲ್ಲ ಹಳತಿನ ವಿವಿಧರೂಪ ಎಂಬ ಸತ್ಯಸಂಗತಿ ಸೀನ ಸಾಹಿತಿಗೆ ಮನದಟ್ಟಾಯಿತು. ಬೇರೇನೂ ಹೊಳೆಯದೆ ಪತ್ತೇದಾರಿ ಕಾದಂಬರಿ ಬರೆಯಲು ಮನಸ್ಸು ಮಾಡಿದ. ಹತ್ತಾರು ಹಳೆಯ ಪತ್ತೇದಾರಿ ಪುಸ್ತಕಗಳನ್ನು ಓದಿದ. ಅವುಗಳಿಂದ ವಿಷಯ ಕಾಫಿ ಹೊಡೆದ-ಅನ್ನುವುದಕ್ಕಿಂತ ವಿಷಯ ಸಂಗ್ರಹಿಸಿದ ಅನ್ನೋಣ. ಹೀಗೆ ಅವನ ಸಂಗ್ರಹಣ ಮೂರು ವಾರಗಳ ಕಾಲ ನಡೆಯಿತು. ಆದರೆ ಅವನ ಶಕ್ತಿಗೆ ಮೀರಿ ಸಂಗ್ರಹಣೆ ಒಂದು ಕಥೆಯಾಗುವಷ್ಟಾಯಿತು. ಪ್ರತಿ ದಿನ ಅರ್ಧರಾತ್ರಿಯುವರೆಗೂ ಕುಳಿತು ಬರೆದು, ತಿದ್ದಿ, ವಾರದ ಕೊನೆಯಲ್ಲಿ ಒಂದು ಪತ್ತೇದಾರಿ ಕಥೆ ಬರೆದು 'ಸುಂದರಿ ಕಮಲಳ ಭಯಂಕರ ಕೊಲೆ' ಎಂದು ಹೆಸರಿಟ್ಟ. ಅವನ ತಾಯಿಗೆ ಬಂತು ಪೀಕಲಾಟ. ಅವನ ಕಥೆ ಮುಗಿಯಿತು ಅಂದರೆ ಟಪಾಲಿಗೆ ಹಣ ಹೊಂಚಬೇಕಾಗುತ್ತಿತ್ತು. ಈ ಸಾರಿ ಎಷ್ಟಾಗುತ್ತದೋ 10-12 ಪುಟ ಬರೆದಿದ್ದಾನೆ. ತೂಕ ಎಷ್ಟು ಬರುವುದೋ ಎಂದು ಹೆದರಿದರು. ಕೊನೆಗೂ ರಿಜಿಸ್ಟರ್ ಪೋಸ್ಟ್ ಮುಖಾಂತರ ಪ್ರಸಿದ್ಧ ದಿನಪತ್ರಿಕೆಗೆ ಸೀನ ತನ್ನ ಕಥೆಯನ್ನು ಕಳಿಸಿದ. ಒಂದ ವಾರದನಂತರ ಪತ್ರಿಕೆಯ ಸಂಪಾದಕರಿಂದ 'ಕಥೆ ಪ್ರಕಟಿಸುತ್ತೇವೆ' ಎಂದು ಕಾಗದ ಬಂದ ತಕ್ಷಣ ಸೀನ ಸಾಹಿತಿಗೆ ಸಂತೋಷ ಹೇಳತೀರದಾಯಿತು. ತನ್ನ ತಾಯಿಗೆ ಸಂಪಾದಕರ ಪತ್ರ ತೋರಿಸಿದ. ಇಷ್ಟು ವರ್ಷದ ತಮ್ಮ ಶ್ರಮವೆಚ್ಚ ಸಾರ್ಥಕವಾಯಿತು ಎಂದು ಸಂತೋಷಪಟ್ಟರು–ಸೀನನ ತಂದೆ. ತಮ್ಮ ಮಗ ನಿಜವಾಗಿ ಸಾಹಿತಿಯಾಗಿಯೇ ಬಿಟ್ಟ ಎಂದು ತಮ್ಮ ನೆಂಟರಿಷ್ಟರಿಂದ ಹಿಡಿದು–ಗುರುತು ಕಂಡವರಿಗೆಲ್ಲಾ ಸೀನನ ತಾಯಿ ಸುದ್ದಿ ತಿಳಿಸಿದರು. ಪತ್ರಿಕೆಯಲ್ಲಿ ಬರುವುದಕ್ಕೆ ಮೊದಲೇ ಸೀನಸಾಹಿತಿಯ ಕಥೆ ಪ್ರಚಾರ ಸಾಕಷ್ಟು ನಡೆಯಿತು. ವಾರದ ವಿಭಾಗದಲ್ಲಿ ಸೀನ ಸಾಹಿತಿಯ ಕಥೆ ಪತ್ರಿಕೆಯಲ್ಲಿ ಪ್ರಕಟವಾಯಿತು. ಸೀನಸಾಹಿತಿ ಇನ್ನು ತನಗೆ ಬಹುಮಾನಗಳ ಸುರಿಮಳೆ ಎಂದು ಮನಸ್ಸಿನಲ್ಲೇ ಹಿಗ್ಗಿದ. ಮುಖದಲ್ಲಿ ಗಂಭೀರತೆ ಬಂದು ಕುಳಿತಿತು. ರಸ್ತೆಯಲ್ಲಿ ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೆ ಎಂದುಕೊಂಡು ಸೀನ ಸಾಹಿತಿ ಓಡಾಡಹತ್ತಿದ.

ಆಗ ತಾನೆ ಒಂದು ಕೊಲೆಯಾಗಿತ್ತು. ಕೊಲೆ ಪಾತಕರ ಪತ್ತೆ ತರದೂದಿನಲ್ಲಿ ಪೋಲೀಸರು ಓಡಾಡುತ್ತಿದ್ದರು. ಕೊಲೆಯಾದ ಮೂರನೆ ಡಿನ ಸೀನ ಸಾಹಿತಿಯ ಪತ್ತೇದಾರಿ 'ಕಥೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಕಥೆ ಓದಿದ ಇನ್ಸ್‌ಪೆಕ್ಟರ್‌ಗೆ ಕೊಲೆಯ ಸುಳಿವು ಸಿಕ್ಕಿದಂತೆ ಆಗಿ–ತಟ್ಟನೆ ತಮ್ಮ ಜೀಪಿನಲ್ಲಿ ಒಬ್ಬ ಪೊಲೀಸ್ ಪೇದೆಯನ್ನು ಕರೆದುಕೊಂಡು ಸೀನ ಸಾಹಿತಿ ಮನೆಗೆ ಬಂದರು. ಮನೆ ಮುಂದೆ ಜೀಪು ನಿಂತದ್ದು ಕಂಡ ಸೀನಸಾಹಿತಿ ಹೆಮ್ಮೆಯಿಂದ ತಂಗಿಗೆ ಹೇಳಿದ. "ನಾನು ಹೇಳಿರಲಿಲ್ಲವೆ, ಒಂದು ದಿನ ಜನ ಬಂದು ನನ್ನ ಕಾರ್ ಮೇಲೆ ಕರೆದುಕೊಂಡು ಹೋಗುತ್ತಾರೆ ಅಂತ, ನೋಡು ಯಾರೋ ಬಂದಿದ್ದಾರೆ. ಕೇಳಿದರೆ ನಾನು ಮೇಲೆ ಇದ್ದೀನಿ ಅಂತ ಹೇಳು ಅಂತ ಸೀನ ಮೇಲೆ ಹೋಗಿ ತನ್ನ ಜುಬ್ಬಾ ಪೈಜಾಮು ಸರಿಮಾಡಿಕೊಳ್ಳುತ್ತಿದ್ದ. ಸೀನ ಸಾಹಿತಿಯ ತಂಗಿ, ತಾಯಿ ಯಾರು ಇಳಿದು ಬರುತ್ತಾರೆ ಅಂತ ಆತುರದಿಂದ ನೋಡುತ್ತಿದ್ದರು ಜೀಪ್‌ನಿಂದ ಪೊಲೀಸ್ ಇನ್‌ಪೆಕ್ಟರ್ ಮತ್ತು ಒಬ್ಬ ಪೋಲೀಸ್ ಇಳಿದುದನ್ನು ಕುಡು ಬೆರಗಾದರೂ. ಎಲ್ಲೋ ಅವನನ್ನು ಪೊಲೀಸರ ಸಂಘದ ಭಾಷಣಕ್ಕೆ ಕರೆಯೋಕೆ ಬಂದಿರಬೇಕೆಂದು ತಿಳಿದ ಸೀನನ ತಾಯಿ ತಮ್ಮ ಮಗನ ಸಾಹಿತ್ಯ ಕೃಪಾವನ್ನ ಮನಸ್ಸಿನಲ್ಲೇ ಸಂತೋಷಪಡುತ್ತಿದ್ದರು. ಇನ್ಸ್‌ಪೆಕ್ಟರ್ ಒಳಗೆ ಬಂದವರೆ 'ಸೀನ ಸಾಹಿತಿ ಎನ್ನುವವರು ಇದ್ದಾರೆಯೆ' ಎಂದು ಕೇಳಿದರು. ಮೇಲಿದ್ದ ಸೀನ ತನ್ನ ಹೆಸರನ್ನು ಇನ್‌ಸ್ಪೆಕ್ಟರ್ ಹೇಳಿದ ತಕ್ಷಣ ಉಬ್ಬಿಹೋದ. ತಾನೇ ಮೇಲಿಂದ ಇಳಿಯಬಾರದು - ಮರ್ಯಾದೆ ಕಡಮೆ ಕೆಳಗಿನಿಂದ ಕರೆಯಲಿ ಎಂದು ಸದ್ದುಮಾಡದೆ ಕುಳಿತ. ಸೀನಸಾಹಿತಿಯ ತಾಯಿ "ಮೇಲಿದ್ದಾನೆ, ಯಾಕಪ್ಪ" ಎಂದರು. "ಅದೆಲ್ಲ ನಿಮಗೇಕೆ-ನೋಡಯ್ಯ ಬದ್ಮಾಷ್ ಮೇಲೆ ಅವಿತುಕೊಂಡು ಕುಳಿತಿದ್ದಾನೆ. ಎಳೆದುಕೊಂಡು ಬಾ," ಎಂದರು. ಪೊಲೀಸ್ ಪೇದೆ ಮೇಲೆ ಹೋಗಿ ಸೀನ ಸಾಹಿತಿಯನ್ನು ದರದರನೆ ಕೈಹಿಡಿದು ಎಳೆತಂದ. ಸೀನ ಸಾಹಿತಿಯ ತಾಯಿಗೆ ಗಾಬರಿಯಾಗಿ "ಏ ನಾ ಯ್ತು ಸ್ವಾಮಿ, ಏಕೆ ಎಳೆದುಕೊಂಡು ಹೋಗ್ತಿರಾ" ಎಂದು ಕೇಳಿದರು, "ಒಂದು ಕೊಲೆ ಕೇಸಿನ ಸಂಬಂಧದಲ್ಲಿ ಇವರು ಬೇಕು" ಎಂದವರೆ ಇನ್ಸ್‌ಪೆಕ್ಟರ್ ಜೀಪಿನಲ್ಲಿ ಸೀನ ಸಾಹಿತಿಯನ್ನು ಕುಳ್ಳಿರಿಸಿಕೊಂಡು ಸ್ಟೇಷನ್‌ಗೆ ಬಂದು "ನಿಜಹೇಳಿ, ಕಮಲಮ್ಮನ ಕೊಲೆಗೆ ಯಾರ್ಯಾರು ಸೇರಿದ್ರಿ" ಎಂದು ಕದರಿಸಿದರು. ಎಂದೂ ಪೊಲೀಸ್ ಸ್ಟೇಷನ್ ಕಾಣದ ಸೀನಸಾಹಿತಿ ಗಾಬರಿಯಾಗಿ ಬೆದರಿಹೋದ, ತೊದಲುತ್ತಾ ನನಗೆ ಒಂದೂ ಗೊತ್ತಿಲ್ಲ, ಸಾರ್ ಎಂದ. ಬದ್ಮಾಷ್ ಒಂದು ಗೊತ್ತಿಲ್ಲವಂತೆ, ಮುಖ ಏಕೆ ಬೆವರ್‍ತಾ ಇದೆ ಮಾತನಾಡಕ್ಕೆ ತೊದಲಿಸ್ತಾ ಇದ್ದಿ, ನಿಜ ಹೇಳು" ಎಂದು ಕತ್ತಿನ ಮೇಲೆ ಒಂದೇಟು ಗುದ್ದಿದರು. ಸೀನಸಾಹಿತಿ ತತ್ತರಿಸಿ ಮಾತನಾಡದೆ ಸುಮ್ಮನೆ ನಿಂತ. 'ಲಾಕಪ್‌ನಲ್ಲಿ ಹಾಕಿರಿ ನಾನು ಬಂದು ವಿಚಾರಿಸ್ತೀನಿ' ಅಂದು ಇನ್ಸ್‌ಪೆಕ್ಟರ್ ಹೊರಗೆ ಹೋದರು. ಮಧ್ಯಾಹ್ನದ ಹೊತ್ತಿಗೆ ಸೀನನ ತಂದೆಯವರಿಗೆ ಸುದ್ದಿ ಮುಟ್ಟಿ ಅವರೂ, ಅವರ ಕಚೇರಿಯ ಕೆಲಸದವರೂ ಗಾಬರಿಯಾಗಿ ಮನೆಗೆ ಬಂದರು. ವಿಷಯದ ವಿವರ ತಿಳಿದು ಸ್ಟೇಷನ್‌ಗೆ ಧಾವಿಸಿದರು. ಇನ್ಸ್‌ಪೆಕ್ಟರ್ ಬಂದಿದ್ದರು. "ಏನ್ರಿ ನೀವೇನ ಸೀನ ಸಾಹಿತಿಯ ತಂದೆ" ಎಂದು ಕೇಳಿ ಸೀನ ಸಾಹಿತಿ ಬರೆದಿದ್ದ "ಸುಂದರಿ ಕಮಲಳ ಭಯಂಕರ ಕೊಲೆ" ಕಥೆ ಪ್ರಕಟವಾಗಿದ್ದ ಪತ್ರಿಕೆಯನ್ನು ಅವರ ಮುಂದೆ ಹಾಕಿ "ನೋಡಿ ಈಗ ನಡೆದಿರೋ ಕಮಲಮ್ಮನ ಕೊಲೆಗೂ, ಈ ಲೇಖನಕ್ಕೂ ಎಷ್ಟು ಸಂಬಂಧ ಇದೆ ಅಂದ್ರೆ ಕೊಲೆ ಆಗಿರೋ ರೀತಿಯೆಲ್ಲಾ ಇದರಲ್ಲಿ ಬರೆದಿದೆ" ನಿಮ್ಮ ಮಗನ ಮೇಲೆ ಶಂಕೆ ಬಂದು ಅವರನ್ನ ಅರೆಸ್ಟ್ ಮಾಡಿದ್ದೇವೆ" ಎಂದರು. ಸೀನ ಸಾಹಿತಿ ತಂದೆಯುವರಿಗೆ, ಇನ್ಸ್‌ಪೆಕ್ಟರ್ ಪರಿಚಯವಿದ್ದವರು-ಸ್ನೇಹಿತರಾಗಿದ್ದುದರಿಂದ ಅವರು ಇನ್ಸ್‌ಪೆಕ್ಟರಿಗೆ ಸೀನ ಸಾಹಿತಿಯ ಎಲ್ಲಾ ವಿವರವನ್ನು ತಿಳಿಸಿ ಹುಡುಗ ಹಾಗಲ್ಲ ಎಂದು ಭರವಸೆ ಕೊಟ್ಟು ತಮ್ಮೆಲ್ಲರ ಪರಿಚಯ ಪರಿಚಯುವನ್ನು ತಿಳಿಸಿದ ಮೇಲೆ ಇನ್ಸ್‌ಪೆಕ್ಟರು "ಕರೆದುಕೊಂಡು ಹೋಗಿ, ಆದರೆ ನಾನು ಹೇಳಿ ಕಳಿಸಿದರೆ ಫೀವೆಲ್ಲ ಬರಬೇಕಾಗುತ್ತದೆ" ಎಂದರು. ಸೀನ ಸಾಹಿತಿಯ ತಂದೆ ನೆಮ್ಮದಿಯ ಉಸಿರುಬಿಟ್ಟು ಸೀನ ಸಾಹಿತಿಯನ್ನು ಕರೆದೊಯ್ಯಲು ಲಾಕಪ್ಪಿಗೆ ಬಂದರು. ಸೀನ ಸಾಹಿತಿ ಒಳಗೆ ಕುಳಿತು ನಿಶ್ಚಿಂತೆಯಿಂದ ತನ್ನ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದ. "ಏನೋ ಬರೀತಿರೋದು" ಅಂದ್ರು ಕೋಪದಿಂಪಲೇ ಸೀನನ ತಂದೆ. "ಎಂದು ಬಿಡುಗಡೆ," ಅನ್ನೋ ಕಥೆ ಬೇರಿತಿದ್ದೀನಿ" ಎಂದು ಶಾಂತನಾಗಿ ಸೀನಸಾಹಿತಿ ಉತ್ತರಿಸಿದ. ಕೊನೆಗೂ ಸೀನಸಾಹಿತಿಗೆ ಪೊಲೀಸಿನವರಿಂದ ಮೊದಲು ಸನ್ಮಾನ ದೊರಕಿತ್ತು.

ಎಸ್. ಐ. ಟಿ.

—ಪ್ರೊ|| ಎಂ. ಚಿಕ್ಕಣ್ಣಯ್ಯಪ್ಪ

ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿರುವ ಇಂಜನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಲಿಚ್ಛಿಸುವ ಅರ್ಹರಾದ ಅನೇಕ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ದೊರೆಯದ ಪ್ರಯುಕ್ತ ಅವರ ತೊಂದರೆಯನ್ನು ನಿವಾರಿಸುವ ಶ್ರೀ ಸಿದ್ಧಗಂಗಾ ಎಜ್ಯುಕೇಷನ್ ಸೊಸೈಟಿಯವರು ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ|| ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತುಮಕೂರಿನಲ್ಲಿ ಒಂದು ಇಂಜನಿಯರಿಂಗ್ ಕಾಲೇಜನ್ನು 1963-64ನೇ ಸಾಲಿನಿಂದ "ಶ್ರೀ ಸಿದ್ಧಗಂಗಾ ಇಂಜನಿಯರಿಂಗ್ ಕಾಲೇಜ್" ಎಂಬ ಹೆಸರಿನಿಂದ ಸ್ಥಾಪಿಸಿದರು. ಮೂರು ವರ್ಷಗಳ ನಂತರ ಕಾಲೇಜಿನ ಹೆಸರನ್ನು "ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಎಂದು ಬದಲಾಯಿಸಲಾಯಿತು. ಈ ಕಾಲೇಜಿಗೆ ಅತಿ ಮುಖ್ಯವಾದ ನಿವೇಶನವು ಸಿದ್ಧಗಂಗೆ ಹಾಗೂ ತುಮಕೂರು ನಡುವೆ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಶ್ರೀ ಎಂ.ವಿ. ಶಿವಪ್ಪನವರು ಉದಾರವಾಗಿ ದಾನ ಮಾಡಿರುವ ನಲವತ್ತು ಎಕರೆ ಜಮೀನಿನಲ್ಲಿ ನೀರು, ದೀಪ, ರಸ್ತೆಗಳನ್ನೊಳಗೊಂಡ ಅನೇಕ ಭವ್ಯ ಕಟ್ಟಡಗಳೊಡನೆ ನಿರ್ಮಾಣವಾಗಿದೆ. ಈಗ ಕಾಲೇಜಿನ ಆಟದ ಮೈದಾನ ವಗೈರೆಗಳನ್ನು ಓಳಗೊಂಡ ಕಾಲೇಜಿನ ವಿಸ್ತೀರ್ಣ 60 ಎಕರೆಗಳನ್ನು ಮೀರಿದೆ.

ಜ್ಞಾನ ಭಂಡಾರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ, ಕಾಲೇಜಿನ ಮ್ಯಾನೇಜ್‌ಮೆಂಟ್ ಬೋರ್ಡಿನ ಮೆಂಬರು, ಮಾಜಿ ಎಂ.ಎಲ್.ಸಿ. ಯವರು ಆದ ಶ್ರೀ ಟಿ. ಎನ್. ಕೆಂಪಹೊನ್ನಯ್ಯನವರು "ಟಿ.ಎನ್. ಕೆಂಪ ಹೊನ್ನಯ್ಯ ಲೈಬ್ರರಿ" ಎಂಬ ಗ್ರಂಥ ಭಂಡಾರ ಮಂದಿರವನ್ನು ಸುಮಾರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿಕೊಟ್ಟು ಇಂದಿನ ಹಾಗೂ ನಾಳೆಯ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಜ್ಞಾನದೀವಿಗೆಯನ್ನು ಬೆಳಗಿಸಿದ್ದಾರೆ.

ಲೋಕ ಸೇವಾನಿರತ ಶ್ರೀ ಜಿ. ಎಂ. ಸಿದ್ಧರಾಮಣ್ಣನವರು ಧನ ಸಹಾಯದ ಜೊತೆಗೆ ವಿದ್ಯಾರ್ಥಿ ಮಂದಿರವನ್ನು ಕಾಲೇಜು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ನಿರ್ಮಿಸಿದ್ದಾರೆ.

ಈ ಕಾಲೇಜು ಈಗಾಗಲೇ ಹನ್ನೊಂದು ವರ್ಷಗಳನ್ನು ದಾಟಿದೆ. ವಿದ್ಯಾರ್ಥಿಗಳಲ್ಲಿ ಜಾತಿ, ಮತ, ಪ್ರಾಂತ್ಯ ಮುಂತಾದ ಕೋನುವಾರು ಭಾವನೆಯಿಲ್ಲದೆ ಉತ್ತರದಿಂದ ದಕ್ಷಿಣದ ಕೊನೆಯವರೆಗೂ, ಪೂರ್ವದಿಂದ ಪಶ್ಚಿಮದವರೆಗೂ, ಹರಡಿ ಆಫ್ರಿಕಾ, ಮಲೇಶಿಯಾ, ಇರಾನ್‌ಗಳಿಂದಲೂ ವಿದ್ಯಾರ್ಥಿಗಳು ಬರುತ್ತಿರುವುದನ್ನು ಕಂಡರೆ ಒಂದು ತೊಟ್ಟು ತುಪ್ಪವನ್ನು ಸಂಗ್ರಹಿಸಲು ಜೇನು ನೊಣ ಹತ್ತಾರು ಮೈಲಿ ಸಂಚರಿಸುವಂತೆಯೂ, ಕರ್ನಾಟಕದ "ಸ್ನೇಹ ಸಂಪತ್ತು" ರಂಗನ ತಿಟ್ಟಿಗೆ ಸಾವಿರಾರು ಮೈಲಿಗಳಿಂದ ಬರುವ ಪಕ್ಷಿಗಳಂತೆ ಇಲ್ಲಿಗೆ ವಿದ್ಯಾರ್ಥಿಗಳು ಬಂದು ಇಂಜನಿಯರಿಂಗ್ ಪದವಿಯನ್ನು ಪಡೆಯುತ್ತಿರುವ ಸೌಭಾಗ್ಯ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪಡೆದಿರುವುದು ಇತಿಹಾಸದಲ್ಲಿ ಮೈಲಿಗಲ್ಲಿದ್ದಂತೆ ಆಗಿದೆ.

ಒಂದೇ ಮೇಲ್ಛಾವಣಿಯ ತಳಗಡೆ ಭಾರತೀಯ ಮಕ್ಕಳೆಲ್ಲರು, ಸೋದರ ಭಾವದಿಂದಿರುವುದನ್ನು ಭಾವೈಕ್ಯಯನ್ನು ಈ ಕಾಲೇಜಿನಲ್ಲಿಯೂ ಅದಕ್ಕೆ ಸಂಭಂದಪಟ್ಟ ಹಾಸ್ಟಲುಗಳಲ್ಲಿಯೂ ವಾಸಿಸುತ್ತಿರುವ ದೃಶ್ಯನಯನ ಮನೋಹರ.

ಇವುಗಳಿಗೆ ಕಲಶ ಪ್ರಾಯದಂತೆ ಕಾಲೇಜಿನಿಂದ ಈವರೆವಿಗೆ 7 ವರ್ಷಗಳಲ್ಲಿ ಸುಮಾರು 700 ವಿದ್ಯಾರ್ಥಿಗಳು ಬಿ. ಇ. ಪದವಿಯನ್ನು ಪಡೆದಿದ್ದಾರೆ. ಇವರಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಎಂ. ಇ. ಸಹ ಮುಗಿಸಿ

ಕೆಲಸಗಳಲ್ಲಿದ್ದಾರೆ. ಸ್ವಂತ ಕಾರ್ಖಾನೆಗಳನ್ನು ತೆರೆದಿದ್ದಾರೆ, ಮತ್ತೆ ಹಲವರು ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ವ್ಯಾಸಂಗ ಮುಗಿಸಿ ಉತ್ತಮ ಕೆಲಸಗಳನ್ನು ಗಿಟ್ಟಿಸಿದ್ದಾರೆ. ಇಂದು ಬೇಕಾಗಿರುವ ಅತಿ ಮುಖ್ಯ ವಿಚಾರವಾದ ವಿದ್ಯೆ ಹಾಗೂ ಸ್ನೇಹ ಇವೆರಡನ್ನು ಕಲಿತ ಭಾರತೀಯರು ದೇಶಕ್ಕೊ ತನಗೆ ವಿದ್ಯಾದಾನ ಮಾಡಿದ ಸಿದ್ಧಗಂಗಾ ಇನ್ಸಿಟ್ಯೂಟ್‌ಗೂ ಗೌರವ ದೊರಕಿಸಿಕೊಟ್ಟಿದ್ದಾರೆ.

ಇಂತಹ ವಿದ್ಯಾರ್ಥಿಗಳ ವಿದ್ಯಾ ಪ್ರಗತಿಯನ್ನು ವೀಕ್ಷಿಸಿ ಹೆಚ್ಚಿನ ಅಂಕಗಳನ್ನು ಗಳಿಸಿ, ಸಂಸ್ಥೆಗೆ ತರುವ ಗೌರವಕ್ಕೆ ಮಾನ್ಯತೆ ನೀಡಿ, ಶ್ರೀಮಾನ್ ಟಿ. ಎನ್. ಕೆಂಪ ಹೊನ್ನಯ್ಯನವರು ಹಾಗೂ ಬಿರ್ಲಾ ಸಂಸ್ಥೆಯವರು ಹಾಗೂ ಇತರರು ವರ್ಷಂ ಪ್ರತಿ ವಿದ್ಯಾರ್ಥಿಗಳಿಗೆ "ಸ್ವರ್ಣಪದಕ"ಗಳನ್ನು ನೀಡಿ ಗೌರವಿಸುತ್ತಿದ್ದಾರೆ.

"ಕೊಡುಗೈ ದೊರೆಗಳೆನ್ನಿಸಿಕೊಂಡಿರುವ ಸುಪ್ರಸಿದ್ಧ ಕೈಗಾರಿಕೋದ್ಯಮಿ ಬಿರ್ಲಾರವರು ಈ ಕಾಲೇಜಿನ ಅಭಿವೃದ್ಧಿಯನ್ನು ಗಮನಿಸಿ, ಸುಮಾರು ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿದ್ಯಾರ್ಥಿಗಳ ಕಲಾ ಪ್ರದರ್ಶನಕ್ಕೆ "ಬಿರ್ಲಾ ಆಡಿಟೋರಿಯಂ" (ರಂಗಮಂದಿರ)ವನ್ನು ನಿರ್ಮಿಸಿದ್ದಾರೆ.

ನಮ್ಮ ಕಾಲೇಜಿನಲ್ಲಿ ಸಿವಿಲ್, ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ವಿಭಾಗಗಳನ್ನು ಮೊದಲಿಗೆ ತೆರೆಯಲಾಯಿತು. ಕ್ರಮೇಣ ದೇಶದ ತಾಂತ್ರಿಕ ಪ್ರಗತಿಗೆ ಸಹಾಯವಾಗುವಂತೆ ಎಲೆಕ್ಟ್ರಿಕಲ್ ವಿಭಾಗದಲ್ಲಿ ಎಲೆಕ್ಟ್ರಿಕಲ್ ಪವರ್ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗಗಳನ್ನು ತೆರೆದುದ್ದಾಯಿತು. ಈ ವರ್ಷದಿಂದ ಕೆಮಿಕಲ್ ವಿಭಾಗವನ್ನು ತೆರೆಯಲು ನಿರ್ಧರಿಸಿದೆ. ಈಗಾಗಲೇ ಇದಕ್ಕೆ ಸಾಕಷ್ಟು ವಿದ್ಯಾರ್ಥಿಗಳಿಂದ ಅಭ್ಯರ್ಥಿ ಪತ್ರಗಳು ಬಂದಿವೆ. ಮುಂದೆ ಮೆಟಲರ್ಜಿ ಇತ್ಯಾದಿ ಉಪಯುಕ್ತ ವಿಭಾಗಗಳನ್ನು ತೆರೆಯುವ ಸಿದ್ದತೆಯಲ್ಲಿದ್ದೇವೆ.

ಡಿಪ್ಲಮೋ ಪಡೆದಿರುವ ನೂರಾರು ವಿದ್ಯಾರ್ಥಿಗಳು ಭಾರತದಲ್ಲಿ ಮುಂದೆ ಓದುವ ಇಚ್ಛೆಯಿದ್ದಾಗ್ಯೂ ಅವಕಾಶವಿಲ್ಲದೆ ತೊಳಲುತ್ತಿದ್ದ ಸಮಯದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಆಶಾದಾಯಕ ವಾತಾವರಣ ಕಲ್ಪಿಸಲು ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯು ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದೊಡನೆ ವ್ಯವಹರಿಸಿತು. 4 ವರ್ಷದ ಬಿ. ಇ. ಡಿಗ್ರಿಯನ್ನು ಪ್ರಪ್ರಥಮವಾಗಿ ದಕ್ಷಿಣ ಭಾರತದಲ್ಲಿ ಅದೂ ಸಿದ್ಧಗಂಗಾ ಇನ್ಸಿಟ್ಯೂಟ್‌ನಲ್ಲಿ ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳನ್ನೊಳಗೊಂಡ ಕಂಡೆನ್ಸ್‌ಡ್ ಬಿ. ಇ. ಡಿಗ್ರಿ ಕೋರ್ಸ್ 1965-66ರಲ್ಲಿ ಉದಯವಾಯಿತು. ಇದಕ್ಕೆ ಹಲವಾರು ವರ್ಷಗಳು ಸರ್ಕಾರದಲ್ಲಿ ಕೆಲಸ ಮಾಡಿರುವ, ಖಾಸಗಿ ಸಂಸ್ಥೆಗಳಲ್ಲಿ ದುಡಿಯುತ್ತಿರುವ, ವಿದ್ಯಾಕಾಂಕ್ಷಿಗಳಾಗಲು ಪರಿತಪಿಸುತ್ತಿದ್ದ ವಿದ್ಯಾರ್ಥಿಗಳು ಭಾರತದ ಎಲ್ಲಾ ಕಡೆಗಳಿಂದಲೂ ಬಂದು ಸೇರಿ ಈ ಸೌಲಭ್ಯವನ್ನು ಹೊಂದುತ್ತಿದ್ದಾರೆ. ಈಸೌಲಭ್ಯದಲ್ಲಿ ತಮ್ಮಲ್ಲಿದ್ದ ಪ್ರತಿಭೆಯನ್ನು ರ್‍ಯಾಂಕು, ಹಾಗೂ ಪ್ರಥಮ ದರ್ಜೆಗಳಲ್ಲಿ ತೇರ್ಗಡೆಯಾಗಿ ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

ಕಾಲೇಜಿನ ಗ್ರಂಥ ಭಂಡಾರವು ಪರೀಕ್ಷೆ ಕಾಲ ಸಮೀಪಿಸಿದಂತೆ ಬೆಳಗ್ಗೆ 8 ರಿಂದ ರಾತ್ರಿ 9ರವರೆಗೆ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ತೆರೆದಿರುತ್ತದೆ. ಇಲ್ಲಿನ ವೈಶಿಷ್ಟ್ಯವೇನೆಂದರೆ ಗ್ರಂಥ ಭಂಡಾರವು ಓಪನ್ ರ್‍ಯಾಕ್ ಸಿಸ್ಟಮ್‌ನ್ನು ಚಾಲೂ ಮಾಡಿದೆ. ಇದರಿಂದ ವಿದ್ಯಾರ್ಥಿಯು ತನಗೆ ಬೇಕಾಗುವ ಪುಸ್ತಕವನ್ನು ಕೂಡಲೇ ವೀಕ್ಷಿಸುವ ಸೌಲಭ್ಯವುಂಟು. ರೋಟರಿ ಇಂಟರ್ ನ್ಯಾಷನಲ್ ಸಂಸ್ಥೆಯವರು ಅಮೆರಿಕದಿಂದ ಹಲವು ಉತ್ತಮ ಟೆಕ್ನಿಕಲ್ ಮ್ಯಾಗಜೈನ್‌ಗಳನ್ನು ಧಾನವಾಗಿ ನೀಡಿದ್ದಾರೆ. ಸ್ಟೂಡೆಂಟ್ಸ್ ಎಯಿಡ್ ಸೊಸೈಟಿ ಬುಕ್‌ಬ್ಯಾಂಕ್ ಎಂಬ ಹೆಸರಿನಲ್ಲಿ ಕಾಲೇಜು ಅನೇಕ ಉತ್ತಮ ಪುಸ್ತಕಗಳನ್ನು ಖರೀದಿ ಮಾಡಿ ವಿದ್ಯಾರ್ಥಿಗಳ ವಿದ್ಯಾಪ್ರಗತಿಗೆ ಸಹಾಯ ಮಾಡುತ್ತಿದೆ. ಹಲವಾರು ವಿದ್ಯಾರ್ಥಿಗಳು ಹಾಗೂ ಇತರ ಗಣ್ಯವ್ಯಕ್ತಿಗಳು ಹಲವು ಪುಸ್ತಕಗಳನ್ನು ಬುಕ್ ಬ್ಯಾಂಕ್‌ಗೆ ದಾನ ನೀಡಿರುತ್ತಾರೆ.

ವಿದ್ಯಾರ್ಥಿಗೆ ವಿದ್ಯೆ ಎಷ್ಟು ಮುಖ್ಯವೋ ವಸತಿ ಹಾಗೂ ಶಾಲಾ ಸರಹದ್ದು ಅಷ್ಟೇ ಮುಖ್ಯ. ಮೇಲ್ಕಂಡ ವಿಚಾರಗಳನ್ನು ನಮ್ಮ ಕಾಲೇಜಿನಲ್ಲಿ ವೀಕ್ಷಿಸಿದಾಗ ವಿದ್ಯೆಯನ್ನು ಅಧ್ಯಾಪಕ ವೃಂದವು ಶ್ರೇಷ್ಠಮಟ್ಟದಲ್ಲಿ ನೀಡುತ್ತಿದೆ. ವಿದ್ಯಾರ್ಥಿ ದೆಸೆಯಲ್ಲಿ ಇರಬೇಕಾದಂಥ ವಸತಿ ಸೌಕರ್ಯವನ್ನು ಎಸ್. ಐ. ಟಿ. ಹಾಸ್ಟಲು

ಹೊಂದಿದೆ. ಸುಮಾರು ಐದು ನೂರು ವಿದ್ಯಾರ್ಥಿಗಳು ಕ್ಯಾಂಪಸ್ ಹಾಸ್ಟಲಿನಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಕುರ್ಚಿ, ಮೇಜು, ಮತ್ತು ಮಂಚಗಳನ್ನು ಒದಗಿಸಿದೆ. ಶುಚಿ, ರುಚಿ ಮತ್ತು ಆರೋಗ್ಯಕರವಾದ ಊಟ ತಿಂಡಿಯನ್ನು ಓದಗಿಸುತ್ತಿದೆ. ಇದಕ್ಕೆ ಲಗತ್ತಿಸಿದಂತೆ ಶಾಲಾ ಸರಹದ್ದುಯಿದೆ. ಊರಿನಿಂದ ಕಾಲೇಜುಸುಮಾರು ಒಂದೂವರೆ ಕಿಲೊಮೀಟರುದೂರದಲ್ಲಿರುವುದರಿಂದ ಯಾವುದೇ ವಿಧವಾದಗಲಾಟೆ ಇಲ್ಲದೇಯಿರುವುದರಿಂದ ವಿದ್ಯಾರ್ಥಿ ಕೇವಲ ವಿದ್ಯಾರ್ಜನೆಗೆ ತನ್ನ ವೇಳೆಯನ್ನು ಮೀಸಲಿಡಲು ಯೋಗ್ಯವಾಗಿದೆ. ಹಾಗೂ ಯಾವುದೇ ವಿಧವಾದ ನಾಗರೀಕ ಗಲಭೆಗಳಿಂದ ದೂರವಾಗಿದೆ. ಕಾಲೇಜಿನ ಕ್ಯಾಂಪಸ್ ರಾತ್ರಿಯ ಹೊತ್ತು ದೀಪಗಳಿಂದ ಅಲಂಕೃತವಾಗಿರುತ್ತದೆ ಹಲವು ವಿದ್ಯಾರ್ಥಿಗಳಿಗೆ ಇದೂ ಸಹ ಓದಲು ಸಹಕಾರಿಯಾಗಿದೆ.

ಕಾಲೇಜು ಕ್ರೀಡಾ ಮೈದಾನದಲ್ಲಿ ಶ್ರೇಷ್ಠ ಮಟ್ಟದ ಪ್ರತಿಭೆ ವ್ಯಕ್ತ ಪಡಿಸಲು, ಕ್ರಿಕೆಟ್, ಫುಟ್ ಬಾಲ್, ಟೆನಿಸ್, ಬ್ಯಾಡ್ ಮಿಂಟನ್, ವಾಲೀಬಾಲ್, ಷಾಟ್ ಪುಟ್ ಇತ್ಯಾದಿ ಹಾಗೂ ಷಟಲ್ ಕಾಕ್, ಕೇರಂ ಇತ್ಯಾದಿ ಇನ್ ಡೋರ್ ಗೇಮ್ಸ್‌ಗಳು ಹಲವಾರು ಇವೆ. ವಿದ್ಯಾರ್ಥಿಗಳು ಇವುಗಳಲ್ಲಿ ಪಾಲ್ಗೊಂಡು ಟೂರ್ನ ಮೆಂಟುಗಳಲ್ಲಿ ಗೆದ್ದು ಶಾಲೆಗೂ ಅವರಿಗೂ ಉತ್ತಮ ಹೆಸರು ತರುತ್ತಿದ್ದಾರೆ. ಬಹಳಷ್ಟು ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಟೀಂ ಕ್ಯಾಪ್ಟನ್‌ಗಳಾಗಿಯೂ ಪ್ರತಿನಿಧಿಗಳಾಗಿಯೂ ಆಯ್ಕೆಯಾಗಿ ಮನ್ನಣೆ ಪಡೆದಿದ್ದಾರೆ.

ವಿದ್ಯಾರ್ಥಿ ಸಂಘದವತಿಯಿಂದ ಉತ್ತಮ ಮಟ್ಟದ ಸಾಂಸ್ಕೃತಿಕಕಾರ್ಯಕ್ರಮಗಳು ನಡೆಸಲ್ಪಡುತ್ತವೆ. ಕಾಲೇಜಿಗೆ ಪ್ರತಿಭಾವಂತರು, ವಿಜ್ಞಾನಿಗಳು, ಇತರರು ಭೇಟಿ ನೀಡುತ್ತಿದ್ದು ವಿದ್ಯಾರ್ಥಿ ಹಾಗೂ ಪ್ರಾಧ್ಯಾಪಕರಿಗೆ ಮಾರ್ಗದರ್ಶನ ನೀಡುತ್ತಿರುತ್ತಾರೆ. ಇಷ್ಟರಲ್ಲಿ ಕಾಲೇಜಿನಲ್ಲಿ ವ್ಯಾಯಾಮಗೃಹ ಮತ್ತು ಈಜು ಕೊಳ ನಿರ್ಮಾಣವಾಗಲಿದೆ. ಕಾಲೇಜಿನಲ್ಲಿ ಕನ್ನಡ ಸಂಘ, ತೆಲುಗು ಸಂಘ, ಹಾಗೂ ಉರ್ದು ಸಂಘಗಳು ರಚಿಸಲ್ಪಟ್ಟಿದ್ದು ಆಯಾ ಭಾಷೆಗಳ ಅಭಿವೃದ್ಧಿ ಕಾರ್ಯಗಳಲ್ಲಿ ಮಗ್ನವಾಗಿವೆ. ಈ ಸಂಘಗಳವತಿಯಿಂದ ಆಯಾ ಭಾಷೆಗಳ ಪತ್ರಿಕೆಗಳನ್ನು (ಮಾಸಿಕ, ವಾರ್ಷಿಕ) ಕೊಂಡು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ.

ಈ ಕಾಲೇಜು ಸರ್ಕಾರ ಹಾಗೂ ವಿಶ್ವವಿದ್ಯಾನಿಲಯದಿಂದ ಮನ್ನಣೆ ಪಡೆದಿದೆ. ಯಾವುದೇ ವಿಧವಾದ ಸಹಾಯ ಧನವನ್ನು ಪಡೆಯುತ್ತಿಲ್ಲ, ಇದು ಪ್ರಧಾನವಾಗಿ ಜನತೆಯ ಆದರ, ಅಭಿಮಾನ ಹಾಗೂ ಅವರ ಧಾರಾಳವಾದ ಕೊಡುಗೆಯ ಮೇಲೆ ನಿಂತಿದೆ. ವಿದ್ಯಾರ್ಥಿಗಳ ಪೋಷಕರು, ಹಲವಾರು ಸಂಘ ಸಂಸ್ಥೆಗಳು ಹಾಗೂ ಶ್ರೀ ಸಿದ್ಧಗಂಗಾ ಎಜುಕೇಷನ್ ಸೊಸೈಟಿಯ ಶುಭಾ ಕಾಂಕ್ಷಿಗಳು ನೀಡುತ್ತಿರುವ ದಾನದೊಂದಿಗೆ ಕಾಲೇಜಿನ ಎಲ್ಲಾ ವಿಧವಾದ ಪೂರೈಕೆಗಳೂ ಪೂರ್ಣವಾಗುತ್ತಿದೆ.

ಇವೆಲ್ಲದಕ್ಕೂ ಕಾರಣ ಕರ್ತೃಗಳಾಗಿರುವ ಶ್ರೀ ಶ್ರೀ ಶಿವಕುಮಾರಸ್ವಾಮೀಜಿಯವರು, ಪ್ರತಿ ಕ್ಷಣದಲ್ಲಿಯೂ ಅಧ್ಯಾಪಕ ವೃಂದವನ್ನು ಹರಸಿ ಹೆಚ್ಚಿನ ಸೇವೆಗಾಗಿ ಅವರಿಗೆ ಸ್ಫೂರ್ತಿ ನೀಡುತ್ತಿದ್ದಾರೆ. ಅವರ ಧನ್ಯ ಆಶೀರ್ವಾದ ಅನುಗ್ರಹಗಳಿಂದ ಶ್ರೀ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಅಗತ್ಯವಾದ ತಾಂತ್ರಿಕ ಶಿಕ್ಷಣವನ್ನು ನೀಡುವ ತನ್ನ ಸೇವೆಯನ್ನು ಚಿರಕಾಲ ಇತೋಪ್ಯತಿಶಯವಾಗಿ ನಮ್ಮ ದೇಶಕ್ಕೆ ಸಲ್ಲಿಸಲೆಂದು ನಾವು ಹಾರೈಸೋಣ.

ಜಾತಿಯ ಸಮಸ್ಯೆ

—ಎಂ. ಗೋಪಾಲಕೃಷ್ಣ ಅಡಿಗ.

ಸ್ವಾತಂತ್ರ್ಯ ಬಂದ ಅನಂತರ ನಮ್ಮ ಅಂತಃಕರಣ ಯಾವ ರೀತಿಯಲ್ಲಿ ದೊರಗಾಗುತ್ತ ಬಂದಿದೆ ಎನ್ನುವುದಕ್ಕೆ ನಾವು 'ಜಾತಿ' ಎಂಬ ಒಂದು ಶಬ್ದಕ್ಕೆ ತೋರಿಸುತ್ತ ಬಂದಿರುವ ಅಪಚಾರಕ್ಕಿಂತ ಹೆಚ್ಚಿನ ಸಾಕ್ಷಿ ಬೇಡ. ಆ ಬಡ ಶಬ್ದದ ಮೇಲೆ ನಮ್ಮ ಮಹಾನಾಯಕ ನಾಯಕ ಮರಿನಾಯಕರೆಲ್ಲ ಎಂಥೆಂಥ ಕೈಬಾಂಬುಗಳನ್ನು ಎಷ್ಟೆಷ್ಟುಸಾರಿ ಎಸೆಯುತ್ತ ಬಂದಿದ್ದಾರೆ ಎನ್ನುವುದನ್ನು ನೆನೆಸಿದರೇ ಕಣ್ಣು ಮಂಜಾಗಬೇಕು—ಯಾರಿಗಾದರೂ. ಆದರೆ ದೇವರ ದಯೆ—ಪರಮಾತ್ಮನ ಲೀಲೆ ಅಗಾಧವಾದದ್ದು—ಅವೆಲ್ಲ ಹುಸಿಬಾಂಬುಗಳಾಗಿ ಮಾರ್ಪಟ್ಟು ಫುಸ್ಸ್ ಎಂದು ಗಾಳಿಯಲ್ಲಿ ಸೇರಿಕೊಂಡು ಸತ್ಯ ಅಹಿಂಸೆಗಳ ಅದೃಶ್ಯ ಪತಾಕೆಗಳಾಗಿ ಸುಯ್ಯುಟ್ಟಿದ್ದರಿಂದ ಗೋವಾ ವಿಜಯದಂಥ ಶ್ರೇಯಸ್ಸು ಇಲ್ಲಿ ನಮಗೆ ಲಭಿಸಲಿಲ್ಲ. ಬಡ ಜಾತಿ ಬಚಾವಾದದ್ದು ಮಾತ್ರವಲ್ಲ, ಮನೆಯೊಳಗೆ ಉಗ್ರಾಣ, ಅಡಿಗೆಮನೆ, ತಿಜೋರಿ, ಚೆಕ್ ಬುಕ್ ಮುಂತಾದುವುಗಳಲ್ಲಿ ಸೇರಿಕೊಂಡು ಮೈಕೈತುಂಬಿಕೊಂಡು ಸಮಾಜವಾದದ ಸಮವಸ್ತ್ರ ಧರಿಸಿ ಸಡ್ಡು ಹೊಡೆಯುವುದನ್ನು ಕಂಡಾಗ ಮನವರಿಕೆಯಾಗುತ್ತದೆ—ಈ ದೇಶಕ್ಕೆ ಹಿಂಸೆ ಸಲ್ಲುವಂಥದಲ್ಲ ಎಂದು; ನಾವು ಯಾರನ್ನಾದರೂ ಕೊಲ್ಲ ಬಯಸಿದರೇ ಸಾಕು, ಅದಕ್ಕೆ ಚಿರಂಜೀವತ್ವದ ವರ ಸಿದ್ಧಿಸಿದ ಹಾಗೇ ಎಂದು; ನಾವು ಬೇಡ ಎಂದರೆ ಅದಕ್ಕೆ ಬೇಕು ಎನ್ನುವ ಅರ್ಥ ಬರುತ್ತದೆ. ಇದು ಕೆಟ್ಟದ್ದು ಎಂದರೆ ಅದು ಒಳ್ಳೆಯದು ಎಂದ ಹಾಗೇ ಆಗುತ್ತದೆ. ಇದೇ ಭಾರತದ ವೈಶಿಷ್ಟ್ಯ ಎನ್ನಬಹುದೆ? ಅಥವಾ ನಾವು ಇನ್ನೂ ಹುಡುಗಾಟಿಕೆಯನ್ನು ಬಿಟ್ಟು ಪ್ರೌಢತ್ವದ ಹೊಸ್ತಿಲನ್ನು ಮೆಟ್ಟಿಲ್ಲ ಅಂತಲೋ ?

ಇಷ್ಟಕ್ಕೆಲ್ಲ ಕಾರಣ ನಮ್ಮಲ್ಲಿ ಅನಾದಿ ಕಾಲದಿಂದ ಬೆಳೆದು ಬಂದಿರುವ ಶಬ್ದ ಮೋಹವೇ ಎಂದು ಹೇಳಬಹುದೇ ? ಎಂದರೆ ನಮಗೆ ಒಂದು ಶಬ್ದ ಕೇವಲ ಶಬ್ದವಾಗಿಯೇ ಇರುತ್ತದಲ್ಲದೇ, ಅದು ಸೂಚಿಸುವ ವಸ್ತುವಾಗಲೀ ಅರ್ಥವಾಗಲೀ ಒಂದೂ ಗೋಚರವಾಗುವುದೇ ಇಲ್ಲ. ಒಂದು ವೇಳೆ ಗಮನಕ್ಕೆ ಬಂದರೂ ಕೂಡಲೇ ಕಣ್ಮರೆಯಾಗಿ ಹೋಗಿ ಶಬ್ದದ ಸತ್ವಹೀನವಾದ ಆಕಾರ ನಮ್ಮ ಕೈಯಲ್ಲಿ ಉಳಿದುಕೊಳ್ಳುತ್ತದೆ. ಇಲ್ಲವಾದರೆ ಈ ಬರಿ ಶಬ್ದಕ್ಕೆ ಈ ರೀತಿ ಚಿತ್ರಹಿಂಸೆ ಕೊಟ್ಟು ಆ ಮೂಲಕ ಮಹಾ ವಿಜಯವನ್ನು ಸಾಧಿಸಿದ ಹಾಗೆ ನಾವು ಹುಂಜದ ಕವಾತನ್ನು ನಡೆಸುತ್ತಿರಲಿಲ್ಲ. ಅಲ್ಲದೆ, ಮಂತ್ರದಿಂದಲೇ ಮಾವಿನಕಾಯಿ ಉದುರಿಸುವುದು ಸಾಧ್ಯ ಎಂಬ ನಮ್ಮ ಸನಾತನ ಶ್ರದ್ಧೆ, ಯಾವಾಗಲೂ ಮಾತಿನ ವಿಮಾನದಲ್ಲಿ ಕುಳಿತು ಇಪ್ಪತ್ತೊಂದನೆಯ ಶತಮಾನದಲ್ಲೇ ಜಿಗಿದಾಡುತ್ತಿರುವ ನಮ್ಮ ನಾಯಕರತ್ನದಲ್ಲೂ ಮಿರುಗುತ್ತಿರುವುದು ಆಶ್ಚರ್ಯವಲ್ಲವೇ ? ಅಥವಾ ಆಶ್ಚರ್ಯವೇ ?

ಜಾತಿಯ ಬಗ್ಗೆ ಎಲ್ಲರೂ ಎಲ್ಲ ಕಡೆಯಲ್ಲಿಯೂ ಹೀಗೆ ಸಿಕ್ಕಾಪಟ್ಟೆ ಬಯ್ದಾಡುತ್ತಾ, ಆದರೆ ಅದರಲ್ಲೇ ಕೊನೆಗೂ ತಮ್ಮ ಪುರುಷಾರ್ಥವನ್ನು ಕಂಡುಕೊಳ್ಳುತ್ತಾ ಇರುವಾಗ ಅದರ ಬಗ್ಗೆ ಕನಿಕರ ಹುಟ್ಟುವುದೂ, ಅಂಥ ಮಾಯಾವಿಯ ಬಗ್ಗೆ ಕೊಂಚ ಪ್ರೀತಿಯಿಂದ ವಿಚಾರ ಮಾಡಬೇಕೆನ್ನಿಸುವುದೂ ಸ್ವಾಭಾವಿಕ. ಜಾತಿ ಎಂಬುದು ಇರುವ, ಆದಕಾರಣ ವಾಸ್ತವಿಕವಾದ ಸಂಗತಿ. ಅದು ಇರುವ ಮಾತ್ರವಲ್ಲ, ಬಹು ಪುರಾತನ ಕಾಲದಿಂದ ಇದ್ದುದ್ದೂ ಹೌದು. ಅಲ್ಲದೆ ಅದು ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲ ದೇಶಗಳಲ್ಲೂ ಒಂದಲ್ಲ ಒಂದು ರೀತಿ

ಯಿಂದ ಇದ್ದದ್ದು, ಈಗಲೂ ಇರುವಂಥದು. ಏಕೆಂದರೆ ಅದು ಹುಟ್ಟಿಗೆ ಸಂಬಂಧಪಟ್ಟದ್ದು; ಹುಟ್ಟು ಎಲ್ಲಿಯವರೆಗೆ ಉಂಟೋ ಅಲ್ಲಿಯವರೆಗೂ ಜಾತಿಯ ಕಟ್ಟು ನಿಲ್ಲುವಂಥದು; ಒಂದು ಕಡೆ ಕಟ್ಟು ಬಿಚ್ಚಿದರೆ ಇನ್ನೊಂದು ಕಡೆ ಕಟ್ಟು ಹಾಕಿಕೊಳ್ಳುವಂಥದು. ಪರಿಸರದ ಪರಿಣಾಮ ಏನೇ ಇರಲಿ, ಹುಟ್ಟಿನಿಂದಲೇ ಪ್ರತಿಯೊಂದು ಜೀವಿಗೂ ಒಂದೊಂದು ವಿಶೇಷ ಬರುತ್ತದೆ ಎನ್ನಬಹುದು; ಅಥವಾ ಯಾವುದೋ ಒಂದು ಬಾಗು, ಒಂದು ಡೊಂಕು ಅದಕ್ಕೆ ತಗಲಿಕೊಳ್ಳುತ್ತದೆ. ಆದಕಾರಣವೇ ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟವಾದ ಚೌಕಟ್ಟಿನೊಳಕ್ಕೆ ಸಿಕ್ಕಿ ಉಳಿದವರಿಗಿಂತ ಬೇರೆಯಾಗಿ ತನಗೆ ತಾನೇ ಒಂದು ಲೋಕವಾಗಿ ಬೆಳೆದು ತಾನೇ ಜಾತಿಯಾಗುತ್ತಾನೆ. ಎಷ್ಟೇ ಕಷ್ಟಪಟ್ಟರೂ ಈ ವ್ಯಕ್ತಿಪ್ರತ್ಯೇಕತೆಯನ್ನು ತೊಡೆದು ರಾಮಕೃಷ್ಣನಾರಾಯಣರನ್ನೆಲ್ಲ ಅರೆದು ಒಂದುಗೂಡಿಸಿ ಒಂದೇ ವ್ಯಕ್ತಿಯನ್ನಾಗಿ ಮಾಡುವ ಸಾಹಸಕ್ಕೆ ಇನ್ನೂ ಸಿದ್ಧಿ ದೊರಕಿದ ಹಾಗಿಲ್ಲ ಇನ್ನು ಮುಂದೆಯೂ ದೊರಕುವ ಹಾಗೆ ಕಾಣಲಿಲ್ಲ. ಜಾತಿ ಎಂದು ನಾವು ಯಾವುದನ್ನು ಕರೆಯುತ್ತೇವೋ ಅದು ಈ ಏಕಸದಸ್ಯ ಜಾತಿಯಷ್ಟು ಬಿಗಿಯಲ್ಲ, ಕಟ್ಟುನಿಟ್ಟಾದದ್ದಲ್ಲ ಎಂಬುದು ನಿಜ. ಏಕೆಂದರೆ ಜಾತಿ ಒಟ್ಟಿಗೇ ಹುಟ್ಟಿ ಒಟ್ಟಿಗೇ ಸಾಯುವಂಥದಲ್ಲ. ಅಲ್ಲದೆ ವ್ಯಕ್ತಿ ಎಂಬುದು ಒಂದು ಅಖಂಡ ಸತ್ಯ ಅಥವಾ ಮೂರ್ತವಸ್ತುವಾದರೆ ಜಾತಿ ಎನ್ನುವುದು ಅಂಥ ಅನೇಕ ವ್ಯಕ್ತಿಗಳ ಗುಂಪಿಗೆ ಇಟ್ಟ ಅಮೂರ್ತವಾದ ಹೆಸರು. ಒಂದು ಗುಂಪಿನ ಜನರನ್ನು ಒಂದು ಹೆಸರಿನ ಕೋಟೆಯೊಳಗಿಟ್ಟು ರೂಢಿಯ ಬಾಗಿಲು ಹಾಕಿದರೂ ಅವರಲ್ಲಿ ಏರಬಲ್ಲ ಜನ ಅಥವಾ ಇಳಿಯಬಲ್ಲ ಜನ ಹೊರಬರುವುದಕ್ಕೆ ತಕ್ಕ ದಾರಿಗಳೂ ಸುರಂಗಗಳೂ ಬಹಳ ಉಂಟು. ಹಾಗಿಲ್ಲದ ಹೆಳವರು ಒಳಗೇ ಉಳಿದುಕೊಂಡು, ಅಥವಾ ಬೇರೆಬೇರೆ ಕೋಟೆಗಳಿಂದ ಬೇರೆ ಜನ ವಲಸೆ ಬಂದು ಕೋಟೆಗಳು ಹಾಗೆಯೇಉಳಿದುಕೊಳ್ಳುತ್ತವೆ. ಏಕೆಂದರೆ ಅಣುಬಾಂಬಿನ ಯುಗದಲ್ಲೂ ಸ್ಪೂಟ್ನಿಕ್ ದಶಕದಲ್ಲೂ ಸಾಮಾನ್ಯ ಮನುಷ್ಯರಿಗೆ ಕೋಟೆಯೊಳಗಲ್ಲದೆ ಇರುವ ಧೈರ್ಯವಿಲ್ಲ; ಇಪ್ಪತ್ತನೆಯ ಶತಮಾನದ ಅಶೋಕನ ಕಾಲದಲ್ಲೂ ಮನೆಗೊಂದು ಬಾಗಿಲು, ಒಳಗೆ ಚಿಲಕ, ಹೊರಗೆ ಬೀಗ ಅತ್ಯಗತ್ಯ ಎನ್ನಿಸುತ್ತದೆ ಪಾಮರರಿಗೆ.

ಪ್ರತಿಯೊಬ್ಬ ವ್ಯಕ್ತಿಯೂ ಇನ್ನೊಬ್ಬನಿಗಿಂತ ಪ್ರತ್ಯೇಕ ವೈಶಿಷ್ಟ್ಯವುಳ್ಳವನಾದರೂ ವ್ಯಕ್ತಿಗಳೆಲ್ಲ ಕೆಲವು ಗುಂಪುಗಳಾಗಿ ಸೇರಿಕೊಳ್ಳುವುದು ಅನಿವಾರ್ಯ. ಸಮಾನಧರ್ಮ ಸಮಾನವ್ಯಸನ ಜನರನ್ನು ಹತ್ತಿರ ತರುತ್ತದೆ ಎಂಬ ಮಾತಿನಲ್ಲಿ ಬಹಳ ಸತ್ಯವಿದೆ. ಅಲ್ಲದೆ ಕಾಲದೇಶಸ್ವಭಾವಗಳಿಂದ ಪರಿಮಿತನಾದ ಒಬ್ಬ ಮನುಷ್ಯ ಎಷ್ಟೇ ಸುಸಂಸ್ಕೃತನಾಗಿದ್ದರೂ, ವಿಶ್ವಭಾವನೆಯುಳ್ಳವನೇ ಆಗಿದ್ದರೂ ಏಕಕಾಲದಲ್ಲಿ ಹತ್ತು ಕಡೆ ಇರುವ ಅಥವಾ ತನಗಿಂತ ಭಿನ್ನರಾದ ಲಕ್ಷಲಕ್ಷ ಜನರೊಡನೆ 'ಸಹನೌ ಭುನಕ್ತು' ಮಾಡುವ ಪವಾಡಕ್ಕೆ ಎಡೆ ಇಲ್ಲ. ಪ್ರತಿಯೊಬ್ಬನೂ ತನಗೆ ತಕ್ಕ ಚಿಕ್ಕಚಿಕ್ಕ ಗುಂಪುಗಳಲ್ಲಿ ಸೇರಿಕೊಳ್ಳುತ್ತಾನೆ; ಈ ಚಿಕ್ಕಚಿಕ್ಕ ಗುಂಪುಗಳೆಲ್ಲ ಸೇರಿ ಅವುಗಳಿಗೆ ಸಮಾನ ಗುಣಗಳು ತಕ್ಕಮಟ್ಟಿಗೆ ಇದ್ದ ಪಕ್ಷದಲ್ಲಿ ಒಂದು ದೊಡ್ಡ ಗುಂಪು ಆಗುತ್ತದೆ–ಸಮಾನ ಉದ್ದೇಶಗಳಿಗಾಗಿ, ಸಮಾನ ಆದರ್ಶಗಳಿಂದಾಗಿ. ನಾನು ಒಬ್ಬ ವ್ಯಕ್ತಿ; ನನಗೆ ಎಲ್ಲರೊಡನೆಯೂ ಬೆರೆಯುವುದಕ್ಕೆ ಆಗುವುದಿಲ್ಲ; ನನ್ನ ಸುತ್ತುಮುತ್ತಲಿರುವವರಲ್ಲೂ ಅನೇಕರನ್ನು ಮೆಚ್ಚುವುದಿರಲಿ, ಸಹಿಸುವುದೂ ಕಷ್ಟವಾಗುತ್ತದೆ. ಕೆಲವರ ಮುಖ ನೋಡಿದರೆ, ಕೆಲವರ ಮಾತು ಕೇಳಿದರೆ, ಕೆಲವರ ನಡುವಳಿಕೆ ಕಂಡರೆ ಹೊಟ್ಟೆ ತೊಳಸುತ್ತದೆ, ಪಿತ್ತ ನೆತ್ತಿಗೇರುತ್ತದೆ, ಅಥವಾ ಇಹಜೀವನದ ಬಗ್ಗೆಯೇ ನಿರಾಶೆ ಕವಿಯುತ್ತದೆ. ಹಾಗೆಯೇ ಉಳಿದ ಅನೇಕರಿಗೂ ನನ್ನನ್ನು ಕಂಡರೆ ಆಗಬಹುದು ಎಂಬಷ್ಟು ತಿಳಿವಳಿಕೆಯಾದರೂ ನನ್ನಲ್ಲಿ ಇರುವುದರಿಂದ ನನ್ನ ಮನಸ್ಸು ಕತ್ತಿಕಠಾರಿ ಬಂದೂಕುಗಳನ್ನು ತುಡುಕುವುದಿಲ್ಲ; ಅವರ ನೆರಳು ಬಿದ್ದಾಗ ಮೈ ಬಿಸಿಯಾದರೂ ಕೈ ಏಳದೇ ಇರುವ ಹಾಗೆ ನೋಡಿಕೊಳ್ಳುತ್ತೇನೆ; ಅವರು ಶತ್ರುಗಳೆಂದು ಭಾವಿಸುವುದಿಲ್ಲ. ಯಾವುದೋ ದೂರದ ಗ್ರಹದಿಂದ ಕೆಳಗಿಳಿದ ಅಪರೂಪದ ಪ್ರಾಣಿಗಳು, ಇವು ನನ್ನ ಲೋಕಕ್ಕೆ ಸೇರಿದುವುಗಳಲ್ಲ, ಆದ ಕಾರಣ ಇವುಗಳನ್ನು ಸಹಿಸಬೇಕು ಎಂದು ಮನಸ್ಸಿಗೆ ಹೇಳುತ್ತೇನೆ. ಅಂಥವುಗಳನ್ನು ಪ್ರೀತಿಸಬೇಕು, ಅವುಗಳ ಜೊತೆಗೆ ಊಟ ಉಪಚಾರ ನಡೆಸಬೇಕು ಎಂದರೆ ಮಾತ್ರ ಆಗುವ ಪರಿಣಾಮಗಳಿಗೆ ನಾನು ಜವಾಬ್ದಾರನಾಗಲಾರೆ. ಆದರೆ ಈ ವಿಶೇಷ ಪ್ರಾಣಿಗಳೊಳಗೆ ಈಗಿನ ಹೆಸರುಪಟ್ಟಿ

ತೊಟ್ಟ ಎಲ್ಲ ಜಾತಿಯ ಜನರೂ ಬರುತ್ತಾರೆ–ಎಂಬುದು ಗಮನಾರ್ಹವಾದ ಅಂಶ. ನನ್ನ ಜಾತಿಗೆ ಸೇರಿದ ಪ್ರಾಣಿಗಳೂ ಕೆಲವು ಉಂಟು–ಅವುಗಳ ಸಂಖ್ಯೆ ಬಹಳ ಕಡಿಮೆ, ಅಲ್ಲಿ ಇಲ್ಲಿ ಕೆಲವು ಇವೆ, ಅವುಗಳನ್ನು ಹುಡುಕಿಕೊಂಡು ಹೋಗುತ್ತೇನೆ. ಅವರಲ್ಲಿ ಕೆಲವರು ನಾನು ಹುಟ್ಟಿದ ಜಾತಿಗೆ ಸೇರಿದವರು, ಉಳಿದವರು ಬೇರೆ ಬೇರೆ ಜಾತಿಗಳಿಂದ ಬಂದವರು. ಹೀಗೆ ಒಂದು ಹೊಸ ಜಾತಿಯನ್ನು ಸೃಷ್ಟಿಸಿಕೊಂಡು ಬದುಕುತ್ತೇನೆ. ಇನ್ನೂ ಎಷ್ಟೋ ಜನ ನನ್ನ ಹಾಗೆ ಮಾಡಬೇಕಾಗುತ್ತದೆ, ಅವರಿಗೆ ಇತರ ಮನುಷ್ಯಜೀವಿಗಳೊಡನೆ ನಿಜವಾದ ಮಾನವ ಸಂಬಂಧ ಬೇಕೆನಿಸಿದರೆ, ಎಷ್ಟೋ ಜನಕ್ಕೆ ಆ ಯಾವ ಸಂಬಂಧ ಅಗತ್ಯವೂ ಕಾಣಿಸದೆ ಇರಬಹುದು. ಅಂಥವರು ತಾವು ತಾವು ಹುಟ್ಟಿಬಂದ ಜಾತಿಯಲ್ಲೇ ಕೃತಾರ್ಥತೆಯನ್ನು ಹುಡುಕುತ್ತಾರೆ. ಆದಕಾರಣ ಜಾತಿರಚನೆ ಸ್ವಾಭಾವಿಕವಾದದ್ದು ಮಾತ್ರವಲ್ಲ, ವ್ಯಕ್ತಿವಿಕಾಸಕ್ಕೆ ಅತ್ಯಗತ್ಯ ಎಂತಲೂ ತೋರುತ್ತದೆ.

ಜಾತಿ ಭಾವನೆಯಿಂದ ಎಷ್ಟೆಲ್ಲ ಅನರ್ಥವಾಗುತ್ತಿದೆ ಎಂಬ ಮಾತು ಸುಳ್ಳೇ ? ಎಂದು ಕೇಳಬಹುದು. ಆ ಪ್ರಶ್ನೆ ನ್ಯಾಯವಾದದ್ದು, ಆದರೆ ಯಾವ ಭಾವನೆಯಿಂದಲೂ ಕೆಟ್ಟದ್ದಾಗಬಹುದು ಎಂಬ ಮಾತನ್ನು ಮಾತ್ರ ಮರೆಯಬಾರದು. ವ್ಯಕ್ತಿಯ ಸ್ವಾರ್ಥದಿಂದ ಕೆಡುಕು ಆಗುವುದಿಲ್ಲವೇ, ಕುಟುಂಬ ಭಾವನೆಯಿಂದ, ರಾಷ್ಟ್ರಭಾವನೆಯಿಂದ, ಹಾಗೆಯೇ ಮಾನವತಾ ಭಾವನೆಯಿಂದಲೂ ದುಷ್ಪರಿಣಾಮಗಳು ಉಂಟಾಗಿಲ್ಲವೇ ? ಆದರೂ ಆ ಎಲ್ಲ ಭಾವನೆಗಳೂ ಇರುವಂಥವುಗಳು. ಎಂದರೆ ಕೆಡುಕು ಉಂಟಾಗುವುದಕ್ಕೂ ಈ ನಾನಾ ತರಹದ ಭಾವನೆಗಳಿಗೂ ಯಾವ ಸಂಬಂಧವಿದೆ ಎಂದು ನಾವು ಪರೀಕ್ಷಿಸಬೇಕಲ್ಲವೆ ? ಈ ಎಲ್ಲ ಭಾವನೆಗಳಿಗೂ ಪ್ರಾಣಸ್ವರೂಪವಾಗಿರುವುದು ವ್ಯಕ್ತಿ ಪ್ರತ್ಯೇಕ ಭಾವನೆ. ಆ ಭಾವನೆಯೆ ದುಷ್ಟ ಎಂದು ಸಮವಸ್ತ್ರವಾದಿಗಳು ಹೇಳುವುದನ್ನು ಕೇಳಿದ್ದೇವೆ. ಹಾಗೆಯೇ ಈ ಜಗತ್ತೇ, ಈ ಜೀವನವೇ ದುಷ್ಟ, ಅಸಹ್ಯ ಎನ್ನುವವರನ್ನೂ ನಾವು ಬಲ್ಲೆವು. ಕೆಲವರಿಗೆ ಈ ಜೀವನವೇ ದುಷ್ಟ, ಅಸಹ್ಯ ಎನ್ನುವವರನ್ನೂ ನಾವು ಬಲ್ಲೆವು. ಕೆಲವರಿಗೆ ಈ ಶರೀರವನ್ನು ಕಂಡರೇ ಕೋಪವುದಕ್ಕೇರಿ ಈ ಮಲಮೂತ್ರಪಿಂಡವನ್ನು ತುಂಡು ಮಾಡುವಷ್ಟು ಸಿಟ್ಟು ಬಂದು ಅದನ್ನು ಶರೀರದ ಅಂಗಗಳೇ ಆದ ಗಂಟಲು ನಾಲಗೆ ಹಲ್ಲು ತುಟಿಗಳ ಮೂಲಕವೇ ವ್ಯಕ್ತಪಡಿಸುವುದನ್ನು ಕೇಳಿದ್ದೇವೆ. ಆದರೆ ಎಷ್ಟು ಎಗರಾಡಿದರೂ ಈ ಜಗತ್ತು, ಈ ಜೀವನ, ಈ ಶರೀರ – ಇವುಗಳನ್ನು ಇಲ್ಲವಾಗಿಸುವುದಕ್ಕೆ ಆಗುವುದಕ್ಕೆ ಆಗುವುದಿಲ್ಲ. ಅದೇ ರೀತಿ ವ್ಯಕ್ತಿ, ಜಾತಿ, ರಾಷ್ಟ್ರಗಳನ್ನೂ ತೊಡೆದುಹಾಕುವುದಕ್ಕೆ ಆಗುವುದಿಲ್ಲ. ಆದಕಾರಣ ಅವುಗಳು ಸ್ವಭಾವತಃ ಒಳ್ಳೆಯವೂ ಅಲ್ಲ; ಕೆಟ್ಟವೂ ಅಲ್ಲ; ಆದರೆ ವಾಸ್ತವಿಕವಾದ ಸಂಗತಿಗಳು ಎಂದು ತಿಳಿಯುವುದೇ ವಿವೇಕ.

ತನ್ನ ಬಗ್ಗೆ ತನಗೆ ಅಭಿಮಾನವಿರುವುದು, ತನ್ನ ಹೆಂಡತಿ ಮಕ್ಕಳುಗಳ ಬಗ್ಗೆ ಪ್ರೀತಿ ಇರುವುದು ಹೇಗೆ ಸ್ವಾಭಾವಿಕವೋ ಹಾಗೆಯೇ ತನ್ನ ಜಾತಿಯ ಬಗ್ಗೆ ಅಭಿಮಾನ ಇರುವುದೂ ಸ್ವಾಭಾವಿಕ. ಅಂಥ ಪ್ರೀತ್ಯಭಿಮಾನಗಳನ್ನು ತೊಡೆದುಹಾಕುವೆನೆನ್ನುವ ಪ್ರಯತ್ನ ಡಾನ್ ಕ್ವಿಕ್ಸೋಟನ ವ್ಯರ್ಥ ಪರಿಶ್ರಮ ಮಾತ್ರವಲ್ಲ, ಸಮಾಜಕ್ಕೆ ಹಾನಿಕಾರವೂ ಹೌದು. ತನ್ನ ವ್ಯಕ್ತಿಜೀವನದ ಸಣ್ಣ ಜಗತ್ತಿನಾಚೆಗೆ ಮನುಷ್ಯ ಎಷ್ಟೆಷ್ಟು ಮಟ್ಟಿಗೆ ಮೂತಿಯನ್ನು ಹೊರಚಾಚುತ್ತಾನೊ ಅಷ್ಟಷ್ಟು ಅವನ ವಿಕಾಸಕ್ಕೆ ಸಹಾಯ, ಸುತ್ತಮುತ್ತಲಿನ ನೆಮ್ಮದಿಗೆ ಸಹಕಾರಿ. ಅಲ್ಲದೆ ತನ್ನತನದಿಂದ ತನ್ನನ್ನು ಹೊರಚಾಚುವ ಶಕ್ತಿ ಮನುಷ್ಯರಲ್ಲಿ ಬಹಳ ಪರಿಮಿತವಾದದ್ದು; ಆ ಪರಿಮಿತ ಶಕ್ತಿಗೆ ಅಪರಿಮಿತವಾದ ಎತ್ತರವನ್ನು ತೋರಿಸಿದರೆ ಅದು ಕುಗ್ಗಿಹೋಗುತ್ತದೆ ಎಂಬುದನ್ನೂ ನೆನಪಿಡಬೇಕು. ಕೇವಲ ತನ್ನ ಕುಟುಂಬದ ಯೋಗಕ್ಷೇಮದ ಮಟ್ಟಿಗೆ ತನ್ನತನವನ್ನು ಮರೆಯಬಲ್ಲ ಸಾಮರ್ಥ್ಯಕ್ಕೆ ವಸುಧೈವಕುಟುಂಬಕನಾಗು ಎಂದರೆ, ಹಾಗೆ ಆಗಬೇಕು ಎಂಬ ಸಾಮಾಜಿಕ ವಾತಾವರಣವನ್ನು ಸೃಷ್ಟಿಸಿದರೆ ಅವನು ಆಷಾಢಭೂತಿಯಾಗಿ ಲೋಕಕಂಟಕನಾಗುತ್ತಾನೆ ಎಂಬುದು ಸುಲಭಗಮ್ಯವಾದ ಮಾತು. ಆದಕಾರಣ ಯಾವ ಯಾವ ಮನುಷ್ಯ ತನ್ನ ಕುಟುಂಬಕ್ಕಾಗಿ ತನ್ನ ಜಾತಿಗಾಗಿ ಕೆಲಸ ಮಾಡುತ್ತಾನೋ ಆ ಮನುಷ್ಯನನ್ನು ನಾವು ಗೌರವಿಸಬೇಕು, ಅವನನ್ನು ಎದೆಗೆಡಿಸಬಾರದು. ಒಳ್ಳೆಯದು ಎಷ್ಟೆಷ್ಟು ನೆರವೇರಿದರೆ, ಆಷಾಢಭೂತಿ

ತನ ಎಷ್ಟೆಷ್ಟು ಕಡಿಮೆಯಾದರೆ ಅಷ್ಟಷ್ಟು ಒಳ್ಳೆಯದು. ತನ್ನ ಮನೆಯಲ್ಲಿರುವವರನ್ನೆಲ್ಲ ಸುಖವಾಗಿಟ್ಟಿದ್ದಾನೆ ಒಬ್ಬ ಮನಷ್ಯ ಎಂದರೆ ನನಗೆ ಸಂತೋಷವಾಗಬೇಕು. ಅದೇ ಒಬ್ಬ ಮನುಷ್ಯ ತನ್ನ ಜಾತಿಯವರಿಗಾಗಿ ಒಂದು ಹಾಸ್ಟಲು ಕಟ್ಟಿಸಿದ, ತನ್ನ ಜಾತಿಯ ಬಡವರಿಗಾಗಿ ಒಂದು ಕಾರ್ಖಾನೆ ತೆರೆದ ಎಂದರೆ ನನಗೆ ಸಂತೋಷವಾಗಬೇಕು. ಆದರೆ ಅದೇ ಮನುಷ್ಯ ತನ್ನ ಜಾತಿಯವರಿಗೆ ಸಹಾಯ ಮಾಡುತ್ತೇನೆಂದು ಇನ್ನೊಂದು ಜಾತಿಯವರ ಮನೆಗಳನ್ನು ಸುಲಿದ, ಅವರ ಅನ್ನವನ್ನು ಕಿತ್ತುಕೊಂಡ, ಎಂದರೆ ಆಗ ಮಾತ್ರ ಇದು ಅನಿಷ್ಟ ಎನ್ನಬೇಕು. ಅಲ್ಲಿಯವರೆಗೂ ಜಾತಿಭಾವನೆಯನ್ನು ಟೀಕಿಸಲು ಯಾರಿಗೂ ಅಧಿಕಾರವಿಲ್ಲ.

ಪ್ರತಿಯೊಬ್ಬ ವ್ಯಕ್ತಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಇರುವಂಥವನೆಂಬುದು ನಿಜವಾದರೂ ಈ ಜಗತ್ತಿನಲ್ಲಿ ಅವನೊಬ್ಬನೇ ಇರುವುದಿಲ್ಲ; ಅವನಂಥವರೇ ಕೋಟ್ಯಂತರ ಜನವೂ ಇರುತ್ತಾರೆ. ಯಾವಾಗ ವ್ಯಕ್ತಿ ಉಳಿದ ವ್ಯಕ್ತಿಗಳನ್ನೆಲ್ಲ ಮರೆತು ತಾನೊಬ್ಬನೇ ಇದ್ದರೆ ಹೇಗೋ ಹಾಗೆ ವರ್ತಿಸಲು ಶುರು ಮಾಡುತ್ತಾನೋ ಆಗ ಅವನು ಸಮಾಜಕ್ಕೆ ಅನಿಷ್ಟಕಾರಿ ಆಗುತ್ತಾನೆ. ಅದೇ ರೀತಿ ಒಂದು ಜಾತಿಯ ಜನ, ತಮ್ಮ ಸುತ್ತಲೂ ಇನ್ನೂ ಅನೇಕ ಜಾತಿಗಳಿವೆ ಎಂಬುದನ್ನು ಯಾವಾಗ ಮರೆಯುತ್ತಾರೋ ಆಗ ಜಾತಿಭಾವನೆ ಮಾರಕವಾಗುತ್ತದೆ. ನಮ್ಮಲ್ಲಿ ಜಾತಿಭಾವನೆ ಈ ರೀತಿ ರೂಪುಗೊಳ್ಳುತ್ತಿರುವುದರಿಂದಲೇ ಅದು ಅನಿಷ್ಟವೆಂದು ನಮಗೆ ತೋರುತ್ತಿರುವುದು. ಎಂದರೆ ಎಲ್ಲಕ್ಕಿಂತಲೂ ಮೊದಲು ಒಬ್ಬ ವ್ಯಕ್ತಿ ಮನುಷ್ಯ, ಸಮಾಜ ಮನುಷ್ಯರ ಸಮೂಹ ಎಂಬ ತಿಳಿವಿನ ಸರಿಯಾದ ಉಪಯೋಗ ಅತ್ಯವಶ್ಯ. ಮನುಷ್ಯನಿಗೆ ಸಹಜವಾದ, ಮನುಷ್ಯನಿಗೆ ಅಗತ್ಯವಾದ ಕೆಲವು ಮೂಲಭೂತ ಗುಣಗಳಿಗೆ ತಕ್ಕ ವಾತಾವರಣದ ನಿರ್ಮಾಣ ವ್ಯವಸ್ಥಿತವೆನ್ನಿಸುವ ಪ್ರತಿಯೊಂದು ಸಮಾಜದ ಆದ್ಯ ಕರ್ತವ್ಯ. ಈ ಗುಣಗಳು ಯಾವುವು ಎಂಬುದನ್ನು ಪ್ರತಿಯೊಂದು ಸಮಾಜದ ಪರಂಪರೆಯೂ ನಮ್ಮ ಬುದ್ಧಿಯೂ ನಮಗೆ ಕಲಿಸಬಲ್ಲುದು. ಈ ಗುಣಗಳಲ್ಲಿ ಮುಖ್ಯವಾದದ್ದು ವಿವೇಕ, ಸತ್ಯದ ಶೋಧನೆ, ಸತ್ಯದಲ್ಲಿ ನಿಷ್ಠೆ; ಇದು ಸರಿ, ಇದು ತಪ್ಪು, ಇದು ಇದು ನ್ಯಾಯ, ಇದು ಅನ್ಯಾಯ ಎಂಬ ವಿವೇಚನೆ; ಇದು ಉತ್ತಮ, ಇದು ಮಧ್ಯಮ, ಇದು ಅಧಮ ಎಂಬ ತಾರತಮ್ಯ ಜ್ಞಾನ ಎಲ್ಲರಿಗೂ ಸಲ್ಲುವ, ಎಲ್ಲರಿಗೂ ಒಪ್ಪುವ ಕೆಲವು ನಿಯಮಗಳ, ಕಟ್ಟುಗಳ, ಮಿತಿಗಳ ಅರಿವು, ಆ ಅರಿವಿನಂತೆ ನಡೆಯುವ ಪ್ರವೃತ್ತಿ, ಇದು ವ್ಯಕ್ತಿಗೆ ಹೇಗೋ ಹಾಗೆ ಜಾತಿಗಳಿಗೂ ರಾಷ್ಟ್ರಗಳಿಗೂ ಮೂಲಭೂತವಾಗಿ ಇರಬೇಕಾದ, ಎಲ್ಲರ ಶಾಂತಿಗೂ ಪುರೋಭಿವೃದ್ಧಿಗೂ ಅಗತ್ಯವಾದ ನಿಯಮಗಳ ಆಚರಣೆ.

ಈ ನಿಯಮಗಳು ವ್ಯಕ್ತಿಯ ಆಶೆ ಆಕಾಂಕ್ಷೆಗಳ ಆಚೆಗೆ ಇರುವಂಥವುಗಳಾದ್ದರಿಂದ ಇವು ವಾಸ್ತವಿಕ. ಉದಾಹರಣೆಗೆ ಹೇಳುವುದಾದರೆ ನನ್ನ ಮಗನಲ್ಲಿ ನನಗೆ ಪ್ರೀತಿಯೂ, ಅವನ ಶ್ರೇಯಸ್ಸಿಗಾಗಿ ಕಾತರವೂ ಇರುತ್ತದೆ. ಇದು ಸ್ವಾಭಾವಿಕವೂ ಹೌದು. ಅವಶ್ಯವೂ ಹೌದು. ಅವನಿಗಾಗಿ ನನ್ನ ಶ್ರಮ, ವೇಳೆ, ಹಣ ಎಲ್ಲವನ್ನೂ ನಾನು ವ್ಯಯಿಸಿದರೆ ಅದರಲ್ಲಿ ಯಾರಿಗೂ ದೋಷ ಕಾಣಲು ಸಾಧ್ಯವಿಲ್ಲ. ಆದರೆ ನನ್ನ ಮಗನ ತೂಕ ತಕ್ಕಡಿಯಲ್ಲಿಟ್ಟಾಗ ಎಪ್ಪತ್ತು ಪೌಂಡು ತೋರಿಸುತ್ತಿದ್ದಾಗ, ಅದೇ ನಮ್ಮ ಪಕ್ಕದ ಮನೆಯ ಹುಡುಗನ ತೂಕ ಅದೇ ತಕ್ಕಡಿ ಎಂಭತ್ತು ಪೌಂಡು ಎಂದು ಸೂಚಿದರೆ, ನನ್ನ ಮಗನ ತೂಕವೇ ಹೆಚ್ಚು ಎಂದು ನಾನು ದುರಭಿಮಾನ ವ್ಯಕ್ತಪಡಿಸಬಾರದು. ಏಕೆಂದರೆ ಅದು ವಸ್ತುಸ್ಥಿತಿಗೆ ವಿರೋಧ. ಅದು ಸುಳ್ಳು. ಇದೇ ರೀತಿ ಒಬ್ಬ ನನ್ನ ಜಾತಿಯವನಾದ ಕಾರಣ ಅವನು ಎಷ್ಟೇ ದಡ್ಡನಿದ್ದರೂ ಬೇರೆ ಜಾತಿಯ ಬುದ್ಧಿವಂತನೊಬ್ಬನಿಗಿಂತ ಹೆಚ್ಚು ಬುದ್ಧಿಯುಳ್ಳವನು ಎಂದು ನಾನು ಹೇಳಬಾರದು. ಒಳ್ಳೆಯತನ, ಸದಾಚಾರ, ಬುದ್ಧಿಯುಳ್ಳವನು ಎಂದು ನಾನು ಹೇಳಬಾರದು. ಒಳ್ಳೆಯತನ, ಸದಾಚಾರ, ಬುದ್ಧಿಕೌಶಲ, ಪರಿಣತಿ–ಇವು ಎಲ್ಲಿ ಇದ್ದರೂ ಅವನ್ನು ಗೌರವಿಸುವ ಬುದ್ಧಿಯೂ, ನ್ಯಾಯದ ಬಗ್ಗೆ ಪಕ್ಷಪಾತವೂ, ಅನ್ಯಾಯದ ಬಗ್ಗೆ ಪ್ರತಿಭಟನೆಯೂ ಕುದುರುವಂತೆ ತಿಳಿದವರು ಮೇಲ್ಪಂಕ್ತಿ ಹಾಕಬೇಕು. ಅಂಥ ಮೇಲ್ಪಂಕ್ತಿ ಇಲ್ಲದ ಕಡೆ ತತ್ಕಾಲದ ಅಲ್ಪಸ್ವಲ್ಪ ಹಿತಕ್ಕಾಗಿ ನಾವು ನಮ್ಮೆಲ್ಲರ ನಿಜವಾದ ಅಭ್ಯುದಯಕ್ಕೆ ಗೋರಿ ತೋಡಿದ ಹಾಗೆ ಆಗುತ್ತದೆ.

ಆಗ ಜಾತಿಭಾವನೆ ಮಾರಕವಾಗುತ್ತದೆ; ಹೊಟ್ಟೆ ತುಂಬುವ ಆಶೆ ಅತಿರೇಕವಾಗಿ ಸಿಕ್ಕಾಪಟ್ಟೆ ತಿನ್ನಬಾರದ್ದನ್ನು ನಾಲಗೆಯ ಸವಿಗಾಗಿ ತಿಂದು ಇಡೀ ಶರೀರವನ್ನೇ ರೋಗಕ್ಕೀಡುಮಾಡಿ ಕ್ಷಣಕಾಲದ ಸುಖಕ್ಕಾಗಿ ವರ್ಷವರ್ಷಗಳ ಯಾತನೆಯನ್ನು ಅನುಭವಿಸಬೇಕಾಗಿ ಬರುವ ಅವಿವೇಕ, ಅತಿರೇಕದ ಹಾಗೆ. ಆದರೆ ಇದರಿಂದ ಊಟ ಮಾಡಲೇಕೂಡದು ಎನ್ನುವ ಸಿದ್ಧಾಂತಕ್ಕೆ ಬರುವುದೂ ಅವಿವೇಕ.

ಈಗ ನಮ್ಮ ದೇಶದ ದುಸ್ಥಿತಿಗೆ ಇದು: ಜಾತಿಯ ಸತ್ಯಕ್ಕಿಂತ ಮೇಲ್ಪಟ್ಟ ಮಾನವ ಸತ್ಯಕ್ಕೆ ಈ ಜಾತಿಭಾವನೆ ಅಡಿಯಾಳಾಗುವುದನ್ನು ಮರೆತದ್ದು. ಹೀಗೆ ಮರೆಯುವ ಹಾಗೆ ಆದದ್ದು ಸಮಾಜದ ಮುಂದಾಳು ಎನ್ನಿಸಿಕೊಂಡವರು ತತ್ಕಾಲದ ಲಾಭಕ್ಕಾಗಿ, ತನ್ನ ಅಳಿಯನಿಗೆ ಒಳ್ಳೆಯ ಕೆಲಸ ಗಿಟ್ಟಿಸಿಕೊಳ್ಳುವುದಕ್ಕಾಗಿ, ಚುನಾವಣೆಯ ವಿಜಯಕ್ಕಾಗಿ ಜಾತಿಭಾವನೆಯನ್ನು ಉದ್ರೇಕಗೊಳಿಸಿ, ದೇಹದೊಳಗಿನ ಶಾಖದಂತೆ ಜೀವಕ್ಕೆ ಅಗತ್ಯವೂ ಹಿತವೂ ಆದ ಒಂದು ಭಾವನೆಯನ್ನು ವಿಷಮಶೀತ ಜ್ವರದ ಕಾವಿಗೆ ಏರಿಸಿದ್ದರಿಂದ ಈಗ ಎಲ್ಲವೂ ಅಸ್ತವ್ಯಸ್ತವಾಗಿಬಿಟ್ಟಿದೆ. ಈಗ ಈ ದೇಶದಲ್ಲಿ ಯಾವುದೂ, ಕೇವಲ ಒಂದು ಕಛೇರಿಯಲ್ಲಿ ಮಾಮೂಲಾಗಿ ನಡೆಯಬೇಕಾದ ಕೆಲಸವೂ ನಿಯಮಬದ್ಧವಾಗಿ ತನಗೆ ತಾನೇ ನಡೆಯುವುದಿಲ್ಲ. ಪ್ರತಿಯೊಂದು ನಿಯಮವೂ ಜಾತಿಯ ಅಥವಾ ರಾಷ್ಟ್ರದ ಅಥವಾ ಸಮಸ್ತ ಮಾನವ ಸಮುದಾಯದ ಸ್ವಾರ್ಥ ಪ್ರೇರಿಸುವ ಆಶೆ ಆಕಾಂಕ್ಷೆಗಳ ಸೀಮೆಯ ಆಚೆಗೆ, ಕೆಲವು ಚಿರಂತನವಾದ ತತ್ವಗಳೂ ಸತ್ಯಗಳೂ ಇವೆ, ಅವುಗಳನ್ನರಿತು ಅದಕ್ಕೆ ಸರಿಯಾಗಿ ತಮ್ಮ ಆಶೆ ಆಕಾಂಕ್ಷೆಗಳನ್ನು ರೂಪಿಸಿಕೊಳ್ಳುವುದರಿಂದಲೇ ನಾವು ಅಭ್ಯುದಯ ಹೊಂದುವುದು ಸಾಧ್ಯ ಎಂಬ ಮಾತು ನಮಗೆ ಮರೆತ ಹಾಗಿದೆ. ಈ ತತ್ವಗಳು ನಮ್ಮ ಹೊರಗಿರುವುವು ಹೇಗೋ ಹಾಗೆ ನಮ್ಮ ಒಳಗೇ ಇರುವುವೂ ಹೌದು. ಒಂದು ಮಟ್ಟದಲ್ಲಿ ಸತ್ಯಾಸತ್ಯ ವಿವೇಕ ಎಲ್ಲರಲ್ಲೂ ಇದೆ. ಈ ವಿವೇಕ ಸ್ವಾರ್ಥಜನ್ಯವಾದ ಆಶೆಗಳಿಗಿಂತ ಭಿನ್ನವಾದದ್ದು. ಅದನ್ನು ಮನುಷ್ಯ ಬುದ್ಧಿಯಿಂದ ಗ್ರಹಿಸಬಲ್ಲ–ಆದರೆ ಅದರ ಆದೇಶದಂತೆ ನಡೆಯುವುದೂ ಎಷ್ಟು ಅಗತ್ಯ ಎಂದು ಅರಿಯಬಲ್ಲ ದೂರದರ್ಶಿತ್ವ ಸಾಮಾನ್ಯನಲ್ಲಿ ಇರುವುದಿಲ್ಲ. ಯಾರು ಸಮಾಜದ ಮುಂದಾಳುಗಳೋ ಅವರು ತಕ್ಕ ಮೇಲ್ಪಂಕ್ತಿ ಹಾಕಬೇಕು–ಎಲ್ಲರ ಒಳ್ಳಿತಿಗಾಗಿ ಹೇಗೋ ಹಾಗೆ ಪ್ರತಿಯೊಬ್ಬನ ಅಭಿವೃದ್ಧಿಗಾಗಿಯೂ. ಆದರೆ ಇತ್ತೀಚೆಗೆ ನಮಗೆ ಮುಂದಾಳುಗಳಾಗಿ ಬರುತ್ತಿರುವವರಲ್ಲಿ ಈ ಶಕ್ತಿ, ತತ್ಕಾಲದಾಚೆಗೆ ನೋಡುವ ದೃಷ್ಟಿಶಕ್ತಿ ಇಲ್ಲವಾದುದೇ ಜಾತಿಭಾವನೆಯಿಂದ ಅನಿಷ್ಟಗಳಾಗುತ್ತಿರುವುದಕ್ಕೆ ಕಾರಣ. ಈ ದೃಷ್ಟಿಮಾಂದ್ಯಕ್ಕೆ ತಕ್ಕ ಅಂಜನ ಸಿದ್ಧವಾಗಬೇಕು. ಈ ಕುರುಡರನ್ನು ಕೆಳಗೆಳೆದು ಕಣ್ಣು ಸರಿಯಾಗಿರುವವರನ್ನು ಮುಂದಾಳುಗಳಾಗಿ ನಾವು ಮಾಡಿಕೊಳ್ಳಬೇಕು. ಮುಖ್ಯವಾದ ಮಾತು ಇದು: ಹೊಲದೊಳಗಡೆ ಫಸಲು ಸಮೃದ್ಧವಾಗಿರುವಾಗ ಬೇಲಿ ಯಾಕೆ ಎಂದು ಅಲ್ಪಮತಿಗೆ ತೋರುತ್ತದೆ. ಏಕೆಂದರೆ ಬೇಲಿಯಿಲ್ಲದೆ ಇದ್ದರೆ ಯಾರು ಬೇಕಾದರೂ ಅಲ್ಲಿ ತನ್ನ ತನ್ನ ಹೊಟ್ಟೆಯ ಅಳತೆಗನುಸಾರವಾಗಿ, ಮೇಯಬಂದ ಇತರರನ್ನು ಹೊಡೆದಟ್ಟಬಲ್ಲ ತನ್ನ ಕೊಂಬಿನ ಶಕ್ತಿಗನ್ನುಸಾರವಾಗಿ ಮೇಯಬಹುದು. ಆದರೆ ಇರುವ ಫಸಲು ಕೂಡಲೇ ಮುಗಿದುಹೋಗುತ್ತದೆ, ಮತ್ತೆ ಬೀಜ ಚೆಲ್ಲಿದರೆ ಅದು ಮೊಳೆಯುವಷ್ಟರಲ್ಲೇ ಗೂಳಿಗಳ ಹೊಟ್ಟೆಯನ್ನು ಸೇರುತ್ತದೆ. ಆದಕಾರಣ ಬೇಲಿಯಿಲ್ಲದೆ ಹೊಲವಿಲ್ಲ, ಯಾರಿಗೂ ಏನೂ ಉಳಿಯುವುದಿಲ್ಲ–ಗೂಳಿಗಳಿಗೂ ಕೂಡ.

ಜಾತಿಭಾವನೆಯನ್ನು ಹದ್ದುಬಸ್ತಿನಲ್ಲಿ ಇಡಲು ಭಾಷಣ, ಹಿತೋಪದೇಶ, ರೇಗಾಟ, ಕೂಗಾಟಗಳಿಂದ ಉಪಯೋಗವಿಲ್ಲ. ಅವುಗಳಿಂದ ಒಂದು ಬಗೆಯ ಭಾವಸಂತೃಪ್ತಿ ಸಿಕ್ಕಿ ನಾವು ಈ ಬಗ್ಗೆ ನಿಜವಾಗಿಯೂ ಏನೋ ಮಾಡುತ್ತಿದ್ದೇವೆಂಬ ಭ್ರಮೆ ನಮ್ಮಲ್ಲಿ ಹುಟ್ಟುತ್ತದೆ–ಅಷ್ಟೆ. ಆದಕಾರಣ ಜಾತಿಯನ್ನು ಸಮಯ ಸಿಕ್ಕಿದಾಗಲೆಲ್ಲ ಬೀಳ್ಗಳೆವ ವಿಫಲ ವ್ಯಾಪಾರವನ್ನು ಬಿಟ್ಟು ಬಾಯಿ ಮುಚ್ಚಿಕೊಂಡು ಕೆಲವು ಕೆಲಸಗಳನ್ನು ನಿಧಾನವಾಗಿ ಮಾಡಿಕೊಂಡು ಹೋಗಬಹುದು. ಇದರಲ್ಲಿ ಈಗ ಯಾರು ಸರಕಾರವನ್ನು ನಡೆಸುತ್ತಿರುವರೋ ಅವರ ಜವಾಬ್ದಾರಿ ಬಹು ಮುಖ್ಯವಾದದ್ದು. ಸರಕಾರ ಹೇಗೆ ನಡೆಯಬೇಕೆಂಬ ಬಗ್ಗೆ ಬೇಕಾದಷ್ಟು ನಿಯಮ ನಿಬಂಧನೆಗಳೂ, ರೂಲ್ಸುಗಳೂ ಕಾನೂನುಗಳೂ ಇವೆ. ಅಧಿಕಾರಸ್ಥಾನದಲ್ಲಿರುವವರು ಆ ನಿಯಮಗಳನ್ನು ಯಾವೊಂದು ಪಕ್ಷಪಾತವಿಲ್ಲದೆ ಆಚರಣೆಗೆ ತರುವುದನ್ನು

ಕಲಿಯಲಿ, ನಿಯಮಕ್ಕೆ ವಿರುದ್ಧವಾಗಿ ಕಾನೂನು ಬಾಹಿರವಾಗಿ ಇಲ್ಲಿ ಯಾವುದೂ ನಡೆಯದು ಎಂಬುದು ಸಾಮಾನ್ಯ ಜನಕ್ಕೆ ಖಾತ್ರಿಯಾಗಲಿ. ಆಗ ಜಾತಿ ಭಾವನೆ ತನ್ನಿಂದ ತಾನೇ ತನ್ನ ಹದ್ದಿನೊಳಕ್ಕೆ ಮುದುರಿಕೊಂಡು, ಇತರ ಜಾತಿಯವರಿಗೂ ಆ ಮೂಲಕ ದೇಶಕ್ಕೂ ಹಾನಿಯಾಗದ ಹಾಗೆ ಕಾರ್ಯಪ್ರವೃತ್ತವಾಗುವುದನ್ನು ಕಲಿಯುತ್ತದೆ. ಆದರೆ ಈಗ ಈ ರೀತಿ ಅಧಿಕಾರವನ್ನು ನಡೆಸಿಕೊಂಡು ಹೋಗುತ್ತಿರುವಾಗ ಹಳ್ಳಕ್ಕೆ ಬೀಳದೇ ಇರುವುದೇ ಅಸ್ವಾಭಾವಿಕ.

ಆದರೆ ಕುರುಡರಿಗೆ ಕಾಣಿಸದೆ ಇದ್ದದ್ದು ಕಣ್ಣುಳ್ಳವರು ಕಾರ್ಯಪ್ರವೃತ್ತರಾಗಬೇಕಾದ ಕಾಲ ಆಗಲೇ ಮಿಂಚಿಹೋಗುತ್ತಿರುವ ಹಾಗೂ ತೋರಬಹುದು. ಆದರೆ ಜೀವವಿರುವವರೆಗೂ ಬಹಳ ಕಷ್ಟಪಟ್ಟಾದರೂ ನಿರಾಶೆಯನ್ನು ದೂರತಳ್ಳಬೇಕು. ಸತ್ಯವನ್ನು, ನಿಜವನ್ನು, ಕಾಣಬಲ್ಲ ವಸ್ತು ದೃಷ್ಟಿಯುಳ್ಳ ಚಿಂತನಶೀಲರು, ದೂರದಲ್ಲಿರುವ ಹಳ್ಳವನ್ನು ಈಗಲೇ ಊಹಿಸುವಷ್ಟಾದರೂ ದೂರ ದೃಷ್ಟಿಯುಳ್ಳವರು ಸರಿಯಾದ ದಾರಿಯನ್ನು ಉಳಿದವರಿಗೆ ಹಾಕಿಕೊಡಬೇಕು. ಇದು ಕರ್ತವ್ಯ, ಜೀವನ–ಮರಣದ ಪ್ರಶ್ನೆ ಎಂದು ತಿಳಿಯಬೇಕು. ತಮ್ಮ ಬುದ್ಧಿಯನ್ನು ಉಪಯೋಗಿಸಬಲ್ಲ ಸಾರಾಸಾರ ವಿವೇಕವುಳ್ಳವರ ಸಂಖ್ಯೆ ಕಡಿಮೆ, ಅವರು ದೇಶದ ಎಲ್ಲ ಕಡೆಯೂ ಚೆದರಿ ಹೋಗಿರುತ್ತಾರೆ ಎಂಬುದೂ ನಿಜ. ಹಾಗಿದ್ದರೂ ಎಲ್ಲೆಲ್ಲಿ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಬುದ್ಧಿಯ ಕೆಲಸ ಎಲ್ಲ ಕಡೆಯಲ್ಲಿಯೂ ನಡೆಯಬೇಕು. ಪ್ರತಿಯೊಂದು ಸಮಸ್ಯೆಯ ಮೇಲೂ–ಅದು ಆರ್ಥಿಕವಿರಲಿ, ರಾಜಕೀಯವಿರಲಿ, ಸಾಮಾಜಿಕವಿರಲಿ, ತಾತ್ವಿಕವಿರಲಿ, ಸಾಹಿತ್ಯದ್ದಿರಲಿ–ನಮ್ಮ ಬುದ್ಧಿ ಕೆಲಸ ಮಾಡಬೇಕು. ಆ ಬುದ್ಧಿಯ ಫಲ ಎಷ್ಟು ಜನಕ್ಕೆ ಸಾಧ್ಯವೋ ಅಷ್ಟು ಜನಕ್ಕೆ ತಲುಪುವ ಹಾಗೆಯೂ ಮಾಡಬೇಕು. ಒಂದು ವಿಷಯದ ಮೇಲೆ ವಸ್ತುನಿಷ್ಠೆಯಿಂದ ಬುದ್ಧಿ ಕೆಲಸ ಮಾಡಲು ಶುರುಮಾಡಿದರೆ ತಾರತಮ್ಯಜ್ಞಾನ, ಒಳಿತು ಕೆಡಕುಗಳ ವಿವೇಕ ಕುದುರುತ್ತದೆ. ಆಗ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ, ನ್ಯಾಯಾನ್ಯಾಯ ಸತ್ಯಾಸತ್ಯಗಳನ್ನು ನಿಷ್ಪಕ್ಷಪಾತವಾಗಿ ವಿವೇಚಿಸಬಲ್ಲ ಹೊಸ ಜಾತಿಯೊಂದರ ನಿರ್ಮಾಣ ಈಗ ಅತ್ಯಗತ್ಯ. ಈ ಜಾತಿಗೆ ಸದಸ್ಯರಾಗಿ ಎಲ್ಲ ಜಾತಿಗಳಲ್ಲೂ ಇರುವ ನ್ಯಾಯನಿಷ್ಠರು ಸೇರಬೇಕು.

ಈ ಹೊಸ ಜಾತಿಯ ಜನರು ಆಗಲೇ ಒಬ್ಬರನ್ನೊಬ್ಬರು ಗುರುತಿಸಲು ಕಲಿಯುತ್ತಿದ್ದಾರೆ. ಈ ದೇಶದ ಎಲ್ಲ ಕಡೆಗಳಲ್ಲೂ ಅಂಥವರು ಪರಸ್ಪರರನ್ನು ಸಂಧಿಸಿದಾಗ ಒಬ್ಬರನ್ನೊಬ್ಬರು ಸುಲಭವಾಗಿ ಗುರುತಿಸಬಲ್ಲರು ಈ ದೇಶದಲ್ಲಿ ಅನೇಕಾನೇಕ ಜಾತಿಗಳಿವೆ ಎಂಬುದು ನಿಜವಾದರೂ ಈ ಹೊಸ ಜಾತಿಯ ಜನ ಮನುಷ್ಯನನ್ನು ಮನುಷ್ಯನೆಂದೇ ಪರಿಗಣಿಸುತ್ತದೆ. ಪ್ರತಿಯೊಬ್ಬ ಮನುಷ್ಯನ ಬೆಲೆಯನ್ನೂ, ಆತನ ಜಾತಿ ಯಾವುದೆಂಬುದನ್ನು ಲೆಕ್ಕಕ್ಕೆ ತಾರದೇ ಅವನ ಗುಣ ನಡತೆ ಬುದ್ಧಿ ಯೋಗ್ಯತೆಗಳನ್ನು ಗಮನಿಸಿ ಕಟ್ಟುತ್ತದೆ. ಇಂಥ ಜನರ ಸಂಖ್ಯೆ ವೃದ್ಧಿಯಾಗುವುದರ ಮೇಲೂ, ಅಂಥವರ ಕೈಗೇ ಅಧಿಕಾರ ಬರುವುದರ ಮೇಲೂ ನಮ್ಮ ದೇಶದ ಭವಿಷ್ಯ ಅವಲಂಬಿಸಿದೆ. ಇದು ಬೇಗ ಬೇಗ ನಡೆದು ದೇಶದ ದಾರಿ ಸುಗಮವಾಗುವ ಹಾಗೆ ಮಾಡುವುದು ಪ್ರತಿಯೊಬ್ಬ ದೇಶಪ್ರೇಮಿಯ, ಮಾನವ ಪ್ರೇಮಿಯ ಆದ್ಯ ಕರ್ತವ್ಯ.

ಬೇಕಾದ್ದು ಇಂಥ ಕೆಲಸ, ಪೊಳ್ಳ ಉದ್ಧದ ಮಾತಲ್ಲ; ಜಾತಿಭಾವನೆಯನ್ನೇ ಶಪಿಸುವುದಲ್ಲ; ಅದರ ಇತಿ ಮಿತಿಗಳನ್ನು ಅರಿತುಕೊಂಡು ಅಗತ್ಯವನ್ನು ಗುರುತಿಸಿ ಅದು ಅತೀರೇಕಕ್ಕೆ ಹೋಗದ ಹಾಗೆ ಜನರಲ್ಲಿ ವಿವೇಕವನ್ನು ಬೆಳಸಲು ತಕ್ಕ ಮೇಲ್ಪಂಕ್ತಿ ಹಾಕುವುದು. ಹಾಗೇನೂ ಮಾಡದೆ ಭಾಷಣ ಹೊಡೆಯುವುದು ಇಂದಿನ ಪರಿಸ್ಥಿತಿಯಲ್ಲಿ ಅತಿ ಭಯಂಕರವಾದ ದೇಶದ್ರೋಹವಾಗುವುದು.

ಕೂಗುತಿದೆ ರಾಯಗಡದ ಕಲ್ಲು ಕಲ್ಲೂ!

—ಹೊ. ವೆ. ಶೇಷಾದ್ರಿ.

ಸರಿಯಾಗಿ ಮುನ್ನೂರು ವರ್ಷಕ್ಕೆ ಹಿಂದೆ ನಡೆದ ಒಂದು ಮಹಾ ಪ್ರೇರಣಾಪ್ರದ ಪ್ರಸಂಗ. ಆ ವರ್ಷವೂ ಈಗಿನ ವರ್ಷದಂತೆ ಆನಂದನಾಮ ಸಂವತ್ಸರವೇ. ಜ್ಯೇಷ್ಠ ಶುದ್ಧ ತ್ರಯೋದಶಿ ಆ ದಿನ.

ರಾಯಗಡದ ಮೇಲೆ ಶ್ರೀ ಶಿವಾಜಿ ರಾಜರು ಛತ್ರಪತಿಯಾದ ಸುಮುಹೂರ್ತ ಅದು. ಅವರು ತಮ್ಮ ಎಳೆಯ ಬಾಲ್ಯದಲ್ಲಿ ಕೈಗೊಂಡಿದ್ದ ಸ್ವರಾಜ್ಯದ ಶಪಥವನ್ನು ಸಾಕಾರಗೊಳಿಸಿ ತೋರಿದ ಪರಮ ಮಂಗಲ ಮುಹೂರ್ತ ಅದು.

ಧ್ಯೇಯ ಮಂತ್ರದ ಪವಾಡ

ಆ ಪ್ರಸಂಗವನ್ನು ಇಂದು ಇಡೀ ನಾಡು ನೆನೆಸಿಕೊಳ್ಳುತ್ತಿದೆ. ನೆನೆಸಿಕೊಂಡಂತೆಲ್ಲ ಮೈ ರೋಮಾಂಚನಗೊಳ್ಳುತ್ತಿದೆ. ಕ್ಲೈಬ್ಯ ಕಳೆಯುತ್ತಿದೆ, ಕೆಚ್ಚು ಮಿಂಚುತ್ತಿದೆ; ನೈರಾಶ್ಯ ಅಳಿಯುತ್ತಿದೆ. ವಿಶ್ವಾಸ ಬೆಳೆಯುತ್ತಿದೆ; ಆತ್ಮಜ್ಞಾನಿ ಮಾಯವಾಗುತ್ತಿದೆ. ಏಕೆಂದರೆ–

—ಆ ಮುಹೂರ್ತದಲ್ಲಿ ಭಾರತದ ಮೈಮನಗಳನ್ನು ಪುಲಕಗೊಳಿಸುವ ಧ್ಯೇಯ ಮಂತ್ರ ಅಡಕವಾಗಿದೆ. 'ಹಿಂದವಿ ಸ್ವರಾಜ್ಯದ ಮಂತ್ರ! ಈ ಧ್ಯೇಯದ ದೀಕ್ಷೆಯನ್ನು ಶಿವಾಜಿ ತೊಟ್ಟದ್ದು ಇನ್ನೂ ಬಾಲ್ಯದಲ್ಲೇ. ಸಹ್ಯಾದ್ರಿ ಶ್ರೇಣಿಯ ದಟ್ಟ ಅರಣ್ಯದ ನಡುವೆ ರೋಹಿರೇಶ್ವರನ ಮುಂದೆ ಕೈಗೊಂಡ ಪವಿತ್ರ ದೀಕ್ಷೆ ಅದು. ಮುಂದೆ ಒಮ್ಮೆ ಸ್ವತಃ ಶಿವಾಜಿ ಮಹಾರಾಜರೇ ಅದನ್ನು ಪ್ರಸ್ತಾಪಿಸಿದ್ದಾರೆ. ಆ ಪ್ರಸಂಗ ಹೀಗೆ :

ದಾದಾಜಿ ನರಸಪ್ರಭು ಶಿವಾಜಿಯ ಬಾಲಗೆಳೆಯರಲ್ಲಿ ಒಬ್ಬ. ಅವನ ವೃದ್ಧ ತಂದೆಗೆ ಬಿಜಾಪುರದ ಬಾದಶಹನಿಂದ ಒಂದು ಬೆದರಿಕೆಯ ಫರ್ಮಾನು ಬಂತು. ಅದರಲ್ಲಿ, ಶಿವಾಜಿಯ `ಬಂಡಾಯಕ್ಕೆ ಸಹಾಯ ಮಾಡುವವರ ತಲೆ ಹೊಡೆಸಿ ಹಾಕಲಾಗುವುದೆಂಬ ಎಚ್ಚರಿಕೆ ಇತ್ತು. ದಾದಾಜಿ ನರಸಪ್ರಭು ಆ ಪತ್ರವನ್ನು ಶಿವಾಜಿಗೆ ಕಳಿಸಿಕೊಟ್ಟ. ಅದಕ್ಕೆ ಕಿಶೋರ ಶಿವಾಜಿಯಿಂದ ಉತ್ತರ ಬಂತು :

"ನಾವು ಬಂಡು ಹೂಡಿದ್ದೇವೆಂಬುದು ನಿಜವಲ್ಲ. ಶ್ರೀ ರೋಹಿರೇಶ್ವರನು ಇದುವರೆಗೂ ನಮಗೆ ಯಶಸ್ಸು ನೀಡಿದ್ದಾನೆ. ಮುಂದಕ್ಕೂ ಹಿಂದವಿ ಸ್ವರಾಜ್ಯದ ಮನೋರಥವನ್ನು ಅವನೇ ಪೂರ್ಣಗೊಳಿಸುತ್ತಾನೆ. ಶ್ರೀ ರೋಹಿರೇಶ್ವರನ ಸಮ್ಮುಖದಲ್ಲೇ ನಾವೆಲ್ಲರೂ ಪ್ರತಿಜ್ಞಾಬದ್ಧರಾಗಿದ್ದೇವೆ. ಈ ರಾಜ್ಯ ನಿರ್ಮಾಣವಾಗಬೇಕೆಂದು ಭಗವಂತನ ಮನಸ್ಸಿನಲ್ಲಿ ಇದೆ. ತಂದೆಯವರಿಗೆ ಧೈರ್ಯ ಹೇಳುವುದು."

ಶಿವಾಜಿ ಮಹಾರಾಜರು ತಮ್ಮ ಅಪ್ರತಿಮ ಪೌರುಷ, ಪ್ರಜ್ಞೆ, ಪ್ರತಿಭೆಗಳಿಂದ ದೆಹಲಿಯ ಮೊಗಲಶಾಹಿ, ಬಿಜಾಪುರದ ಆದಿಲಶಾಹಿಗಳಂತಹ ಅತ್ಯಂತ ಬಲಾಢ್ಯ ಅರಿಸಾಮ್ರಾಜ್ಯಗಳ ಹೊಟ್ಟೆ ಬಗೆದು ಹಿಂದವಿ ಸ್ವರಾಜ್ಯದ ವಿಜಯ ಪತಾಕೆಯನ್ನು ಅಲ್ಲಿ ನೆಟ್ಟರು. ಇಡೀ ಜಗತ್ತಿನ ಚರಿತ್ರೆಯಲ್ಲೆ ಅದ್ವಿತೀಯವಾಗಿ, ಅಜರಾಮರವಾಗಿ ಬೆಳಗಬಲ್ಲಂತಹ ರೋಮಾಂಚಕಾರಿ ರಾಜ್ಯಕ್ರಾಂತಿ, ಸ್ವಾತಂತ್ರ್ಯಕ್ರಾಂತಿ ಇದು.

ಆದರೆ ಶಿವಾಜಿ ಮಹಾರಾಜರ ಕ್ರಾಂತದರ್ಶಿ ಪ್ರತಿಭೆ ಅಷ್ಟಕ್ಕೇ ಮುಕ್ತಾಯವಾಗಲಿಲ್ಲ. ರಾಜ್ಯಕ್ರಾಂತಿಯನ್ನು ಚಿರಸ್ಥಾಯಿಗೊಳಿಸುವಂಥ ಚಿರವಿಜಯಗೊಳಿಸುವಂಥ ಇನ್ನೂ ಅನೇಕ ಕ್ರಾಂತಿಕಾರ ಕ್ರಮಗಳನ್ನು ಅವರು ಜಾರಿಗೊಳಿಸಿದರು.

ಧರ್ಮಕ್ರಾಂತಿಯ ಹರಿಕಾರ

ಅಂದು ಜನಮನದಲ್ಲಿ ರೂಢಿಯಲ್ಲಿದ್ದ ಧಾರ್ಮಿಕ ನಂಬಿಕೆಗಳಲ್ಲಿ ಶಿವಾಜಿ ಮಹಾರಾಜರು ಮಾಡಿದ ಕ್ರಾಂತಿಯೂ ಅಸಾಮಾನ್ಯವಾದುದು. ಸಮುದ್ರ ಪ್ರಯಾಣ ಮಾಡಬಾರದೆಂಬ 'ಧಾರ್ಮಿಕ ನಂಬಿಕೆ'ಯನ್ನು ಮೂಲೆಗೊತ್ತಿ ಅವರು ಸ್ವತಃ ಸಮುದ್ರಯಾನ ಮಾಡಿದರು. ಸ್ವತಃ ಸಮುದ್ರದ ನಡುವೆ ಹೋಗಿ ನಿಂತು ಜಲದುರ್ಗಗಳನ್ನು ಕಟ್ಟಿಸಿದರು. ಸಮರನೌಕೆಗಳನ್ನೇರಿ ಸಾಗರ ಪರಾಕ್ರಮದ ಉಜ್ವಲ ಪರಂಪರೆಯನ್ನು ಸ್ಥಾಪಿಸಿದರು.

ಧಾರ್ಮಿಕ ಕ್ಷೇತ್ರದಲ್ಲಿ ಅವರು ಆರಂಭಿಸಿದ ಇನ್ನೊಂದು ಕ್ರಾಂತಿಕಾರಿ ಕ್ರಮ. ಮುಸಲ್ಮಾನರಾಗಿ ಮತಾಂತರಗೊಂಡ ಹಿಂದುಗಳನ್ನು ಮರಳಿ ಹಿಂದು ಧರ್ಮಕ್ಕೆ ಬರಮಾಡಿಕೊಳ್ಳತೊಡಗಿದುದು. ಬಿಜಾಪುರದ ಬಾದಶಹನಿಂದ ಮತಾಂತರಿಸಲ್ಪಟ್ಟಿದ್ದ ಬಜಾಜಿ ನಿಂಬಾಳ್ಕರ್ ಮತ್ತು ಔರಂಗಜೇಬನಿಂದ ಮತಾಂತರಗೊಂಡಿದ್ದ ನೇತಾಜಿ ಪಾಲ್ಕರ್ ಇವರನ್ನು ಶಿವಾಜಿ ಮಹಾರಾಜರು ತಾವೇ ಖುದ್ದಾಗಿ ನಿಂತು ಹಿಂದು ಧರ್ಮಕ್ಕೆ ಬರಮಾಡಿಕೊಂಡರು. ಅವರಿಗೆ ಸಮಾಜದಲ್ಲಿ ಮುಂಚಿನ ಸ್ಥಾನಮಾನ ಗಳಿಸಿಕೊಟ್ಟರು.

'ಧಾರಣಾತ್ ಧರ್ಮಮಿತ್ಯಾಹುಃ ಧರ್ಮೋ
ಧಾರಯತಿ ಪ್ರಜಾಃ'

–ಸಮಾಜಧಾರಣೆಯೇ ಧರ್ಮದ ಗುರಿ, ಎನ್ನುವ ಧರ್ಮದ ನಿಜವಾದ ಮರ್ಮವನ್ನು ಅರುಹಿ, ಅದಕ್ಕೆ ವಿರುದ್ಧವಾಗಿದ್ದ ಮೂಢ ನಂಬಿಕೆಗಳನ್ನು ಅವರು ಧೈರ್ಯವಾಗಿ ಕಿತ್ತೆಸೆದರು.

ಅವರು ಸಾಧಿಸಿದ ಈ ಕ್ರಾಂತಿ ಎಷ್ಟು ಮಹೋಜ್ವಲವಾಗಿತ್ತೆಂದರೆ, ಶಿವಾಜಿ ಮಹಾರಾಜರ ಮಾತೇ ಅಂತಿಮವೂ, ಅಧಿಕೃತವೂ ಆಯಿತು. ಮಹಾ ಧರ್ಮ ಪಂಡಿತರು ಸಹ ಅವರ ಒಂದೊಂದು ಕ್ರಮವನ್ನು ಸಮರ್ಥಿಸಲು ಮುಂದೆ ಬರತೊಡಗಿದರು. ಹಳೆಯ ಮೂಢನಂಬಿಕೆಗಳನ್ನು ಒಂದೊಂದಾಗಿ ಅವರು ಬದಿಗೊತ್ತುತ್ತಿದ್ದಾಗ ಅವರಾರೂ ಆಕ್ಷೇಪಣೆಯ ಚಕಾರವನ್ನೂ ಎತ್ತಲಿಲ್ಲ. ಅದರ ಬದಲಾಗಿ ಹೊಸ ಪದ್ಧತಿಗಳನ್ನು ವಿಧಿವತ್ತಾಗಿ ನಡೆಸಿಕೊಡಲು ಅಭಿಮಾನದಿಂದ ಆ ಧರ್ಮಪಂಡಿತರೇ ಮುಂದಾಗಿ ಬಂದು ನಿಲ್ಲುತ್ತಿದ್ದರು

ರಾಯಗಡದ ಅಭಿಷೇಕಕ್ಕಾಗಿ ಧರ್ಮಗಂಗೆ

ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ಪ್ರಸಂಗವು ಇದಕ್ಕೊಂದು ಕಣ್ಸೆಳೆಯುವ ನಿದರ್ಶನ. ಕಾಶಿಯ ಮಹಾ ಪಂಡಿತ ಗಾಗಾಭಟ್ಟ ಶಿವಾಜಿಗೆ ಪಟ್ಟಾಭಿಷೇಕ ಮಾಡಿಸುವ ಸಲುವಾಗಿಯೇ ಅಲ್ಲಿಂದ ದಕ್ಷಿಣಕ್ಕೆ ಇಳಿದು ಬಂದ. ಶಿವಾಜಿ ಸ್ವತಂತ್ರ ರಾಜರಾಗಲು ಅಂದಿನ ರೂಢಿ ನಂಬಿಕೆಗಳಿಂದಾಗಿ ಎದುರಾದ ಎಲ್ಲ 'ಧಾರ್ಮಿಕ' ಅಡ್ಡಿ ಆತಂಕಗಳನ್ನೂ ಅವನೇ ದೂರಗೊಳಿಸಿದ. ಶಿವಾಜಿರಾಜರು ಕ್ಷತ್ರಿಯರಲ್ಲ, ಅವರು ಹೇಗೆತಾನೆ ಸ್ವತಂತ್ರ ಸಿಂಹಾಸನಾಧೀಶ್ವರರಾದರು, ಎಂದು ಆಕ್ಷೇಪಣೆ ಬಂದಾಗ, ಶಿವಾಜಿ ರಾಜರು ಮೂಲತಃ ರಜಪೂತ ಕ್ಷತ್ರಿಯ ವಂಶದವರೆಂಬ ಪೂರ್ವ ಸಂಬಂಧವನ್ನು ಹುಡುಕಿ ಗಾಗಾಭಟ್ಟನು ಪ್ರಕಟಿಸಿದ. ಧರ್ಮೋಕ್ತವಾಗಿ ಶಿವಾಜಿರಾಜರ ಮುಂಜಿ, ಮದುವೆ ಆಗಿಲ್ಲವೆಂಬ ಆಕ್ಷೇಪಕ್ಕೆ ಉತ್ತರವಾಗಿ, ಅವನು ಇನ್ನೊಮ್ಮೆ ಅವರಿಗೆ ಮುಂಜಿ, ಮದುವೆಯನ್ನೂ ಮಾಡಿಸಿದ ! ಇವೆಲ್ಲದರಿಂದ ಮೊದಲುಗೊಂಡು ರಾಜ್ಯಾಭಿಷೇಕದವರೆಗೆ ಎಲ್ಲ ಧರ್ಮಕಾರ್ಯಗಳಿಗೂ ತಾನೇ ವಿಧಿವತ್ತಾಗಿ ಒಂದು ಬೃಹತ್ ಧರ್ಮಶಾಸ್ತ್ರವನ್ನು ತಯಾರಿಸಿದ. ಪ್ರಕಾಂಡ ಧರ್ಮ ಪಂಡಿತರು ಸಹ ಈ ರೀತಿ ಸ್ವರಾಜ್ಯಕ್ಕೆ ಭದ್ರ ಕವಚವಾಗಿ ನಿಲ್ಲುವಂತೆ ಮಾಡಿದ ಲೋಕೋತ್ತರ ಪುರುಷ ಛತ್ರಪತಿ ಶಿವಾಜಿ ಮಹಾರಾಜರು.

ಸಾಮಾಜಿಕ ಸಾಮರಸ್ಯದ ಸೂತ್ರಧಾರ

ಶಿವಛತ್ರಪತಿ ಸಾಧಿಸಿದ ಇನ್ನೊಂದು ಮಹತ್ಕ್ರಾಂತಿ ಸಾಮಾಜಿಕವಾದುದು. ಸ್ವರಾಜ್ಯ ಸಾಧನೆಯ ಹೋರಾಟದಲ್ಲಿ ಜಾತಿ, ಮತಗಳ ಭೇದವಿಲ್ಲದೆ ಎಲ್ಲರೂ ಸಮಾನವಾಗಿ ಪಾಲ್ಗೊಳ್ಳುವಂತೆ ಮಾಡಿದ ಅವರ ಪ್ರತಿಭೆ ಸರಿಸಾಟಿಯಿಲ್ಲದ್ದು. ಬ್ರಾಹ್ಮಣರಿಂದ ಮೊದಲುಗೊಂಡು ಮರಾಠಾ, 'ಅಸ್ಪೃಶ್ಯ' ಜಾತಿಗಳವರೆಗೆ ಎಲ್ಲರೂ ಹೆಗಲಿಗೆ ಹೆಗಲು ಹಚ್ಚಿ ಶಿವಾಜಿ ಮಹಾರಾಜರು ಹಾರಿಸಿದ ಸ್ವರಾಜ್ಯದ ಧ್ವಜದಡಿಯಲ್ಲಿ ಬಂದು ಒಂದುಗೂಡಿದರು. ಮಹಾರಾಜರು ಜಾತಿ, ಮತಗಳ ಕಾರಣಕ್ಕಾಗಿ ಒಂದು ಕೂದಲೆಳೆಯಷ್ಟೂ ಭೇದ ಎಣಿಸುತ್ತಿರಲಿಲ್ಲ. ಕೇವಲ ಗುಣಕ್ಕೇ ಪುರಸ್ಕಾರ, ಬ್ರಾಹ್ಮಣನೇ ಆದರೂ, ಸ್ವರಾಜ್ಯಕ್ಕೆ ವಿರುದ್ಧ ನಿಂತಲ್ಲಿ ಅವನ ಶಿರಚ್ಛೇದ ಸಿದ್ಧ. ಉದಾಹರಣೆಗೆ, ಮಹಾರಾಜರು ಕಪಟಿ ಅಫಜಲಖಾನನ ಕರುಳು ಬಗೆದೊಡನೆ ಖಾನನ ದೂತ ಕೃಷ್ಣಾಜಿಪಂತ ಭಾಸ್ಕರನು ಕತ್ತಿ ಹಿರಿದು ಮಹಾರಾಜರ ಮೇಲೇರಿ ಬಂದ. ಆಗ ಅವನನ್ನು ಮಹಾರಾಜರು ನಿರ್ದಾಕ್ಷಿಣ್ಯವಾಗಿ ವಧಿಸಿ, ಖಾನನ ಸಂಹಾರವನ್ನು ಪೂರ್ತಿಗೊಳಿಸಿದರು. ಪರಾಕ್ರಮಶಾಲಿಗಳಾದ 'ಅಸ್ಪೃಶ್ಯ'ರಿಗೆ ಎಷ್ಟೋ ಕೋಟೆಗಳಲ್ಲಿ ಮಹಾರಾಜರು ಸೇನಾತುಕಡಿಗಳ ಮುಖಂಡತ್ವ ವಹಿಸಿಕೊಟ್ಟಿದ್ದರು. ಅವರೆಲ್ಲರೊಂದಿಗೆ ಸ್ವತಃ ಮಹಾರಾಜರೇ ಒಂದಾಗಿ ಕಲೆತು ಸರಿಸಮನಾಗಿ ಓಡಾಡಿದರು. ಇದರಿಂದಾಗಿ ಆ ಕಾಲದಲ್ಲಿ ಅತ್ಯಂತ ಕಠೋರವಾಗಿದ್ದ ಜಾತಿಕಟ್ಟಳೆಗಳನ್ನು ಸಹ ಬದಿಗೆ ಸರಿಸಿ ಜನರು ಸ್ವರಾಜ್ಯದ ಕರೆಗೆ ಓಗೊಡಲು ಮುಂದಾಗುವಂತಾಯಿತು.

ಶಿವಾಜಿ ಮಹಾರಾಜರು ಆಗ್ರಾ ಸೆರೆಮನೆಯಿಂದ ಪಾರಾಗಿ ಬರುತ್ತಿದ್ದಾಗ ನಡೆದೊಂದು ಘಟನೆ. ಹಾದಿಯಲ್ಲಿ ರಾಜಕುಮಾರ ಸಂಭಾಜಿಯ ರಕ್ಷಣೆಯ ಹೊಣೆಯನ್ನು ಕೃಷ್ಣಾಜಿ ತ್ರಿಮಲನೆಂಬ ಬ್ರಾಹ್ಮಣ ವಹಿಸಿಕೊಂಡ. ಮೊಗಲ ಅಧಿಕಾರಿಯೊಬ್ಬನಿಗೆ ಹುಡುಗನ ಮೇಲೆ ಸಂಶಯ ಮೂಡಿದಾಗ, 'ಇವನು ನನ್ನ ಮಗ' ಎಂದು ಕೃಷ್ಣಾಜಿ ತ್ರಿಮಲ ಹೇಳಿದನಲ್ಲದೆ, ಅದನ್ನು ಖಚಿತಪಡಿಸಲು ಸಂಭಾಜಿಯ ಜೊತೆಗೆ ಒಂದೇ ತಟ್ಟೆಯಲ್ಲಿ ಊಟವನ್ನು ಮಾಡಿದ। ಹಿಂದುಗಳಲ್ಲಿನ ಜಾತಿ ತಟ್ಟಳೆಯ ಕಠೋರತೆಯ ಅರಿವಿದ್ದ ಮುಸಲ್ಮಾನ ಅಧಿಕಾರಿಗೂ ಅದನ್ನು ಕಂಡು ಆ ಬ್ರಾಹ್ಮಣನ ಮಾತು ನಿಜವೆನಿಸಿತು !

ಸ್ವರಾಜ್ಯದ ಶಿಸ್ತು ಎಂದರೆ ಇದು !

ಸಾಮಾನ್ಯವಾಗಿ ಸ್ವರಾಜ್ಯವನ್ನು ಕೊರೆದು ಹಾಕುವ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಪಟ್ಟಭದ್ರ ಹಿತಗಳು ಇವೆಲ್ಲವನ್ನೂ ಸಮೂಲವಾಗಿ ಉಚ್ಚಾಟಿಸಿ, ಉಜ್ವಲ ಆಚಾರಕ್ರಾಂತಿ ಮಾಡಿದ ಅಸದೃಶ ನಾಯಕಮಣಿ ಶ್ರೀ ಶಿವಛತ್ರಪತಿ. ಮಹಾರಾಜರ ಇಳಿವಯಸ್ಸಿನಲ್ಲಿ ಒಮ್ಮೆ ಸ್ವತಃ ಯುವರಾಜ ಸಂಭಾಜಿಯು ಸ್ವರಾಜ್ಯದ ಪಕ್ಷ ಬಿಟ್ಟು ಔರಂಗಜೇಬನ ಸೇನಾಧಿಪತಿ ದಿಲೇರಖಾನನೊಡನೆ ಸೇರಿಕೊಂಡ. ಆಗ ಸ್ವರಾಜ್ಯದ ಎಲ್ಲ ಕಿಲ್ಲೇದಾರರಿಗೂ ಶಿವಾಜಿ ಮಹಾರಾಜರ ಕಟ್ಟಪ್ಪಣೆ ಹೋಯಿತು– ಸ್ವರಾಜ್ಯದ ಯುವರಾಜನೇ ಇರಬಹುದು, ಸ್ವರಾಜ್ಯದ ಮೇಲೆ ದಾಳಿಗೆ ಬಂದಲ್ಲಿ ಅವನ ರುಂಡವನ್ನು ಚೆಂಡಾಡಬೇಕು– ಎಂದು.

ಸೈನಿಕರು ಎಲ್ಲೆಮೀರಿ ನಡೆಯದಂತೆ ಶಿವಾಜಿ ಮಹಾರಾಜರು ಅವರನ್ನು ಕಠೋರ ಶಿಸ್ತಿಗೆ ಒಳಪಡಿಸಿದ್ದರು. ಸ್ತ್ರೀಯರ ಬಗ್ಗೆ ಪೂಜ್ಯಭಾವನೆ ಸ್ವರಾಜ್ಯದ ಮಾನಬಿಂದು ಆಗಿತ್ತು. ಸಾಮಾನ್ಯ ಜನತೆಯ ಹಿತಕ್ಕೆ ನ್ಯಾಯಕ್ಕೆ ದಕ್ಕೆ ತರುವ ಸೈನಿಕನಿರಲಿ, ಸರಕಾರಿ ಅಧಿಕಾರಿ ಇರಲಿ, ಅವನಿಗೆ ಕಠೋರ ದಂಡ ಕಾದಿತ್ತು. ಸೈನ್ಯ ಚಲಿಸುವಾಗ ಅದು ಬೆಳೆದುನಿಂತ ಪೈರು ಪಚ್ಚೆಗಳಿಗೆ ಕೈಹಚ್ಚಬಾರದೆಂಬ ದಂಡಕವಿತ್ತು. ಪೇಟೆಗಳಲ್ಲಿ ಸಾಮಾನು ಕೊಳ್ಳುವಾಗ ಇನ್ನಿತರ ಸಾಮಾನ್ಯ ಪ್ರಜೆಗಳಂತೆಯೇ ಸೈನಿಕರು ಸೌಜನ್ಯದಿಂದ ನಡೆದುಕೊಳ್ಳಬೇಕಾಗಿತ್ತು.

ಸರ್ವತ್ರ ಹಿಂದು ಗುಡಿಗೋಪುರಗಳು ಭಗ್ನಗೊಳ್ಳುತ್ತಿದ್ದ, ಗೋಹತ್ಯೆ ನಡೆಯುತ್ತಿದ್ದ ಕಾಲ ಅದು. ಹಿಂದು ಸ್ತ್ರೀಯರ ಮಾನವಂತೂ ಮುಸಲ್ಮಾನ ಆಳರಸರಿಗೆ ಚೆಲ್ಲಾಟದ ವಸ್ತುವಾಗಿತ್ತು, ಅಂಥ ಪ್ರಕ್ಷೋಭಕ ಸನ್ನಿವೇಶದಲ್ಲಿಯೂ ಮುಸಲ್ಮಾನ ಸ್ತ್ರೀ, ಕುರಾಣ, ಮಸೀದಿ ಇವೆಲ್ಲವನ್ನೂ ಸಮಾನದಿಂದ ಕಂಡ ಆದರ್ಶ ಹಿಂದು ಪುರುಷ ಶ್ರೀ ಶಿವಾಜಿ ಮಹಾರಾಜರು.

ವಿಧೇಯಕ ಪ್ರತಿಭೆ

ಶಿವಾಜಿ ಮಹಾರಾಜರು ಮಾಡಿ ತೋರಿಸಿದ ಇನ್ನೊಂದು ದೂರದರ್ಶಿ ಸಾಧನೆ ಭೂಕ್ರಾಂತಿ. ಆಗ ಸರಕಾರಿ ಅಧಿಕಾರಿಗಳಿಗೆ, ದೊರೆಯ ಸಂಬಂಧಿಕರಿಗೆ ಜಹಗೀರಿಗಳನ್ನು ಕೊಡುವ ಪದ್ಧತಿ ರೂಢಿಯಲ್ಲಿತ್ತು. ಅದನ್ನು ಶಿವಾಜಿಮಹಾರಾಜರು ಕಟ್ಟುನಿಟ್ಟಾಗಿ ನಿಲ್ಲಿಸಿದರು. ಹೆಚ್ಚುವರಿ ಜಮೀನನ್ನು ಸಾಮಾನ್ಯ ರೈತರಿಗೆ ಹಂಚಿದರು. ಪಾಳೆಗಾರಿಕೆ ರದ್ದುಮಾಡಿದರಲ್ಲದೆ, ಪಾಳೆಗಾರರ ಕೈಕೆಳಗಿದ್ದ ಸೈನಿಕರೆಲ್ಲರನ್ನೂ ನೇರವಾಗಿ

ಸ್ವರಾಜ್ಯದ ಸೈನಿಕರಾಗಿ ಸೇರಿಸಿಕೊಂಡರು.

ಶ್ರೀ ಶಿವಛತ್ರಪತಿ ನೆರವೇರಿಸಿದ ಇನ್ನೊಂದು ಕ್ರಾಂತಿ, ಭಾಷಾಕ್ರಾಂತಿ. ನೂರಾರು ವರ್ಷಗಳ ಮುಸಲ್ಮಾನ ದಾಸ್ಯದ ಪರಿಣಾಮವಾಗಿ ಸಂಸ್ಕೃತಕ್ಕೆ ಗ್ರಹಣ ಹಿಡಿದಿತ್ತು. ಮರಾಠಿಯ ಮೇಲೆ ಪರ್ಷಿಯನ್ ಭಾಷೆಯ ಕರಿನೆರಳು ಬಿದ್ದಿತ್ತು. ಅದನ್ನು ತೆಗೆದುಹಾಕಿ, ಅದರ ಜಾಗದಲ್ಲಿ ಸಂಸ್ಕೃತ ಶಬ್ದಗಳನ್ನು ಮಹಾರಾಜರು ಬಳಕೆಗೆ ತಂದರು. ಸಂಸ್ಕೃತಕ್ಕೆ ಪ್ರಾಶಸ್ತ್ಯ ದೊರೆಯುವಂತೆ ಆಗಲು ವಿದ್ವಾಂಸರ ನೆರವಿನಿಂದ 'ರಾಜ್ಯವ್ಯವಹಾರ ಕೋಶ'ವನ್ನು ಸಿದ್ಧಪಡಿಸಿದರು. ತಮ್ಮ ಹದಿನಾಲ್ಕನೆ ವಯಸ್ಸಿನಲ್ಲೆ ಅವರು ಸಿದ್ಧಪಡಿಸಿದ ರಾಜಮುದ್ರೆ ಸಹ-

ಪ್ರತಿಪಚ್ಚಂದ್ರಲೇಖೇವ ವರ್ಧಿಷ್ಣುರ್ವಿಶ್ವ ವಂದಿತಾ
ಶಾಹಸೂನೋಶ್ಶಿವಸ್ಯೈಷಾ ಮುದ್ರಾಭದ್ರಾಯ ರಾಜತೇ

ಎಂದು ಸಂಸ್ಕೃತದಲ್ಲೆ ಇತ್ತು.

ಇಂದಿನ ಸ್ವರಾಜ್ಯಕ್ಕೊಂದು ಕೈದೀವಿಗೆ

ಇವೆಲ್ಲದರ ಫಲವಾಗಿ ಇಡೀ ಜನತೆ ತಮ್ಮ ಹೃದಯಕ್ಕೆ ಪ್ರಿಯನಾದ, ಪೂಜ್ಯವಾದ ಸ್ವರಾಜ್ಯದ ಸಂರಕ್ಷಣೆಗಾಗಿ, ಸಂವರ್ಧನೆಗಾಗಿ ತಮ್ಮ ಸರ್ವಸ್ವವನ್ನೂ ಪಣಕ್ಕೆ ಹಚ್ಚಿ ಶಿವಾಜಿ ಮಹಾರಾಜರಿಗೆ ಬೆಂಗಾವಲಾಗಿ ನಿಂತರು. ಸಮಾಜದಲ್ಲಿನ ನಾನಾವಿಧ ಪೂರ್ವಗ್ರಹಗಳು ಮೂಢನಂಬಿಕೆಗಳು, ಪರಸ್ಪರ ವಿರೋಧಿ ಮನೋಧರ್ಮಗಳು, ಪದ್ಧತಿಗಳು ಮುಂತಾದವುಗಳ ಅಡ್ಡಿ ಆತಂಕಗಳನ್ನು ನಿವಾರಿಸಿ, ಸ್ವರಾಜ್ಯದ ಮಹಾಧ್ಯೇಯಕ್ಕಾಗಿ ಜನತೆಯನ್ನು ಸಿದ್ಧಗೊಳಿಸಿ, ಆ ಧ್ಯೇಯವನ್ನು ಪೂರ್ಣಗೊಳಿಸಿ ತೋರಿದ ಅಸಾಮಾನ್ಯ ಪ್ರತಿಭೆ, ಪ್ರಜ್ಞೆ, ಪೌರುಷಗಳ ಪ್ರದೀಪ್ತ ಪ್ರತೀಕರಾಗಿದ್ದರು, ಛತ್ರಪತಿ ಶಿವಾಜಿ ಮಹಾರಾಜರು.

ಇಂದಿನ ನಮ್ಮ ಸ್ವರಾಜ್ಯದ ಇಪ್ಪತ್ತೇಳು ವರ್ಷಗಳ ಅವಧಿಯಲ್ಲಿ ದಿನದಿನಕ್ಕೆ ಬೆಳೆಯುತ್ತಿರುವ ಆದರ್ಶಹೀನತೆ, ವಿಧ್ವಂಸಪ್ರವೃತ್ತಿ, ಸ್ವಾರ್ಥ, ಅಂತಃಕಲಹ; ಜಾತಿ-ಮತಗಳ ದುರಭಿಮಾನ, ಭ್ರಷ್ಟಾಚಾರ, ಅನೀತಿ, ಅನ್ಯಾಯಗಳ ಈ ಹಾಲಾಹಲವನ್ನು ನಿಗ್ರಹಿಸಿ ಸ್ವರಾಜ್ಯ ಸಂರಕ್ಷಣೆ ಮತ್ತು ಸಂವರ್ಧನಗಳಿಗೆ ಬೇಕಾದ ಯೋಗ್ಯ ಮನೋಧರ್ಮದ ಅಮೃತವನ್ನು ನಮ್ಮ ಸ್ವರಾಜ್ಯದ ರಾಜ್ಯಕರ್ತರಿಗೆ ಮತ್ತು ಜನತೆಗೆ ನೀಡಬಲ್ಲ ಪರಮ ಉಜ್ವಲ ಆದರ್ಶಮೂರ್ತಿ ಛತ್ರಪತಿ ಶ್ರೀ ಶಿವಾಜಿ ಮಹಾರಾಜರಲ್ಲದೆ ಇನ್ನಾರಿರಬಲ್ಲರು ?

ಆ ಮಹಾನ್ ಯುಗಪುರುಷನ ಅಮೃತತುಲ್ಯವಾದ ಜೀವನ ಸಂದೇಶವನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ನೀಡುವ ಪರಮ ಮಂಗಳ ಮುಹೂರ್ತವೇ ಜ್ಯೇಷ್ಠ ಶುದ್ಧ ತ್ರಯೋದಶಿ ಎನ್ನುವುದರಲ್ಲಿ ಸಂದೇಹವೇನು ?

ಜನಪದ ಸಾಹಿತ್ಯ ಶಿಕ್ಷಣ— ಕೆಲವು ವಿಚಾರಗಳು

(20ನೆಯ ಪುಟದಿಂದ ಮುಂದುವರಿದಿದೆ)

ಜನಪದ ಸಾಹಿತ್ಯದ ವಿಷಯವಾಗಿ ವಿಶ್ವವಿದ್ಯಾಲಯಗಳಲ್ಲಿ ವಿಶೇಷವಾಗಿ ಸಂಶೋಧನೆಗಳು ನಡೆಯುತ್ತಿವೆ. ಹಲವಾರು ವಿಷಯಗಳ ಬಗ್ಗೆ ಬೆಳಕು ಬೀರುತ್ತಲಿವೆ. ಇದುವರೆಗೆ ಹೆಚ್ಚಿನದೇನು ಆಗಿಲ್ಲ. ಇನ್ನು ಮುಂದೆ ಆಗಬೇಕಾಗಿದೆ. ಜನಪದ ಸಂಸ್ಕೃತಿಯ ಅಧ್ಯಯನದ ಬಗ್ಗೆ ಕೇವಲ ಇಂಗ್ಲೀಷಿನಲ್ಲಿ ಪರಾಮರ್ಶನ ಪುಸ್ತಕಗಳಿದ್ದು ಕನ್ನಡದಲ್ಲಿಲ್ಲದಿರುವುದು ಶೋಚನೀಯಬೇಕಾಗಿದೆ. (ಅದಷ್ಟು ಬೇಗನೆ ಬರಬೇಕಾಗಿದೆ) ಜನಪದ ಸಾಹಿತ್ಯ ಸ್ವರೂಪದ ಬಗ್ಗೆ ಈಗ ಕೇವಲ ಕೆಲವಷ್ಟೆ ಪುಸ್ತಕಗಳಿದ್ದು ಅದು ಸಾಲದೆನಿಸಿದೆ.

ಜನಪದ ಸಾಹಿತ್ಯವನ್ನು ಎಂ. ಎ. ತರಗತಿಗಳಲ್ಲಿ ಆರಿಸಿಕೊಳ್ಳುವ ವಿದ್ಯಾರ್ಥಿಗಳನ್ನು ಹಲವರು ಜಡಮತಿ

(42ನೆಯ ಪುಟಕ್ಕೆ ಮುಂದುವರಿದಿದೆ.)

ಹರಿಹರದೇವನ ಕಾಲ ವಿಚಾರ

—ಹೆಚ್. ದೇವೀರಪ್ಪ, ಎಂ. ಎ.

(ಹೊಸ ಆಧಾರಗಳ ಬೆಳಕಿನಲ್ಲಿ)

ಹರಿಹರ, ರಾಘವಾಂಕ, ಕೆರೆಯ ಪದ್ಮರಸ ಕಾಲ ನಿಷ್ಕರ್ಷೆಯ ಬಗೆಗೆ ಇದುವರೆಗೆ ಅನೇಕ ವಿದ್ವಾಂಸರು ತಮ್ಮ ತಮ್ಮ ವಿಚಾರಪೂರ್ಣ ಲೇಖನಗಳನ್ನು ಬರೆದರೂ, ನಿಷ್ಪಷ್ಟವಾದ ಕಾಲದ ಬಗೆಗೆ ಇದಮಿತ್ಥಂವೆಂದು ಹೇಳಲಾಗಿಲ್ಲ. ಪ್ರಕೃತ ಅವರ ಕಾಲ ಈಗ ಗೊತ್ತುಪಡಿಸಿರುವ ವಿದ್ವಾಂಸರ ಅಭಿಪ್ರಾಯಕ್ಕೆ ಪೋಷಕವಾಗಿ ಕನ್ನಡನಾಡಿನ ಹಿರಿಯ ಸಂಶೋಧಕರಾದ ಶ್ರೀ ಹಚ್. ದೇವೀರಪ್ಪನವರು ಒಂದೆರಡು ಹೊಸ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ.

—ಸಂ.

ಹಂಪೆಯ ಹರಿಹರದೇವ, ಹಂಪೆಯರಾಘವಾಂಕ ಕೆರೆಯ ಪದ್ಮರಸ— ಈ ಮೂವರ ಕಾಲವು ಯಾವುದು ಎಂಬ ಬಗೆಗೆ ವಿದ್ವಾಂಸರಲ್ಲಿ ಬಹು ವಿಪುಲವಾದ ಚರ್ಚೆ ನಡೆದು ಇವರ ಜೀವಮಾನಾವಧಿ ಕಿ. ಶ. ೧೧೫೦ರ ಸುಮಾರಿನಿಂದ ೧೨೫೦ರ ಒಳಗೆ ಎಂದು ಗೊತ್ತುಪಡಿಸಲಾಗಿದೆ. ಈಗ ಈ ಸಂಬಂಧದ ಸಾಹಿತ್ಯಕ್ಕೆ ಒಂದೆರಡು ಹೊಸ ಅಂಶಗಳನ್ನು ಸೇರಿಸುವುದಷ್ಟೇ ಈ ಲೇಖನದ ಉದ್ದೇಶ.

'ಉದ್ಭಟಕಾವ್ಯ'ವನ್ನು ಸೋಮರಾಜನು ಬರೆದು ಮುಗಿಸಿದ ಕಾಲ ಕ್ರಿ. ಶ. ೧೨೨೨ ಎಂದೂ ಆತನು ತನ್ನ ಆ ಕಾವ್ಯದ ಆರಂಭದಲ್ಲಿ ಹರಿಹರ, ಕೆರೆಯಪದ್ಮರಸ, ಪಾಲ್ಕುರಿಕೆ ಸೋಮನಾಥರನ್ನು ಸ್ಮರಿಸಿರುವುದರಿಂದ ಅವರೆಲ್ಲ ಕ್ರಿ. ಶ. ೧೨೨೨ಕ್ಕೆ ಮೊದಲೇ ಶಿವೈಕ್ಯರಾಗಿದ್ದರೆಂದೂ ಕವಿಚರಿತೆಕಾರರೂ 'ಶತಕದ್ವಯ'ವನ್ನು ಸಂಪಾದಿಸಿ ಪ್ರಕಟಿಸಿರುವ ಸ. ಹಾ. ಶಿವಮೂರ್ತಿಸ್ವಾಮಿ ಅವರೂ ಅಭಿಪ್ರಾಯಪಡುತ್ತಾರೆ. ಆದರೆ ಉದ್ಭಟಕಾವ್ಯದ ಅಂತ್ಯದಲ್ಲಿರುವ ಕಾಲಸೂಚಕ ವೃತ್ತದ ಪಾಠದ ವಿಷಯದಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಈಗ ಅಚ್ಚಾಗಿರುವ 'ಉದ್ಭಟಕಾವ್ಯ'ದಲ್ಲಿ ಆ ಪದ್ಯದ ಪಾಠ ಇಂತಿದೆ :

ಸ ಭ ರ ನ ಮ
ಜನನಾ|ಥೋತ್ತಮ|ಸೋಮರಾ|ಜನುಸಿ|ರ್ದಿೀಕಾ
ಯ ಲ-
ವ್ಯಂ|ವಲಂ ಶಾ|ಲಿವಾ

ಸ ಭ ರ ನ ಮ ?
ಹನ ಶಾ|ತಾಬ್ದಮ|ದ್ಧೈದೆ ಸಾ|ಸಿರದ|ನೂರ್ಸಂ|ದ
ಯ ಲ-
ನಾಲ್ವ|ತ್ತನಾ
ಲ್ಕನೆಯಾ ರಂಜಿತ ಚಿತ್ರಭಾನುವ ವರಾಶ್ವೀಜೋಚಿ
ತೈಕಾದಶಿ
ವನ ಜಾರಾತಿ ತನೂಜ ವಾಸರನೊಳಾತ್ತಲ್ಲಮಂಗ
ರ್ಪಿತಂ

ಇದು ಮತ್ತೇಭವಿಕ್ರೀಡಿತ ವೃತ್ತ. ಇದು ಪ್ರತಿಪಾದದ ಐದನೆಯ ಗಣ ಮೂರು ಗುರುಗಳುಳ್ಳ 'ಮಗಣ'ವಾಗಿರಬೇಕು. ಆದರೆ ಈ ವೃತ್ತದಲ್ಲಿ ಒಂದು 'ಗುರು' ಕಡಮೆಯಾಗಿದೆ. ಕವಿಚರಿತೆಕಾರರೂ ಸ. ಹಾ. ಶಿವಮೂರ್ತಿಸ್ವಾಮಿ ಅವರೂ ನೋಡಿದ ಹಸ್ತಪ್ರತಿಯಲ್ಲಿ (ಇಬ್ಬರೂ ನೋಡಿದುದೂ ಒಂದೇ ಹಸ್ತಪ್ರತಿಯಿರಬೇಕು). ಅಡಿಗೆರೆ ಎಳೆದಿರುವ ಬದಲು "ನೂರಿಂಸಂದ" ಎಂಬ ಪದಗಳಿದ್ದುವೋ ಏನೊ. ಕುತೂಹಲಕರವಾದ ಇನ್ನೊಂದು ಸಂಗತಿಯೇನೆಂದರೆ— ಉದ್ಭಟಕಾವ್ಯದ (ಪ್ರಧಾನ ?) ಸಂಪಾದಕರಾದ ಆರ್. ಶಾಮಾಶಾಸ್ತ್ರಿಗಳು ಆ ಕಾವ್ಯದ ಉಪೋದ್ಘಾತದಲ್ಲಿ, ಬಹುಶಃ ಕವಿಚರಿತೆಯಲ್ಲಿನ ಆ ಸಂಬಂಧದ ಪಾಠವನ್ನು ನೋಡಿಕೊಂಡು, "ನೂರಿಂಸಂದ" ಎಂಬ ಪದಗಳನ್ನೆ ಉಲ್ಲೇಖಿಸಿದ್ದಾರೆ. (ಸಹಾಯಕ) ಸಂಪಾದಕರಾದ ಟ್ರಾವೆಲಿಂಗ್ ಪಂಡಿತ್ ವಿ. ಶ್ಯಾಮಾಚಾರ್ಯಃ (ಹೆಸರು ನಾಗರೀ ಲಿಪಿಯಲ್ಲಿದೆ) ಅವರು ಪ್ರಸಕ್ತ ಪದ್ಯದಲ್ಲಿರುವ ಛಂದೋದೋಷವನ್ನು

ಗಮನಿಸದೆಯೋ ಏನೋ, "ನೂರ್ಸಂದ" ಎಂಬ ಪದವನ್ನೇ ಬಳಸಿದ್ದಾರೆ. ಈಗ ಮೈಸೂರು ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಅದೇ ಹಸ್ತಪ್ರತಿಯಲ್ಲಿ "ನೂರ್ಸಂದ" ಎಂದೇ ಇದೆ. "ನೂರಿಂಸಂದ" ಎಂದಿದ್ದರೆ ಛಂದೋದೋಷವೇನೋ ಇಲ್ಲದಾಗುತ್ತದೆ; ವ್ಯಾಕರಣದೋಷ ಬಂದು ಅಂಟಿಕೊಳ್ಳುತ್ತದೆ. ಇದೇ ಸರಿಯಾದ ಪಾಠ ಎಂಬುದನ್ನು ಒಪ್ಪಿಕೊಳ್ಳುವುದಾದರೆ ಹರಿಹರ, ಪಾಲ್ಕುರಿಕೆ ಸೋಮನಾಥ, ಕೆರೆಯ ಪದ್ಮರಸರು ೧೨೨೨ರಲ್ಲಿಯೇ ಕೀರ್ತಿಕಾಯರಾಗಿದ್ದಾರೆಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಈ ಅಂಶವನ್ನು ಬದಿಗಿರಿಸಿ ಸೋಮರಾಜನ ಕಾಲನಿರ್ಣಯಕ್ಕೆ ಅನುವಾಗುವ, ಆತನದೇ ಆದ ಇನ್ನೊಂದು ಪದ್ಯವನ್ನು ಪರೀಕ್ಷಿಸಬಹುದು.

ಶಿವನೆಂದುತ್ತಮ ಶೈವರಂಬುರುಹನೇತ್ರಂಗೆತ್ತು ತಾಂ
ವೈಷ್ಣವರ್
ಹವಿರನ್ನ ಪ್ರಿಯನೆಂದು ಭೂವಿದಿವಿಜರ್ ಜೈನರಿ
ಜಿನಂಗೆತ್ತು ತ
ಮ್ಮವನೆಂದರ್ಚಿಸಲೊಲ್ದು ಸರ್ವಮುಖದಿಂದಂ ಪೂಜೆ
ಗೊಂಡಾವಗಂ
ಸುವಿಲಾಸಂಬಡೆ ದೊಪ್ಪುವಲ್ಲಮನೆ ಬೆಚ್ಚಿರ್ಕೆನ್ನ ಚಿತ್ತಾ
ಬ್ಜದೊಳ್
(೧-೧೧)

ಇಲ್ಲಿ ಅಲ್ಲಮಪ್ರಭುವನ್ನು ಪರಾತ್ಪರ ವಸ್ತುವಿನ ಮಟ್ಟಕ್ಕೆ ಏರಿಸಲಾಗಿದೆ. ಕವಿಯ "ಅಲ್ಲಮಭಕ್ತಿ" ಸ್ತುತ್ಯವೆ. ಇದಕ್ಕಿಂತ ಹೆಚ್ಚಾಗಿ ಈ ಪದ್ಯದಲ್ಲಿ ಪದಪುಗೊಂಡಿರುವ "ಸರ್ವಧರ್ಮಸಮನ್ವಯ" ತತ್ತ್ವವು ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ ಅನ್ವಯವಾಗುವಂತಹುದು. ಸರ್ವಸಿದ್ಧಾಂತ ದರ್ಶನಗಳ ತಿರುಳು ಇದು. ಇಂತಹ ಸಮುನ್ನತ ಭಾವವನ್ನು ವ್ಯಕ್ತಪಡಿಸಿರುವ ಕವಿ ನಿಜವಾಗಿಯೂ ಧನ್ಯನು. ಈ ಧನ್ಯತೆಗೆ ಸೋಮರಾಜನು ಪಾತ್ರನೇ ಹೇಗೆ ? ಉದ್ಭಟಕಾವ್ಯದ ಇತರ ಪದ್ಯಗಳಲ್ಲಿ ಕೆಲವಾದರೂ ಈ ಪದ್ಯದ ಮಟ್ಟಕ್ಕೆ ಏರುತ್ತವೆಯೇ ಎಂದರೆ "ಇಲ್ಲ" ಎಂದು ಗಟ್ಟಿಸಿ ಹೇಳಬೇಕಾಗುತ್ತದೆ. ಇದು ಬೇರಾವುದೋ ಎಡೆವೊಲದಿಂದ ಹಾರಿಬಂದು ಈ ಕವಿಯ ಅಂತರಂಗವನ್ನು ಪ್ರವೇಶಿಸಿರಬಹುದೆ ?

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂ
ತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾ
ಯಿಕಾಃ
ಅರ್ಹನ್ನಿತ್ಯಥ ಜೈನ ಶಾಸನರತಃ ಕರ್ಮೇತಿ ಮೀಮಾಂಸಕಾಃ
ಸೋಯಂ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ

ಯಾವ ಕೇಶವೇಶನನ್ನು ಶೈವರು ಶಿವನೆಂದೂ, ವೇದಾಂತಿಗಳು ಬ್ರಹ್ಮನೆಂದೂ ಪ್ರಮಾಣಪಟುಗಳಾದ ಬೌದ್ಧರು ಬುದ್ಧನೆಂದೂ ನೈಯಾಯಿಕರು ಕರ್ತನೆಂದೂ, ಜೈನರು ಅರ್ಹಂತನೆಂದೂ, ಮೀಮಾಂಸಕರು ಕರ್ಮ ಎಂದೂ ಉಪಾಸನೆ ಮಾಡುವರೋ ಅವನು ನಮಗೆ ವಾಂಛಿತ ಫಲವನ್ನು ಸದಾ ಕೊಡುವವನಾಗಲಿ— ಎಂಬುದು ಈ ವೃತ್ತದ ಒಟ್ಟು ತಾತ್ಪರ್ಯ. ಸೋಮರಾಜ, ಈ ಪದ್ಯವನ್ನೋದಿ ಸ್ಫೂರ್ತಿಗೊಂಡು 'ಶಿವನೆಂಸಿ ಸ್ವರಾಜ ಶೈವ' ಎಂಬ ಪದ್ಯವನ್ನು ರಚಿಸಿರಬೇಕಲ್ಲವೆ? ಆದ ಯೋಗ ಕವಿಯೇ ಉದ್ಭಟಕಾವ್ಯದ ಪದ್ಯವನ್ನು ನೋಡಿ ಸ್ವರಾಜ್ಯ ಸಂಸ್ಕೃತ ಶಾಸನವನ್ನು ರಚಿಸಿರಬೇಕೆಂಬಲ್ಲ ಪರಃ ಊಹಾತೀತವಿಕೆಂದರೆಸಂಸ್ಕೃತಶಾಸನದಲ್ಲಿ ಇನ್ನೂ ಶಿವಾ... ಕಸುಂದರ ಸಂಸ್ಕೃತ ವೃತ್ತಗಳಿವೆ. ಅವುಗಳಿಗೆ ಸಮಾನ ಯಾದ ಪದ್ಯಗಳು ಉದ್ಭಟಕಾವ್ಯದಲ್ಲಿಲ್ಲ. ಆದುದರಿಂದ ಬೇಲೂರು ಶಾಸನವೇ ಉದ್ಭಟ ಕಾವ್ಯದ ಪದ್ಯಕ್ಕೆ ಮೂಲ ಎಂದೆನ್ನಿಸುತ್ತದೆ. ಆ ಶಾಸನ ಹುಟ್ಟಿದುದು ವಿಜಯನಗರದ ಹರಿಹರ ರಾಯನ ಕಾಲದಲ್ಲಿ; ಕ್ರಿ.ಶ. 1340ರ ಸುಮಾರಿನಲ್ಲಿ. ಇದರಿಂದ, 'ಉದ್ಭಟಕಾವ್ಯ'ದ ಸೋಮರಾಜನು ಕ್ರಿ. ಶ. 1340ರಿಂದ ಈಚಿನವನೋ, ಏನೋ ಎಂಬ ಸಂದೇಹ ಮೂಡುತ್ತದೆ.

ಈ ಅಭಿಪ್ರಾಯಕ್ಕೆ ಪೋಷಕವಾಗಿ ಇನ್ನೊಂದು ಆಧಾರವಿದೆ. ಸೋಮರಾಜನು ತನ್ನ ಕಾವ್ಯಾರಂಭದಲ್ಲಿ ಸ್ಮರಿಸಿರುವ ಪದ್ಮರಸನೂ ಪಾಲ್ಕುರಿಕೆ ಸೋಮನಾಥನೂ ಕ್ರಿ. ಶ. 1250ರ ಸುಮಾರಿನವರೆಗೆ ಜೀವಿಸಿದ್ದರೆಂದು ಅನೇಕ ತೆಲುಗು ಮತ್ತು ಕನ್ನಡ ಸಂಶೋಧಕರ ಅಭಿಪ್ರಾಯ. ಆದುದರಿಂದ ಸೋಮರಾಜನು ಕ್ರಿ. ಶ. 1222ರಲ್ಲಿ ತನ್ನ ಕೃತಿಯನ್ನು ಪೂರ್ತಿಗೊಳಿಸಿದ್ದ ಎಂಬ ಅಭಿಪ್ರಾಯಕ್ಕೆ ಬೆಲೆ ಬರುವುದಿಲ್ಲ. ಆತನು ಬೇಲೂರಿನ 2ನೆಯ ಶಾಸನದ ಕಾಲದಿಂದ ಈಚೆಗೆ, ಪದ್ಮರಸ ಪಾಲ್ಕುರಿಕೆ ಸೋಮನಾಥರಾದ ಮೇಲೆ ಜೀವಿಸಿದ್ದನೆಂಬುದು ನಿರ್ವಿವಾದ.

ಡಾಕ್ಟರ್ ಅ. ವೆಂಕಟಸುಬ್ಬಯ್ಯನವರು ಉದ್ಭಟ ಕಾವ್ಯದ ಭಾಷೆ ಶೈಲಿ ವ್ಯಾಕರಣ ದೋಷ, ಪದದೋಷ ಮುಂತಾದುವನ್ನೂ ಇತರ ಐತಿಹಾಸಿಕ ಆಧಾರಗಳನ್ನೂ ಕೊಟ್ಟು ಕಾಲಸೂಚಕ ಪದ್ಯದಲ್ಲಿರುವ "ನೂರ್ಸಂದ" ಎಂಬುದರ ಹಿಂದೆ 'ನಾ' ಅನ್ನೂ ಸೇರಿಸಿ "ನಾನೂರ್ಸಂದ" ಎಂಬ ಪದಗಳೇ ಮೂಲಕೃತಿಯಲ್ಲಿದ್ದಿರಬೇಕೆಂದು ಸರಿಯಾಗಿ ಊಹಿಸಿದ್ದಾರೆ. (ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ, ಪು. 260–278). ಸ್ವಾಮಿಕಣ್ಣು ಪಿಳ್ಳೆ ಅವರ ಕೋಷ್ಟಕದಂತೆ ಕ್ರಿ. ಶ. 1522 (ಶಾ. ಶ. 1444)ನೆಯ ಇಸವಿಯು ಚಿತ್ರಭಾನು ಸಂವತ್ಸರವಾಗುತ್ತದೆ. ಪದ್ಯ ಹೇಳಿರುವ ಮುಹೂರ್ತಕ್ಕೆ ಸಂಬಂಧಪಟ್ಟ ಇತರ ಅಂಶಗಳೂ ತಾಳೆ ಬೀಳುತ್ತವೆ. 'ಉದ್ಭಟ ಕಾವ್ಯ'ದ ದೋಷಯುಕ್ತ ಪಾಠವನ್ನು ನಂಬಿಕೊಂಡು ಹರಿಹರಾದಿಗಳು ಕ್ರಿ. ಶ. 1222ಕ್ಕೆ ಮೊದಲೇ ಲಿಂಗೈಕ್ಯರಾಗಿದ್ದರೆಂದು ಭಾವಿಸುವುದಕ್ಕೆ ಬೇರಾವ ಆಧಾರಗಳೂ ಇಲ್ಲ. ಮೇಲೆ ಹೇಳಿರುವಂತೆ ಅವರು ಮೂವರೂ 1222ರ ನಂತರವೂ ಜೀವಿಸಿದ್ದರು. ಎಲ್ಲಿಯವರೆಗೆ ಜೀವಿಸಿದ್ದರು ಎಂಬುದಕ್ಕೆ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯ.

ಇನ್ನು, ಹರಿಹರನು ಕಾವ್ಯರಚನಾರಂಭ ಮಾಡಿದುದು ಯಾವಾಗ ಎಂಬುದನ್ನು ನೋಡಬಹುದು ಈ ದಿಸೆಯಲ್ಲಿ ನೇಮಿಚಂದ್ರನ 'ಲೀಲಾವತಿ'ಯ ಕೆಲವು ಪದ್ಯಗಳು ಬೆಳಕು ಬೀರುತ್ತಿವೆ. ಆ ಪದ್ಯಗಳು ಯಾವು ಎಂಬುದನ್ನು ನೋಡುವ ಮೊದಲು ಹರಿಹರನ ಕಾವ್ಯೋದ್ದೇಶವೇನೆಂಬುದನ್ನು ಅರಿತುಕೊಂಡಿರಬೇಕಾಗುತ್ತದೆ.

ಪೊಗಳೆಂ ಮಿಕ್ಕಿನ ಚಕ್ರಪಾಣಿ ಸರಸೀಜೋದ್ಭೂತ
ಸಂಕ್ರಂದನಾ
ದಿಗಳಂ ತಾನೆನೆ ಮರ್ತ್ಯಕೀಟಕರ ಮಾತಂತಿರ್ಕೆ
ಮತ್ತಾವನಂ
ಬಗೆದಾರೆಂ ಬಿಡದಾ ಹರಂಗೆ ಶಶಿಭೂಷಂಗೀಶ್ವ
ರಂಗೆಯ್ದೆ ನಾ
ಲಗೆಯಂ ಮಾರಿದೆನೊಲ್ದು ಹಂಪೆಯ ವಿರೂಪಾಕ್ಷಂಗ
ದೇನುಮಂ
ಪಂಪಾಶತಕ-೮೧
ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ
ಮೇಲೆಯಕ್ಕಟಾ

ತವತನಗಿಂದ್ರ ಚಂದ್ರ ರವಿ ಕರ್ಣದಧೀಚಿ ಬಲೀಂದ್ರ
ನೆಂದು ಮೇಣ್
ಅನವರತಂ ಪೊಗಳ್ದು ಕಿಡಬೇಡೆಲೆ ಮಾನವ ನೀನ
ಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ
ಹಂಪೆಯಾಳ್ದನಂ
(ಅದೇ 82)

ಈ ಎರಡು ವೃತ್ತಗಳನ್ನೂ ಹರಿಹರನು ಗಿರಿಜಾ ಕಲ್ಯಾಣದಲ್ಲಿ ಕಾಮದಹನ ಪ್ರಕರಣವನ್ನು ಆ ಹಿಂದೆ ಯಾರೂ ಬಣ್ಣಿಸಿರದ ನವ್ಯ , ಭವ್ಯ ರೀತಿಯಲ್ಲಿ ಬಿತ್ತರಿಸಿರುವುದನ್ನೂ ಲಕ್ಷ್ಯದಲ್ಲಿಟ್ಟುಕೊಂಡರೆ ನೇಮಿಚಂದ್ರನ ಪದ್ಯಗಳ ಸ್ವಾರಸ್ಯವನ್ನು ಸಂಪೂರ್ಣವಾಗಿ ಸವಿಯಬಹುದು.

ಪೂಸುವ ಬೂದಿಗಂಗಭವನಂ ಭವಸಾರನನಾದರ್ಗೆ
ಸುಟ್ಟ ಭೂ
ತೇಶನ ಬುದ್ಧಿಗುದ್ಧವರಿದಾಂ ಪೊಗಳೆಂ ಪೊಗಳೆಂ
ಮನೋಜನಂ
ಕೇಸುರಿಯಂತೆ ಪರ್ಬಿಪಟುವಾಗಿ ಪೊದಳ್ದಿಳು
ರ್ದಂತರಂಗಮಂ
ಕಾಸಿಕ ಪಾಲಿಯಂ ಪಿಡಿದೊರಿಲ್ದರೆವೆಣ್ಣನೆ ಮಾಡಿ
ಬಿಟ್ಟನಂ
ಲೀಲಾವತಿ, 1-85

ವೈಗೆ ಬಡಿದುಕೊಳ್ಳುವ ಬೂದಿಗಾಗಿ (ಮತ್ತಾವ ಪುರುಷಾರ್ಥಕ್ಕೂ ಅಲ್ಲ!) ಹುಟ್ಟಿಗೆ ಕಾರಣ (ಭವಸಾರ)ನಾದ ಅಂಗಭವ (ಕಾಮ)ನನ್ನು ಸುಟ್ಟ ಆ ಭೂತೇಶನ ಬುದ್ಧಿಯನ್ನು ಮೆಚ್ಚಿಕೊಂಡು ಹಿಗ್ಗಿ ಹೀಚಿ ಅವನನ್ನು ಹೊಗಳುವುದಿಲ್ಲ ನಾನು. ಮನೋಜನನ್ನು ಹೊಗಳುತ್ತೇನೆ; ಕಾಳ್ಗಿಚ್ಚಿನಂತೆ ಹಬ್ಬಿ ಪಟುವಾಗಿ ಬೆಳೆದು ಕಪಾಲಿಯ ಅಂತರಂಗವನ್ನು ಕಾಸಿ ಹಿಡಿದು ರುಬ್ಬಿ ಅರೆ ಹೆಣ್ಣನ್ನಾಗಿ ಮಾಡಿದ ಮನಸಿಜನನ್ನು ಹೊಗಳುತ್ತೇನೆ– ಎನ್ನುತ್ತಾನೆ ನೇಮಿಚಂದ್ರ. ಕಾಮದೇವನಿಗೆ ನಾವು ಅಂಗಜ ಎಂದೂ ಮನಸಿಜ ಎಂದೂ ಸಂಬೋಧಿಸುತ್ತೇ. ವಷ್ಟೆ ! ಈ ಪದಗಳ ಮೂಲಾರ್ಥವನ್ನು ಬಳಸಿಕೊಂಡು ಈ ಕವಿಯು 'ಗಿರಿಜಾಕಲ್ಯಾಣ ಮಹಾಪ್ರಬಂಧ'ದ ಕಾಮದಹನ ಪ್ರಸಂಗವನ್ನು ಗೇಲಿಮಾಡು

ತ್ತಾನೆ. ಇವನ ಪಾಲಿಗೆ ಶಿವನು ಚಂದ್ರಶೇಖರನಲ್ಲ, "ಚೆಲುವಿನ ಚಲುವಲ್ಲ", "ಮಂಗಳಕೆ ಮಂಗಳ"ವಲ್ಲ, ಭೂತಗಳ ಒಡೆಯ, ಸುಡುಗಾಡುಸಿದ್ಧ, ರುಂಡಮಾಲಾ ಧಾರಿ, ಅಮಂಗಳ ಸ್ವರೂಪನು. ಶರೀರದಲ್ಲಿ ಹುಟ್ಟಿದ (ಅಂಗಜ)ವನನ್ನು ಸುಟ್ಟುಹಾಕಿದರೇನಂತೆ ? ಆ ಅಂಗ ಜನೇ ಮನಸಿಜನಾಗಿ ಆ ಕಪಾಲಿಯ ಅಂತರಂಗವನ್ನೇ ಆವರಿಸಿ ಅವನನ್ನು ಅರೆಹೆಣ್ಣನ್ನಾಗಿ ಮಾಡಿಬಿಟ್ಟ ಎಂದು ಆ ಕವಿಯ ಅಂಬೋಣ. "ಅರ್ಧನಾರೀಶ್ವರ ಲೀಲೆ"ಯನ್ನು "ಗಿರಿಜಾಕಲ್ಯಾಣದ, ಕಾಮನನಂಗ ನಾಗಿ ಕುಡುತಿರ್ಕೆರತಿಗೆ ಸಂಪದಮಂ ಎಂದು ಪಾರ್ವತಿ ಯೊಡನೆ ನುಡಿಯುತ್ತುಂ ಕಾಮನಂ ಸಂಕಲ್ಪಜನ್ಮಮಂ ಮಾಡಿಕೊಟ್ಟ" ಎಂಬೀ ಮಾತುಗಳನ್ನೂ ಪರಿಹಾಸ್ಯ ಮಾಡುವುದು ಆತನ ಉದ್ದೇಶವಾಗಿದ್ದಂತೆ ತೋರು ತ್ತದೆ. ಶಿವಪುರಾಣದ ಅರ್ಧನಾರೀಶ್ವರಲೀಲೆ ಬೇರೆ. ಇವನು ತಿಳಿದುಕೊಂಡಂತೆ ಶಿವನು ಮನೋಜನ ಪ್ರಭಾ ವದಿಂದ ಅರೆವೆಣ್ಣಾಗಲಿಲ್ಲ. ಅವನು ಬಯಸಿದ್ದು ಕಾಮ ಕಲುಷಿತ ಪ್ರೇಮವನ್ನಲ್ಲ, ತ್ಯಾಗಮೂಲವಾದ ನಿಷ್ಕಾಮ ಪ್ರೇಮವನ್ನು ಎಂಬುದು "ಗಿರಿಜಾಕಲ್ಯಾಣ"ದ ಅಂತ ರಾರ್ಥ. ಹರಿಹರನ ಉದ್ದೇಶ ತಾತ್ಪರ್ಯ ಏನೇ ಇರಲಿ ನೇಮಿಚಂದ್ರ ಅವನ ಮಾತುಗಳ ಬೆರಳಿನಿಂದಲೇ ಅವನ ಕಣ್ಣುಗಳನ್ನು ಚುಚ್ಚಲೆಳಸುತ್ತಾನೆ.

"ಮರ್ತ್ಯಕೀಟಕ"ರಾದ ರಾಜಮಹಾರಾಜರನ್ನು ಹೊಗಳುವುದು ಹರಿಹರನ ಜಾಯಮಾನಕ್ಕೆ ಒಗ್ಗುವ ದಲ್ಲ. ನೇಮಿಚಂದ್ರನಿಗೆ ಈ ಧೋರಣೆ ಹಿಡಿಸಲಿಲ್ಲ. ಈತ ಬೇರೆಯವರಿಂದ ಹೊನ್ನಿನರೂಪದಲ್ಲಿ ಪ್ರೋತ್ಸಾಹ ಪಡೆಯುವುದೂ ಅಂತಹವರನ್ನು ಹೊಗಳುವುದೂ ಅನು ಚಿತವಲ್ಲ ಎನ್ನುವವನು

ಬಳ್ಳಿವೊದಲಾಗಿ ಮೊದಲೊಳ
ಗೆಳ್ಳನಿ ತಂಂ ಪೊನ್ನನಿಕ್ಕದೊಡೆ ಪರ್ಬದು ಪೊ
ನ್ನುಳ್ಳನರ ನಿತ್ತೊಡಲ್ಲದೆ
ಬೆಳ್ಳನೆ ಪರ್ಬುಗುಂಮೆ ಕೀರ್ತಿಲತೆ ದಿಕ್ತಟಮಂ
(ಲೀಲಾವತಿ, ೧-೪೩.)

ಪೊನ್ನು (ನೀರು ?) ಹಾಕದೆ ಇದ್ದರೆ ಬಳ್ಳಿ ಹಬ್ಬುತ್ತ ದೆಯೆ ? ಹೊನ್ನುಳ್ಳವರು ಕೊಡದಿದ್ದರೆ ಅವರ ಕೀರ್ತಿ ಯ ಬಳ್ಳಿ ಹಬ್ಬುವುದೆ ? ಎಂದು ಕೇಳುತ್ತಾನೆ. ತನ್ನ ಯಶಸ್ಸು ಹಬ್ಬಲೆಂದು ಹಾರೈಸುವವನು "ವಿದಗ್ಧ ಕವಿ ವೃಷಭ"ನಾಗಬೇಕು. ಅದಾಗದಿದ್ದರೆ ಗುಣಿಯಾದರೂ ಆಗಬೇಕು; ಅದಾಗದಿದ್ದರೆ ತ್ಯಾಗಿಯಾದರೂ ಆಗ ಬೇಕು. ಬುಧವರ್ಗಕ್ಕೆ ಹೊನ್ನಮೊಟ್ಟೆಯನ್ನು ಕೊಡು ತ್ತಾನೋ ? ಕೊಡಲಿ; ಅದು ಸಾಧ್ಯವಾಗದಿದ್ದರೆ ತನ್ನಲ್ಲಿ ಏನಿದೆಯೋ ಅದನ್ನು ಕೊಡಲಿ; ಅದೂ ಆಗುವು ದಿಲ್ಲವೋ, ತಾಂಬೂಲವನ್ನಾದರೂ ಕೊಡಲಿ; ಅದೂ ಇಲ್ಲವೋ, ಪ್ರೀತಿ ವಿಶ್ವಾಸ ನಯವಿನಯಗಳನ್ನು ತೋ ರಲಿ ಎಂದು ವಿವೇಕ ಹೇಳುತ್ತಾನೆ. ಅಂತಹವರ ಹೊಗಳಿದರೆ ಏನು ಅಪರಾಧ ಎಂದು ಹರಿಹರಸಂತ ನಿಸ್ಪೃಹರನ್ನು ಪ್ರಶ್ನಿಸುತ್ತಾನೆ. "ಮರುಮೆಯ್ಗೆ ಪರ್ಪ ಸದ್ಗುಣಮಣಿಯೆಂಬ ಭೂಷಣದಿಂ" ಯಾವನು ಅಲಂ ಕೃತನಾಗಿರುವನೋ ಅಂತಹ ಮಹಾತ್ಮನನ್ನು ಈ ಭೂ ಲೋಕದಲ್ಲಿ ಕೊಂಡಾಡದವರಾರು ? — ಎಂದು ಮುಂತಾಗಿ ವಾದಿಸುತ್ತಾನೆ. ತನಗೆ ಆಶ್ರಯವಿತ್ತ ಲಕ್ಷ್ಮಣದೇವನನ್ನು, ಸೂರ್ಯೋದಯವನ್ನು ವರ್ಣಿ ಸುವ ನೆಪದಲ್ಲಿ ಮನಃಪೂರ್ವಕವಾಗಿ ಹೇಗೆ ಪ್ರಶಂಸಿಸು ತ್ತಾನೆ ನೋಡಿ,

ಅಂಬುಧಿವೇಷ್ಟಿತಾವನಿಗೆ ಲಕ್ಮಣದೇವನೆ ರಾಜನೆಂದು ಲೋ
ಕಾಂಬಿಕೆಯಪ್ಪ ಪುಣ್ಯಸತಿ ಚಂದಲದೇವಿಯೆ ರಾಣಿಯೆಂದುಸೇ
ವ್ಯಂ ಬುಧನೇಮಿಚಂದ್ರನೆ ಕವೀಶ್ವರನೆಂದಿಳೆಗಿಂದ್ರನೆಂನಂದುದಿ
ವ್ಯಂ ಬಿಡಿವಂತೆ ಮೂಡಿದುದು ಮೂಡಣದಿಕ್ಕಿನೊಳರ್ಕ ಮಂ
ಡಲಂ (ಲೀಲಾವತಿ, ೧೪-೧೩೬.)

ಕಾವ್ಯವನ್ನು ಮುಗಿಯುವಾಗ ಅವನು ನುಡಿವ ಫಲಶ್ರು ತಿಯೂ ಗಮನಿಸತಕ್ಕದು.

ಧರೆಯಂ ರಕ್ಷಿಸುತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ
ಸಿರಿಯಂತಾತನ ತೋಳೊಳಿರ್ಕೆ ಸತತಂ ಚಂದ್ರಿಕಾದೇವಿ ಸಾ
ಸಿರಮಂ ಕಾವ್ಯಮನೊಲ್ದು ಪೆಳ್ಗೆ ಚಂದ್ರೋದಯಂ......
....
(ಲೀಲಾವತಿ, ೧೪-೧೫೦)

ಈ ಪದ್ಯದಲ್ಲಿಯಂತೂ ಅತಿಶಯೋಕ್ತಿ ಎಲ್ಲೆಮೀರಿ ಚೆಲ್ಲ ವರಿದಿದೆ. ಕೊಡುವ ದಾನಿಗಳನ್ನು ಮನಸಾರೆ ಹೊಗ ಳುವಾಗ ಒಂದೆರಡು ಮಾತು ಹೆಚ್ಚಾದರೆ ದೋಷವೇನು ಬಂತು ಎನ್ನುವುದು ನೇಮಿಚಂದ್ರನ ಮಾರ್ಗ.

"ಲೀಲಾವತಿ" ಎಂಬ ಹೆಸರೇ ಸೂಚಿಸುವಂತೆ ಆ ಕಾವ್ಯ "ಕಾಮಕೇಳೀ ಕಲೆಯೊಳ್ ಜಾಣ್‌ಬೆತ್ತ

ಯುವತಿ. ಈಕೆಯನ್ನು ಕಂಡು ಕಣ್ಬೇಟಕ್ಕೆ ಒಳ ದವರಾರು ? ಮನಂಬುಗುವಂತೆ ಕೇಳಿ ಕಿವಿ ಟಕ್ಕೆ ಪಕ್ಕಾಗದಿರುವವರು ಯಾರು ಎಂದು ಈತನು ಆತ್ಮಪ್ರತ್ಯಯ. ಈ ಕಾವ್ಯವು ಲೀಲಾವತಿ ಕಂದರ್ಪರ ಪ್ರಣಯವನ್ನು ಕುರಿತುದೆಂದು ಮೇಲು ನೋಟಕ್ಕೆ ತೋರಿದರೂ ಚಂದಲದೇವಿ ಲಕ್ಷ್ಮಣದೇವರ ಕಲ್ಯಾಣ ವನ್ನು ಕುರಿತುದಾಗಿದೆ. ಬಾಲಚಂದ್ರದೇವನು ರಚಿಸಿರ ಹುದಾದ ಶಾಸನದಲ್ಲಿರುವ ಒಂದು ಪದ್ಯವನ್ನು ರೀಕ್ಷಿಸಿದ ಈ ಸಂಗತಿ ಸುಸ್ಪಷ್ಟವಾಗುತ್ತದೆ.

ಕಾ ತೆಯಂರಂ ಮೆರಳ್ಬುವಸವಾಕೃತಿ ಯಿಂ ಸುಮನೋಭಿವೃ
ದೆ ದ್ಧಿಯಂ
ಜನಿಯಿಂಪ ಶೀಲದಿಂ ಕುವಲಯಕ್ಕೆ ವಿಕಾಸಮನೀವ
ವ್ಯೆಮೆಯೀಂ
ಜನನಯನಕ್ಕೆ ಕಾಮನೊ ವಸಂತನೊಚಂದ್ರಮನೋ ದಿಟಕ್ಕೆ
ಪೇ
ಳಿನೆ ವಿಭು ಲಕ್ಷ್ಮಿದೇವನೆಸೆವಂ ಕವಿ ಸಂಕಲ ಕಲ್ಪಭೂರುಹಂ[1]

ಈ ಲಕ್ಷ್ಮಿದೇವನೆ "ಲೀಲಾವತಿ"ಯ ಕಂದರ್ಪ ದೇವ ನೆಂಬು ಬೇರೆ ಹೇಳಬೇಕಾಗಿಲ್ಲ.

ಇದೇ ಶಾಸನದಲ್ಲಿನ ಒಂದು ಪದ್ಯದಲ್ಲಿ ಚಂದಲ ದೇವಿಯ ದಾನಗುಣವನ್ನು ಹೊಗಳಿದೆ. ಆದಿ ಪಂಪನು ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ "ವಿಕ್ರಮಾ ರ್ಜುನ ವಿಜಯ"ವನ್ನು ಬರೆದಂತೆ ರನ್ನನು ಸತ್ಯಾಶ್ರ ಯನನ್ನು ಭೀಮನಿಗೆ ಹೋಲಿಸಿದಂತೆ ನೇಮಿಚಂದ್ರನು ಲಕ್ಷ್ಮಣರಾಜನನ್ನು ಕಂದರ್ಪ ದೇವನಿಗೆ ಹೋಲಿಸಿ "ಲೀಲಾವತಿ"ಯನ್ನು ರಚಿಸಿದ್ದಾನೆ.

ಇನ್ನು ಲೀಲಾವತಿ ಕಂದರ್ಪರ ಪ್ರಣಯ ಪ್ರಸಂ ಗವೇ ಕಥಾವಸ್ತುವಾಗಿರುವ ಈ "ಪ್ರಬಂಧ"ದ ಆರಂಭ ದಲ್ಲಿ ಮಾಡಿದ "ಭೂತೇಶನ........... ಪೊಗಳೆಂ, ಪೊ ಗಳ್ವೆಂ ಮನೋಜನಂ" ಎಂಬ ಪ್ರತಿಜ್ಞೆ ಏನಾಯಿತು ? ಸಂದರ್ಭೋಚಿತವಲ್ಲದ ಎಡೆಯಲ್ಲಿ ಈ ಪದ್ಯವನ್ನು ತುರುಕಿದ್ದಾದರೂ ಏಕೆ ? ಎಂಬ ಪ್ರಶ್ನೆ. ಹರಿಹರನ "ಗಿರಿಜಾಕಲ್ಯಾಣ"ವನ್ನೂ ಆತನ ಕಾವ್ಯೋದ್ದೇಶ ವನ್ನೂ ವಿರೋಧಿಸುವುದು ಕವಿಯ ಉದ್ದೇಶವಾಗಿದ್ದಿರ ಬೇಕು. "ಲೀಲಾವತಿ"ಯನ್ನು ಆದ್ಯಂತ ಪರಿಶೀಲಿಸಿ ದರೆ ಕವಿಯ ಪ್ರತಿಜ್ಞೆ ಈಡೇರಿಲ್ಲವೆಂಬುದು ತಾನೇ ಅರಿವಾಗುತ್ತದೆ. ಆಂಡಯ್ಯನ "ಕಬ್ಬಿಗರ ಕಾವ" ಎಂಬ "ಕಾವನ ಗೆಲ್ಲ"ಕ್ಕೆ ಬೀಜಬಿದ್ದುದು "ಲೀಲಾವತಿ"ಯಲ್ಲಿ ಎಂದು, ಬೇಕಾದರೆ ಹೇಳಬಹುದು.

ನೇಮಿಚಂದ್ರನು "ಲೀಲಾವತಿ ಪ್ರಬಂಧ"ವನ್ನು ರಚಿಸುವ ಹೊತ್ತಿಗೆ ಹರಿಹರನ "ಗಿರಿಜಾಕಲ್ಯಾಣ"ವೂ "ಪಂಪಾಶತಕ"ವೂ ಸಾಕಷ್ಟು ಪ್ರಸಿದ್ಧಿಗೆ ಬಂದಿದ್ದು ವೆಂದು ತೋರುತ್ತದೆ. ಆತನು ಕ್ರಿ. ಶ. ೧೧೬೫ ರಿಂದ ೧೧೯೯ರ ವರೆಗೆ ರಾಜ್ಯವಾಳಿದ ಸವದತ್ತಿಯ ಲಕ್ಷ್ಮಣ ದೇವನಿಂದಲೂ ೧೧೭೩ ರಿಂದ ೧೨೨೦ರ ವರೆಗೆ ರಾಜ್ಯ ವಾಳಿದ ವೀರಬಲ್ಲಾಳನಲ್ಲಿ ಪ್ರಧಾನನಾಗಿದ್ದ ಪದ್ಮನಾಭ ನಿಂದಲೂ ಪ್ರೋತ್ಸಾಹ ಪಡೆದವನು. ಲಕ್ಷ್ಮಣದೇವನ ಪ್ರೀತ್ಯರ್ಥವಾಗಿ ಲೀಲಾವತಿಯನ್ನು ರಚಿಸಿದನೆಂಬುದು ಆ ಕೃತಿಯಿಂದಲೆ ಹೊರಪಡುತ್ತದೆ. ಸುಮಾರು ೧೧೯೦ ರ ಹೊತ್ತಿಗೆ ಈ ಕೃತಿಯನ್ನು ಬರೆದು ಮುಗಿಸಿ ಅನಂ ತರ ಸೆಜ್ಜೆವಳ್ಳ ಪದ್ಮನಾಭನ ಅಪೇಕ್ಷೆಯಂತೆ "ನೇಮಿ ನಾಥ ಪುರಾಣ"ವನ್ನು ರಚಿಸಲು ಆರಂಭಿಸಿ ಕಾರಣಾಂ ತರದಿಂದ ಅರ್ಧಕ್ಕೇ ನಿಲ್ಲಿಸಿದನೆಂದು ಸದ್ಯಕ್ಕೆ ತೀರ್ಮಾ ನಿಸಬಹುದು. ಕ್ರಿ. ಶ. ೧೧೮೦ಕ್ಕೆ ಮುಂಚೆಯೆ ಹರಿ ಹರನು "ಪಂಪಾಶತಕ", "ಗಿರಿಜಾಕಲ್ಯಾಣ" ಈ ಎರಡು ಕೃತಿಗಳನ್ನಾದರೂ ಬರೆದು ಮುಗಿಸಿದ್ದನೆಂದು ಊಹಿಸಬಹುದು.

ಚೇರಮಾಂಕನು ಹೇಳುವಂತೆ ಹರಿಹರನು ವೀರ ಬಲ್ಲಾಳನ ಆಸ್ಥಾನದಲ್ಲಿ ಕರಣಿಕಾಗ್ರಣಿಯಾದ್ದನಲ್ಲದೆ ದ್ವಾರಸಮುದ್ರದಲ್ಲಿದ್ದಾಗಲೇ ಕಾವ್ಯರಚನಾಕಾರ್ಯ ವನ್ನು ಆರಂಭಿಸಿದ್ದನೆಂದು ತೋರುತ್ತದೆ. ನೇಮಿ ಚಂದ್ರನ ಲೆಕ್ಕಾಚಾರದಂತೆ ಹರಿಹರನೂ ವೈದಿಕ ಕವಿ. ಪ್ರಾಚೀನ ರಾಜಾಸ್ಥಾನಗಳಲ್ಲಿ ಕವಿ, ಗಮಕಿ, ವಾದಿ, ವಾಗ್ಮಿ, ಗಾಯಕರಲ್ಲಿ ಪರಸ್ಪರ ಸ್ಪರ್ಧಾಮನೋಭಾವ ವಿರುತ್ತಿದ್ದಿತು. ಹರಿಹರನಿಗೆ ತಾನು ಏತರಲ್ಲಿ ಕಡಮೆ ಎಂಬುದನ್ನು ಮೆರೆಯಲು ಆಗ ಇನ್ನೂ ಯುವಕನಾಗಿ ದ್ದ ನೇಮಿಚಂದ್ರನು "ಲೀಲಾವತಿ" ಎಂಬ ಶೃಂಗಾರ ರಸಪ್ರಧಾನವಾದ ಕಾವ್ಯವನ್ನು ರಚಿಸಿರಬೇಕು. ಹರಿ ಹರನ ಮೇಲೆ ಏಕೆ, ಇತರ ವೈದಿಕ ಕವಿಗಳ ಮೇಲೆ ಯೂ ಆತನ ಕಣ್ಣು. ಆದುದರಿಂದಲೆ,

1. ಕವಿಚರಿತೆ 1, (ಕ. ಸಾ. ಪ. ಮುದ್ರಣ), ಪು. ೩೩೭.

ಊದುವ ತಣ್ಣೆಲರುಂ ಶೀ
ತೋದಕ ಮುಂಮುಸೇವ್ಯಮಲ್ತೆ ಹಿಮಸಮಯ ದೊಳಾ
ರಾದರಿಪರುಚಿತವರಿಯದ
ವೈದಿಕಕವಿಗಳ ಕವಿತ್ವಮಂ ವಸುಮತಿಯೊಳ್

ಲೀಲಾವತಿ ೧-೧೯

—ಎಂದು ವೈದಿಕಕವಿಗಳನ್ನು ತಾತ್ಸಾರ ಮಾಡುತ್ತಾನೆ.

ಅಂತೂ, ಹರಿಹರದೇವನು ನೇಮಿಚಂದ್ರನ ಸಮಕಾಲೀನ, ಆತನ ಜೀವಮಾನಾವಧಿ ಈ ಮೊದಲೇ ನಿರ್ಣಯಿಸಿರುವಂತೆ ಕ್ರಿ. ಶ. ೧೧೫೦ – ೧೨೫೦ರ ಸುಮಾರು.

ಜನಪದ ಸಾಹಿತ್ಯ ಶಿಕ್ಷಣ— ಕೆಲವು ವಿಚಾರಗಳು

(36ನೆಯ ಪುಟದಿಂದ ಮುಂದುವರಿದಿದೆ.)

ಗಳೆಂದು, ಇನ್ನು ಹಲವರು ಹಳ್ಳಿಗರೆಂದು, ಇನ್ನು ಕೆಲವರು ಸುಲಭವಾಗಿ ತೇರ್ಗಡೆಯಾಗಬಹುದೆಂದು ಆ ವಿಷಯವನ್ನು ಆರಿಸಿಕೊಂಡಿದ್ದಾರೆ ಎಂದು ಭಾವಿಸಿದ್ದಾರೆ. ಇದು ನಿಜಕ್ಕೂ ಖಂಡನಾರ್ಹ. ಈ ತರಹೆಯ ಕೆಟ್ಟಭಾವನೆಗಳನ್ನು ಹೋಗಲಾಡಿಸಲು ವಿದ್ಯಾರ್ಥಿಗಳು ಸಂಶೋಧಕರು, ವಿದ್ವಾಂಸರು, ಎಲ್ಲರೂ ಜನಪದ ಸಾಹಿತ್ಯದ ಬಗ್ಗೆ ಆಸ್ತೆವಹಿಸಿ ಅವರ ಕಣ್ತೆರಸಬೇಕಾಗಿದೆ.

ವಿಶ್ವವಿದ್ಯಾಲಯಗಳು ಜನಪದ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ಇನ್ನಷ್ಟು ತೋರಬೇಕಾಗಿ(ಶ್ವ)ಯವಿತ್ತ ಹಲವಾರು ಭಾಗಗಳಲ್ಲಿ ಪ್ರಚಾರೋಪಾನ್ಯಾ ವರ್ಣ ಏರ್ಪಡಿಸಿ ಜನಪದ ಸಾಹಿತ್ಯ ಸಮ್ಮೇಳನಗಳನ್ನು ... ಸಬೇಕು. ಆದಷ್ಟು ಕಡಿಮೆ ದರದಲ್ಲಿ ಈ ಸಾಹಿತ್ಯಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಪ್ರಕಟಿಸಬೇಕು. ಈಗ ಆಗುತ್ತಿರುವುದು ಏನೇನೂ ಸಾಲದು. ವಿಶ್ವವಿದ್ಯಾಲಯಗಳಿಗೆ ಸಹಾಯಕವಾಗಿ ಜನಪದ ಪರಿಷತ್ತುಗಳು, ಸಂಸ್ಥೆಗಳು, ವಸ್ತುಸಂಗ್ರಹಾಲಯಗಳು ನಾಡಿನಲ್ಲಿ ಆಗಬೇಕಾಗಿದೆ. (ಈಚೆಗೆ ಮೈಸೂರಿನಲ್ಲಿ ಜನಪದ ಸಾಹಿತ್ಯ ಪರಿಷತ್ ಸ್ಥಾಪಿತವಾಗಿದೆ.) ಜನಪದ ಕಲೆಯನ್ನು, ಕಲಾವಿದರನ್ನು ಗೌರವಿಸಿ ಪ್ರೋತ್ಸಾಹ ನೀಡಬೇಕಾಗಿದೆ.

—ಕೆ. ಎಸ್. ರಾಮಮೂರ್ತಿ,
ಕನ್ನಡ ಎಂ. ಎ. ವಿದ್ಯಾರ್ಥಿ,
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು-6.

ಎರಡು ಜಗಜ್ಜ್ಯೋತಿಗಳು



ುದ್ಧ ಮತ್ತು ಬಸವ

★

ಮೂಲ :
...ಮಾರಸ್ವಾಮೀಜಿ,
ಜನನಯು...ಮಠ, ಧಾರವಾಡ.

★

ಕನ್ನಡಕ್ಕೆ :
ಶ್ರೀ ಟಿ.ಆರ್. ಮಹದೇವಯ್ಯ
ಬೆಂಗಳೂರು.

[ಧಾರವಾಡದ ನವಕಲ್ಯಾಣಮಠದ ಪೂಜ್ಯಶ್ರೀ ಶ್ರೀ ಕುಮಾರಸ್ವಾಮಿಯವರ **Buddha and Basava** ಎಂಬ ಉದ್ಗ್ರಂಥದ ಅನುವಾದದ ಧಾರಾವಾಹಿ ಪ್ರಕಟಣೆ 1969ರ ಜಾತ್ರಾವಿಶೇಷಾಂಕದಿಂದ ಪ್ರಾರಂಭವಾಗಿ ಈ ಸಂಚಿಕೆಯಲ್ಲಿ ಕೊನೆಗೊಳ್ಳುತ್ತಿದೆ. ಇಂಥ ಮಹತ್ವಪೂರ್ಣ ಗ್ರಂಥದ ಕನ್ನಡ ಅನುವಾದದ ಅಗತ್ಯವನ್ನು ಮನಗಂಡು ಮೂಲಗ್ರಂಥಕರ್ತರ ಕಡೆಯಿಂದ ಅನುಮತಿದೊರಕಿಸಿಕೊಂಡು, ನನ್ನನ್ನು ಈ ಕೆಲಸಕ್ಕೆ ನಿಯೋಜಿಸಿದ ಪತ್ರಿಕೆಯ ಪ್ರಧಾನ ಸಂಪಾದಕರಾದ ಪಂಡಿತ ಚನ್ನಪ್ಪ: ಎರೇಸೀಮೆಯವರಿಗೆ ನಾನು ಎಷ್ಟು ಆಭಾರಿಯಾಗಿದ್ದರೂ ಸಾಲದು.

ಭರತಖಂಡದ ಮಹಾನ್ ವಿಭೂತಿಪುರುಷರಾದ ಭಗವಾನ್ ಬುದ್ಧ ಮತ್ತು ಜಗಜ್ಜ್ಯೋತಿ ಬಸವ-ಇವರ ಜೀವನ, ಸಾಧನೆ ಹಾಗೂ ಸಂದೇಶಗಳ ತೌಲನಿಕ ಜಿಜ್ಞಾಸೆಯನ್ನೊಳಗೊಂಡ ಇಂಥ ಕೃತಿಯ ಅನುವಾದ ಕಾರ್ಯ ಸರಳವಾದುದಲ್ಲ. ಅದರಲ್ಲಿಯೂ ಶ್ರೀ ಶ್ರೀ ಕುಮಾರ ಸ್ವಾಮೀಜಿಯವರಂಥ ವಾಕ್‌ವಶ್ಯರ ನಿರರ್ಗಳ ವಾಗ್ಝರಿಯನ್ನು ಯಥಾವತ್ತಾಗಿ ಅನುವಾದಿಸುವುದು ರೋಮಾಂಚಕಾರಿಯಾದ ಪ್ರಯತ್ನವೇಸರಿ. ಮೂಲದಲ್ಲಿನ ವಿಚಾರಗಳನ್ನು ಆದಷ್ಟುಮಟ್ಟಿಗೆ ಅನುವಾದದಲ್ಲಿ ಮೂಡಿಸುವ ಪ್ರಯತ್ನದಲ್ಲಿ ಕೆಲವುಕಡೆ ಪದಶಃ ಭಾಷಾಂತರಮಾಡ ಹೊರಟು ವಾಕ್ಯರಚನೆ ಗಂಟುಗಂಟಾಗಿ ಕಾಣುತ್ತವೆ. ಈ ಧಾರಾವಾಹಿ ಭಾಗಗಳನ್ನೆಲ್ಲಾ ಕಲೆಹಾಕಿ ಸಮಗ್ರವಾಗಿ ಪರಿಷ್ಕರಿಸುವ ಕಾಲಕ್ಕೆ ಅವನ್ನು ಸರಿಪಡಿಸಬೇಕಾಗುತ್ತದೆ.

ಅನುವಾದ ಧಾರಾವಾಹಿಯಾಗಿ ಹರಿದಂತೆಲ್ಲಾ 'ಸಿದ್ಧಗಂಗಾ' ಓದುಗರನೇಕರು, ಹಿರಿಯರು, ಮಿತ್ರರು ನನ್ನ ಈ ಕಾರ್ಯ

ವನ್ನು ಮೆಚ್ಚಿ ನುಡಿದಿದ್ದಾರೆ. ಕೆಲವರು ಇವನ್ನೆಲ್ಲಾ ಸೇರಿಸಿ ಪುಸ್ತಕರೂಪದಲ್ಲಿ ತರಬೇಕೆಂದೂ ಒತ್ತಾಯಿಸಿದ್ದಾರೆ. ಅವರ ಪ್ರೋತ್ಸಾಹ- ಸ್ಫೂರ್ತಿಗಳಿಗೆ ನಾನು ಕೃತಜ್ಞನಾಗಿದ್ದೇನೆ. ನನ್ನ ಈ ಕಾರ್ಯದಲ್ಲಿ ಸತತವಾಗಿ ತಮ್ಮ ಅಮೂಲ್ಯ ಸಲಹೆ-ಸೂಚನೆಗಳನ್ನು ನೀಡುತ್ತ ಬಂದ ಕನ್ನಡದ ಖ್ಯಾತ ಪ್ರಬಂಧಕಾರರಾದ 'ರಾಕು' ಅವರ ಉಪಕಾರವನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಆ ಕ್ರಾಂತಿಯು (ಫ್ರೆಂಚ್ ಮಹಾಕ್ರಾಂತಿ) ಸ್ವಾತಂತ್ರ್ಯ, ಹಕ್ಕು, ವ್ಯಕ್ತಿ ಮತ್ತು ಪ್ರಜ್ಞೆಗಳನ್ನು ಒತ್ತಿಹೇಳಿತು. ಈ ಕಾರಣದಿಂದಲೇ ಅದರ ಪ್ರಾಶಸ್ತ್ಯ ಒಮ್ಮುಖವಾಯಿತು. ಸ್ವಾತಂತ್ರ್ಯ ಮತ್ತು ಸಂಘಟನೆ, ಹಕ್ಕು ಮತ್ತು ಕರ್ತವ್ಯ, ವ್ಯಕ್ತಿ ಮತ್ತು ಸಮಷ್ಟಿ (ಮನುಕುಲ), ಪ್ರಜ್ಞೆ ಮತ್ತು ಸಂಪ್ರದಾಯಗಳು ಮಾನವಸ್ವಭಾವದ ಬೇರ್ಪಡಿಸಲಾಗದ ಮೂಲವಸ್ತುಗಳು. ಅದರ ಕ್ರಮವಾದ ಬೆಳವಣಿಗೆಗೆ ಅವೆಲ್ಲವೂ ಅತ್ಯಗತ್ಯ. ಅವುಗಳನ್ನು ಸುಸಂಘಟಿತಗೊಳಿಸಲು ಮತ್ತು ಒಂದು ಉದ್ದೇಶ ಸಾಧನೆಗಾಗಿ ನಿರ್ದೇಶಿಸಲು ಮಾತ್ರ ಎಲ್ಲಕ್ಕಿಂತ ಮಿಗಿಲಾದ ಕೆಲವಂಶಗಳ ಹೊಂದಾಣಿಕೆ ಅಗತ್ಯ. ಈ ಹೊಂದಾಣಿಕೆಯ ತತ್ತ್ವವೇ ದೇವರು, ಅದೇ ಅತ್ಯುನ್ನತ ಆದರ್ಶ. ಪರಮಾಧಿಕಾರವು 'ನಾನು' ಎಂಬುದರಲ್ಲಿಯೂ ಇಲ್ಲ, 'ನಾವು' ಎಂಬುದರಲ್ಲಿಯೂ ಇಲ್ಲ. ಆದರೆ ಅದು ಜೀವನದ ಆಸರೆ ಹಾಗೂ ಆಧಾರವಾದ ದೇವರಲ್ಲಿದೆ. ಅವನೇ ಪ್ರಗತಿಯ ಆಧಾರ ಹಾಗೂ ಗುರಿ. ಆದರೆ ಆದರ್ಶ ಧ್ಯೇಯದ ಜ್ಞಾನವು, ಅದನ್ನು ಸಮರ್ಪಕವಾಗಿ ದೊರಕಿಸಿಕೊಳ್ಳುವ ರೀತಿಯನ್ನು ಒಡನೆಯೇ ಸೂಚಿಸುವ ಹಾಗೂ ಚಟುವಟಿಕೆಯ ಬೇರೆಬೇರೆ ಭಾಗಕ್ಕೆ ಅದನ್ನು ಅನ್ವಯಿಸುವ ಬಗ್ಗೆ ನಿರ್ದೇಶಿಸುವ ಭಾಷ್ಯಕಾರನನ್ನು ಅಪೇಕ್ಷಿಸುತ್ತದೆ. ಈ ಭಾಷ್ಯಕಾರನು ತನ್ನೊಳಗೇ ನಾನು ಮತ್ತು ನಾವು, ರಾಜ್ಯ ಮತ್ತು ವ್ಯಕ್ತಿಗಳನ್ನು ಒಳಗೊಳ್ಳಬೇಕಾಗಿರುವುದರಿಂದ ಮತ್ತು ಪ್ರಗತಿಶೀಲವಾಗಿರಬೇಕಾಗಿರುವುದರಿಂದ ಅದು ಒಬ್ಬ ಮನುಷ್ಯ ಅಥವಾ ಆರಿಸಿದ ಮಾನವರ ಕೂಟವಾಗಿರಬಾರದು, ಅದು ಮಾನವತೆಯೇ ಆಗಿರಬೇಕು. ಒಬ್ಬ ವ್ಯಕ್ತಿ ತಾನು ಜನಸಮೂಹವು ಗಮನಿಸದೇ ಇರುವ ಭಾವನೆಗಳು ಮತ್ತು ಆಶಯಗಳನ್ನು ಪ್ರತಿನಿಧಿಸುವಷ್ಟರ ಮಟ್ಟಿಗೆ ದೊಡ್ಡವನಾಗುವನು. ಮಾನವತೆಯ ಆದರ್ಶದ ಒಬ್ಬನೇ ಭಾಷ್ಯಕಾರನೆಂಬ ಕಲ್ಪನೆ ಪ್ರಗತಿಯನ್ನು ಎರಡು ವಿಭಿನ್ನ ಕಾಲಗಳಾಗಿ ವಿಭಾಗಿಸುವ ಪ್ರತಿ ಸಂಪ್ರದಾಯದಿಂದ ನಮ್ಮನ್ನು ಬೇರ್ಪಡಿಸುತ್ತದೆ ಅಥವಾ ಒಬ್ಬನೇ ಭಾಷ್ಯಕಾರನಿದ್ದನೆಂಬ ಸಿದ್ಧಾಂತದಿಂದ ಮಾನವತೆಯ ಸಂಪ್ರದಾಯಗಳನ್ನು ಬಂಧನದಲ್ಲಿಡುತ್ತದೆ. ಅಥವಾ ನಿರಂತರವಾದ ಅತೌಕಿಕ ಮಧ್ಯಸ್ಥಿಕೆಯ ಸಿದ್ಧಾಂತದಿಂದ ಅಥವಾ ಒಂದಕ್ಕೊಂದು ಸಂಬಂಧವಿಲ್ಲದ ಸಾಲುಸಾಲಾದ ಪೂರ್ಣ ಈಶ್ವರೇಚ್ಛೆಗಳ ಸಿದ್ಧಾಂತದಿಂದ ನಮ್ಮ ಪ್ರಯತ್ನಗಳ ಅಖಂಡತ್ವವನ್ನು ಒಡೆಯುತ್ತದೆ. ಆದ್ದರಿಂದ **ಮಜನಿಯು** ಭೂಮಿಯ ಮೇಲೆ ದೇವರ ನಿಯಮಗಳ ಒಬ್ಬನೇ ಭಾಷ್ಯಕಾರನಾಗಲು ಮಾನವತೆಯ ಬಗ್ಗೆ ನಂಬಿಕೆಯಿಟ್ಟಿದ್ದಾನೆ. ಅವನು ಈ ರೀತಿಯಾಗಿ ಘೋಷಿಸಿದ್ದಾನೆ: "ಎಲ್ಲ ಪರಮಾಧಿಕಾರವೂ ದೇವರಲ್ಲಿ, ನೈತಿಕ ನಿಯಮದಲ್ಲಿ, ವಿಶ್ವವನ್ನು ಆಳುವ ಮತ್ತು ಯಾವುದು ಕ್ರಮೇಣ ಸದಾಚಾರಿಯಾದ ಪ್ರಭಾವಶಾಲಿ ಮಾನವರ ಸ್ಫೂರ್ತಿಗಳಲ್ಲಿ ವ್ಯಕ್ತವಾಗುತ್ತದೋ, ಮತ್ತು ನಾವು ಪಡೆಯಬೇಕಾದ ಉದ್ದೇಶಿತ ಮಾನವತೆಯ ವಿವಿಧ ಯುಗಗಳಲ್ಲಿ ಇದ್ದ ಅದರ ಅಸ್ತಿತ್ವದ ಸ್ವಾಭಾವಿಕ ಒಲವು ದೈವಾಯತ್ತ ಸಂವಿಧಾನದಲ್ಲಿ ಮತ್ತು ನಾವು ಈಡೇರಿಸಬೇಕಾದ ಜೀವನ ಧ್ಯೇಯದಲ್ಲಿ ಇದೆ. ವ್ಯಕ್ತಿಯಲ್ಲಿ ಪರಮಾಧಿಕಾರವಿಲ್ಲ. ಸಮಾಜದಲ್ಲಿ ಕೂಡ ತಮ್ಮಷ್ಟಕ್ಕೆ ಆ ಮಾದರಿ ಮತ್ತು ನಿಯಮಗಳಿಗೆ ಹೊಂದಿಕೊಳ್ಳುವುದು ಮತ್ತು ಆ ಉದ್ದೇಶ ಸಾಧನೆಯತ್ತ ಸಾಗುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆಳುವ ಒಬ್ಬ ವ್ಯಕ್ತಿ ನೀತಿನಿಯಮಗಳ ಅತ್ಯುತ್ತಮ ವ್ಯಾಖ್ಯಾನಕಾರನಾಗಿದ್ದು ಅದರ ಹೆಸರಿನಲ್ಲಿ ಆಡಳಿತ ನಡೆಸುತ್ತಾನೆ, ಇಲ್ಲವೇ ಪದಚ್ಯುತಗೊಳಿಸಬಹುದಾದ ದುರಾಕ್ರಮಣಶೀಲನಾಗುತ್ತಾನೆ. ಅತ್ಯುಚ್ಛವಾದ ನೀತಿನಿಯಮಕ್ಕೆ ಅದು ಸ್ಪಷ್ಟವಾಗಿ ವಿರುದ್ಧವಾಗಿದ್ದರೆ ಅಥವಾ ಮುಂದಿನ ಪ್ರಗ

ತಿಯ ಮಾರ್ಗವನ್ನು ಉದ್ದೇಶಪೂರ್ವಕವಾಗಿ ಮುಚ್ಚಿದರೆ ಬರೀ ಬಹುಸಂಖ್ಯೆಯ ಓಟುಗಳು ಪರಮಾಧಿಕಾರವನ್ನು ಸ್ಥಾಪಿಸಲಾರವು. ಸಾಮಾಜಿಕ ಕಲ್ಯಾಣ, ಸ್ವಾತಂತ್ರ್ಯ, ಪ್ರಗತಿ— ಇವುಗಳನ್ನುಳಿದು ಪರಮಾಧಿಕಾರವೆಂಬುದು ಅರ್ಥಶೂನ್ಯ."

ಇದು ಮೊಟ್ಟಮೊದಲಿಗೆ ದೇವಪ್ರಭುತ್ವದಂತೆ ಧ್ವನಿತವಾಗಬಹುದು. ಆದರೆ ಕೊನೆಯವಾಕ್ಯವು ಒಂದು ಒಳ್ಳೆಯ ಪ್ರಜಾಪ್ರಭುತ್ವದ ಗುಣಗಳನ್ನು ಮುಂದಿರಿಸುತ್ತದೆ. ಪ್ರಜಾಧಿಪತ್ಯವು ಎಲ್ಲ ಮಾನವರಿಗೂ ಸಮಾನವಾದ ಹಕ್ಕುಗಳನ್ನು ಕೊಡುತ್ತದೆ. ಆದರೆ ಅವರನ್ನು ಕುಶಲತೆ ಅಥವಾ ಬುದ್ಧಿವಂತಿಕೆ, ಅಧಿಕಾರ ಅಥವಾ ಸ್ಥಾನಗಳಲ್ಲಿ ಸಮಾನರನ್ನಾಗಿ ಮಾಡಲಾರದು. ಪ್ರಜಾಧಿಪತ್ಯವು ಮಾನವರಿಗೆ ಮೂಲಭೂತ ಹಕ್ಕುಗಳ ಭರವಸೆಯನ್ನು ನೀಡಿ, ಆ ಮೂಲಕ ಆಚರಣೆಯಲ್ಲಿ ಸಮಾನವಾಗಿರುವಂತೆ ಮಾಡುತ್ತದೆ. ರಾಜಕೀಯ ಪ್ರಜಾಪ್ರಭುತ್ವವು ಮಾನವರೊಡನೆ, ಅವರು ಎಲ್ಲಿ ಮತ್ತು ಹೇಗೆ ಇರುತ್ತಾರೋ ಹಾಗೆಯೇ ವ್ಯವಹರಿಸುತ್ತದೆ. ಅದು ಅವರ ಪ್ರವೃತ್ತಿಗಳ ಮೋರೆಯನ್ನು ಗೊತ್ತುಮಾಡುತ್ತದೆ ಮತ್ತು ಅದಕ್ಕೆ ಅನುಸಾರವಾಗಿ ಅವರ ಚಟುವಟಿಕೆಗಳನ್ನು ಕ್ರಮಪಡಿಸುತ್ತದೆ. ಆದರೆ ಆಧ್ಯಾತ್ಮಿಕ ಪ್ರಜಾಧಿಪತ್ಯ ಮಾತ್ರ ಎರಡಕ್ಕೂ ದಿವ್ಯರೂಪವನ್ನೀಯಬಲ್ಲದು. ಹಕ್ಕುಗಳು ಇವೆ ಎಂಬುದು ನಿಜ. ಆದರೆ ಅವು ಕರ್ತವ್ಯವನ್ನು ಪೂರ್ಣಗೊಳಿಸುವುದರಲ್ಲಿ ಮಾತ್ರ ಇರುತ್ತವೆ. ಇಲ್ಲದಿದ್ದರೆ ಹಕ್ಕು ಒಬ್ಬ ವ್ಯಕ್ತಿಯ ಭರವಸೆಯಾಗಿಬಿಡುತ್ತದೆ. ಹಕ್ಕುಸಿದ್ಧಾಂತವು ಪ್ರಗತಿಯನ್ನು ತನ್ನ ಅತ್ಯಗತ್ಯ ಅಂಶವಾಗಿ ಒಳಗೊಂಡಿಲ್ಲ; ಅದು ಆ ಅಂಶವನ್ನು ಸಾಧಾರಣ ಸಂಗತಿಯಾಗಿ ಮಾತ್ರ ಅಂಗೀಕರಿಸಿದೆ. ಹಕ್ಕು ಚಲಾವಣೆಯು ಅನಿವಾರ್ಯವಾಗಿ ಐಚ್ಛಿಕವಾಗಿರುವುದರಿಂದ ನಿಬಂಧನೆ ಅಥವಾ ಉದ್ದೇಶರಹಿತ ಸ್ವಾತಂತ್ರ್ಯದ ಚಂಚಲತ್ವದಿಂದಾಗಿ ಪ್ರಗತಿಯು ಭ್ರಷ್ಟಗೊಳ್ಳುತ್ತದೆ. ಪ್ರಗತಿಯು ತನ್ನ ಆಸ್ತಿತ್ವದ ಅತ್ಯಗತ್ಯ ನಿಯಮವೆಂದು ತಿಳಿಯದ ಪ್ರತಿಯೊಂದು ತತ್ತ್ವವೂ ಆ ಕಾಲದ ಆದರ್ಶ ಹಾಗೂ ಅಗತ್ಯಗಳಿಗೆ ಕೆಳದರ್ಜೆಯವಾಗುತ್ತವೆ. ಆದರೆ ಸಾಮಾನ್ಯಸೂತ್ರದಿಂದ ಮಾಡುವ ಕರ್ತವ್ಯಪ್ರಜ್ಞೆಯು ಭರವಸೆ ಮೂಡಿಸುತ್ತದೆ ಮತ್ತು ಭಾಗಿಯಾಗುತ್ತದೆ. ಈ ತತ್ತ್ವವು ಸಂಯೋಜಿಕ ಹಾಗೂ ಘಟಕಸ್ವರೂಪವಾದ್ದರಿಂದ ಸಂಬಂಧ ಕಡಿದುಹೋಗುವಂತಿಲ್ಲ. ಆರಂಭಕ್ಕೂ ಅಂತ್ಯಕ್ಕೂ ಸಂಬಂಧ ಕಲ್ಪಿಸಿದೆ— ತೊಟ್ಟಿಲನ್ನು ಗೋರಿಗೆ ಗಂಟುಹಾಕಿದೆ. ಅದಕ್ಕೆ **ಮಜನಿ** ಹೀಗಂದಿರುವುದು : "ನಿಮ್ಮ ಕರ್ತವ್ಯಗಳ ಉಗಮ ದೇವರು ಅಥವಾ ಪರತತ್ತ್ವನಲ್ಲಿದೆ. ನಿಮ್ಮ ಕರ್ತವ್ಯಗಳ ಗುಣಲಕ್ಷಣ ನಿರೂಪಣೆ ಆತನ ನಿಯಮಗಳಲ್ಲಿದೆ. ಆತನ ನಿಯಮಗಳ ಪ್ರಗತಿಪೂರ್ಣ ಶೋಧ ಹಾಗೂ ಪ್ರಯೋಗಗಳೇ ಮಾನವಕುಲ ಮಾಡತಕ್ಕ ಕೆಲಸ."

ಇಂದು ಮಾನವಕುಲದ ಚೈತನ್ಯ ಶಕ್ತಿಯನ್ನು ದುರ್ಬಲಗೊಳಿಸುತ್ತಿರುವ ಅಂಶವೆಂದರೆ ಒಂದು ಸಾರ್ವಜನಿಕ ಮತದ, ವಯ್ಯಕ್ತಿಕ ಹಿತಾಸಕ್ತಿಗಳಿಂದ ಮೇಲೇರಿ ಎಲ್ಲರೂ ಪಾಲುಗಾರರಾಗಬಹುದಾದ ಒಂದು ತತ್ತ್ವದ ಕೊರತೆ. ಇಂಥ ಸಾರ್ವತ್ರಿಕ ಮತದ ಕೊರತೆಯಿಂದಾಗಿ, ಮನುಷ್ಯನು ಜಡವಸ್ತುವಿನ ಮುಂದೆ ಬಾಗಿದನು ಮತ್ತು ಸ್ವಾರ್ಥಪರವಾದ ಉಪಾಸನೆಗೆ ತನ್ನನ್ನು ನಿವೇದಿಸಿಕೊಂಡನು. ಆದರೆ ನಾವು ಎಲ್ಲರ ಹಿತಾಸಕ್ತಿಗಳ ಕೇಂದ್ರವೊಂದನ್ನು ಕಾಣಲು ಅದಕ್ಕಿಂತ ಉನ್ನತಮಟ್ಟಕ್ಕೆ ಏರಬೇಕು; ಆ ಕೇಂದ್ರವನ್ನು ನಾವು ಸತ್ಯದಂತೆ ಶಾಶ್ವತವೂ, ವಾಸ್ತವಾಂಶದ ಕ್ಷೇತ್ರದಲ್ಲಿ ಪ್ರಗತಿಪರವಾದ ಒಂದು ಅಂಶವನ್ನು ನಾವು ಆ ಕೇಂದ್ರಕ್ಕೆ ಮಾತ್ರ ಜೊತೆಗೂಡಿಸಬೇಕಾಗಿದೆ. ವಯ್ಯಕ್ತಿಕವಾದ ಘರ್ಷಣೆಗಳನ್ನು ನಿವಾರಿಸುವ ಸಲುವಾಗಿ ಎಲ್ಲರಿಗೂ ಸಾರ್ವತ್ರಿಕವಾಗಿ ಅನ್ವಯಿಸುವ, ಅದರಕಡೆಯೇ ನಿರ್ದೇಶಿಸಲ್ಪಡುವ ಸರ್ವರಿಗೂ ಮಾನ್ಯವಾದ ಒಂದು ಗುರಿಯನ್ನು ನಾವು ಕಂಡುಕೊಳ್ಳಬೇಕಾಗಿದೆ. ಎಲ್ಲರೂ ಅದನ್ನು ಮುಟ್ಟಲುಸುಲಭವಾಗುವಂತೆ ಮಾಡಲು ನಮ್ಮೆಲ್ಲರ ಶಕ್ತಿಗಳನ್ನು ಕ್ರೋಡೀಕರಿಸಬೇಕು ಮತ್ತು ಸಂಯೋಜಿಸಬೇಕು. ಸಂಘವೆಂಬುದು ಐಕ್ಯಕ್ಕಾಗಿ ಮಾಡಿದ ಕಲ್ಪನೆಯಲ್ಲದೆ ಇನ್ನೇನು ? ಯಾವುದರಿಂದ ಸುತ್ತುವರಿಯಲ್ಪಟ್ಟಿರಬಹುದೋ ಅಂಥ ಒಂದು ತತ್ತ್ವವಿಲ್ಲದೆ ಆ ಕಲ್ಪನೆ ಹೇಗೆ ಅರ್ಥವಾದೀತು ? ಮತಧರ್ಮವು ಈ ತತ್ತ್ವವನ್ನು ಒದಗಿಸಿದೆ. ಆದರೆ ಪ್ರಯತ್ನಶೀಲತೆಯನ್ನು ಕುದುರಿಸುವಲ್ಲಿ ಅದು ಸೋತಿರುವ

ಅಂಶವೆಂದರೆ ಮಾನವಪ್ರಯತ್ನಕ್ಕೆ ನೇತೃತ್ವ ಹಾಗೂ ಉತ್ತೇಜನ. ಅದು ವಸ್ತುಗಳ ವಿಕಾಸಗತಿಯ ಮಹತ್ವವನ್ನು ಗ್ರಹಿಸಿಲ್ಲ. ಮತಧರ್ಮದ ಒಲವು ಸಾಧನೆಗಿಂತ ನಿಗ್ರಹದ ಕಡೆಗಿದೆ. ಆಶೆಗಳನ್ನು ನಿರ್ನಾಮಗೊಳಿಸುವುದು, ವ್ಯಕ್ತಿಯು ಸಮಷ್ಟಿಯಲ್ಲಿ ಲೀನವಾಗುವುದು ಇವೇ ಜೀವನದ ದುಃಖಗಳಿಂದ ಪಾರಾಗುವ ಸಾಧನವೆಂದು ಅದು ಬೋಧಿಸುತ್ತದೆ. ಒಂದುಕಡೆ ಕೊನೆಯಲ್ಲಿ ಸಿಗುವ ಬಹುದೂರದ ಮೋಕ್ಷ, ಮತ್ತೊಂದು ಕಡೆ ಅಹಂಕಾರದ ದುರ್ಬಲ ಮತ್ತು ಒಂಟಿಯಾದ ಶಕ್ತಿ— ಇವುಗಳ ನಡುವೆ ಇರುವ ಮತಧರ್ಮವು ಕೇವಲ ಸ್ವಲ್ಪಕಾಲ ಮಾತ್ರ ಚಟುವಟಿಕೆಯಿಂದಿದ್ದು ಎರಡು ತೀರ್ಮಾನಗಳಿಗೆ ದೂಡಲ್ಪಡುತ್ತದೆ: ಒಂದನೆಯದು ಅಂದು ಅವರು ತಿಳಿದಿರುವ ಜೀವನದ ಸ್ಥಿತಿಗತಿಯ ಬಗೆಗಿನ ಸಮಸ್ಯೆಗಳನ್ನು ಬಿಡಿಸಲು ಅಸಾಧ್ಯವಾಗಿರುವಿಕೆ; ಇನ್ನೊಂದು ಉದ್ದೇಶ ಮತ್ತು ಸಾಧನೆಗಳ ನಡುವಿನ ವಿಪುಲ ಅಸಮತೆಯನ್ನು ಗೆಲ್ಲುವ ಸಲುವಾಗಿ ಎಲ್ಲ ನಿಯಮಗಳಿಂದಲೂ ಸ್ವತಂತ್ರವಾದ ಶ್ರೇಷ್ಠಮಧ್ಯಸ್ಥಿಕೆಯ ಅಗತ್ಯ. ಆದ್ದರಿಂದಲೇ ಪ್ರವಾದಿಗಳಿಗೆ ಎಷ್ಟರಮಟ್ಟಿನ ದೈವತ್ವವನ್ನು ಆರೋಪಿಸಲಾಗಿದೆಯೆಂದರೆ ಅವರು ದೇವರೊಂದಿಗೆ ಸಮವೆಂದು ಪರಿಗಣಿಸಲ್ಪಟ್ಟಿದ್ದಾರೆ. ಅನುಗ್ರಹವು ಎಲ್ಲದಕ್ಕಿಂತ ಹೆಚ್ಚಿನ ಭಾಗವನ್ನು ಆಕ್ರಮಿಸಿತು. ಲೌಕಿಕ ವಿಷಯಗಳ ಬಗ್ಗೆ ತಾತ್ಸಾರ ತೋರುವುದು ಸಾಧಾರಣವಾದ ಪ್ರವೃತ್ತಿಯಾಯಿತು. ಸ್ವರ್ಗ ಪಡೆಯಬೇಕೆಂಬ ಉತ್ಸಾಹದ ಅತ್ಯಾಸೆಯೇ ಪ್ರಾರ್ಥನೆಯ ಮೂಲ ಉದ್ದೇಶವಾಯಿತು. ಲೋಕದ ಮೂಲಕ ಅಥವಾ ಲೋಕದೊಡನೆ ಕೆಲಸಮಾಡುತ್ತಾ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು ಎಂಬುದಕ್ಕಿಂತ ಲೋಕದ ಬಗ್ಗೆ ಹೇಯಭಾವನೆಯನ್ನು ತಾಳುವುದರಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬಹುದೆಂಬ ತತ್ತ್ವವಾಕ್ಯವಾಯಿತು.

ಮತಶ್ರದ್ಧೆಯಲ್ಲಿ ವ್ಯಕ್ತವಾಗುವ ಧಾರ್ಮಿಕ ಪ್ರಜ್ಞೆ ಮತ್ತು ಬೌದ್ಧಿಕ ಸಿದ್ಧಾಂತಗಳು ಪ್ರತ್ಯೇಕತಾಭಾವನೆಯನ್ನು ಪೋಷಿಸುತ್ತವೆ ಮತ್ತು ಮಾನವನ ಮನಸ್ಸಿನಲ್ಲಿ ಭರವಸೆ ನೀಡಿದ ಭೂಮಿ ಹಾಗೂ ಆರಿಸಿದ ಜನಾಂಗದ ಎಣಿಕೆಯನ್ನು ಪ್ರೇರಣೆ ಮಾಡುತ್ತದೆ. ವಾಸ್ತವವಾಗಿ ಭರವಸೆಯ ಭೂಮಿಯಾಗಲೀ, ಆರಿಸಿದ ಜನಾಂಗವಾಗಲೀ ಇಲ್ಲ. ಭರವಸೆಯ ಭೂಮಿ ಯಾವುದಾದರೂ ಇದ್ದರೆ ಅದು ಮಾತೃಭೂಮಿಯೇ. ಆರಿಸಿದ ಜನಾಂಗವಾವುದಾದರೂ ಇದ್ದಲ್ಲಿ ಅದು ಇಡೀ ಮಾನವ ಕುಲವೇ. ರಾಜಕೀಯ ಪ್ರಪಂಚದಲ್ಲಿ ಅಂಥದೇ ಜನಾಂಗದ ಮೇಲ್ಮೆಯ ಪ್ರವೃತ್ತಿ "ಬಿಳಿಜನರ ಭಾರ"ದ ಘೋಷಣೆಯಲ್ಲಿ ಸ್ಪಷ್ಟವಾಗಿದೆ. ಈ ವೀರ ಘೋಷಣೆ ಒಂದು ಕಾಲಕ್ಕೆ ಮೊದಲ ತಲೆಮಾರಿನಲ್ಲಿ ಕಾಣಿಸಿಕೊಳ್ಳುವದಾಗಿದ್ದು ಈಗ ಎರಡನೆ ಅಥವಾ ಮುಂದಿನ ತಲೆಮಾರಿನಲ್ಲಿಯೂ ಕಾಣಿಸಿಕೊಳ್ಳುವಂಥದ್ದಾಗಿದೆ. ಆದರೂ ಅದು ಗೂಢವಾಗಿ, ಮಾರುವೇಷದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ವಿಶ್ವಸಂಸ್ಥೆಯು ಅಂತರಾಷ್ಟ್ರೀಯವಾದದ್ದು ಎಂದು ನಮಗೆಲ್ಲಾ ಗೊತ್ತಿದೆ. 33 ಮತ್ತು 52ನೆಯ ನಿಬಂಧನೆಗಳು ಯು. ಎನ್. ಓ. (ವಿಶ್ವಸಂಸ್ಥೆಯ)ದ ಅಧಿಕಾರ ವ್ಯಾಪ್ತಿಯನ್ನು ದೃಢೀಕರಿಸುವಲ್ಲಿ, ಭದ್ರತಾಸಮಿತಿಯನ್ನು ಅವಲಂಬಿಸುವುದಕ್ಕೆ ಮುಂಚೆ ಸ್ಥಳೀಯ ಯುದ್ಧಸಾಧನಗಳನ್ನು ಉಪಯೋಗಿಸಲು ಅವಕಾಶಕೊಟ್ಟಿದೆ. ಈ ನಿಬಂಧನೆಗಳನ್ನು ವಿಶ್ವದ ಪ್ರಧಾನ ಶಕ್ತಿಗಳು ಎಷ್ಟರಮಟ್ಟಿನ ಉದಾರಭಾವನೆಯಿಂದ ಅರ್ಥವಿವರಣೆ ಮಾಡಿವೆಯೆಂದರೆ ವಿಶ್ವಸಂಸ್ಥೆಯ ನಿಜವಾದ ಶಕ್ತಿ ಹಾಗೂ ಪ್ರಾಧಾನ್ಯತೆಗಳ ಬುಡಕ್ಕೇ ನೀರು ತಿದ್ದಿವೆ. ವಿಶ್ವಸಂಸ್ಥೆಯನ್ನು ರಾಷ್ಟ್ರಾತೀತ ಶಕ್ತಿ ಎಂದು ಪರಿಗಣಿಸುವಂತಿಲ್ಲ. ಅದು ಬಹಳವೆಂದರೆ ಶಕ್ತಿರಾಷ್ಟ್ರಗಳು ತಮ್ಮ ಅಭಿಪ್ರಾಯಗಳನ್ನು ಮೆರೆಸುವ ಮತ್ತು ನಿಷ್ಪ್ರಯೋಜಕ ಮಾತಿನಲ್ಲಿ ತೃಪ್ತಿಪಡುವ ಒಂದು ಅಂತರಾಷ್ಟ್ರೀಯ ವಾದಸ್ಥಾನವಾಗಿದೆ. ಐದು ಶಕ್ತಿರಾಷ್ಟ್ರಗಳು ಚಲಾಯಿಸಿದ 'ವಿಟೋ' ಹಕ್ಕು ವಿಶ್ವಸಂಸ್ಥೆಯನ್ನು ನಗೆಗೀಡುಮಾಡಿದೆ. ಇವೊತ್ತು ನಾವು ಐದು ಶಕ್ತಿರಾಷ್ಟ್ರಗಳ ಸ್ವಭಾವದ ರೀತಿಯಲ್ಲಿ "ಬಿಳಿಜನರ ಭಾರ"ದ ಒಂದು ಹೊಸ ರೂಪಾಂತರವನ್ನು ಕಾಣುತ್ತೇವೆ.

ಹಿತಕರ ಮಾನವತಾವಾದವು ಈ ಎಲ್ಲ ಅಸಂಬದ್ಧತೆಗಳನ್ನು— ಅವು ಧಾರ್ಮಿಕವಾಗಲೀ ಅಥವಾ ರಾಜಕೀಯವಾಗಲೀ— ಪೂರ್ಣವಾಗಿ ಹೋಗಲಾಡಿಸುತ್ತದೆ. ಅದನ್ನು ಆಧ್ಯಾತ್ಮ ತತ್ವ, ಪ್ರಗತಿ ಮತ್ತು

ಮಾನವೀಯತೆ ಎಂಬ ಮೂರು ಶಬ್ದಗಳಲ್ಲಿ ಸಮೀಕರಿಸಬಹುದು. ಅದು ಸಾಮುದಾಯಿಕ ಮಾನವತೆಯನ್ನೂ, ನಮ್ಮನ್ನು ಆಳುವ ಪ್ರಗತಿಯ ನಿಬಂಧನೆಯನ್ನು, ಅದನ್ನು ಪ್ರಕಟಪಡಿಸುವ ಐತಿಹಾಸಿಕ ಸಂಪ್ರದಾಯವನ್ನು ಗಣಿಸುತ್ತದೆ ಮತ್ತು ಅವರ ವಿಧಾನವನ್ನು ಕಳೆದ ಈಗಿನ ಮತ್ತು ಮುಂಬರುವ ಜನಾಂಗಗಳ ನಡುವೆ ಇರುವ ಐಕಮತ್ಯವನ್ನು ಕನಸು ಮತ್ತು ನನಸುಗಳನ್ನು ಸಾಂತ ಮತ್ತು ಅನಂತಗಳನ್ನು ಹೊಂದಿಸುವ ಏಕೀಭಾವವನ್ನು ವಿವರಿಸುತ್ತದೆ. ಅದು ಸಾಮರಸ್ಯವನ್ನು ಸ್ಥಿರಪಡಿಸುವ ಮತ್ತು ಲಕ್ಷಣ ನಿರೂಪಿಸುವ ಎಲ್ಲ ಪ್ರಯೋಗಗಳಿಗೂ ಮುಂಚೆಯೇ ಅಸ್ತಿತ್ವದಲ್ಲಿದ್ದ ವಸ್ತುಗಳ ಕ್ರಮಕ್ಕೂ, ಮಾನವನ ಬುದ್ಧಿಗೂ ನಡುವಿನ ಸಾಮರಸ್ಯವನ್ನು ಅದು ತೋರಿಸುತ್ತದೆ. ಪ್ರಯೋಗ ನಮಗೆ ಘಟನೆಗಳನ್ನು ಕೊಡಬಹುದೇ ಹೊರತು, ವಸ್ತುಗಳ ಮೂಲತತ್ವವನ್ನಲ್ಲ. ಆ ಮೂಲತತ್ತ್ವವನ್ನು ಮುಟ್ಟಲು ವಿಜ್ಞಾನವು ಚೈತನ್ಯದೊಡನಿರುವ ತನ್ನ ಸಂಬಂಧದ ಕೊಂಡಿಯನ್ನು ಮುಂದುವರಿಸಬೇಕು. ಕ್ರಮವಿಲ್ಲದೆ ನೈಜ ಹಾಗೂ ಫಲದಾಯಕ ವಿಜ್ಞಾನ ಅಸಾಧ್ಯ. ಕ್ರಮವೆಂಬುದು ನಮ್ಮ ಜೀವನದ ಉದ್ದೇಶದ ಬಗೆಗಿನ ನಮ್ಮ ವಿಚಾರದಿಂದ ಅಳವಡುತ್ತದೆ ಮತ್ತು ಕ್ರಮವು, ಒಮ್ಮೆ ನಿಶ್ಚಯಿಸಿದಮೇಲೆ, ಮಾನವ ಮತ್ತು ಮಾನವತೆ, ಮಾನವತೆ ಮತ್ತು ವಿಶ್ವ ಹಾಗೂ ನಿಯಮ ಮತ್ತು ಜೀವನ— ಇವುಗಳ ನಡುವಿನ ಸಂಬಂಧವನ್ನು ದೃಢೀಕರಿಸುತ್ತದೆ. ಯಾವುದು ಲವಲವಿಕೆಯ ಶೋಧ ಹಾಗೂ ಪ್ರಗತಿಪರ ಗಳಿಕೆಯಾಗಿದೆಯೋ, ಯಾವುದರಿಂದ ವಿಶ್ವವು ಸ್ಪಷ್ಟವಾಗಿ ಸಂಘಟಿತವಾಗುತ್ತದೋ ಮತ್ತು ಯಾವುದರಲ್ಲಿ ಭೌತಿಕ (ಪ್ರಾಪಂಚಿಕ) ನಿಯಮಗಳೇ ಸಾಧನವಾಗಿರುತ್ತವೋ ಅಂಥಗುರಿಯು ನಿಜವಾದ ತಾತ್ವಿಕ ಅಥವಾ ಆಧ್ಯಾತ್ಮಿಕ ದೃಷ್ಟಿಯು ಈ ಭೂಮಿಯನ್ನು ಒಂದು ಪಾಪ ಪರಿಹಾರದ ವಾಸಸ್ಥಳವೆಂದಾಗಲೀ, ಪ್ರಲೋಭನೆಯ ಕಳವೆಂದಾಗಲೀ ಪರಿಗಣಿಸುವುದಿಲ್ಲ. ಈ ಭೂಮಿ ಒಂದು ಕಾರ್ಯಕ್ಷೇತ್ರ. ಇಲ್ಲಿ ನಾವು ಅದು ಒದಗಿಸಿದ ಕಾರ್ಯಸಾಧನಗಳಿಂದ ಮಾಡಬೇಕಾದ ನಿರ್ದಿಷ್ಟ ಜೀವನಧ್ಯೇಯವಿದೆ. ಆದ್ದರಿಂದ ನಾವು ಅದು ನಮ್ಮ ಪರಿವರ್ತನೆಯ ನೆಲೆ ಎಂಬ ಪ್ರೀತಿ ಮತ್ತು ಪೂಜ್ಯಭಾವನೆಯೊಡನೆ ಅದನ್ನು ಪರಿಗಣಿಸಬೇಕಾಗುತ್ತದೆ. ಸ್ತರಗಳ ಊರ್ಧ್ವಗಾಮಿ ಶ್ರೇಣಿಯಲ್ಲಿ ಭೂಮಿಯು ತನ್ನ ನಿಶ್ಚಿತಸ್ಥಾನವನ್ನು ಪಡೆದಿದೆ. ಅದು ಆದರ್ಶಗಳ ತೊಟ್ಟಿಲು, ಸೃಷ್ಟಿಯನ್ನು ಸಮರಸಗೊಳಿಸುವ ಮತ್ತು ಒಳಗೊಳ್ಳುವ ಅಪರಿಮಿತ ಹೊಂದಾಣಿಕೆ, ವಿಶ್ವವನ್ನು ಪರಮನೊಡನೆ ಐಕ್ಯಗೊಳಿಸುವ ಆವಶ್ಯಕವಾದ ಒಂದು ಕೊಂಡಿ. ಅಂದಮೇಲೆ ಜೀವನ ಭ್ರಮೆಯಲ್ಲ; ಅದು ಒಂದು ಜೀವನ ಧ್ಯೇಯ. ಅದನ್ನು ಕಂಡುಹಿಡಿಯುವುದು; ಗ್ರಹಿಸುವುದು ಮತ್ತು ಅದನ್ನು ಕ್ರಿಯಾತ್ಮಕವಾಗಿ ಪರಿವರ್ತನೆಗೊಳಿಸುವುದೇ ನಮ್ಮ ಕರ್ತವ್ಯ. ನಮ್ಮ ಗ್ರಹಿಕೆಗೆ ನಿಲುಕುವ ಶಾಶ್ವತ ಸತ್ಯದ ಆ ಭಾಗವನ್ನು ಸಾಮರಸ್ಯದಿಂದ ಮೂರ್ತಮತ್ತಾಗಿಸಲು ನಾವೆಲ್ಲರೂ ಯತ್ನಿಸಬೇಕಾಗಿದೆ. ಅಲ್ಲದೆ ಅದನ್ನು ಐಹಿಕ ಸತ್ಯಸ್ಥಿತಿಯಾಗಿ ಪರಿವರ್ತಿಸುವುದೇ ನಮ್ಮ ಗುರಿ.

ಆರೋಗ್ಯಕರ ಮಾನವತಾ ವಾದವು ರಾಜಕಾರಣವನ್ನು ಒಳಹಾಕಿಕೊಂಡಿಲ್ಲ. ಆದರೆ ಅದನ್ನು ಆಧ್ಯಾತ್ಮಿಕ ವಿಚಾರಕ್ಕೆ ಏರಿಸುತ್ತದೆ. ಆಧ್ಯಾತ್ಮಿಕ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರಕ್ಕೆ ಅಡಿಪಾಯವಾಗಬೇಕು. ವಿವಿಧ ಬಗೆಯ ಸರ್ಕಾರಗಳಲ್ಲಿ ಇದು ಪ್ರಜಾಧಿಪತ್ಯಕ್ಕೆ ಹೆಚ್ಚು ಒಲವನ್ನು ಹೊಂದಿದೆ. ಏಕೆಂದರೆ ಅದು ಈ ಕೆಳಕಂಡ ಷರತ್ತುಗಳನ್ನು ಈಡೇರಿಸುತ್ತದೆ: ಸ್ವತಂತ್ರವಾದ ಬಹುಮತದ ತೀರ್ಮಾನದ ಮೂಲಕ ಸರ್ಕಾರದ ನಿರ್ಧಾರ, ಅಲ್ಪ ಸಂಖ್ಯಾತರು ತಮ್ಮ ತತ್ತ್ವಗಳನ್ನು ಸಂಘಟಿಸಿ, ಪ್ರಚಾರಮಾಡಲು ಹಕ್ಕು, ಆಡಳಿತ ಹಾಗೂ ಕಾರ್ಯನಿರ್ವಾಹಕ (executive) ಕರ್ತವ್ಯಗಳ ಮೇಲೆ ಶಾಸನಾಧಿಕಾರದ ಕರ್ತವ್ಯಗಳ ಪರಮಾಧಿಕಾರ, ಆಡಳಿತದಲ್ಲಿರುವ ಸರ್ಕಾರದ ಸಂಕಲ್ಪಗಳ ಮೇಲೆ ರಾಜ್ಯವ್ಯವಸ್ಥೆಯ ಕಾನೂನಿನ ಪರಮಾಧಿಪತ್ಯ, ಚುನಾಯಿತ ಸಮುದಾಯದಿಂದ ರಾಜಕೀಯ ಅಧಿಕಾರವನ್ನು ಪಡೆಯುವಂಥದ್ದು, ಸರ್ಕಾರದ ಹತೋಟಿಗೆ ಬದ್ಧವಾಗದ ಮತ್ತು ರಾಜಕೀಯ ರಚನೆಯ ಸಂಬಂಧವಿಲ್ಲದ ಸ್ವಪ್ರೇರಣೆಯ ಸಂಘಗಳ ಅಸ್ತಿತ್ವ, ಇಡೀ ಸಂಸ್ಕೃತಿಯ ಕ್ಷೇತ್ರದಲ್ಲಿನ ಧರ್ಮ, ತತ್ತ್ವಶಾಸ್ತ್ರ, ಕಲೆ, ವಿಜ್ಞಾನ ಮೊದಲಾದವುಗಳ ಬಗ್ಗೆ

ಸಂವಿಧಾನಪೂರ್ವಕವಾದ ಭರವಸೆ– ಪ್ರಜಾಧಿಪತ್ಯದ ಈ ಪ್ರಯೋಜನಾತ್ಮಕ ಕಲ್ಪನೆಯು ನೈತಿಕಭಾವನೆಯೊಡನೆ ಪರಸ್ಪರ ಕೂಡಬೇಕು. ಏಕೆಂದರೆ ಒಂದು ರಾಷ್ಟ್ರದ ಪೌರರಾಜ್ಯಾಂಗಕ್ಕೆ ನೀತಿನಿಯಮಗಳನ್ನು ಅದರ ಸ್ವಕೀಯ ಹಾಗೂ ಪರಕೀಯ ಎಂಬ ಎರಡು ರೀತಿಯ ಚಟುವಟಿಕೆಯಲ್ಲಿ ಅನ್ವಯಿಸುವುದೇ ರಾಜನೀತಿಯ ಅಂತಿಮಗುರಿ. ಇದೇ ನಿಯಮವನ್ನು ದುಡಿತದ ವ್ಯವಸ್ಥೆಗೆ ಉತ್ಪಾದನೆ ಮತ್ತು ಹಂಚಿಕೆ ಎಂಬ ಎರಡು ದೃಷ್ಟಿಯಲ್ಲಿ ಅನ್ವಯಿಸುವುದೇ ಅರ್ಥಶಾಸ್ತ್ರದ ಗುರಿ. ಅರ್ಥಶಾಸ್ತ್ರಕ್ಕೆ ನೀತಿನಿಯಮಗಳನ್ನು ಅನ್ವಯಿಸುವುದರಿಂದ ವಿಶಾಲವೂ, ಆಳವೂ ಮತ್ತು ದೃಢವೂ ಆದ ಸಮಾಜವಾದದತ್ತ ಸಾಗಲು ಅನುವಾಗುತ್ತದೆ. ಏಕೆಂದರೆ ಸಮಾಜವಾದವು ಬರೀ ಬಡತನ ಮತ್ತು ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳ ವಿರುದ್ಧ ಹೋರಾಡುವುದಷ್ಟೇ ಅಲ್ಲ, ಅದು ದಡ್ಡತನ, ಸ್ವಾರ್ಥಸಾಧನೆ ಮತ್ತು ಅಕ್ರಮಗಳ ವಿರುದ್ಧವೂ ಹೋರಾಡಬೇಕು. ಸಮಾಜವಾದವು ಪ್ರಾಸಂಗಿಕವಾಗಿ ಆರ್ಥಿಕವ್ಯವಸ್ಥೆಗಳಲ್ಲಿ ದೊಡ್ಡ ಪರಿವರ್ತನೆಯ ಒಂದು ಸ್ಥಿತಿ ಮತ್ತು ಫಲವಾಗಿ ಬದಲಾವಣೆಯನ್ನು ಪಡೆಯಲು ಪ್ರಯತ್ನಿಸುತ್ತದೆ. ಬದಲಾವಣೆಯೆಂದರೆ ಚೈತನ್ಯ ಮತ್ತು ಮಾನವನ ಹೊಕ್ಕುಬಳಕೆಯ ರೀತಿಯಲ್ಲಿ ಮತ್ತು ವ್ಯಕ್ತಿಯ ಹಕ್ಕುಬಾಧ್ಯತೆಯಿಂದ ಮಾನವ ಚೈತನ್ಯವನ್ನು ಸೇವಿಸುವ ಹಕ್ಕುಬಾಧ್ಯತೆಯತ್ತ ಸಾಗುವ ಬದಲಾವಣೆಯನ್ನು ಕಾಣಲು ಬಯಸುತ್ತದೆ.

ಪ್ರಗತಿಯ ಗುರಿಯ ಬಗೆಗಿನ ಅಭಿಪ್ರಾಯದಲ್ಲಿ ಆರೋಗ್ಯಕರ ಮಾನವತಾವಾದವು ಸಂಪ್ರದಾಯನಿಷ್ಠ ಮಾನವತಾವಾದ ಹಾಗೂ ಸಮಕಾಲೀನ ಮನವತಾವಾದಗಳಿಗಿಂತ ಭಿನ್ನವಾದದ್ದು. ಸುಖವೇ ಪ್ರಗತಿಯ ಉದ್ದೇಶ ಅಥವಾ ಗುರಿಯಾಗಬಾರದೆಂದು ಅದು ಅಭಿಪ್ರಾಯಪಡುತ್ತದೆ. ಸುಖವು, ವಯ್ಯಕ್ತಿಕವಾಗಲೀ ಸಾಮಾಜಿಕವಾಗಲೀ ಮಾನವ ಚಟುವಟಿಕೆಗಳಿಗೆ ಸಂಬಂಧಿಸಿದಾಗ ಪ್ರತಿಯೊಂದು ಗುರಿಯುಳ್ಳೂ ಒಂದು ಅಂಶವಾಗಿ ಇರುವುದು ನಿಜವಾದರೂ ತನ್ನಷ್ಟಕ್ಕೆ ತಾನು ಗುರಿಯಾಗಲಾರದು. ಸುಖದ ಮೇಲೆ ಸುಖವನ್ನರಸುವುದು ಖಂಡಿತವಾಗಿ ತನ್ನ ಗುರಿಯನ್ನೇ ನಿರರ್ಥಕ ಮಾಡುತ್ತದೆ ಎಂಬುದು ಸಾಮಾನ್ಯವಾದ ಅನುಭವ. ಯಾವುದನ್ನು ಪಡೆಯುವುದು ಸುಖದ ಉದ್ದೇಶವಾಗಿದೆಯೋ ಅದನ್ನು ಪಡೆಯುವುದು ಸಂತೋಷ. ಅದನ್ನು ಪಡೆದಾಗ ಸುಖ ಬರುತ್ತದೆ. ಸುಖವನ್ನು ಬಹುಬೇಗ ದೊರಕಿಸಿಕೊಳ್ಳುವುದೇ ಅಷ್ಟಕ್ಕೆ ಗುರಿಯೆಂದು ಪರಿಗಣಿಸಿದರೆ, ಅದು ವಾಸ್ತವವಲ್ಲದ ಬರಿಯ ಭ್ರಾಂತಿಯನ್ನು ಬೆನ್ನಟ್ಟಿ ಹೋದಂತೆಯೇ. ಆದ್ದರಿಂದ ಅಪೇಕ್ಷಿಸಿದ ವಸ್ತು, ಗುರಿ ಅಥವಾ ಕ್ರಿಯೆಯ ಆದರ್ಶವು ಅದು ವಾಸ್ತವವೆನಿಸುವ ಆನಂದದ ಮಹತ್ವದ ಭಾಗ ಅಥವಾ ಸಾರ. ಸುಖದ ಕಲ್ಪನೆಯೇ ಅನ್ವೇಷಣೆಯಲ್ಲಿ ತೊಡಗಿದ ಗುರಿಯಲ್ಲಿ ಅಂತರ್ಗತವಾದುದನ್ನೆಲ್ಲಾ ಬರಿದು ಮಾಡುತ್ತದೆ; ಅಭಿರುಚಿ ಅಥವಾ ಗುರಿಯಲ್ಲಿರುವ ಮೇಲು ಮತ್ತು ಕೀಳುಮಟ್ಟಗಳ ನಡುವಿನ ಅಂತಿಮ ವ್ಯತ್ಯಾಸ ಲೆಕ್ಕಕ್ಕೆ ಬರದೇ ಉಳಿಯುತ್ತದೆ. ಭೋಗವೇ ಮುಖ್ಯ ಪುರುಷಾರ್ಥವೆಂಬ ವಾದಕ್ಕೆ ಪರನಾಗಿ, ವಿರೋಧವಾಗಿ ಸಾಮಾನ್ಯವಾಗಿ ಸೂತ್ರೀಕರಿಸಿದಂತೆ ಮೇಲಾಡುವಾಗ, ಪ್ರತಿಪಕ್ಷವು ಒಂದು ಅಂಶವನ್ನು ಕಡೆಗಣಿಸಿರುವುದನ್ನು ನಾವು ಮರೆಯಕೂಡದು. ಅದೇ ಒಂದು ಕ್ರಿಯೆಯ ನಿಜವಾದ ಯೋಗ್ಯತೆಯ ಒರೆಗಲ್ಲೆಂದರೆ ಅದು ನಮ್ಮ ಅಥವಾ ಬೇರೆಯವರ ಅಥವಾ ಸಾಮೂಹಿಕವಾಗಿ ಮಾನವತೆಯ ಸ್ವತಂತ್ರಪ್ರಗತಿಗಾಗಿ ಹೋರಾಡುತ್ತದೆ ಅಥವಾ ಇಲ್ಲ ಎಂಬುದು. ವಿಶ್ವಸ್ಥಿತಿಯ ಅಂತಿಮ ಉದ್ದೇಶವನ್ನು ನಿಯೋಜಿಸುವಲ್ಲಿ ಅದರ ಸಾಫಲ್ಯಕ್ಕೆ ಅದು ಪ್ರಧಾನ ನಿಬಂಧನೆಯೆಂಬ ದೃಢ ನಿಶ್ಚಯವು ಹೇಗೆ ಪ್ರತಿಬಂಧಿಸುತ್ತದೆಯೋ ಹಾಗೆ ಕೇವಲ ಸುಖವೆಂಬ ಮಾತಿನ ಅಂಗೀಕಾರವು ವಿವೇಚನಾಪೂರ್ಣ ಎಣಿಕೆಯಾಗದು. ಇದು ಯಾವುದೇ ಮುಂಚಿನ ಊಹೆಗೆ ವಿಶ್ವದ ಗುರಿಯನ್ನು ಅಂತಿಮವಾಗಿ ಹೊಂದಲು ಯಾವುದನ್ನೂ ಹವಣಿಸದೆ ಅಥವಾ ತೊಡಗಿದೆ ಎಂಬುದು ತಿಳಿಯುತ್ತದೆ ಎಂದು ತರ್ಕಿಸುವುದು ಶುದ್ಧಕ್ರಮಬದ್ಧ ಕಲ್ಪನೆಯೊಂದನ್ನು ಕಾರಕವೆಂದು ಗಣಿಸಿದಂತೆ ದುರದೃಷ್ಟವೆಂದು ಪರಿಗಣಿಸಬೇಕಾಗುತ್ತದೆ.

ಪ್ರಜ್ಞೆಯ ಪರಮಗುರಿಯನ್ನು ಅಥವಾ ವಿಶ್ವದ ಅಂತರ್ಭೂತ ಉದ್ದೇಶವನ್ನು ನಿರ್ದಿಷ್ಟರೂಪದಲ್ಲಿ ಹೇಳುವ ಹಾಗೂ ಇದನ್ನೇ ನೀತಿಶಾಸ್ತ್ರದ ಆಧಾರವನ್ನಾಗಿ

ಮಾಡುವ ಪ್ರಯತ್ನ ಇವೇ ನೈತಿಕ ಅಥವಾ ಅರ್ಥ ಸಾರ್ವತ್ರಿಕವಾದ ಧರ್ಮಗಳ ವಿಶೇಷ ಲಕ್ಷಣ. ಅವುಗಳೆಲ್ಲವೂ ಉದಾತ್ತ ಅಂತ್ಯ ಪರಿಣಾಮವು ಪ್ರತಿ ವ್ಯಕ್ತಿಗೂ ನಿಲುಕುವಂತಹ ಹತ್ತಿರದ ದಾರಿಯನ್ನು ದೊರಕಿಸಲು ಪ್ರಯತ್ನಿಸಿವೆ. ಯಾವುದರಿಂದ ಪರಮ ಸುಖ ಯಾವುದರಿಂದ ಪರಮ ಸುಖಕರ ದರ್ಶನ, ಸಂಪೂರ್ಣ ಕಲ್ಯಾಣ, ನಿರ್ವಾಣಗಳು ದೊರಕಬೇಕಾಗಿದೆಯೋ ಅಂಥ ಪರಿಪರಿಯ ಕ್ರಮಾನುಸರಣಿಗಳು ಅನೇಕ ಧರ್ಮಗಳಲ್ಲಿವೆ. ಆದರೆ ಅವೆಲ್ಲವೂ ವ್ಯಕ್ತಿಯ ನಿಸರ್ಗ ಮತ್ತು ಸಮಾಜಗಳಿಂದ ಅವನ್ನು ಅಗಲುವುದರಲ್ಲಿ, ಆತನ ಸ್ವಾಭಾವಿಕ ಒಲವು ಮತ್ತು ಬಲುಮೆಗಳ ನಾಶದಲ್ಲಿ ಮತ್ತು ತನ್ನಷ್ಟಕ್ಕೆ ತಾನು ಅಂತರ್ಮುಖನಾಗುವುದರಲ್ಲಿ ಇವೆ. ವ್ಯಕ್ತಿಯ ಆತ್ಮದಲ್ಲಿ ವಿಶ್ವತತ್ತ್ವವು ತನ್ನಷ್ಟಕ್ಕೆ ತಾನು ಪ್ರತ್ಯಕ್ಷವಾಗಬಹುದು ಎಂದು ನಂಬಗಿದೆ. ಆದ್ದರಿಂದ ಆತ್ಮೋದ್ಧಾರದ ಕಡೆಗಿನ ಆದ್ಯ ಪ್ರೇರಣೆ ಹಾಗೂ ಲೌಕಿಕ ಗುರಿಯ ಸಾಧನೆಗಳು ಒಳಗಿನಿಂದಲೇ ಬರುತ್ತವೆಂದು ಊಹಿಸಲಾಗಿದೆ. ಮಾನವತೆಯಮೇಲೆ ಪ್ರಥಮತತ್ತ್ವವೆಂಬ ವಿಚಾರಾತ್ಮಕ ಭಾಗವಾಗಲಿ, ವಿಶ್ವದ ಅಂತಿಮಗುರಿಯೆಂಬ ಕ್ರಿಯಾತ್ಮಕ ಭಾಗವಾಗಲಿ ಮೋಕ್ಷಕ್ಕೆ ಹತ್ತಿರದ ದಾರಿಯೆಂಬುದಿಲ್ಲವೆಂಬ ಪ್ರಜ್ಞೆ ಈಗ ಮೂಡುತ್ತಿದೆ. ಆತ್ಮ ಪರೀಕ್ಷೆಯ ವ್ಯಕ್ತಿ ಸ್ವಾತಂತ್ರ್ಯತತ್ತ್ವದ ಧರ್ಮಗಳು ಕ್ಷೀಣಿಸುವುದರಿಂದ ವ್ಯಕ್ತಿಯ ಅಂಥ ಮಹತ್ವವು ಕುಗ್ಗುತ್ತದೆ ಮತ್ತು ಸಾಮಾಜಿಕ ಪ್ರಗತಿಯ ದುಷ್ಕರಮಾರ್ಗದ ಮೂಲಕ ಮತ್ತು ಅಲ್ಲಿ ಮಾತ್ರ ಪ್ರಗತಿಯ ದಾರಿ ಪ್ರಪಂಚದ ಅದೃಷ್ಟದ ಹಾದಿ ಇದೆಯೆಂಬ ಪ್ರಜ್ಞೆ ಬೆಳೆಯುತ್ತದೆ.

ಪರಮಸತ್ಯದ ಅಂತಿಮ ಉದ್ದೇಶ ಅಥವಾ ವಿಶ್ವದ ಅಂತರ್ಭೂತ ಉದ್ದೇಶವನ್ನು ನಿರ್ದಿಷ್ಟರೂಪದಲ್ಲಿ ಹೇಳುವ ಪ್ರಯತ್ನವು ಹಳೆಯ ಪದ್ಧತಿಗಳ ಮೂಲಕ ಮಾಡಿದ ನಿಷ್ಫಲ ಪ್ರಯತ್ನಗಳಿಂದ ಸಂಪೂರ್ಣ ಕೈಬಿಟ್ಟಂತೆ. ಆರೋಗ್ಯಕರ ಮಾನವತಾವಾದವು ಇನ್ನು ವ್ಯಕ್ತಿಗಳಂತೆ ಭಾವಾವೇಶ, ಧ್ಯಾನ ಅಥವಾ ಆತ್ಮ ಪ್ರಕಾಶಗಳ ಮೂಲಕ ಗಳಿಸುವ ನಿರೀಕ್ಷೆಯಿಲ್ಲ. ಅದನ್ನು ದೊರಕಿಸಿಕೊಳ್ಳಬೇಕಾದದ್ದು ಕನಸಿನ ಔನ್ನತ್ಯದಿಂದಲ್ಲ, ನಮ್ಮ ನಿರ್ಮಲ ಹಾಗೂ ಸ್ಫುಟವಾದ ದರ್ಶನದ ನಿರ್ದಿಷ್ಟ ಮಟ್ಟವನ್ನು ದೊರಕಿಸಿಕೊಳ್ಳುವಲ್ಲಿ ಸಹಕಾರಿಯಾಗುವ ಪ್ರಯತ್ನಗಳ ಮೂಲಕ. ಎಲ್ಲ ಪ್ರಸಂಗಗಳಲ್ಲೂ ಈ ಔನ್ನತ್ಯವನ್ನು ಮುಟ್ಟಬೇಕೆಂಬುದು ನಮಗೆ ಗೊತ್ತು. ಆ ಔನ್ನತ್ಯದ ಆಚೆಯಿರುವ ಯಾವುದೇ ವಸ್ತು ತನ್ನ ಸರದಿಯಲ್ಲಿ ಸ್ಫುಟವಾದ ಆದರ್ಶವಾಗುವ ಮುನ್ನವೇ ಈ ಅಭಿಪ್ರಾಯ ಅದರದೇ ಆದ ರೀತಿಯಲ್ಲಿ ಅಹಂಕಾರ ತ್ಯಾಗ, ವಯ್ಯಕ್ತಿಕತೆಯ ನಿರಾಕರಣೆ– ಇವುಗಳನ್ನು ಒತ್ತಾಯಿಸುತ್ತದೆ. ಆದರೆ ಆತ್ಮಪರೀಕ್ಷೆಯುಳ್ಳ ಧರ್ಮಗಳಲ್ಲಿದ್ದಂತೆ ಅಲ್ಲ. ಜೀವಾತ್ಮದಿಂದ ಆರಂಭವಾಗಿ ಪರಮಾತ್ಮನಲ್ಲಿ ಐಕ್ಯವಾಗುವ ಆತ್ಮ ಸ್ಥಿತಿಯಲ್ಲಿ (ಭಕ್ತಿಸ್ಥಲದಿಂದ ಆರಂಭಿಸಿ ಐಕ್ಯಸ್ಥಲದಲ್ಲಿ) ಮುಗಿದು ವಯ್ಯಕ್ತಿಕವಾಗಿಯೇ ಉಳಿಯುವ ಚಕ್ರಗತಿಯಲ್ಲಿ ತ್ಯಾಗ ಅಥವಾ ಅಹಂಕಾರ ನಿರಾಕರಣವೇ ಮೊದಲ ಹೆಜ್ಜೆ. ಆದರೆ ಆರೋಗ್ಯಕರ ಮಾನವತಾವಾದದಲ್ಲಿ ಮನುಷ್ಯ ತಾನು ಹೋಗಬೇಕಾದ ಉನ್ನತ ಸಮಾಜಸ್ಥಿತಿಯನ್ನು ದೊರಕಿಸಿಕೊಳ್ಳಲು ಅಗತ್ಯವಾಗುವಷ್ಟರಮಟ್ಟಿನ ವ್ಯಕ್ತಿತ್ವದ ನಿಷೇಧವಿರುತ್ತದೆ. ಸಂಕ್ಷೇಪವಾಗಿ ಹೇಳುವುದಾದರೆ ತನ್ನನ್ನು ಇಲ್ಲಗೈವುದು, ಈ ದೃಷ್ಟಿಯಿಂದ, ಬರೀ ನೈತಿಕ ಘಟನೆಯೇ ಹೊರತು ಮೊದಲಿನಂತೆ ವಸ್ತುವಿನ ಭಾಗವಲ್ಲ. ಈ ಪ್ರಜ್ಞೆಯು ನಮ್ಮ ನೈತಿಕ ಹಾಗೂ ಧಾರ್ಮಿಕ ಮನೋಭಾವದಲ್ಲಿ ಮಹತ್ವದ ಬದಲಾವಣೆಯನ್ನುಂಟುಮಾಡುತ್ತದೆ. ಸದಾಚಾರವು ಸಾಮಾಜಿಕವಾಗುವುದರಿಂದ ಸಂಪೂರ್ಣವಾಗಿ ವಯ್ಯಕ್ತಿಕವಾದ ಸ್ವಭಾವವನ್ನು ಕಳೆದುಕೊಳ್ಳುತ್ತದೆ. ಆತ್ಮಪರೀಕ್ಷೆಯ ಬೆಗೆಗಳಾದ ಪಾಪ ಮತ್ತು ಪುಣ್ಯಗಳು ಇನ್ನುಮೇಲೆ ಹೆಸರಿಗೆ ಮಾತ್ರವಲ್ಲದೆ, ವಾಸ್ತವವಾಗಿ ತಳ್ಳಿಹಾಕಲ್ಪಡುತ್ತವೆ. (ಮುಗಿಯಿತು)

ಮಹಾ ಶಿವಶರಣ ಮಡಿವಳ ಮಾಚಿದೇವರ ಗದ್ದುಗೆಯು ದೇವರ ಹಿಪ್ಪರಿಗೆಯಲ್ಲೇ ಇದೆ

ಪಂಡಿತ **ಬಿ. ನಂಜುಂಡಯ್ಯ**, ತಿಪಟೂರು

★

ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಿಗೆಯು ಐತಿಹಾಸಿಕ ಸಂಬಂಧವಾದ ನಗರವಾಗಿ ಶೋಭಿಸುತ್ತದೆ. ಮಹಾಶಿವಶರಣ ಮಾಚಿದೇವರ ಜನ್ಮಸ್ಥಳವು ಈ ಹಿಪ್ಪಲಿಗೆ (ಹಿಪ್ಪರಿಗೆ)ಯಾಗಿ ಕಲ್ಯಾಣ ಕ್ರಾಂತಿಯ ನಂತರ ತಮ್ಮ ಇಷ್ಟದೈವನಾದ ಕಲ್ಲಿನಾಥನ ಧ್ಯಾನದಲ್ಲಿ ನಿರತನಾಗಿದ್ದು ಇಲ್ಲಿಯೇ ನಿಜೈಕ್ಯತೆಯನ್ನು ಪಡೆದಿದ್ದಾನೆಂಬುದಕ್ಕೆ ಹಲವಾರು ನಿದರ್ಶನಗಳನ್ನು ಕೊಡಬಹುದಾಗಿದೆ.

ಒಂದನೆಯದಾಗಿ ಶರಣರು ಈಗಿನ ಕಾರವಾರ ಜಿಲ್ಲೆಯ 'ಉಳಿವೆ' ಮನೆಯನ್ನೇ ಕುರಿತು (ಕ್ರಾಂತಿ ಸಮಯದಲ್ಲಿ) ಹೊರಡಲು ಕಾರಣವೇನಿರಬೇಕೆಂಬುದನ್ನು ಚಿಂತಿಸಿದಾಗ ಉಳಿವೆಯ ಭಾಗವು ಬಿಜ್ಜಳನ ಆಡಳಿತಕ್ಕೆ ಸೇರಿರಲಿಲ್ಲವೆಂಬ ಭಾವನೆಯು ಮನಸ್ಸಿನಲ್ಲಿ ಅಂಕುರಿಸುತ್ತದೆ. ಕಾರಣ :–ಬಿಜ್ಜಳನ ರಾಜ್ಯದ ಗಡಿಯನ್ನು ದಾಟಿದ ಮೇಲೆ ಅನ್ಯರ ಗಡಿಯಲ್ಲಿ ಶತ್ರುವಿನ ದುರ್ವರ್ತನೆಗೆ ಅವಕಾಶವಿಲ್ಲವಾಗಿ, ಗಣಾಚಾರಕ್ಕೆ ಭೀತರಾಗಿ ಹೊರಟಿರಬಹುದೇ ಹೊರತು 'ಮರಣವೇ ಮಹಾನವಮಿ'ಯೆಂದು ಬಗೆದ ಶರಣರು ತಲೆ ತಪ್ಪಿಸಿಕೊಳ್ಳಬೇಕೆಂಬ ಭೀತಿಯಿಂದಲ್ಲವೆಂದು ಊಹಿಸಲು ಅವಕಾಶವಿದೆ.

ಎರಡನೆಯದಾಗಿ ಚಾಲುಕ್ಯರ ಸಾಮ್ರಾಜ್ಯ ಸಮಸ್ತವೂ ಬಿಜ್ಜಳನ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟಿರಲಿಲ್ಲ. (ಕರ್ನಾಟಕದ ಇತಿಹಾಸ ದರ್ಶನ ಪುಟ 197 ಪ್ಯಾರ ಎರಡರಲ್ಲಿ) ಬನವಾಸಿ ನಾಡಿನ ಚಂದ್ರಗುತ್ತಿದುರ್ಗವು ಬಿಜ್ಜಳನಿಗೆ ಮಣಿಯದಾಗಿ, ಹೊಯ್ಸಳರ ಮಂಡಲೀಕನಾದ ಗುತ್ತಿಯ ಜೊಮ್ಮರಸನು ಕಳಚೂರ್ಯರ ಸೇವೆಯನ್ನು ಪ್ರತಿಭಟಿಸಿ ಹಿಮ್ಮೆಟ್ಟಿಸಿದನು.

ಮೂರನೆಯದಾಗಿ ತೈಲಪನ ಸಾಮಂತನಾದ ವಿಜಯಾದಿತ್ಯನು ಬನವಾಸಿಯ ನಾಗರಖಂಡದ ದಂಡಾಧೀಶನ ಬೆಂಬಲವನ್ನು ಪಡೆದು ಬಿಜ್ಜಳನು ಕಾಕತೀಯರ ತೈಲಪನನ್ನು ಸೋಲಿಸಿದ ಮೇಲೆ ಕಲಚೂರ್ಯರ ಅಧೀನತೆಯನ್ನೊಪ್ಪಿಕೊಳ್ಳಲು ವಿಜಯಾಧಿತ್ಯನು ಸಿದ್ಧನಾಗಿರಲಿಲ್ಲ. ಬಿಜ್ಜಳನು ವಿಜಯಾದಿತ್ಯನನ್ನು ಜಯಿಸುವ ಯತ್ನದಲ್ಲಿ ಸಫಲನಾಗಿರಲಿಲ್ಲ. (ಕ. ಇ. ದ. 196ನೆಯ ಪುಟ) ಎಂದ ಮೇಲೆ ಬಿಜ್ಜಳನಿಗೆ ಈ ಭಾಗದ ಒಡೆತನವು ಇರಲಿಲ್ಲವೆನ್ನುವುದರಲ್ಲಿ ಸಂದೇಹವಿಲ್ಲ.

ಚಾಳುಕ್ಯರಾಜ್ಯವನ್ನಪಹರಿಸಲು ನೆರವಾದ ಶಿಲಾಹಾರ ವಿಜಯಾದಿತ್ಯನು ಬಿಜ್ಜಳನ ಸಾಮಂತನಾಗಿರಲು ನಿರಾಕರಿಸಿದನೆಂದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ಜಯಿಸಲೆತ್ನಿಸಿ ಸಫಲನಾಗಲಿಲ್ಲವೆಂದೂ ಹೇಳುತ್ತಾರೆ. ಸೌದತ್ತಿಯ ರಟ್ಟರಸ ಮುಮ್ಮಡಿ ಕೀರ್ತಿದೇವನೂ, ಪೆರ್ಮಾಡಿಯೂ, ವಿಜಯಾದಿತ್ಯನೂ ಬಿಜ್ಜಳನ ಅಧಿಕಾರಾವಧಿಯಲ್ಲಿ ಕೊಂಕಣದ ಒಂಭೈನೂರು ಪಲಸಿಗೆ 12 ಸಾವಿರ ನಾಡುಗಳಲ್ಲಿ ಆಳಿಕೊಂಡಿದ್ದರು. ಇವರು ಬಿಜ್ಜಳನ ಸಾರ್ವಭೌಮಾಧಿಕಾರವನ್ನು ಒಪ್ಪಿಕೊಂಡಿದ್ದರೆ ? ಇಲ್ಲವೆ ? ಎನ್ನುವುದು ವಿಚಾರಾರ್ಹ. (ಕ. ಇ. ದ. 198ನೆಯ ಪುಟ)

ಉಚ್ಚಂಗಿಯಲ್ಲಿ ವಿಜಯ ಪಾಂಡ್ಯಾದೇವರಸನು ಆಳುತ್ತಿದ್ದಾಗ ಕೊಂಕಣದ. 900, ಫಲಸಿಗೆ 12ಸಾವಿರ ನಾಡುಗಳು ಗೋವೆಯ ಕದಂಬರ ಅಧಿಕಾರಕ್ಕೆ ಒಳಪಟ್ಟಿದ್ದವು. ಮೊದಲ ವಿಜಯಾದಿತ್ಯನೂ ಮುಮ್ಮಡಿ ಜಯಕೇಶಿಯೂ ಅಧಿಕಾರದಲ್ಲಿದ್ದಾಗ ಆ ಪ್ರಾಂತ್ಯಗಳು ಕಲಚುರ್ಯರ ಅಧಿಕಾರ ಪರಿಧಿಗೆ ಒಳಪಟ್ಟಿದ್ದುವೆಂದು ಹೇಳುವಂತಿಲ್ಲ. (ಕ. ಇ. ದ. 206) ಎಂದ ಮೇಲೆ ಈ ಉಳಿವೇ ಪ್ರದೇಶವು ಕೊಂಕಣದ ಪಲಸಿಗೆಯ ಗೋವೆಯ ಕದಂಬರ ಆಡಳಿತಕ್ಕೆ ಸಿಕ್ಕಿದ್ದಿತೆನ್ನಲು ಅವಕಾಶವಾಗಿ ಪರರ ಆಶ್ರಯದಲ್ಲಿ ಸೌಖ್ಯದಿಂದಿರಬಹುದೆಂದು ಉಳಿವೆಯನ್ನೇ ಕುರಿತು ಪ್ರಯಾಣ ಮಾಡಿದ್ದಾರೆನ್ನಬಹುದು. ಪ್ರಯಾಣಗೊಂಡ ಶರಣರನ್ನು ಅಳಿಯ ಬಿಜ್ಜಳನ ಸೈನ್ಯವು ಬೆನ್ನು ಹತ್ತಿತೆಂದು ಹೇಳುವುದಾದರೂ ಅವರ ಗಡಿಯಿಂದ ಪರರ ರಾಜ್ಯಕ್ಕೆ ಬರಲು ಅವಕಾಶವಿಲ್ಲದಿದ್ದರಿಂದ ಉಳಿವೆಯ ಮನೆಯವರೆವಿಗೂ ಬಂದರೆನ್ನುವುದಾದರೂ ಹೇಗೆ ? ಯುದ್ಧದಲ್ಲಿ ಬಾಚರಸ ಕಿನ್ನರಿಬೊಮ್ಮಯ್ಯ ಮಾಚಯ್ಯಗಳು ಉಳಿವೆಯ ಮಹಾಮನೆಯನ್ನು ತಲುಪಿದರೆಂದು ಸಾಹಿತ್ಯವು ಹೇಳುತ್ತಿರುವುದರಿಂದ ಚೆನ್ನಬಸವಣ್ಣನವರೊಡನೆ ಸುರಕ್ಷಿತರಾಗಿ ಉಳಿವೆಯ ಮನೆಗೆ ಬಂದಿರಲೇಬೇಕು. ಎಂದ ಮೇಲೆ ಉಳಿವೆಯ ಬಾಗಿಲಂತಿರುವ ಕಾರೀಮನೆಯಲ್ಲಿ ಯುದ್ಧವಾಗಲು ಅವಕಾಶವಿಲ್ಲವಾಗಿ ಶರಣರು ಉಳಿವೆಯನ್ನು ತಲುಪಿದ್ದಾರೆನ್ನುವುದಕ್ಕೆ ನಿದರ್ಶನವಾಗಿ ಶರಣಲೀಲಾಮೃತದ ಸಂಧಿ 24ರಲ್ಲಿನ ವಚನದಲ್ಲಿ ಬಯಲ ಬಸವೇಶ್ವರನ ಮುಂದೆ ನಿಂತು ಚೆನ್ನಬಸವೇಶ್ವರರನ್ನು ಕುರಿತು ಮಾಚಯ್ಯಗಳು

ನೀವು ಉಳಿವೆಗೆ ಹೋಗೆ ಯಾವ ಭಯ ನಮಗಿಲ್ಲ। ನಾವು ಹಿಪ್ಪರಿಗೆಯ ಠಾವಿಗೈದುವೆವೂ ॥೧॥
ಕಲ್ಲಿನಾಥನುಯೆನ್ನ ಕರಸ್ಥಲದ ಮೂರುತಿಯು। ಅಲ್ಲಿಗೈದುವೆನೆಂದು ಎಲ್ಲರಿಗುನಮಿಸಿ ॥೯॥
ಹಿಂದೆ ನಮ್ಮಿಂದಲಿ ಬಂದ ವಜೀರರಿಗೆ। ತಂದು ವಿಳ್ಯವ ಕೊಡಿಯೆಂದ ಮಾಚಯ್ಯ ॥೩॥
ಅಲ್ಲಿಂದ ಶಿವಲೋಕದಲ್ಲಿಗೈದುವೆನಾನು। ಇಲ್ಲೈದಿ ಉಳಿವೆ ಮನೆಯಲ್ಲಿ ನೀವೆಲ್ಲ॥೧೦॥

ಎನ್ನುವ ಮಾತು ಮಾಚಯ್ಯಗಳಿಂದಲೇ ಬಂದಿರುವುದರಿಂದ ಹಿಪ್ಪರಿಗೆಗೆ ಬಂದಿಲ್ಲವೆನ್ನುವುದಾದರೂ ಹೇಗೆ ?

ಅವರವರ ಲಕ್ಷ್ಯದೆಡೆಗೆ ಸರಿದರೆನ್ನುವ ವಚನದಂತೆ ಮಾಚಯ್ಯಗಳು ಉಳಿವೆಯಿಂದ ಹಿಪ್ಪರಿಗೆಗೆ ಬಂದಾಗ ಇವರಿಗೆ ಸುಮಾರು ಅರುವತ್ತರ ಹರಯವಿದ್ದಿರಬೇಕು. ಈ ಸಮಯವು ಸತ್ಸಂಗದಿಂದ ಕಾಲಹರಣ ಮಾಡುವ ಕಾಲವಾಗಿ, ತಮ್ಮ ಆಧ್ಯಾತ್ಮದ ಅನುಭಾವದಿಂದಿ ಕಾಲಹರಣ ಮಾಡುತ್ತಿದ್ದರೆಂಬುದಕ್ಕೆ ಸಿಂಧಗಿಸಿದ್ದಪ್ಪ ಬಳ್ಳಾರಿ ಇವರ ಬಸವೇಶ್ವರರ ಚರಿತ್ರೆ ಪುಟ 32ರಲ್ಲಿ ವ್ಯಾಘ್ರಾಜಿನಾಸೀನರಾಗಿ ಮಾಚಯ್ಯಗಳು ಧ್ಯಾನಪರವಶನಾಗಿರುತ್ತಿದ್ದನೆಂದೂ. ಈತನ ಆಶ್ರಮದಲ್ಲಿನ ಗೋಡೆಯ ಮೇಲೆ ಪ್ರಣವಾಕ್ಷರಗಳು ಬರೆಯಲ್ಪಟ್ಟಿದ್ದುವೆಂದೂ ತಿಳಿಸುತ್ತದೆ.

ಇದಕ್ಕನುಗುಣವಾಗಿ ಹಿಪ್ಪರಿಗೆಯ ಕಲ್ಲಿನಾಥನ ದೇವಾಲಯದ ಆವರಣದಲ್ಲಿರುವ ಗವಿಯಲ್ಲಿ ಭದ್ರಗೊಂಡಿರುವ ತಾಳ ತಂಬೂರಿ ಡಮುಡಿಗಳು ಸಾಕ್ಷಿಯಾಗಿವೆ. ಇದೂ ಅಲ್ಲದೆ ಜನಪದ ಸಾಹಿತ್ಯ : ಗದ್ದಗೀಮಠ ಪುಟ 253 ಪದ್ಯ 96ರಲ್ಲಿ "ಹಿಪ್ಪರಿಗೆಯ ಗವಿಯ ಸಂಗನೊಳಗೊಂದಾದ" ಎಂದೂ, ಹೂವಿನ ಮಳೆಗರೆದು ಹೂವಿನರಾಶ್ಯಾಗಿ ॥ ದೇವ ಹಿಪ್ಪರಿಗೇ ಹೆಸರಾಗಿ ॥ ಸಗ್ಗದಲಿ ಹೂವಾದ ಮಾಚಶಿವಪದಕೆ ॥ ಈ ಮಾತಿನಿಂದ ಯಾವಾಗ ? ಎಲ್ಲಿ ? ಈ ಹೂವಿನ ಮಳೆಗರೆದಿರಬೇಕೆಂದು ಶಿವಪದಕೆ ಹೂವಾದ ಎನ್ನುವ ಮಾತಿನಿಂದ ಎಲ್ಲಿ ಎಂದು ? ಪ್ರಶ್ನಿಸಿದರೆ, ಹಿಪ್ಪರಿಗೆಯೆಂದು ಅರ್ಥವಾಗುತ್ತದೆಯಲ್ಲವೆ ?

ಮತ್ತೂ ಹೇಳುವುದಾದರೆ, ಇವನ ಇಷ್ಟದೈವನಾದ ಕಲ್ಲೇಶನ ಜ್ಯೋತಿರ್ಲಿಂಗವು ಪೂರ್ವಾಭಿಮುಖವಾಗಿದ್ದು ದೇವಾಲಯದ ಬಾಗಿಲು ಪಶ್ಚಿಮಕ್ಕಿರುವುದರಿಂದ ಶರಣರಿಗೆ ಲಿಂಗದ ಪಾಣೀವಟ್ಟಲಿನ ಜರಿಯು ಎಡಭಾಗಕ್ಕೆ ಕಾಣಿಸುತ್ತದೆ. ಇದಕ್ಕೆ ಕಾರಣವಾಗಿ ದೇವನು ತನ್ನ ಶರಣನಾದ ಪೂರ್ವಕ್ಕಿರುವ ಪ್ರಳಯ ಕಟ್ಟೆವೀರಣ್ಣನನ್ನು ನೋಡುತ್ತಿದ್ದಾನೆಂದು ದಂತಕಥೆಯು ಹೇಳುತ್ತಿದೆ. ಇದೂ ಕೂಡ ನಂಬಲರ್ಹವಾದ ಮಾತಾಗಿ ಪ್ರಳಯ ಕಟ್ಟೆ ವೀರಣ್ಣನೇ ವೀರಭದ್ರಾವತಾರಿಯಾದ ಮಾಚಿದೇವರು. ಎಂದ ಮೇಲೆ ಪ್ರಳಯ ಕಟ್ಟೆ ಪ್ರಳಯ ಗಟ್ಟೆ ಎಂದಾಗ ಪ್ರಳಯದಲ್ಲಿ ಎಂದರೆ ಕಲ್ಯಾಣದ ಪ್ರಳಯದಲ್ಲಿ, ಗಟ್ಟ ಕಳೆದುಳಿದ ಗಟ್ಟಿಗನೇ ಪ್ರಳಯಗಟ್ಟೆಯೆಂದು ಕರೆಯುತ್ತಿದ್ದಾರೆ.

ಈ ಪ್ರಳಯ ಗಟ್ಟೆ ವೀರಣ್ಣನ ಗದ್ದುಗೆಯ ಮೇಲಿರುವ ತ್ರಿಮುಖ ಲಿಂಗವಾದರೊ ವೈಶಿಷ್ಟ್ಯಪೂರ್ಣವಾದ ಮೂರು ಮುಖಗಳಿಂದ ರಾರಾಜಿಸುತ್ತಿರುವುದು ವೀರಶೈವ ಸಾಹಿತ್ಯದ ತ್ರಿವಿಧ ನಿರ್ಣಯಗಳ ಅರ್ಥಪೂರ್ಣವಾಗಿ 'ನಿ ರು ಪ ನು' ಜ್ಞಾನಪೂರ್ಣ

ಪರಂಜ್ಯೋತಿ ಸ್ವರೂಪನೆಂಬುದನ್ನು ಒತ್ತಿ ಹೇಳುತ್ತಿದೆ ಯಲ್ಲದೆ ಅಭಿನವ ವೀರಭದ್ರಾವತಾರಿಯಾದ ವೀರಣ್ಣ ನೆಂಬ ಮಾಚಿದೇವನ ಹಿರಿಮೆಗಳ ವೈಶಿಷ್ಟ್ಯಪೂರ್ಣ ವಾದ ಹೆಗ್ಗುರುತಾಗಿ ಶೋಭಿಸುತ್ತಿರುವ ಗದ್ದುಗೆಯೇ ನಿರುಪಮ ಗುಹ್ಯೈಕನಿಧಿ ಮಡಿವಳ ಮಾಚಿ ತಂದೆಯ ಗದ್ದುಗೆಯೆಂದೇ ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಶಿವಶರಣರನ್ನೆಲ್ಲಾ ಸುರಕ್ಷಿತವಾಗಿ ಉಳಿವೆಯ ಗೊಂಡಾರಣ್ಯವನ್ನು ತಲುಪಿಸಿದ ಮೇಲೆ ಮಡಿವಾಳಯ್ಯ ಗಳು ತಮ್ಮ ಸ್ವಗ್ರಾಮಕ್ಕೆ ಹಿಂತಿರುಗಿ ಕಲ್ಲಿನಾಥನಲ್ಲಿ ಐಕ್ಯನಾದನೆಂದು ಅವನ ಚರಿತ್ರೆಯಲ್ಲಿ ಬರುತ್ತದೆ. (ಬಸವೇಶ್ವರರು ಪುಟ 148 ಪ್ಯಾರ 2).

ಪರಮ ಪೂಜ್ಯ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರು ಶಠಣ ಸಾಹಿತ್ಯದಲ್ಲಿ ಮಾಚಿದೇವರ ಗದ್ದುಗೆಯು ದೇವರ ಹಿಪ್ಪರಿಗೆಯಲ್ಲಿದೆ ಎಂದಿದ್ದಾರೆ. ಎಂದಮೇಲೆ ಈ ಎಲ್ಲಾ ಕಾರಣಗಳಿಂದಲೂ ದೇವರ ಹಿಪ್ಪರಿಗೆಯ ಪ್ರಳಯ ಕಟ್ಟೆ ವೀರಣ್ಣನ ಗುಡಿಯ ಗದ್ದುಗೆಯು ನಿರುಪಮ ಗುಹ್ಯೈಕನಿಧಿ ಮಡಿವಾಳ ಮಾಚಿ ತಂದೆಯ ಗದ್ದುಗೆಯಾಗಿರುವುದರಲ್ಲಿ ಸಂದೇಹವಿಲ್ಲವೆನ್ನ ಬಹುದಾಗಿದೆ.

ಜನಪದ ಸಾಹಿತ್ಯದ ಧ್ವನಿ

ನಮ್ಮ ಶಿಷ್ಟಸಾಹಿತ್ಯ ಕೃತಿರೂಪ ತಾಳುವ ಮುನ್ನ ಜನಪದ ಸಾಹಿತ್ಯ ಜನತೆಯ ಕಂಠದಲ್ಲಿ ಜೀವಸ್ವರವಾಗಿ ಹುಟ್ಟಿ, ಅವರ ಭಕ್ತಿ, ಭಾವ, ಆಸೆ, ಆಕಾಂಕ್ಷೆ, ಆಚಾರ–ವಿಚಾರ ಅನುಭವಗಳನ್ನು ಸಂಸ್ಕೃತಿ ಕಲೆಗಳನ್ನು ಅಭಿವ್ಯಕ್ತಿಪಡಿಸುತ್ತಿತ್ತು. ಜನಪದ ಸಾಹಿತ್ಯ ಒಂದರ್ಥದಲ್ಲಿ ಸೋಮಾರಿಗಳ ಸಾಹಿತ್ಯವಾಗದೆ ಮಣ್ಣಿನ ಮಕ್ಕಳ ಹೃದಯಾಂತರಾಳದಿಂದ ಹೊರಟ ಜೀವನಸಾಂಗತ್ಯವಾಗಿದೆ. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ ಸಾಹಿತ್ಯವಾಗಿದೆ. ಶಿಷ್ಟ ಸಾಹಿತ್ಯದಷ್ಟು ನಮುನಾಜೂಕಾಗಿರದಿದ್ದರೂ ಸಾಹಿತ್ಯಸೌಂದರ್ಯ ಮತ್ತು ವಿಶಿಷ್ಟಜೀವನಾನುಭವದಿಂದ ಕೂಡಿದೆ. ಕಾವ್ಯಾಲಂಕಾರಗಳಲ್ಲಿ ಒಂದಾದ ಧ್ವನಿಯನ್ನು ಜನಪದ ಸಾಹಿತ್ಯದಲ್ಲಿ ವಿಶೇಷವಾಗಿ ನಾವು ಸಂದಿಸಬಹುದು. ಪ್ರಕೃತದಲ್ಲಿ 'ಧ್ವನಿ'ಯ ಬಗ್ಗೆ ವಿವರಣೆ ಪಡೆದು ಜನಪದ ಮಟ್ಟೊಂದರಲ್ಲಿ ಧ್ವನಿಯನ್ನು ನೋಡೋಣ

ಧ್ವನಿಯೆಂಬುದು ಅನುಕ್ತವಾಗಿದ್ದರೂ ಅರಿವಿಗೆ ವೇದ್ಯವಾಗುವ ಶಬ್ದಶಕ್ತಿ ಕಿರಿದರಲ್ಲಿ ಪಿರಿದರ್ಥಮನೀಡುವುದು ವಾಚ್ಯವಲ್ಲದ್ದು. ಸೂಚ್ಯರೂಪಿ ವ್ಯಂಗ್ಯವನ್ನು ಮೀರಿದ್ದು. ವಾಚ್ಯಾರ್ಥವನ್ನು ತಿರಸ್ಕರಿಸಿ ಅನ್ಯಾರ್ಥ ಸ್ಫುರಣೆ ಮಾಡಿ ರಸನಿಷ್ಪತ್ತಿಯನ್ನುಂಟು ಮಾಡುತ್ತದೆ.

ಈ ಕೆಳಕಂಡ ಜನಪದ ಹಾಡಿನಲ್ಲಿ ಧ್ವನಿಯೇನಿದೆ ಎಂಬುದನ್ನು ಸ್ಥೂಲವಾಗಿ ಗಮನಿಸಬಹುದು.

ತೊಟ್ಟಿಲ ಹೊತ್ಕೊಂಡು ತೌರುಬಣ್ಣ ಉಟ್ಟುಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು-ತಂಗ್ಯಮ್ಮ
ತಿಟ್ಹತ್ತಿ ತಿರುಗಿ ನೋಡ್ಯಾಳು

ಇದೊಂದು ಸುಂದರ ತ್ರಿಪದಿ. ಚೊಚ್ಚಲ ಬಾಣಂತನಕ್ಕೆ ತವರಿಗೆ ಬಂದ ಹೆಣ್ಣು ಅದನ್ನು ಮುಗಿಸಿಕೊಂಡು ಅತ್ತೆಯ ಮನೆಗೆ ಹೊರಟ ಹಳ್ಳಿಯ ಹೆಣ್ಣು ಮಗಳ ಚಿತ್ರ. ಹುಟ್ಟಿದಂದಿನಿಂದಲೂ ಯಾರ ವಿಶ್ವಾಸದಿಂದ ಬೆಳೆದು ಅವರ ಮನೆಯ ಜ್ಯೋತಿ ಬೆಳಗಲು ತವರಿನಿಂದ ಹೊರಗಾದಳು.

ಆಧುನಿಕ ಜಗತ್ತಿಗೆ ಧರ್ಮದ ಅವಶ್ಯಕತೆ

—**ಜಿ. ಶಾರದಾರಾಜಶೇಖರ್**, ಬೆಂಗಳೂರು.

ಆಧುನಿಕ ಜಗತ್ತಿನ ಏಕತಾನತೆಯು ಹೊಸದೊಂದು ಸಾಂಸ್ಕೃತಿಕ ಪ್ರತಿಷ್ಠಾನವನ್ನು ನಿರೀಕ್ಷಿಸುತ್ತಿದೆ. ಪ್ರಸ್ತುತ ವಾತಾವರಣದಲ್ಲಿ ಪ್ರಮುಖವಾಗಿರುವ ಆರ್ಥಿಕ ಮತ್ತು ವ್ಯಾವಹಾರಿಕ ಸತ್ತಾವಾದಗಳಿಂದ ನಿಲ್ಲಿಸಬೇಕೋ ಇಲ್ಲವೇ ಆಧ್ಯಾತ್ಮಿಕ ನೆಲೆಯಲ್ಲಿ ನಿಲ್ಲಿಸ ಬೇಕೋ ಎಂಬುದೇ ಪ್ರಸ್ತುತ ವಿಷಯವಾಗಿದೆ. ಜನ ತೆಯ ಮನ ಡೋಲಾಯಮಾನ ಸ್ಥಿತಿಯಲ್ಲಿದೆ, ಆರ್ಥಿಕ ಮತ್ತು ರಾಜಕಾರಣ ವ್ಯವಹಾರಗಳ ಮಹಾ ಪ್ರವಾಹದಲ್ಲಿ ಈಜುವುದಷ್ಟೇ ಅಲ್ಲದೆ ಜೀವನದ ಅಗತ್ಯ ಗಳನ್ನೊಳಗೊಂಡಂಥ ಆಧ್ಯಾತ್ಮಿಕ ಮನೋಧರ್ಮದ ಅಗತ್ಯ ಇಂದು ಮೊದಲಿಗಿಂತ ಅತ್ಯಧಿಕವಾಗಿ ಬೇಕಾ ಗಿದೆ. ಅದಕ್ಕೆ ಹಿನ್ನೆಲೆ ಧರ್ಮ. ಧರ್ಮವೆಂಬುದು ಸಂಸ್ಕೃತಿಯ ಅಂತಸ್ಸತ್ವ, ಸಾಮಾಜಿಕ ಸಂಘಟನೆ ಯೆಂಬ ದೇಹಕ್ಕೆ, ಧರ್ಮ ಜೀವವಿದ್ದಂತೆ.

ಇದು ವಿಜ್ಞಾನಯುಗ, ವಿಜ್ಞಾನಮಾನವಕೋಟಿ ಯನ್ನು ಬಾಹ್ಯದಲ್ಲಿ ಸಂಘಟಿಸಬಲ್ಲದು. ಆದರೆ ದೃಢ ವಾದ, ಚಿರಂತನವಾದ ಏಕತಾನವಾಗಬೇಕಾದರೆ, ಭಾವ ನೆಗಳ ಆದರ್ಶಗಳಬಾಂಧವ್ಯವನ್ನು ದೃಢಪಡಿಸಬೇಕು, ಈ ಭಾವನೆಗಳ ಒಗ್ಗೂಡುವಿಕೆಗೆ ವಿಜ್ಞಾನದ ಪಾತ್ರದ ಅವಶ್ಯಕತೆ ಎಷ್ಟು ಪ್ರಾಮುಖ್ಯವೋ, ಅಷ್ಟೇ ಪ್ರಾಮುಖ್ಯತೆ ಧರ್ಮದ ಪಾತ್ರಕ್ಕೂ ಉಂಟು.

ವ್ಯಕ್ತಿಯು ದೇಹ, ಮನಸ್ಸು, ಚೇತನ ಇವುಗಳ ಸಮಷ್ಟಿ, ಉತ್ತಮ ಆಹಾರ ವ್ಯಾಯಾಮದಿಂದ ದೇಹ ಪುಷ್ಟಗೊಳ್ಳುತ್ತದೆ, ವಿಜ್ಞಾನ ಮತ್ತು ವಿಮರ್ಶೆಯಿಂದ ಮನಸ್ಸು ದೃಢಗೊಳ್ಳುತ್ತದೆ. ಧರ್ಮ, ಕಲೆ, ಸಾಹಿತ್ಯ, ದರ್ಶನಗಳಿಂದ ಚೇತನ ಪ್ರಬುದ್ಧಗೊಳ್ಳುತ್ತದೆ.

ಮಾನವಕೋಟಿಯ ಚೇತನ ಪ್ರಬುದ್ಧಗೊಳ್ಳ ಬೇಕೆಂದರೆ ಅವರ ಸುಂದರ ಪ್ರವೃತ್ತಿಗಳನ್ನು ಅಭಿ ವೃದ್ಧಿಗೊಳಿಸುವುದರಿಂದಲೇ,

ಯಾವ ಮನೋಧರ್ಮವೂ ಚೇತನ ಪ್ರವೃ ತ್ತಿಯೂ ಯಾವೊಂದು ಜನಾಂಗದ ಅವಿಭಾಜ್ಯ ಸ್ವತ್ತಲ್ಲ.

ಒಂದು ಸಂಸ್ಕೃತಿಯ ನಿಜವಾದ ಲಕ್ಷಣವನ್ನು ಅರಿಯುವುದು ಅದರ ಆಕಾರ ಮತ್ತು ಸಂಸ್ಥೆಗಳಿಂದ ಮಾತ್ರ ಅಲ್ಲ, ಅದಕ್ಕಿಂತ ಅಧಿಕವಾಗಿ ಮನಸ್ಸಿನ ಮತ್ತು ಚೇತನದ ಮೌಲ್ಯಗಳಿಂದ,

ಪಾಶ್ಚಾತ್ಯ ದೇಶದಲ್ಲಿ ಸಾಕ್ಷಾತ್ಕಾರ, ದರ್ಶನ, ಮತ್ತು ಬಲಿದಾನ ಇಲ್ಲದಿಲ್ಲ.

ಪೌರಸ್ತ್ಯದಲ್ಲಿ ವಿಜ್ಞಾನ ಮತ್ತು ಸಂಘ ಪ್ರವೃತ್ತಿ ಇಲ್ಲದೆ ಇಲ್ಲ. ವ್ಯತ್ಯಾಸವಿದ್ದರೂ ಅದು ಸಾಪೇಕ್ಷವಾದುದು.

ಧರ್ಮ, ಅರ್ಥ, ಕಾಮ, ಮೋಕ್ಷಗಳು ಪ್ರತಿ ಯೊಬ್ಬ ಮಾನವರೂ ಸಾಧಿಸಬೇಕಾದ ಪುರುಷಾರ್ಥ ಗಳು, ಅವುಗಳಲ್ಲಿ ಪ್ರತಿಯೊಂದರ ತತ್ವನಿರೂಪಣೆಗಾಗಿ ಮತ್ತು ಅವುಗಳ ಸಾಧನೆಗೆ ಮಾರ್ಗದರ್ಶಕವಾಗಿ ಬೇರೆ ಬೇರೆ ಶಾಸ್ತ್ರಗಳಿವೆ.

ಧರ್ಮ ಶಾಸ್ತ್ರದ ಬಗ್ಗೆ ಉಪಲಬ್ಧವಾಗಿರುವ ಪ್ರಾಚೀನ ಗ್ರಂಥಗಳಲ್ಲಿ ಪ್ರಧಾನವಾದದ್ದು ಮನು ಸ್ಮೃತಿ.

ಧರ್ಮಶಾಸ್ತ್ರಕ್ಕೂ, ಅರ್ಥಶಾಸ್ತ್ರಕ್ಕೂ ನಿಕಟ ಸಂಬಂಧ ಉಂಟು. ಎರಡರ ವಸ್ತುವೂ ಒಂದೇ, ಅದೇ ಮಾನವ ಸಮಾಜ, ಧರ್ಮ ಶಾಸ್ತ್ರ ಸಮಾಜ ವನ್ನು ಧರ್ಮ ಮತ್ತು ನೀತಿಯ ದೃಷ್ಟಿಯಿಂದ ಪರಿ ಶೀಲಿಸಿದರೆ, ಅರ್ಥಶಾಸ್ತ್ರ ಲೋಕವ್ಯವಹಾರ ದೃಷ್ಟಿ

ಯಿಂದ ಲೌಕಿಕ ಹಿತಸಾಧನೆಗೆ ಅಗತ್ಯವಾದ ಆಡಳಿತ ತಂತ್ರ ಸಮಯೋಚಿತಯುಕ್ತಿ ಇವುಗಳ ದೃಷ್ಟಿಯಿಂದ ಪರಿಶೀಲಿಸುತ್ತದೆ. ಕೌಟಿಲ್ಯನೇ ಅರ್ಥಶಾಸ್ತ್ರದ ಗ್ರಂಥಕರ್ತೃ.

ಸಮಾಜದಲ್ಲಿ ಕ್ಷತ್ರಿಯನ ಕರ್ತವ್ಯವನ್ನು ಹೇಳುವಾಗ ಮನುಸ್ಮೃತಿಯಂಥ ಧರ್ಮ ಶಾಸ್ತ್ರ ಗ್ರಂಥ ಹೆಚ್ಚುಕಡಿಮೆ ಅರ್ಥಶಾಸ್ತ್ರದ ಮಾರ್ಗವನ್ನೇ ಹಿಡಿಯುತ್ತದೆ. ಹಾಗೆಯೇ ಆದರ್ಶ ಸಮಾಜದ ವ್ಯವಸ್ಥೆಯನ್ನು ನಿರೂಪಿಸುವಾಗ ಅರ್ಥಶಾಸ್ತ್ರ ಧರ್ಮ ಶಾಸ್ತ್ರವನ್ನನು ಕರಿಸುತ್ತದೆ. ಆದರೂ ಧರ್ಮ ಶಾಸ್ತ್ರದ ವ್ಯಾಪ್ತಿ ಅರ್ಥ ಶಾಸ್ತ್ರಕ್ಕಿಂತ ಹೆಚ್ಚು ವಿಸ್ತಾರವಾದುದು. ಅದು ಮಾನವ ಜೀವನದ ಅತ್ಯಂತ ಗಹನವಾದ ತತ್ವಗಳನ್ನು ಹಾಗೂ ಮೌಲ್ಯಗಳನ್ನು ಕುರಿತು ವಿಚಾರ ಮಾಡುವುದರಿಂದ ಹೆಚ್ಚು ಜನಪ್ರಿಯವಾದದ್ದು.

ಧರ್ಮದ ರಹಸ್ಯವನ್ನು ಪ್ರಾಜ್ಞರಿಂದ ರಾಗ ದ್ವೇಷಗಳಿಂದ ವಿಮುಕ್ತರಾದ ಸಜ್ಜನರಿಂದ ಅರಿಯಬೇಕಾಗುತ್ತದೆ.

ಸತ್ಯವಾದದ್ದನ್ನು ಪ್ರಿಯವಾದ್ದನ್ನು ನುಡಿಯಬೇಕು. ಆದರೆ ಅಪ್ರಿಯವಾದ ಸತ್ಯವನ್ನೂ ಪ್ರಿಯವಾದ ಅಸತ್ಯವನ್ನೂ ನುಡಿಯಬಾರದು. ಇದೇ ಸನಾತನ ಧರ್ಮ.

ಅಪರಾಧದಿಂದ ಕದಡಿದ ಮನಸ್ಸನ್ನು ಪುನಃ ಶಾಂತಗೊಳಿಸುವುದಕ್ಕೆ ಮತ್ತು ಪುನಃ ಪುನಃ ಅಪರಾಧಗಳು ಆಗದಂತೆ ತಡೆಯುವುದಕ್ಕೆ ತಪ್ಪೊಪ್ಪಿಗೆ ಮತ್ತು ಪಶ್ಚಾತ್ತಾಪಗಳು ಅಮೂಲ್ಯ ಸಾಧನಗಳು.

"ಜೇಷ್ಠಪುತ್ರಾಪಮಾನೇನ ತ್ರಯಃ ಕುಪ್ಯನ್ತಿ ಸೋದರಾಃ" ಎಂಬ ಪ್ರಾಜ್ಞರ ವಚನವುಂಟು.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಅಣ್ಣತಮ್ಮಂದಿರಲ್ಲಿ ಹಿರಿಯ ಅಣ್ಣನಾದ ಧರ್ಮಕ್ಕೆ ಅಪಚಾರವಾದರೆ ಮೂರು ಜನ ತಮ್ಮಂದಿರೂ ಕೋಪಿಸಿಕೊಳ್ಳುತ್ತಾರೆ. ಎಂದರೆ ಧರ್ಮಕ್ಕೆ ಚ್ಯುತಿ ಉಂಟಾದರೆ ಉಳಿದ ಮೂರು ಪುರುಷಾರ್ಥಗಳು ಲೋಪಗೊಳ್ಳುವುವು. ಜೀವನದ ಎಲ್ಲ ಪುರುಷಾರ್ಥಗಳಿಗೆ ಆಧಾರ ಧರ್ಮ. ಧರ್ಮದ ಆಚರಣೆ ವೃದ್ಧಿಯಾದರೆ, ಹೆಚ್ಚು ಜನ ಧರ್ಮಿಷ್ಟರಾದರೆ ಒಟ್ಟು ಸಮಾಜದಲ್ಲೇ ಉತ್ಕೃಷ್ಟ ಸಂಸ್ಕೃತಿ ರೂಪುಗೊಳ್ಳುವುದು.

ನಿಜವಾದ ಧರ್ಮದಲ್ಲಿ ಇಡೀ ಮಾನವ ಜನಾಂಗವೇ ಒಂದು ಎಂಬ ಉತ್ಕೃಷ್ಟವಾದ ಕಲ್ಪನೆ ಇದೆ. ಆಧ್ಯಾತ್ಮಿಕ ಸಮಾಜವನ್ನು ಕಟ್ಟಲು ನಿಜವಾದ ಧರ್ಮ ನೆರವಾಗುತ್ತದೆ. ಅದಕ್ಕೆ ರಾಷ್ಟ್ರ ಖಂಡಗಳ ಅಡ್ಡಿ ಆತಂಕ ಬರಲಾರದು. ನಿಜವಾದ ಧರ್ಮ ಜಾಗೃತಿಯಿಂದ ಇಡೀ ಮಾನವಕೋಟಿಯು ಒಂದೇ ಚೈತನ್ಯದಿಂದ ಬಾಳುವ ಕಾಲ ಬಂದೀತು.

ಎಲ್ಲ ಧರ್ಮಗಳಲ್ಲಿಯೂ ಇರುವ ಸೌಹಾರ್ದವೆಂದರೆ, ನೆರೆಯವನಿಗೆ ನ್ಯಾಯವನ್ನು ತೋರಿಸಿ, ಅವನ ವ್ಯಕ್ತಿತ್ವವನ್ನು ಗೌರವಿಸುವುದು ಎಂದರ್ಥ.

ವಿಭಿನ್ನ ದೇಶಗಳ ಹಾಗೂ ಧರ್ಮಗಳ ಆಚಾರದಲ್ಲಿ ಭೇದವು ಕಂಡುಬಂದರೂ ಅವುಗಳ ಅಂತರ್ಯದಲ್ಲಿ ಅಪರಿವರ್ತನೀಯವಾದ ಏಕತೆಯ ಧಾರೆಯು ಓತಪ್ರೋತವಾಗಿ ಹರಿಯುತ್ತಿದೆ. ಈ ರಹಸ್ಯವನ್ನು ಭಾರತವು ಗುರುತಿಸಿದೆ. ಭಾರತದ ಮಹರ್ಷಿಗಳು ಈ ತತ್ವಗಳನ್ನೇ ಉಪದೇಶಮಾಡಿರುತ್ತಾರೆ. ಪರಸ್ಪರವಾದ ಕಲಹ ಮತ್ತು ಯುದ್ಧದಿಂದ ಪೀಡಿತರಾದ ಜಗತ್ತಿಗೆ ಪರಸ್ಪರ ಬಂಧುತ್ವ, ಪರಸ್ಪರವಾಗಿ ಆಂತರಿಕವಾದ ಅಭಿನ್ನತೆಯನ್ನು ಅರಿಯುವ ಸುಂದರವಾದ ಉಪದೇಶವನ್ನು ಭಾರತೀಯ ದರ್ಶನವೇ ಕೊಡಲು ಸಮರ್ಥವಾಗಿರುತ್ತದೆ. ಋಗ್ವೇದವು ಮಾನವರ ವಿಚಾರ ಮತ್ತು ಹೃದಯಗಳನ್ನು ಸಮಾನವಾಗಿ ಇಡುವ ಉಪದೇಶವನ್ನು ಸ್ಪಷ್ಟವಾಗಿ ನೀಡುತ್ತದೆ.

ಸಮಾನೀವ ಆಕೂತಿಃ ಸಮಾನಾ ಹೃದಯಾನಿವಃ
ಸಮಾನಮಸ್ತುವೋ ಮನೋ ಯಥಾವಃ ಸುಸಹಾ ಸತಿ ||

ಮಾನವರು ಪರಸ್ಪರ ಕಲಹವನ್ನು ಬಿಟ್ಟು ಮಾನವತೆಯ ಮೌಲ್ಯವನ್ನು ತಿಳಿದು ಶಾಂತಿ ಪಾಠವನ್ನು ಅಭ್ಯಸಿಸಿ ಜೀವನವನ್ನು ಆನಂದಮಯವನ್ನಾಗಿ ಮಾಡುವ ಶುಭದಿನವು ಬೇಗ ಬರಲಿ.

ಸರ್ವಸ್ತ್ರರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು |
ಸರ್ವಃ ಕಾಮಾನವಾಪ್ನೋತು ಸರ್ವಃ ಸರ್ವತ್ರನಂದತು ||

ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ, ನೀತಿ ಸೂಕ್ಷ್ಮ ವಿವೇಚನೆಯನ್ನು ಮಾಡುವ ಸಹಜವಾದ ಒಂದು ಅಂತಃಶಕ್ತಿ ಇದೆ. ಹೇಗೆ ನಮ್ಮ ಜ್ಞಾನೇಂದ್ರಿಯಗಳು ಬಾಹ್ಯ ವಿಷಯಗಳನ್ನು ಅರಿಯುತ್ತವೆಯೋ ಹಾಗೆಯೇ ನಮ್ಮಲ್ಲಿರುವ ಈ ನೀತಿಸೂಕ್ಷ್ಮ ವಿವೇಚನೆಯು ಪ್ರತಿ ನಡತೆಯ ನೀತಿ ಮಟ್ಟವನ್ನು ಅರಿಯಬಲ್ಲದು. ನೀತಿ, ಧರ್ಮ, ಇವೆರಡು ಅಂತರೇಂದ್ರಿಯದ ಗ್ರಾಹ್ಯವಿಷಯ. ಧರ್ಮವನ್ನು ಅಂತರ್ದೃಷ್ಟಿಯಿಂದ ನೋಡಬಹುದು. ಈ ಅಂತರೇಂದ್ರಿಯವೇ ಅಂತರಾತ್ಮ, ಅಂತಃಚಕ್ಷುಸ್, ಜ್ಞಾನಚಕ್ಷುಸ್ ಎಂದು ಸಾಮಾನ್ಯವಾಗಿ ಕರೆಯಲ್ಪಡುತ್ತದೆ. ಇದು ಒಂದು ಇಂದ್ರಿಯಕ್ಕೆ ಅನುರೂಪವಾದ ಧರ್ಮಬುದ್ಧಿ. ಈ ಧರ್ಮ ಬುದ್ಧಿಯಿಂದ ಅನುಭಾವ್ಯವಾದ ದರ್ಶನವು ಹಿತವಾಗಿದ್ದಲ್ಲಿ ಸಂಬಂಧಪಟ್ಟ ನಡತೆಯು ಸರಿ ಎನಿಸಲ್ಪಡುತ್ತದೆ. ಈ ಅಂತರೇಂದ್ರಿಯದಿಂದ ಗ್ರಾಹ್ಯವಾದ ಅನುಭವವು ಅಹಿತವಾಗಿದ್ದರೆ ಆ ನಡತೆಯು ಅಸಭ್ಯವೆನಿಸಿಕೊಳ್ಳುತ್ತದೆ.

ನಮ್ಮಲ್ಲಿ ಅಂತರೇಂದ್ರಿಯವಾದ ಧರ್ಮದೃಷ್ಟಿಯು ಒಂದು ಕ್ರಿಯೆಯನ್ನು ಪರಿಭಾವಿಸಿ ಅದು ಋಜುವೆಂಬ ಅಭಿಪ್ರಾಯ ಕೊಟ್ಟರೆ ಆ ಕ್ರಿಯೆ ನೈತಿಕ ಕ್ರಿಯೆ ಎನಿಸಿಕೊಳ್ಳುತ್ತದೆ.

ಅಂತರೇಂದ್ರಿಯವು ದರ್ಶಿಸಿ ಅಸಭ್ಯವೆಂದು ತೀರ್ಮಾನಿಸಿದರೆ ಆಗ ಅದು ಅನೈತಿಕ ಕ್ರಿಯೆಯೆನ್ನಿಸಿಕೊಳ್ಳುತ್ತದೆ.

ಯಾವ ಮನೋಭಾವವೇ ಆಗಲಿ ವಿವೇಚನೆಯಿಂದ ಪೋಷಿಸಲ್ಪಡದೇ ಇದ್ದಲ್ಲಿ ಆ ಭಾವಕ್ಕೆ ಮಾನ್ಯತೆ ದೊರಕದು. ಒಳ್ಳೆಯ ನಡತೆಯು ಜೀವನಕ್ಕೆ ಪೂರಕವೂ ಪೋಷಕವೂ ಆಗಿರುವುದಲ್ಲದೆ ಸೌಖ್ಯಾನುಭವವನ್ನೂ ಕೊಡುತ್ತದೆ.

ಜೀವನದ ಅಂತಿಮ ಮೌಲ್ಯಗಳಾದ ಸತ್ಯ, ಸೌಂದರ್ಯ ಮತ್ತು ಶ್ರೇಯಸ್ಸು ಅಥವಾ ಶುಭಗಳು ತತ್ವ ಶಾಸ್ತ್ರದ ಪರಿಶೀಲನೆಯ ವಸ್ತು ವಿಷಯಗಳು, ಪ್ರತಿಯೊಬ್ಬನ ವ್ಯಕ್ತಿತ್ವದಲ್ಲಿಯೂ ಆತ್ಮದ ಎರಡು ಸ್ವರೂಪಗಳಿವೆ. ಬಾಹ್ಯ ಸ್ವರೂಪ ಮತ್ತು ಆಂತರಿಕ ಸ್ವರೂಪ. ಬಾಹ್ಯಸ್ವರೂಪ ಸ್ವಲ್ಪ ಕೆಳಮಟ್ಟದ್ದು. ಏಕೆಂದರೆ ಅದು ವ್ಯಕ್ತಿಯ ಸಂವೇದನಾ ಶಕ್ತಿಯನ್ನೊಳಗೊಂಡದ್ದು. ಪಶು ಸ್ವಭಾವದ ಪ್ರೇರಣೆ ಪ್ರವೃತ್ತಿಗಳನ್ನು ಹೊಂದಿರುತ್ತದೆ. ಇದು ದೈಹಿಕ ಸುಖ, ಇಂದ್ರಿಯಗಳ ಅನುಭೋಗ ಇವುಗಳ ಕಡೆ ಓಲುತ್ತದೆ. ಆಂತರಿಕ ಸ್ವರೂಪವಾದ ಅಂತರಾತ್ಮನ ಸ್ವರೂಪ ಸದಾ ವಿವೇಚನಾಪೂರಿತವಾದದ್ದು. ಸಂಯಮದ ಅಭ್ಯಾಸವುಳ್ಳದ್ದು. ವ್ಯಕ್ತಿಯಲ್ಲಿನ ಮೂಲಪ್ರೇರಣೆ, ಸಹಜ ಪ್ರವೃತ್ತಿಗಳನ್ನು, ಭಾವೋದ್ರೇಕಗಳನ್ನು ರಸಭಾವ ಮನೋವಿಕಾರಗಳನ್ನು ವಿವೇಚನಾ ಬಲದಿಂದ ನಿಯಂತ್ರಿಸುತ್ತದೆ.

ಮತ ಧರ್ಮಗಳ ಚರಿತ್ರೆಯನ್ನು ಅವಲೋಕಿಸಿದಾಗ ಯಾವ ಮತದ ಬೆಳವಣಿಗೆಯನ್ನೇ ನೋಡಲಿ, ಆಗಾಗ್ಗೆ ವ್ಯವಹಾರ ಅನುಷ್ಠಾನಗಳಲ್ಲಿ ಮುಖ್ಯ ತತ್ವಗಳಿಗೆ ವಿರೋಧ ಬಂದು ಸಮಾಜದ ಸಂಸ್ಕೃತಿಯು ಮಲಿನವಾದಾಗ ಹೊಸ ಧರ್ಮ ಸ್ಥಾಪಕರು, ಆಚಾರ್ಯರು, ಸಾಧು ಸಂತರು ಶಿವಶರಣರು ಅವತರಿಸಿ ಮಲಿನವಾದ ಸಂಸ್ಕೃತಿಯನ್ನು ಶುದ್ಧಗೊಳಿಸುವುದಕ್ಕೆ ಪ್ರಯತ್ನ ಮಾಡಿ ಧರ್ಮ ಜಾಗೃತಿ ಉಂಟು ಮಾಡಿದ್ದಾರೆ.

ಭಕ್ತಿಭಂಡಾರಿ ಬಸವಣ್ಣನವರು. ಅಲ್ಲಮ ಪ್ರಭುಗಳು, ಅಕ್ಕಮಹಾದೇವಿಯರು ಮುಂತಾದ ಶಿವ ಶರಣ, ಶರಣೆಯರು ಪ್ರಾಪಂಚಿಕ ವಿಷಯಗಳ ಮೋಹವನ್ನು ಒಟ್ಟು ವೈರಾಗ್ಯ ಭಕ್ತಿಗಳನ್ನು ಸಂಪಾದಿಸಿ ಪರಮಶಿವ ಸಾನ್ನಿಧ್ಯವನ್ನು ಹೊಂದಬೇಕೆಂದು ಅತಿ ಸರಳವಾದ ಮನೋಹರವಾದ ಕನ್ನಡ ಭಾಷೆಯಲ್ಲಿ ವಚನಗಳ ಮೂಲಕ ಪ್ರಚಾರ ಮಾಡಿದರು,

ಭಾಗವತ ಸಂತರಾದ ಪುರಂದರದಾಸರು, ಕನಕದಾಸರು ಮುಂತಾದ ಹರಿಭಕ್ತರು ಅಪ್ರತಿಮವಾದ ತಮ್ಮ ಸಾಹಿತ್ಯದಿಂದ ಸುಂದರವಾದ ಕನ್ನಡ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿ, ಹಾಡಿ, ವೈರಾಗ್ಯ, ಭಕ್ತಿ ಧರ್ಮಗಳನ್ನು ಸಾಮಾನ್ಯ ಜನರಿಗೆ ಆಕರ್ಷಕವಾಗುವಂತೆ ಪ್ರಚಾರ ಮಾಡಿದರು.

ಧರ್ಮವು ಹಲವಾರು ಭಾಷೆಗಳಲ್ಲಿ ಮಾತನಾಡುತ್ತದೆ. ಅದರ ಬಣ್ಣ ವಿಭಿನ್ನವಾದುದು. ಆದರೂ ಅದಕ್ಕೆ ನೈಜವಾದ ಒಂದು ಧ್ವನಿಯಿದೆ. ಅದೇ ಮಾನವ ಪ್ರೀತಿ, ಅನುಕಂಪ. ದಯೆ, ಈ ಧ್ವನಿ ನಮಗೆ ಸಾಧ್ಯ

ವಾದಷ್ಟೂ ಪ್ರಯತ್ನಮಾಡಿ ಆ ಧ್ವನಿಯನ್ನು ನಾವು ಕೇಳಿಸಿಕೊಳ್ಳಬೇಕು.

ನಮ್ಮ ಆಳವಾದ ಭಾವನೆಗಳನ್ನೆಲ್ಲ ಸಮಾಜವು ನಿಬಂಧನೆಗಳಿಂದ ಮುಚ್ಚಿ ಕುಲಗೆಡಿಸಿದೆ. ಇದಕ್ಕೆ ಬಹುಜನರಲ್ಲಿ ಇರುವ ಅತ್ಯಂತ ಭಯಾನಕವಾದ ದಾರಿದ್ರ್ಯವೂ ಸೇರಿದೆ ಮಾನವ ಬಾಂಧವ್ಯಗಳಲ್ಲಿ ಅತಿ ಪವಿತ್ರವಾದುದು ಪ್ರೇಮ, ದೇಹವು ಆತ್ಮದ ದೇವಸ್ಥಾನ, ಆಧ್ಯಾತ್ಮಿಕ ವಿಕಾಸದ ಸಾಧನೆ.

"ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ
ವಯ್ಯಾ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ"
"ಎನಗಿಂತ ಕಿರಿಯರಿಲ್ಲ. ಶಿವಭಕ್ತರಿಗಿಂತ
ಹಿರಿಯರಿಲ್ಲ."
ದಯೆಯಿಲ್ಲದ ಧರ್ಮವಾವುದಯ್ಯಾ,
ದಯೆಯೇ ಧರ್ಮದ ಮೂಲವು"

--ಶ್ರೀ ಬಸವೇಶ್ವರ

ಕಲ್ಯಾಣ ಬಸವೇಶ್ವರರು, ಧರ್ಮದ ಮೂಲ ದಯೆ ಎಂದೇ ಪ್ರತಿಪಾದಿಸಿದ್ದಾರೆ.

ಧಾರ್ಮಿಕ ಆಚಾರ ವ್ಯವಹಾರಗಳು ಅಸಂಖ್ಯವಾಗಿ ವಿಭಿನ್ನವಾಗಿದ್ದರೂ ಧರ್ಮ ಎಂಬುದು ವಿಶ್ವವ್ಯಾಪಿಯಾದ ಸಂಗತಿ. ನಾಲ್ಕು ಕಡೆ ಪ್ರಪಂಚದಲ್ಲಿ ಹಲವಾರು ಶ್ರದ್ಧೆಗಳಿವೆ, ಪದ್ಧತಿಗಳಿವೆ, ಅವುಗಳಿಗೆ ವಿಶಿಷ್ಟ : ಸ್ವರೂಪವಿದ್ದಂತೆ ಕಂಡರೂ, ಅವುಗಳಲ್ಲಿ ವೈಧರ್ಮ್ಯವಿದ್ದಂತೆ ತೋರಿದರೂ ಕೆಲವು ಮೂಲಭೂತ ವಿವರಗಳ ವಿಚಾರದಲ್ಲಿ ಅವೆಲ್ಲ ಸಮ.

ಧರ್ಮವೆಂಬುದು ಮನುಷ್ಯನ ಚಿತ್ತಕ್ಕೆ ಸಹಜವಾದುದು. ಮಾನವ ಸ್ವಭಾವಕ್ಕೆ ಸೇರಿದುದು.

ಮನುಷ್ಯ ಈಗಿರುವಂತೆ, ಶಕ್ತಿ–ದೌರ್ಬಲ್ಯಗಳ ಜೋಡಣೆಯಾಗಿ ಇರುವವರೆಗೂ ಧರ್ಮ ಉಳಿಯುತ್ತದೆ.

ಎಲ್ಲ ಧರ್ಮಗಳೂ ಹುಟ್ಟುವುದು ಮನುಷ್ಯ ಚಿತ್ತವೆಂಬ ಪವಿತ್ರ ಭೂಮಿಯಲ್ಲಿಯೇ, ಬೆಳೆಯುವುದು ಅದೇ ಸತ್ತ್ವದಿಂದ. ಮಾನವ ಚೇತನವು ಒಂದೇ ಆಧ್ಯಾತ್ಮಿಕ ತತ್ವಕ್ಕೆ ಹಾತೊರೆಯುವುದು. ಯಾವುದಾದರೂ ಒಂದು ಬಗೆಯಿಂದ ಈ ಆಧ್ಯಾತ್ಮಿಕ ತತ್ತ್ವದ ಪ್ರಭಾವ ಚೇತನದ ಮೇಲೆ ಪ್ರತಿ ಫಲಿತವಾಗುವುದು.

ಹಿಂದೆ ಧರ್ಮಕ್ಕೆ ಆಧಾರವಾಗಿದ್ದದ್ದು ಆಸ್ತಿಕ್ಯ ಬುದ್ಧಿ. ದೇವರಲ್ಲಿ ಭಯ ಭಕ್ತಿ, ಇದು ಈ ಹೊಸ ಯುಗದಲ್ಲಿ ಸ್ವತಂತ್ರ ಬುದ್ಧಿ ವ್ಯಾಪಾರಕ್ಕೆ ವಿಷಯವಾಗಿ ಸಂಶಯಗ್ರಸ್ತವಾಯಿತು. ದೇವರು ಇದ್ದಾನೆಯೋ, ಇಲ್ಲವೋ ಎಂಬುದೇ ಇಂದು ಮುಖ್ಯ ಪ್ರಶ್ನೆಯಾಗಿದೆ. ಒಂದು ವೇಳೆ ಇದ್ದರೂ ಸರ್ವಪ್ರಪಂಚಕ್ಕೆ ನಾಯಕನಾದ ಭಗವಂತನಿಗೆ ಮಾನವ ಜನಾಂಗದ ಸುಖ ದುಃಖಗಳಲ್ಲಿ ಆಸಕ್ತಿ ಕುತೂಹಲ ಇರುವುದು ಅಸಂಭವ ಎನ್ನುವ ಭಾವನೆಗೆ ದೇವತೆಗಳ ದೇವರ ಆಧಾರವಿಲ್ಲದೆ ಹೋದರೆ 'ಧರ್ಮ'ದ ನಂಬಿಕೆ ಕಾಲಕ್ರಮೇಣ ನಶಿಸಿ ಹೋಗುವ ಭೀತಿ ಉಂಟಾಗಿದೆ. ಇಂಥ ಸಂದರ್ಭದಲ್ಲಿ ವಿಚಾರ ವಾಹಿನಿಯು ಎರಡು ಕವಲುಗಳಾಗಿ ಬೇರ್ಪಟ್ಟು ಭಿನ್ನ ದಿಕ್ಕುಗಳಲ್ಲಿ ಹರಿಯತೊಡಗಿದೆ.

ಒಂದು ಭಾವನೆ, ಸಮಸ್ತ ಪ್ರಪಂಚದ ಹಿಂದೆ ಸರ್ವಶಕ್ತನ ಕೈವಾಡವಿದೆ ಎಂಬುದು.

ಮತ್ತೊಂದು ಭಾವನೆ, 'ಧರ್ಮಾನು' ಭಾವಕ್ಕೆ ಆಧಾರ ಪ್ರಕೃತಿ ಸ್ವಭಾವದಲ್ಲಿಯೇ ಅಡಗಿದೆ ಎಂಬುದು, ಮೊದಲನೆಯದು ಆತ್ಮಪ್ರಧಾನವಾದ ವಾದವಾದರೆ, ಎರಡನೆಯದು ಪ್ರಕೃತಿ ವಾದವೆನ್ನಿಸಿಕೊಳ್ಳುತ್ತದೆ. ಪಂಚಭೂತಗಳೂ ಪ್ರಕೃತಿಯ ರೂಪಾಂತರವಾದ್ದರಿಂದ ಈ ವಿಚಾರವಾಹಿನಿಯನ್ನು ಭೌತವಾದವೆಂದೂ ಕರೆಯಬಹುದು. ಹಿಂದಿನ ಧರ್ಮಗಳೆಲ್ಲ ಬಲಿಷ್ಠರ ಅಥವಾ ಆಳುವ ಜನರ ಬಂಡವಾಳಗಾರರ, ರಾಜವರ್ಗದವರ ಅನುಕೂಲಕ್ಕಾಗಿ ಹೊರಟ ಕಟ್ಟಳೆಗಳು. ಆಳುವವರು ತಮ್ಮ ಸ್ವಾರ್ಥಕ್ಕೂ ಏಳಿಗೆಗೂ ಸಾಧಕಗಳಾದ ಶಾಸನ ಪದ್ಧತಿಗಳನ್ನೂ, ಆರ್ಥಿಕರಂಗದಲ್ಲಿಯೂ, ರಾಜಕೀಯ ರಂಗದಲ್ಲಿಯೂ ಮತ್ತು ವಿದ್ಯಾಭ್ಯಾಸ, ಆಚಾರ ವ್ಯವಹಾರಗಳಲ್ಲಿಯೂ ಪ್ರಚಾರ ಮಾಡುತ್ತಾರೆ. ಮಿಕ್ಕವರು ಮನಸ್ಸೊಪ್ಪಿಯೋ ಇಲ್ಲವೇ ಒಪ್ಪದೆಯೋ ಮನ್ನಿಸಿ ನಡೆಸಿಕೊಂಡು ಬರುತ್ತಾರೆ. ಶಾಸನಗಳ ವಿಚಾರವಲ್ಲದೆ ಜನರ ಯೋಚನೆಯ ಸ್ವಭಾವವು ಕೂಡ ಅವರವರ ಇಷ್ಟ ಸಾಧನಕ್ಕೆ ಅಧೀನವಾಗಿರುತ್ತದೆ. ಮನಸ್ಸಿನ ಓಟವೂ ಅವನ ವರ್ಗಾಧೀನವಾಗಿಯೇ ಇರುತ್ತದೆ.

ಶ್ರೀಮಂತನಾಗಿ ಇತರರಿಂದ ಸೇವೆ ಮಾಡಿಸಿಕೊಂಡು ಜೀವನ ನಡೆಸುವ ವರ್ಗದವರ ಆಲೋಚನಾ ಪರಂಪರೆಗಳೇಬೇರೆ- ಸೇವಾವೃತ್ತಿಯಿಂದ ಜೀವಿಸುವವನ ಆಲೋಚನಾತರಂಗಗಳೇ ಬೇರೆ, ಅಪರನ್ನು ಪ್ರೇರಿಸುವ ಚಿತ್ತವೃತ್ತಿಯೇ ಬೇರೆ. ಧರ್ಮವು ಹೇಗೆ ಇಷ್ಟಸಾಧನ ಮಾರ್ಗವೋ ಹಾಗೆಯೇ ಸತ್ಯವೂ ಇಷ್ಟಸಾಧನ ಮಾರ್ಗ.

ಧರ್ಮ ಮನುಷ್ಯನ ಅನುಭವದಲ್ಲಿ ಅಧಿಕಾರ ರೂಪದಿಂದ ತೋರಿ ಬಂದರೂ ಅವು ಮನುಷ್ಯನ ಸ್ವಭಾವಕ್ಕೆ ಅಧೀನವಲ್ಲದ ಸ್ವತಂತ್ರವಾದ ವಸ್ತುಗಳಲ್ಲ. ಧರ್ಮವೆನ್ನುವುದು ಬಲಿಷ್ಠರ ಇಷ್ಟಸಾಧಕವಾದ ಶಾಸನ ಸಮೂಹವಲ್ಲ. ಎಲ್ಲರ ಆತ್ಮೋನ್ನತಿಗೂ ಸಾಧಕವಾದ ಮಾರ್ಗ.

ಧರ್ಮವು ವ್ಯಕ್ತಿಗತ ರೂಪದಲ್ಲಿ ಸೂಕ್ಷ್ಮವಾಗಿದ್ದು, ಅದರ ಸ್ವರೂಪವನ್ನು ಗುರುತಿಸುವುದು ವಿಚಾರಪರರಿಗೆ ಕಷ್ಟ ಸಾಧ್ಯವಾಗುತ್ತದೆ. ಸಮಾಜ ಜೀವನವೇ ಧರ್ಮವು ಬೃಹದ್ರೂಪವನ್ನು ತಾಳುವ ಪಾತ್ರ ವಿಶೇಷ. ವ್ಯಕ್ತಿ ಜೀವನದಲ್ಲಿ ತೋರಿಬರುವ ಧರ್ಮಾ ಧರ್ಮಗಳ ಸ್ವಭಾವ ಓಟ, ಗತಿ, ಕರ್ಮ, ಏಳಿಗೆ ಅವನತಿ, ಇವುಗಳ ಸೂಕ್ಷ್ಮ ತತ್ವಗಳೇ ಸಮಾಜದಲ್ಲಿಯೂ ವ್ಯಕ್ತವಾಗುವುವು.

ಬಸವಣ್ಣನವರ ಧರ್ಮದಲ್ಲಿ ಅವರ ಮೋಕ್ಷ ಸಾಧನೆಯ ಮಾರ್ಗದಲ್ಲಿ ಸ್ತ್ರೀ, ಪುರುಷರು ಸಮಾನರು. ಉಪನಿಷತ್ತಿನ ಕಾಲದಲ್ಲಿಯೂ, ಗೌತಮಬುದ್ಧನ ಕಾಲದಲ್ಲಿಯೂ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸಿತೆಂಬುದಕ್ಕೆ ನಿದರ್ಶನಗಳಿವೆ. ಅಲ್ಲಿಂದ ಮುಂದೆ ಜೈನ ಮತ್ತು ವೈದಿಕ ಮತಗಳ ಪ್ರಾಬಲ್ಯದೊಡನೆ ಸ್ತ್ರೀ ಜಾತಿಯು ಕಡೆಗಣಿಸಲ್ಪಟ್ಟಿತೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಬಸವಣ್ಣನವರು ಸಮಾಜದ ಈ ಲೋಪವನ್ನು ಪರಿಹರಿಸಿದರು. ಅವರ ಅನುಭವ ಮಂಟಪದಲ್ಲಿ, ಅಕ್ಕ ನಾಗಮ್ಮ, ಅಕ್ಕಮಹಾದೇವಿ, ಸತ್ಯಕ್ಕ ತಿಮ್ಮವ್ವೆ, ರೇಚವ್ವೆ, ಮಹದೇವಮ್ಮ, ಲಕ್ಕಮ್ಮ, ಲಿಂಗಮ್ಮ, ನೀಲಾಂಬಿಕೆ ಮೊದಲಾದ ಶಿವಶರಣೆಯರು, ಪ್ರಭುದೇವ ಸಿದ್ಧರಾಮೇಶ್ವರ, ಚನ್ನಬಸವೇಶ್ವರ, ಬಸವೇಶ್ವರ ಮೊದಲಾದ ಮಹಾತ್ಮರ ಗೌರವಕ್ಕೆ ಪಾತ್ರರಾಗಿದ್ದರು.

ಹೆಣ್ಣು ಸಮಾಜಕ್ಕೆ ಮಾತೃಸ್ವರೂಪಿಣಿ, ಮಂತ್ರ ಸ್ವರೂಪಿಣಿ ಎಂಬುದನ್ನು ಚೆನ್ನಾಗಿ ಶರಣರು ಅರಿತಿದ್ದರು ಆದ್ದರಿಂದಲೇ ಅವರು 'ಪರವಧುವನು ಮಹಾದೇವಿ ಎಂಬೆ' ಎಂದು ಹೇಳಿ ಸ್ತ್ರೀಯರ ಬಗ್ಗೆ ತಮಗಿರುವ ಅಪಾರವಾದ ಗೌರವವನ್ನು ವ್ಯಕ್ತಪಡಿಸಿರುವರು.

ಬಸವಣ್ಣನವರ ಉದಾತ್ತಧರ್ಮದ ಫಲವಾಗಿ ವಿಶ್ವವನ್ನು ಬೆರಗುಗೊಳಿಸಬಲ್ಲ ಶರಣೆಯರೂ ವಚನಕಾರ್ತಿಯರೂ ಅಂದು ಕನ್ನಡನಾಡಿನಲ್ಲಿ ಆಗಿಹೋದರೆಂಬುದು ಗಮನಾರ್ಹ ಸಂಗತಿ. ಬಸವಣ್ಣನವರು ಸರ್ವ ಮಾನವರ ಹಿತವನ್ನೇ ಅಲ್ಲದೆ ಸ್ತ್ರೀಪುರುಷರ ಸಮಾನತೆಯನ್ನೂ ಗಮನಿಸಿದುದು ಅವರ ಹಿರಿತನದ ಕುರುಹಾಗಿದೆ.

ಬಹುಜನಗಳ ನಿರಂತರವಾದ ಸಾಧನೆಯಿಂದಲೇ ಕ್ರಮವಾಗಿ ಧರ್ಮಾಭಿವೃದ್ಧಿಯಾಗಬೇಕೇ ಹೊರತು ಇದ್ದಕ್ಕಿದ್ದಂತೆಯೇ ಭೂಲೋಕದಲ್ಲಿ ದೇವರ ರಾಜ್ಯ ಸ್ಥಾಪಿತವಾಗಲಾರದು ಪ್ರತಿಯೊಬ್ಬರ ಅನುಭವ ದುಷ್ಕೃತ್ಯಗಳನ್ನು ಮಾಡುವುದಕ್ಕೆ ಮನಸ್ಸು ಹಿಂತೆಗೆಯುವುದು ಸದ್ವರ್ತನೆಗೆ ಸ್ವಾಭಾವಿಕವಾಗಿ ಇಚ್ಛೆ ಇರುವುದೂ ಮನುಷ್ಯನ ಸ್ವಭಾವವಾಗಿದೆ.

ಸಾರವತ್ತಾದ ಧರ್ಮಾನುಸಂಧಾನವಿಲ್ಲದೆ ಸಂಸ್ಕೃತಿಯು ಸಾಕ್ಷಾತ್ಕಾರವಾಗಲಾರದು. ಧರ್ಮ ಪರಾಯಣತೆಯು ವ್ಯಷ್ಟಿ ಜೀವನದಲ್ಲಿ ಸ್ಪಷ್ಟವಾದರೆ ಸಮಷ್ಟಿಜೀವನದಲ್ಲಿ ಅದು ಸಿದ್ಧಿಸುವುದು, ಇದಕ್ಕೆ ಆತ್ಮ ಸಂಯಮವೇ ಎಲ್ಲಾ ಮಹಾತ್ಮರೂ ತೋರಿಸಿಕೊಟ್ಟಿರುವ ದಾರಿ.

ಸಂಸ್ಕೃತದಲ್ಲಿ ವೀರಶೈವ ಸಾಹಿತ್ಯ (ಪ್ರಬಂಧ)

ಡಾ|| ಜಿ. ಮರುಳಸಿದ್ಧಯ್ಯ.

ವೀರಶೈವ :

ವೀರಶೈವ ಸಿದ್ಧಾಂತ ತತ್ವಾನ್ವೇಷಣೆಯಲ್ಲಿ ತೊಡಗಿದ ಅನೇಕ ಸಿದ್ಧಾಂತಗಳಲ್ಲಿ ಒಂದು. ಪಾಶ್ಚಾತ್ಯರಲ್ಲಿ ಐಹಿಕವೇ ಹೆಚ್ಚು. ಪಾರಲೌಕಿಕ ಕಡಿಮೆ. ಧರ್ಮದ ತೌರೂರಾದ ಭಾರತದಲ್ಲಿ ದ್ವೈತಾದ್ವೈತ-ವಿಶಿಷ್ಟಾದ್ವೈತ–ಶಕ್ತಿವಿಶಿಷ್ಟಾದ್ವೈತ ಇತ್ಯಾದಿ ಆಸ್ತಿಕ ಸಿದ್ಧಾಂತಗಳೂ, ಹಿನಯಾನ – ಮಹಾಯಾನ– ಪರ್ಯಾಣ– ಇತ್ಯಾದಿ ಇತರ ಸಿದ್ಧಾಂತಗಳೂ ಚಾಲ್ತಿಯಲ್ಲಿವೆ. ಪ್ರತಿಯೊಬ್ಬರೂ ತಮ್ಮದೇ ಸರಿ, ಉಳಿದವು ತಪ್ಪೆನ್ನುತ್ತಾರೆ. ಈ ಜಗಳ ಸೂರ್ಯಚಂದ್ರರಿರುವವರೆಗೂ ಇರುತ್ತೆ. ನಿತ್ಯಸತ್ಯವನ್ನೇ ಕಂಡವರು, ತಮ್ಮಲ್ಲಿ ತಾವೇ ಸುಖಿಗಳಾಗಿರುವರು. ಈ ಧರ್ಮಮಾರ್ಗದಿಂದ ಸತ್ಯಾನ್ವೇಷಣೆಗೆ ಹೊರಟವರು, ತಮ್ಮ ಅನುಭವವನ್ನು ತಮ್ಮ ತಮ್ಮ ಸಿದ್ಧಾಂತ ಗ್ರಂಥಗಳಲ್ಲಿಟ್ಟುಬಿಟ್ಟು ಹೋದರು. ಈ ಸಿದ್ಧಾಂತಗಳೇ ವೈದಿಕ ಸಾಹಿತ್ಯದಿಂದ– ಈವರೆಗೆ ಬಂದಿವೆ. ಇನ್ನೂ ಬಂದು ಹೋಗುತ್ತವೆ. ವೈದಿಕ ಸಂಹಿತೆ-ಬ್ರಾಹ್ಮಣ–ಉಪನಿಷತ್ತು–ಇತಿಹಾಸ– ಪುರಾಣ ಸ್ಮೃತಿಗಳು–ಸೂತ್ರಗಳು–ಭಾಷ್ಯಗಳು ಅವುಗಳ ವ್ಯಾಖ್ಯಾನ ಈ ರೀತಿ ವೈದಿಕಮತದಲ್ಲಿರುವಷ್ಟು ಸಂಸ್ಕೃತ ಗ್ರಂಥಗಳು ಇನ್ನಾವ ಸಿದ್ಧಾಂತದಲ್ಲೂ ಇಲ್ಲ. ಈ ವಿಪುಲ ಸಾಹಿತ್ಯದಲ್ಲಿ, ವೀರಶೈವ ವೈದಿಕದನ್ನು ವಿಶಾಲವಲ್ಲ ಬಿಟ್ಟಿಲ್ಲ, ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ. ಸಂಸ್ಕೃತಕ್ಕಿಂತ, ಈ ಸಿದ್ಧಾಂತ ಕನ್ನಡದ ವಚನಶಾಸ್ತ್ರದಲ್ಲಿ ಅನಂತವಾಗಿ ಅಬಾಧಿತವಾಗಿರುವಷ್ಟು ಸಂಸ್ಕೃತದಲ್ಲಿ ಇಲ್ಲ. ಸಂಸ್ಕೃತದಲ್ಲಿ ವೀರಶೈವ ಸಾಹಿತ್ಯವೆಷ್ಟಿದೆ ಎಂಬ ಬಗೆಗೆ ಇಲ್ಲಿ ಸಂಕ್ಷಿಪ್ತವಾಗಿ ವಿಚಾರ ಮಾಡೋಣ.

ವೈದಿಕ ಶಾಸ್ತ್ರದ ಹಾದಿಯಲ್ಲೇ :

ವೈದಿಕ ಸಾಹಿತ್ಯದ ಕ್ರಮವನ್ನು ಇದು ಅನುಸರಿಸಿಲ್ಲ. ಎಲ್ಲ ಸಿದ್ಧಾಂತ– ಧರ್ಮಗಳಿಗೆ ವೈದಿಕ ಸಾಹಿತ್ಯ ಬುನಾದಿ. ಆದರೆ ಬಾದರಾಯಣನ ಬ್ರಹ್ಮಸೂತ್ರಗಳೇ ಎಲ್ಲ ಸಿದ್ಧಾಂತಕ್ಕೂ ಮೂಲವಾಗಿದೆ. ಅವುಗಳಿಗೆ ಭಾಷ್ಯವೇ ಎಲ್ಲರ ರೂಢಿಯಾಗಿದೆ. ಆ ಸೂತ್ರಗಳನ್ನು ವಿವರಿಸಿ, ಭಾಷ್ಯಗಳನ್ನು ಬರೆದು ಅಲ್ಲಿ ತಮ್ಮ ತಮ್ಮ ಸಿದ್ಧಾಂತಗಳನ್ನು ಅಳವಡಿಸಿದ್ದಾರೆ, ಎಲ್ಲಾ ಸಿದ್ಧಾಂತಿಗಳು. ಶಂಕರ, ರಾಮಾನುಜ, ಭಾಷ್ಯಗಳನ್ನು ಇಲ್ಲಿ ನಾವು ಸ್ಮರಿಸಬಹುದು. ಅದರಂತೆ ವೀರಶೈವ ಭಾಷ್ಯ ಸಮಗ್ರವಾಗಿ ಇರದೆ ಪರೋಕ್ಷವಾಗಿ ಒಂದೆಡೆ ರೂಪುಗೊಂಡಿದೆ. ಅದರಂತೆಯೇ ಸೂತ್ರಗಳಲ್ಲಿ, ಗದ್ಯ ಪದ್ಯರೂಪಿ ಭಾಷ್ಯಗಳಲ್ಲಿ, ಪುರಾಣಗಳಲ್ಲಿ ವೀರಶೈವ ಪಂಡಿತರು, ಅನುಭಾವಿಗಳು ತಮ್ಮ ಸಿದ್ಧಾಂತವನ್ನು ರೂಪಿಸಿದ್ದಾರೆ. ವೀರಶೈವ ಸಂಸ್ಕೃತದ ಅಭಿರುಚಿ ಬಹು ಕಡಿಮೆ, ಮಠ - ಮಹಂತ– ಎಂದು ಸಾಂಪ್ರದಾಯಕವಾಗಿ ಹೀಗೆ ಅಲ್ಲಲ್ಲಿ ಒಬ್ಬ ಮಹಾಯತಿಗಳು– ಮಹಾಯೋಗಿಗಳು ಸಾಂಪ್ರದಾಯಕ ಹಾಗೂ ಷಟ್ಸ್ಥಲ ಸಿದ್ಧಾಂತಗಳನ್ನು ತಮ್ಮ ಕೃತಿಗಳಿಸಿದ್ದಾರೆ.

ವೀರಶೈವ ಸಿದ್ಧಾಂತದ ಆದಿ :

ಅನಾದಿ ಕಾಲದಿಂದ ಈ ವೀರಶೈವ ಯಾವ ರೂಪದಲ್ಲಿದ್ದಿತೆಂದು ವಿಮರ್ಶಿಸಬೇಕು. ಕ್ರಿಸ್ತ ಶಕ 5ನೇ ಶತಮಾನದಿಂದ ಮೊದಲೇ ಶೈವಾಗಮಗಳು ಇವೆ. ಬಸವಾದಿಪ್ರಮಥರ ವಚನಗಳಲ್ಲಿ ಇವು ಉದಾಹೃತವಾಗಿರುವುದೇ ಗುರುತು. ಅವುಗಳ ಬಗ್ಗೆ ಅಲ್ಲಲ್ಲಿರುವ ಉಲ್ಲೇಖವೇ ಪ್ರಮಾಣ. ಕಾಮಿಕಾದಿ-ವಾತುಲಾಂತವಾಗಿ 28 ಆಗಮಗಳು, ವೇದಕ್ಕಿಂತ ಮುಂಚಿನವೆಂದು ಜೊಬ್ಬಿಡುವುದಕ್ಕಿಂತ ಆರ್ಯರ ಸ್ವತ್ತಾದ ವೇದಕ್ಕಿಂತ ಭಕ್ತಿಪಂಥದ ಪರಮಪುರುಷರಾದ ದ್ರಾವಿಡ ಆಗಮಗಳು (ನೀತಿಗ್ರಂಥಗಳು) ವೇದಕ್ಕಿಂತ ಮೊದಲಿನವೆಂಬುದು ಸರಿ. ಅವೇ ಶೈವಾಗಮಗಳ ರೂಪು ತಾಳಿರಬಹುದು.

ಆದರೆ ವೈದಿಕರನ್ನು ಅನುಸರಿಸಿ ಬರೆದ ಭಾಷೆ, ಕಾವ್ಯ, ಅನುಬಂಧ, ಪುರಾಣ, ಸುಭಾಷಿತಗಳನ್ನು ಒಂದೊಂದನ್ನು ವಿವೇಚಿಸಲು ಇಲ್ಲಿ ಆಗದ ಪ್ರಯುಕ್ತ ಸಾಮೂಹಿಕವಾಗಿ ನೋಡೋಣ.

ಆಧಾರಗ್ರಂಥಗಳ ರೂಪು ರೇಖೆ :

ಷಟ್ಸ್ಥಲ ಸಿದ್ಧಾಂತ, ಮುವತ್ತಾರುಸ್ಥಲ, ಏಕೋತ್ತರ ಸ್ಥಲ ಇತ್ಯಾದಿ ವೀರಶೈವ ಸಿದ್ಧಾಂತದ ರೂಪುರೇಖೆ ಆಗಮಗಳಿಂದ ಹಿಡಿದು ವಚನ ಸಾಹಿತ್ಯ ಹಾಗೂ ಇತ್ತೀಚಿನ ವೀರಶೈವ ಶಾಸ್ತ್ರಗ್ರಂಥಗಳಲ್ಲೂ ಕಂಡುಬರುವುದು. ಶಿವ–ಜೀವ–ಜಗತ್ತು ಇವುಗಳ ಸಮನ್ವಯವೇ ಎಲ್ಲೆಲ್ಲಿಯೂ ಇರುವ ಜಿಜ್ಞಾಸೆ. ಆಚಾರ-ವಿಚಾರ ಇವುಗಳನ್ನು ಎಲ್ಲರೂ ಒಪ್ಪಿದರೂ ಕೆಲವರು ಆಚಾರಪ್ರಧಾನಿಗಳು, ಕೆಲವರು ವಿಚಾರಪ್ರಧಾನಿಗಳು. ವೀರಶೈವರಿಗೆ ಆಚಾರವೇ ಪ್ರಧಾನ. ಶಿವನಿಗೂ-ಜೀವನಿಗೂ ಮಧ್ಯೆ ಪುರೋಹಿತನೊಬ್ಬ ಬಂದು, ವಿಧಿಗಳೂ, ಕರ್ಮಕಾಂಡಗಳೂ, ವಿಪುಲವಾಗಿವೆ. ಪುರೋಹಿತನಿಲ್ಲದೆ, ಗುರುವಿಲ್ಲದೆ, ನಾನೇ ಶಿವನನ್ನು ಕಾಣುತ್ತೇನೆಂದು ಅನೇಕ ಸಿದ್ಧಾಂತಿಗಳು ಹೊರಟಿದ್ದಾರೆ. ಅಂದ ಮೇಲೆ ಇತ್ತ ಕಡೆ ಆಧ್ಯಾತ್ಮ– ಅತ್ತ ಕಡೆ ವಿಧಿಕರ್ಮ, ಯೋಗ, ಯಜ್ಞ ಈ ಎರಡು ಮಾರ್ಗಗಳ ತುಮುಲ ಕೆಲವೆಡೆ ಅಪಹಾಸ್ಯದ ಎಲ್ಲೆಯನ್ನೂ ಮೀರುತ್ತದೆ. ಒಂದೊಂದು ಕಡೆ ಭಾರತೀಯ ಆದರ್ಶ ತಪೋಮಯ, ತ್ಯಾಗಮಯವಾಗಿಯೂ ಇದೆ. ವೀರಶೈವರೂ ಎರಡೂ ಮಾರ್ಗವನ್ನು ಹಿಡಿದರು. ಹಿಡಿದಿದ್ದಾರೆ; ಮುಂದೆಯೂ ಹಿಡಿಯುತ್ತಾರೆ.

ಶ್ರುತಿರ್ವಿಭಿನ್ನಾ ಸ್ಮೃತಯಶ್ಚ ಭಿನ್ನಾ ನೈಕೋ
ಮುನಿರ್ಯಸ್ಯ ಮತಃ ಪ್ರಮಾಣಂ
ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ ಮಹಾ
ಜನೋ ಯೇನ ಗತಃ ಸ ಪಂಥಾಃ

ಧಾರ್ಮಿಕ ಸಂಸ್ಕೃತ ಗ್ರಂಥಗಳು :

ಶಂಕರಾಚಾರ್ಯರ "ಬ್ರಹ್ಮಸೂತ್ರಭಾಷ್ಯ"— ಚತುಸ್ಸೂತ್ರಿ ಎಲ್ಲರಿಗೂ ಅನುಕರಣೀಯ ಗ್ರಂಥ. ಬ್ರಹ್ಮಾಸ್ಮಿ— ಬ್ರಹ್ಮೈವಾಸ್ಮಿ ಈ ಎರಡು ವಾದಗಳೇ ಮುಖ್ಯ ಧಾರ್ಮಿಕ ಗ್ರಂಥಗಳಲ್ಲಿ ವೀರಶೈವರು ಶಿವ–ಜೀವ–ಶಕ್ತಿ ಇತ್ಯಾದಿ ಕಲ್ಪಿಸಿ ಹೊರಡುತ್ತಾರೆ. ಶಕ್ತಿಶ್ಚ ಶಕ್ತಿಶ್ಚ–ಶಕ್ತೀ; ಶಕ್ತಿಭ್ಯಾಂ ವಿಶಿಷ್ಟಂ – ಶಕ್ತಿವಿಶಿಷ್ಟಂ, ತಾದೃಶಂ ಅದ್ವೈತಂ – ಶಕ್ತಿವಿಶಿಷ್ಟಾದ್ವೈತಂ ಇತ್ಯಾದಿ ವಿವೇಚಿಸಹೊರಟಿದ್ದಾರೆ. ಈ ಅನಂತ ಮಾರ್ಗಗಳನ್ನು ವಚನ ಶಾಸ್ತ್ರ ಅಂಗೀಕರಿಸದು.

"ದ್ವೈತಾದ್ವೈತಮನೋದಿ ಏನುಮಾಡುವುರಯ್ಯ?
ಉರಿಗೊಡ್ಡಿದರಗಿನಂತೆ (ಲಿಂಗದಲ್ಲಿ) ಕರಗದನಕ್ಕ"

ಎಂದಿದೆ ಬಸವಣ್ಣನ ವಚನ. ಅದು ಏನೇ ಇರಲಿ; ವೀರಶೈವ ಸಿದ್ಧಾಂತಗ್ರಂಥಗಳ ವಿಹಂಗಮ ನೋಟ ನೋಡೋಣ :

ಸಿದ್ಧಾಂತ ಗ್ರಂಥಗಳು :

(1) ಸಿದ್ಧಾಂತ ಶಿಖಾಮಣಿ (ಕ್ರಿ. ಶ. 1300)– ಶಿವಯೋಗಿ ಶಿವಾಚಾರ್ಯ

(2) ತತ್ವಪ್ರದೀಪಿಕಾ (ಸಿದ್ಧಾಂತಶಿಖಾಮಣಿವ್ಯಾಖ್ಯಾ) (ಸು–1700) - ಮರಿತೋಂಟದಾರ್ಯರ ಪಾಂಡಿತ್ಯ ಪೂರ್ವಕವಾದ ವ್ಯಾಖ್ಯಾನ.

(3) ಕೈವಲ್ಯ ಸಾರ: (ಸು–1560) –ವಿರಕ್ತ ತೋಂಟದಾರ್ಯ.

(4) ಕ್ರೀಯಾಸಾರ : ಸು. 1400 - ನೀಲಕಂಠಶಿವಾಚಾರ್ಯ : ಕಾರಿಕಾರೂಪದಲ್ಲಿ ಬ್ರಹ್ಮಸೂತ್ರಗಳಿಗೆ ಭಾಷ್ಯ.

(5) ಶ್ರೀಕರಭಾಷ್ಯಮ್; (ಸು. 1160) – ಶ್ರೀಪತಿ ಪಂಡಿತ. ಬೃಹದ್ಗ್ರಂಥ (ಹಯವದರಾಯರು ಸಂಪಾದಿಸಿದ್ದರು – ಈಗ ಪ್ರಾಚ್ಯ ವಿದ್ಯಾಸಂಶೋಧನಾಲಯದಲ್ಲಿ ಮುದ್ರಿತವಾಗಲಿದೆ). 6) ಬಸವರಾಜೀಯಂ : (1195) – ಪಾಲ್ಕುರಿಕೆ ಸೋಮನಾಥ.

7) ಅನ್ಯತೇಶ್ವರ ಭಾಷ್ಯಂ (ಸು. 1600, ಸರ್ವೇಶ್ವರ ಯತಿ,

8) ಶಿವಾದ್ವೈತ ಮಂಜರೀ; ( ); ಸ್ವಪ್ರಭಾನಂದ ಶಿವಾಚಾರ್ಯ.

9) ಶೃತಿಸಾರಭಾಷ್ಯಂ (?)

10) ಶಿವಸಹಸ್ರನಾಮ ಭಾಷ್ಯಂ (ಸಂಗಮೇಶ್ವರ ವಿಲಾಸ ಭಾಷ್ಯವರ್) (ಸು. 1700),—

ಸಂಗಮೇಶ್ವರ ಯತಿ.

ಇತ್ಯಾದಿ ಭಾಷ್ಯಗ್ರಂಥಗಳೂ, ವೀರಶೈವರ ಎಲ್ಲಾ ಸ್ಥಲ ನಿರೂಪಣೆ ವಿಸ್ತರಿಸಿ, ಪರವಾದನಿರಸನ ಮಾಡಿ 6, 36, 101 ಸ್ಥಲಗಳನ್ನು ವಿಸ್ಥರಿಸಿವೆ.

ಆಗಮ ಗ್ರಂಥಗಳನ್ನು ಅನುಸರಿಸಿ :

1) ದಿವ್ಯಾಗಮವನ್ನು ಅನುಸರಿಸಿ ಷಡಕ್ಷರ ಮಂತ್ರಿಯು (ಸು. 1700) ವೀರಶೈವ ಧರ್ಮ ಶಿರೋಮಣಿಯನ್ನೂ,

2) ಮಗ್ಗೆ ಮಾಯಿದೇವರು, ಸು. 1430, ಸಕಲಾಗಮವನ್ನೂ ಪ್ರಧಾನವಾಗಿ ವಾತುಲಾಗಮವನ್ನು ಅನುಸರಿಸಿ : ಅ] ಅನುಭವಸೂತ್ರಂ ಆ] ವಿಶೇಷಾರ್ಥ ಪ್ರಕಾಶಿಕಾ ಇ] ವೀರಶೈವೋತ್ಕರ್ಷಃ ಮತ್ತು ಈ] ಶತಕತ್ರಯಂ— ಗ್ರಂಥಗಳನ್ನು ರಚಿಸಿದ್ದಾರೆ.

ವೈದಿಕಾಧಾರದ ಮೇಲೆ, ಷಟ್ಸ್ಥಲವನ್ನು ನಿರೂಪಿಸಿದ ನಂದೀಶ್ವರನ "ಲಿಂಗಧಾರಣ ಚಂದ್ರಿಕಾ" ಇತ್ಯಾದಿಗಳೆಲ್ಲಾ ಚಿರಸ್ಮರಣೀಯ ಉದ್ಗ್ರಂಥಗಳಾಗಿವೆ. 6 36, 101 ಸ್ಥಲಗಳೇ ವೀರಮಾಹೇಶ್ವರಾಚಾರ್ಯ ಸಿದ್ಧಾಂತವೆನಿಸಿದೆ.

ವೀರಶೈವರಿಗೆ ವೇದಕ್ಕಿಂತ ಆಗಮ ಮಿಗಿಲಂತೆ :

ನೀಲಕಂಠ ಶಿವಾಚಾರ್ಯ (ಸು. 1400) ತನ್ನ "ಕ್ರಿಯಾಸಾರ"ದಲ್ಲಿ ಬ್ರಹ್ಮಸೂತ್ರಗಳನ್ನು, ವೀರಶೈವಕ್ಕೆ ಭಟ್ಟೀ ಇಳಿಸಿ– ಆಗಮಗಳು ವೇದಕ್ಕಿಂತ ಪುರಾತನ ಹಾಗೂ ಅಧಿಕ ಪ್ರಮಾಣಗಳೆಂದೂ ತನ್ನ ಕ್ರಿಯಾಸಾರದ 29ನೇ ಉಪದೇಶದಲ್ಲೂ ಮರಿತೋಂಟದಾರ್ಯನು ತನ್ನ ವೀರಶೈವಾನಂದ ಚಂದ್ರಿಕೆಯಲ್ಲಿ ವಾದ ಕಾಂಡದ 20ನೇ ಪ್ರಕರಣದಲ್ಲೂ ಉದಾಹರಿಸಿದ್ದಾರೆ. ಆಗಮಗಳು ವೇದಕ್ಕಿಂತ ಪ್ರಮಾಣವಲ್ಲವೆಂದು ಕೀಟಲೆ ಮಾಡಿದ ವೈದಿಕರಿಗಿದು ಉತ್ತರ.

(ಈ ಕೀಟಲೆಯೇ ಅವರವರ ವ್ಯಕ್ತಿತ್ವಕ್ಕೆ ಕೈಗನ್ನಡಿ)

ಈ ಎಲ್ಲ ಗ್ರಂಥಗಳು ವೀರಶೈವರಿಗೆ ಧರ್ಮಗ್ರಂಥಗಳು. ಲಿಂಗಧಾರಣೆ, ದೀಕ್ಷಾಶಿವಪೂಜೆ, ಬಿಲ್ವಾದಿ ಪೂಜೆ ಈ ತಂತ್ರಗಳಿಗೂ ಪ್ರಸ್ಥಾನವಿಲ್ಲಿದೆ. ಮರಿತೋಂಟದಾರ್ಯನ (ಸು. 1744) ತರ್ಕಶೈಲಿ, ಹಾಗೂ ಉಳಿದ ದರ್ಶನಗಳ ಸಮತೋಲನ ಇವು, ಆತನ ಪಂಡಿತಪ್ರಕಾಂಡತೆಯನ್ನೂ ತೋರಿಸುವುವು. ಆದ್ದರಿಂದ ಇದು ಅಮೂಲ್ಯ ಗ್ರಂಥ; ಈ ಗ್ರಂಥದ ವಾದಕಾಂಡ ಮುದ್ರಿತ. ಉಳಿದೆರಡು ಕಾಂಡಗಳು ಅಮುದ್ರಿತ.

ಈ ರೀತಿ ವೈದಿಕ ಗ್ರಂಥಗಳ ಪರಿಪಾಟಿಯನ್ನು ಅನುಸರಿಸಿವೆ ಈ ಮೇಲಿನ ಗ್ರಂಥಗಳು. ಆದರೆ ಉಳಿದ ಅನೇಕ ಗ್ರಂಥಗಳು ತಿಳಿಸುವುದು ಮುಖ್ಯವಾಗಿ ವೀರಶೈವ ಧರ್ಮಾಚರಣೆಯನ್ನೇ ಆದರೆ ಅವುಗಳ ಧಾಟಿ ಗೃಹಸೂತ್ರಗಳಂತೆ ಕೆಲವು, ಕೆಲವು ಲಿಂಗಾಂಗ ಸಾಮರಸ್ಯ, ಪಂಚಾಚಾರ್ಯ, ಅಷ್ಟಾವರಣ ಇತ್ಯಾದಿ ವಿಷಯದಲ್ಲಿ ಇದ್ದು ಪ್ರಸಿದ್ಧಿ ಪಡೆದಿವೆ. ಅವು ಒಂದು ರೀತಿಯಲ್ಲಿ ಪ್ರಯೋಗ ಗ್ರಂಥಗಳಂತೆ ಇವೆ.

1) ಮೌನಪ್ಪ ಪಂಡಿತನ (1744) ವೀರಶೈವಾಚಾರ್ಯ ಕೌಸ್ತುಭ. ವೀರಶೈವರಿಗೆ ಒಂದು ಬೃಹತ್ ಸ್ಮೃತಿಗ್ರಂಥ.

2) ಶಿವತತ್ತ್ವ ರತ್ನಾಕರ [1698-1715] — ಕೆಳದೀ ಬಸವ ಭೂಪತಿ— ಇದು ಒಂದು ಅಮೂಲ್ಯ ವಿಶ್ವಕೋಶ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾಸಂಶೊಧನಾಲಯಡಲ್ಲಿ ಮುದ್ರಿತವಾಗಿದೆ; ಒಂದು ಸಾಂಸ್ಕೃತಿಕ ಸಮಗ್ರತೆ ಇಲ್ಲಿ ಇದೆ.

3) ಲಿಂಗರಾಜೀಯ– (ವಿವೇಕ ಚಿಂತಾಮಣಿ) (ಸು. 1800) ಲಿಂಗರಾಜ : ಇದು ನಿಜಗುಣಶಿವಯೋಗಿಗಳ ವಿವೇಕ ಚಿಂತಾಮಣಿಯ ಸಂಸ್ಕೃತ ತರ್ಜುಮೆ. ಒಂದು ಉದ್ಗ್ರಂಥ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಇದನ್ನು ಮುದ್ರಿಸುತ್ತಿದೆ.

ಉಪಲಬ್ಧ ಮತ್ತು ಅನುಪಲಬ್ಧ ಸಾಹಿತ್ಯದ ಸಿಂಹಾವಲೋಕನ :

ವೀರಶೈವ ಸಂಸ್ಕೃತ ಸಾಹಿತ್ಯದ ಪ್ರಕಾರಗಳನ್ನು ಸಿಂಹಾವಲೋಕನದಿಂದ ಈ ರೀತಿ ಚಿತ್ರಿಸಬಹುದು.

1) ಮಹಾಕಾವ್ಯಗಳು :

* 1) ರೇವಣಸಿದ್ಧಚರಿತಂ— ಈಶಾನುಶಿವ ಗುರು : ಚತುಚತುರ್ಮುಖಬೊಮ್ಮರಸನ (ಸು. 1450) ರೇವಣಸಿದ್ದೇಶ್ವರ ಪುರಾಣದಿಂದ ಈ ಕೃತಿ ವಿದಿತವಾಗುತ್ತದೆ.

+ 2) ಹರಲೀಲಾ – ಉದ್ಭಟಾರಾಧ್ಯ : (ಸು. 1020) ಬ್ರಹ್ಮಶಿವನ ಸಮಯ ಪರೀಕ್ಷೆಯಿಂದ ಈ ಕೃತಿ ತಿಳಿದುಬರುತ್ತದೆ.

3) ಪ್ರಭುಲೀಲಾ– ದ್ವಿತೀಯ ಮುರಿಗಾಗುರುಸಿದ್ಧ (1700)

4) ಗಂಗೋದಯ ಕಾವ್ಯಮ್ – ಅನ್ನದಾನೀಶ

5) ಕವಿಕರ್ಣರಸಾಯನಂ– ಷಡಕ್ಷರೀ.

ಈ ಐದು ಕಂಡುಬಂದಿರುವ ಕಾವ್ಯಗಳು. ಕವಿದರ್ಣರಸಾಯನವು ಶ್ರೇಷ್ಠ ಮಹಾಕಾವ್ಯ. ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ "ಕವಿಕರ್ಣರಸಾಯನ"ವು ಮುದ್ರಿತವಾಗುತ್ತಿದೆ.

(2) ಪುರಾಣ ಕಾವ್ಯಗಳು :

(6) ಸಂಹಿತಾ (?)– ಸಂಹಿತಾ (ಸಂಹಿತೆಯ) ಕಾಳಿದಾಸಭಟ್ಟ : (ಸು–1025) ಮಹಲಿಂಗದೇವನ (1430), ಪ್ರಭುದೇವರ ಟೀಕೆ ವಚನದ ಪೀಠಿಕೆಯ ವಂಶಾವಳಿಯಿಂದ ವಿದಿತ.

(7) ಬಸವೇಶವಿಜಯಂ – ಕಂಚೀ ಶಂಕರಾರಾಧ್ಯ (ಸು. 1400)

(8) ಪಂಡಿತಾರಾಧ್ಯ ಚರಿತಮ್ ಗುರುರಾಜ. ಇವು ವೀರಶೈವರ ಇತಿಹಾಸಗ್ರಂಥಗಳೆನಿಸಿವೆ. ಕಾವ್ಯಾಂಶಗಳಿಂದಲೂ ಉನ್ನತ ದರ್ಜೆಗೆ ಸೇರಿದ ಕೃತಿಗಳಾಗಿವೆ.

(3) ನಾಟಕ

(9) ಶಿವಲಿಂಗಸೂರ್ಯೋದಯ:– ಮಲ್ಲನಾರಾಧ್ಯ (ಸು. 1700) ವೀರಶೈವ ಸಾಹಿತ್ಯದಲ್ಲಿ ಇದೊಂದೇ ದೊರೆತಿರುವ ನಾಟಕ, ಸಂಕಲ್ಪಸೂರ್ಯೋದಯ ಪ್ರಬೋಧ ಚಂದ್ರೋದಯಗಳ ರೀತಿಯಲ್ಲಿ ವೀರಶೈವ ಧರ್ಮ ಬೋಧಕ ಗ್ರಂಥವಾಗಿದೆ. ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಮುದ್ರಿಸಲನುವಾಗುತ್ತಿದೆ.

(4) ಗೇಯವಾಕ್ಯ:

(10) ಗೀತಗಂಗಾಧರ :– ಕಳಲೆ ನಂಜರಾಜ

(5) ಯೋಗ :

(11) ಶಿವಯೋಗಪ್ರದೀಪಿಕಾ – ಚನ್ನಸದಾಶಿವಯೋಗಿ, ಶಿವಯೋಗದ ಘನತೆಯನ್ನೂ, ಸಾಧನೆಯನ್ನೂ ಅದರ ಕ್ರಮಗಳನ್ನೂ ನಿರೂಪಿಸುವ ಅಮೂಲ್ಯ ಗ್ರಂಥ ರತ್ನ. ನಿಜಗುಣ ಶಿವಯೋಗಿಯ ಪರಮಾರ್ಥ ಪ್ರಕಾಶಿಕೆಯು ಈ ಗ್ರಂಥದ ಅನುವಾದ.

6) ವೈದ್ಯ :

+ 12) ರೇಶಣಸಿದ್ಧಕಲ್ಪಂ (ರೇವಣಸಿದ್ಧವಾಷ್ಯಂ) ರೇವಣಸಿದ್ಧ : (ಸು. 1105 ರಿಂದ 1190) ಬಸವರಾಜನ– ಬಸವರಾಜೀಯಂ ಎಂಬ ವೈದ್ಯಗ್ರಂಥದಿಂದ ಈ ಕೃತಿ ಸಿದ್ಧವಾಗುತ್ತಿದೆ.

13) ಬಸವರಾಜೀಯಂ — (ವೃಷರಾಜೀಯಂ) ಬಸವರಾಜ

14) ವೈದ್ಯಸಾರಸಂಗ್ರಹಂ, ಕಳಲೆ ನಂಜರಾಜ (ಸು. 1700)

ಬಸವರಾಜರ – ಬಸವರಾಜೀಯವು ಆಂಧ್ರದೇಶದಲ್ಲಿ ಮನೆ ಮಾತಾಗಿದೆ. ಈತನನ್ನು ವೀರಶೈವರ ಪೂಜ್ಯಪಾದನೆನ್ನಬಹುದು. ತಾನೇ ಆಂಧ್ರ ಟೀಕೆಯನ್ನು ರಚಿಸಿರುವನು.

7) ಭರತಶಾಸ್ತ್ರ

15. ಅಭಿನವ ಭರತಸಾರ ಸಂಗ್ರಹ : ತೃತೀಯ (ಮುಮ್ಮಡಿ) ಚಿಕ್ಕಭೂಪಾಲ, ಸು. 1600. ಉತ್ತಮ ಭರತ ಶಾಸ್ತ್ರದ ಗ್ರಂಥವಿದಾಗಿದೆ.

8) ನ್ಯಾಯ

16. ಕಣಾದ ಸಂಗ್ರಹ ವಿವರಣಂ – ಕಳಲೆ ನಂಜರಾಜ : ಸು. 1700. ಇದು ವೈಶೇಷಿಕ ಗ್ರಂಥ. ಸಪ್ತ ಪದಾರ್ಥಗಳನ್ನು ವಿವರಿಸುತ್ತದೆ.

9) ಸಂಗ್ರಹ ಗ್ರಂಥ

17. ಹರಿಮಹಾತ್ಮ್ಯ ದರ್ಪಣಮ್, ಕೆಳದೀ ಬಸವ ಭೂಪ, (1698–1715). ಇದು ವೈಷ್ಣವ ಧರ್ಮ ಸಂಗ್ರಹ ರೂಪವಾಗಿದೆ.

18. ಶಿವಪ್ರಸಂಗ ರತ್ನಾಕರ, ವೃಷಭಲಿಂಗ ಶಿವಯೋಗೀ. ಇದು ವೀರಶೈವ ಧರ್ಮ ಸಂಗ್ರಹರೂಪ.

10) ವಿಶ್ವಕೋಶ

19. ಶಿವತತ್ತ್ವ ರತ್ನಾಕರ, ಕೆಳದೀಬಸವಭೂಪ.

20. ಲಿಂಗರಾಜೀಯಾ (ವಿವೇಕಚಿಂತಾಮಣಿ— ಲಿಂಗರಾಜ, ಸು. 1800; ಇವೆರಡು ವಿಶ್ವಕೋಶಗಳು.

11) ಸುಭಾಷಿತ

21. ಸುಭಾಷಿತ ಸುರದ್ರುಮ, ಕೆಳದೀಬಸವಭೂಪ

22. ಸೂಕ್ತಿಸುಧಾಕರ, (ಸಂಸ್ಕೃತ ಕರ್ಣಾಟೋಭಯ ಭಾಷಾತ್ಮಕ) ಕೆಳದೀ ಬಸವಭೂಪ, ಇವೆರಡು ಸುಭಾಷಿತ ಬೃಹದ್ಗ್ರಂಥಗಳು.

12) ಶತಕ

23. ಶಿವಾದವಶತಕವ್, ಮಗ್ಗೆ ಮಾಯಿದೇವ ಪ್ರಭು, ಸು. 1430.

24. ಶಿವಾವಲ್ಲಭ ಶತಕಂ.

25. ಐಪುರೀಶ್ವರ ಶತಕಂ.

26. ಜ್ಞಾನಶತಕಂ, ಸರ್ಪಭೂಷಣ ಶಿವಯೋಗೀ 1795-1839.

27. ಆರ್ಯಶತಕಂ, ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿ, 1843-91. ಎಲ್ಲಾ ಸಾಹಿತ್ಯಗಳಲ್ಲೂ ಈ ಶತಕ ಸುಭಾಷಿತ ಅನ್ಯೋಕ್ತಿ, ಸ್ತೋತ್ರ ಇತ್ಯಾದಿ ಗ್ರಂಥಗಳು ಬಹಳ ಜನಪ್ರಿಯ. ಅದರಂತೆ, ಇವೂ ಜನಪ್ರಿಯವಾಗಿವೆ.

13) ಗೀತಾ

28. ಪ್ರಭುಗೀತಾ· ಮಗ್ಗೆಮಾಯಿದೇವಪ್ರಭು. ಇದು ಪ್ರಭುದೇವರ ವಚನದ ಸಂಸ್ಕೃತಾನುವಾದವೆಂದು ತಿಳಿದುಬರುತ್ತದೆ.

× 29. ಶಂಕರಗೀತಾ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಸು. 1130-1169.

30. ಆನಂದಗೀತಾ, ಸು. 1130-69. ಮಲ್ಲಿಕಾರ್ಜುನ ಪಂಡಿತಾರಾಧ್ಯ.

14) ಗದ್ಯ 31. ಲಿಂಗೋದ್ಭವಗದ್ಯಂ, ಮಲ್ಲಿಕಾರ್ಜುನ ಪಂಡಿತಾರಾಧ್ಯ.

32. ಭೀಮೇಶ್ವರಗದ್ಯ, ಮ. ಪಂಡಿತಾರಾಧ್ಯ ; ಗುರುರಾಜನಸಂಸ್ಕೃತ, ಪಂಡಿತಾರಾಧ್ಯ ಚರಿತದಿಂದ ಈ ಗದ್ಯ ರಚನೆ ಗೊತ್ತಾಗುತ್ತದೆ.

33. ಬಸವಾಕ್ಷರಮಾಲಾಗದ್ಯಂ, ಪಾಲ್ಕುರಿಕೆ ಸೋಮನಾಥ, ಸು. 1195.

34. ಬಸವೋದಾಹರಣಗದ್ಯಂ.

35. ಪಂಚಪ್ರಕಾರಗದ್ಯಂ.

36. ಅಕ್ಷರಾಂಕಗದ್ಯಂ.

37. ನಮಸ್ಕಾರಗದ್ಯಂ.

38 ವೀರಭದ್ರೋದಾಹರಣಗದ್ಯಂ, ಷಡಕ್ಷರೀಶ, ಸು. 1185.

15) ಏಕೋತ್ತರ ಶತಸ್ಥಳಬೋಧಕ ಗ್ರಂಥಗಳು (ಸಿದ್ಧಾಂತ ನಿರೂಪಕ)

39. ಸಿದ್ಧಾಂತ ಶಿಖಾಮಣಿ, ಶಿವಯೋಗಿ ಶಿವಾಚಾರ್ಯ, ಸು. 1300.

(40) ಏಕೋತ್ತರಶತಸ್ಥಳೀ— ಜಕ್ಕಣಾರ್ಯ (ಸು–1300)

41. ವೀರಶೈವಾನಂದ ಚಂದ್ರಿಕಾ— ಮರಿತೋಂಟದಾರ್ಯ: (ಸು-1744)

(42) ವೀರಶೈವಾಚಾರ್ಯಕೌಸ್ತುಭ : – ಮೌನಪ್ಪ ಪಂಡಿತ (ಸು-1744)

(43) ಕೈವಲ್ಯ ಸಾರ :– ವಿರಕ್ತ ತೋಂಟದಾರ್ಯ (ಸು–1560)

(16) ಬ್ರಹ್ಮಸೂತ್ರಭಾಷ್ಯ :

(44) ಶ್ರೀಕರಭಾಷ್ಯವ್— ಶ್ರೀ ಪ ತಿ ಪಂ ಡಿ ತ: (ಸು. 1020)

(45) ಕ್ರಿಯಾಸಾರ:- ನೀಲಕಂಠಶಿವಾಚಾರ್ಯ (ಸು-1420) ಇವು ಬಹ್ಮ ಸೂತ್ರ ಭಾಷ್ಯಗಳು.

(17) ಭಾಷ್ಯಗಳು:–

(40) ವೇದಭಾಷ್ಯವ್- ಹರಭಕ್ತ: (ಸು-1250)- ಚನ್ನಬಸವಪುರಾಣದಿಂದ ಈ ಗ್ರಂಥವಿರುವುದು ವ್ಯಕ್ತವಾಗುತ್ತದೆ.

(47) ಪುರಷಸೂಕ್ತಭಾಷ್ಯಂ – ವೃಷಭಪಂಡಿತ :

(48) ಈಶ – ಕೇನ - ಕಠೋಪನಿಷದ್ಭಾಷ್ಯಾಣಿ ಉಮಚಿಗಿಶಂಕರಶಾಸ್ತ್ರಿ (1930)

(49) ಶೃತಿಸಾರಭಾಷ್ಯವ್ (?)

(50) (51), (52) ರೇಣುಕ ಭಾಷ್ಯವ್- ಏಕೋರಾಮಭಾಷ್ಯವ್— ಮಂಚಣಪಂಡಿತೀಯವ್- ಈ ಭಾಷ್ಯಗಳು ಶ್ರೀ ಕರಭಾಷ್ಯದಿಂದ ವಿದಿತವಾಗುತ್ತವೆ.

ಇವು ವೇದಭಾಷ್ಯಗಳು. ಈ ಸಿದ್ಧಾಂತವನ್ನು ವೇದಾಧಾರಗಳಿಂದ ಸಿದ್ಧಮಾಡುತ್ತವೆ.

(53) ಸೋಮನಾಥ ಭಾಷ್ಯವ್ - (ಬಸವರಾಜೀಯವ್. -ಪಾಲ್ಕುರಿಕೆ ಸೋಮನಾಥ (ಸು–1195)

(54) ಅಮೃತೇಶ್ವರ ಭಾಷ್ಯವ್–ಸಪ್ಪೇಶ್ವರಯತಿ: (ಸು–1600)

(55) ಶಿವಸಹಸ್ರಪ್ರಣಾಮಭಾಷ್ಯವ್ ಸಂಗಮೇಶ್ವರ ವಿಲಾಸಭಾಷ್ಯವ್, ಸಂಗಮೇಶ್ವರಯತಿ (ಸು–1700)

(56) ಯತ್ಸಂವಿತ್ತಿ : ಎಂಬ ನಾಲ್ಕಕ್ಷರಗಳ ಭಾಷ್ಯ- ಮಲ್ಲಿಕಾರ್ಜುನಪಂಡಿತಾರಾಧ್ಯ: ಈ ಭಾಷ್ಯವಿಚಾರ ಸಂಸ್ಕೃತ ಪಂಡಿತಾರಾಧ್ಯ ಚರಿತೆಯಿಂದ ವಿದಿತ. ಇವು ಚಾರ್ವಾಕಾದಿಮತನಿವಾರಕ ಭಾಷ್ಯಗಳು.

(18) **ಆಗಮ:–**

(57) ಕೌಮುದೀವ್ಯಾಖ್ಯಾನವ್–ತ್ರಿವಿಧಿಕವೀಶ್ವರ ತೃತೀಯ (ಮುಮ್ಮಡಿ) ತಮ್ಮ ನೃಪ : (ಸು: 1665 (ಲಿಂಗವಂತಕವಿಗಳು ಪು-93)

20) 58) ರಸಿಕಮನೋರಂಜನವ್ - ತೃತೀಯ ತಮ್ಮ ನೃಪ (1665 ಸುಮಾರು)

(60) ಕವಿಸಮಯವಿಲಾಸ:– ಸೋಸಲೆ ರೇವಣಾರಾಧ್ಯ : (1623)

(21) ವ್ಯಾಖ್ಯಾನಗಳು:–

(61) ಸಿದ್ಧಾಂತಶಿಖಾಮಣಿವ್ಯಾಖ್ಯಾ (ತತ್ವಪ್ರದೀಪಿಕಾ)– ಮರಿತೋಂಟದಾರ್ಯ: (ಸು-1744)

(62) ಕ್ರಿಯಾಸಾರವ್ಯಾಖ್ಯಾ - ನಿರ್ವಾಣಮಂತ್ರಿ, (ಸು–1700)

(63) ಸವ್ಯಾಖ್ಯಾಪಂಚಶ್ಲೋಕೀ (ಹರದತ್ತಾಚಾರ್ಯಕೃತ ಪಂಚಶ್ಲೋಕವ್ಯಾಖ್ಯಾ)–ಕೆಳದೀ ವೀರಭದ್ರನೃಪಾಲ :

(64) ಕವಿ ಕರ್ಣರಸಾಯನ ವ್ಯಾಖ್ಯಾ (ಸುಧೋದಯ)– ವೆಂಗನಸುಧೀ: (ಸು-1700)

(65) ವಿಕ್ರಮೋರ್ವಶೀಯ ವ್ಯಾಖ್ಯಾ -ವೇಮಭೂಪಾಲ

(66) ಶಾಕುಂತಲ ವ್ಯಾಖ್ಯಾ – ವೇಮಭೂಪಾಲ:

(67) ತಾತ್ಪರ್ಯಸಂಗ್ರಹವ್ಯಾಖ್ಯಾ (ಶ್ರುತಿಸೂತ್ರರತ್ನಮಾಲಾ ವ್ಯಾಖ್ಯಾ)- ಶಿವಲಿಂಗಭೂಪತಿ:

(22) ಸ್ತೋತ್ರ :

(68) ಶ್ರೀ ಮುಖದರ್ಶನಂ – ಮಲ್ಲಿಕಾರ್ಜುನ ಪಂಡಿತಾರಾಧ್ಯ.

69. ರುದ್ರಮಹಿಮಾ. „

70. ಸ್ತುತಿಶ್ಲೋಕಪಂಚಕಂ. „

71. ಅಮರೇಶ್ವರಾಷ್ಟಕಂ. „

72. ಪರ್ವತವರ್ಣನಂ. „

73. ಸಂಸಾರಮಾಯಾಸ್ತವ : „

ಶಿವಶರಣರ ಚರಿತ್ರೆಗಳು

ಭಾಗ 3, ಸು. 176ರಲ್ಲಿ

74. ವೃಷಭಾಷ್ಟಕಂ, ಪಾ. ಸೋಮನಾಥ 1195

75. ಶಿವಸ್ತವ ಮಂಜರೀ, ಷಡಕ್ಷರೀಶ, 1665.

76. ಸಮಶ್ರೈವಾಯಾಷ್ಟಕಂ. „

77. ಅನಾದಿಸಿದ್ಧಲಿಂಗಾಷ್ಟಕಂ. „

78. ಶಿವಸ್ತೋತ್ರ ಸುಮಂಗಲೀ. „

79. ಇಂದುಧರಸ್ತೋತ್ರಂ. „

80. ಶತಮಾನಸಸ್ತೋತ್ರಂ. „

81. ಇಷ್ಟಲಿಂಗಾಷ್ಟಕಂ. „

82. ಇಷ್ಟಲಿಂಗಸ್ತವನಂ. „

83. ಬಸವಾಷ್ಟಕಂ. „

84. ನೀಲಾಂಬಿಕಾ ಸ್ತೋತ್ರಂ. „

85. ಷಡಕ್ಷರ ಮಂತ್ರ ಸ್ತೋತ್ರಂ. „

86. ತತ್ತ್ವತ್ರಯಸ್ತೋತ್ರಂ. „

87. ತ್ರಿಷಷ್ಟಿಪುರಾತನಸ್ತವ, ಅಭಿನವ ಕಾಳಿದಾಸ ಬಸಪ್ಪಶಾಸ್ತ್ರೀ, 1843-91

88. ಶಿವಾಷ್ಟಕಂ. „

89. ಅಂಬಾಷೋಡಶಮಂಜರೀ. „

90. ಶಿವಭಕ್ತಿ ಸುಧಾರಸತರಂಗಿಣೀ. „

91. ದಕ್ಷಿಣಾಮೂರ್ತಿ ಸ್ತೋತ್ರಂ. „

23] ವಿಧಿಗಳು (ಪ್ರಯೋಗ).

92. ವೀರಶೈವಾಚಾರಕೌಸ್ತುಭ, ಕ್ರಿಯಾಕಾಂಡ, ಮಾನಪ್ಪ ಪಂಡಿತ.

93. ಬಿಲ್ವವೃಕ್ಷ ಪೂಜಾನಿಧಿ, ಅಭಿನವಕಾಳಿದಾಸ ಬಸವಪ್ಪಶಾಸ್ತ್ರೀ.

24] ಧಾರ್ಮಿಕ ಪ್ರಬಂಧ, (ಅನುಪಲಬ್ಧ)

94. ಸೋಮಶಂಭುಪದ್ಧತಿ, ಸೋಮಶಂಭು, ಸು. 1100.

95. ಕ್ರಿಯಾಸಾರ. 96. ಸಂಸಾರದೀಪಿಕಾ.
97. ವಾಮದಕ್ಷಿಣ ಸಿದ್ಧಾಂತ.
98. ಶಿವಜ್ಞಾನವಿದ್ಯಾ. 99. ಲಿಂಗಸಾರ.
100. ತತ್ತ್ವಸಾರ. 101. ಸ್ವಚ್ಛಂದಲಲಿತಭೈರವ.
102. ಕ್ರಿಯಾತಿಲಕ.

ಇವು ಜ್ಯೋತಿನಾಥನ ಶೈವರತ್ನಾಕರದಿಂದ ತಿಳಿದು ಬರುತ್ತವೆ.

103. ಸಾನಂದಚರಿತಂ– ಪದ್ಮರಾಜ. (ಕೆರೆಯ ಪದ್ಮರಸ) ಸು–1180

104. ಶಿವತಂತ್ರ್ಯ:ಕಕರ್ತಾ ವಿಶ್ವನಾಥ ದೇಶಿಕ. (ಆರಾಧ್ಯಚಾರಿತ್ರದಿಂದ)

105. ಶಿವಜ್ಞಾನದೀಪಿಕಾ – ಮಲ್ಲಯಾರ್ಯಗುರು.

109. ಸಾರೋದ್ಧಾರ;– ಲಕ್ಷ್ಮಿದೇವಗುರು:

107. ಶಿವಜ್ಞಾನಸಮುಚ್ಚಯ : – (ಸು-1165) ಜಗದಾರಾಧ್ಯನಾಗೇಶಗುರು : ವೀರಮಾಹೇಶ್ವರಾಚಾರ ಸಂಗ್ರಹದಿಂದ ವ್ಯಕ್ತವಾಗುತ್ತವೆ ಈ ಕೃತಿಗಳು.

108. ಆತ್ಮತರ್ಕ ಚಿಂತಾಮಣಿ :- ನಿಜಗುಣಶಿವ ಯೋಗಿ (ಸು–1500)

109. ದರ್ಶನಸಾರ:–ನಿಜಗುಣಶಿವಯೋಗಿ:

(25) ಧಾರ್ಮಿಕ ಪ್ರಬಂಧ ಉಪಲಬ್ಧ : –

110. ಶೈವರತ್ನಾಕರ– ಜ್ಯೋತಿನಾಥ(ಸು-1100)

111. ಶಿವಾದ್ವೈತಮಂಜರೀ– ಸ್ವಪ್ರಭಾನಂದಶಿವಾಚಾರ್ಯ

112. ವೀರಮಾಹೇಶ್ವರಾಚಾರ ಸಂಗ್ರಹ : - ನೀಲಕಂಠನಾಗನಾಥಚಾರ್ಯ : (ಸು–1300)

113. ವೀರಶೈವ ಧರ್ಮಶಿರೋಮಣಿ : - ಷಡಕ್ಷರ ಮಂತ್ರಿ : (1700)

114. ಮಾಚಿದೇವಮನೋವಿಲಾಸ : – ಆನಂದ ಬಸವಲಿಂಗಯೋಗಿ (ಸು–1700)

115. ಅನಾದಿವೀರಶೈವಸಂಗ್ರಹ : – ಸಂಪಾದನಾ ಸಿದ್ಧವೀರಣಾರ್ಯ : (ಸು-1600)

116. ವೀರಶೈವಾಚಾರಸುಧಾನಿಧಿ : - ಗುರುಬಸವ (ಸು–1700)

117. ವೀರಶೈವಸಿದ್ಧಾಂತಪ್ರಮಥಗಣಸ್ತುತಿ : — ಸೋಸಲೆ ರೇವಣಾರ್ಯ : (ಸು-1623)

118. ಶಿವಾಧಿಕ್ಯಶಿಖಾಮಣಿ : - ”

119. ಶಿವಾಧಿಕ್ಯಪ್ರದೀಪಿಕಾ ”

120. ಕರ್ಮಪಾಕ ಪ್ರದೀಪಿಕಾ ”

121. ಭಕ್ತಾಧಿಕ್ಯರತ್ನಾವಳಿ : ಷಡಕ್ಷರೀಶ (ಸು-1665)

122. ಶಿವಾಧಿಕ್ಯ ರತ್ನಾವಳಿ : ”

123. ಸಿದ್ಧಾಂತದೀಪಿಕಾ - ಸರ್ವಾತ್ಮಶಂಭು :

124. ಅನುಭವಸೂತ್ರಮ್– ಮಗ್ಗೆ ಮಾಯಿದೇವ ಪ್ರಭು: (ಸು–1430)

125. ವಿಶೇಷಾರ್ಥಪ್ರಕಾಶಿಕಾ ”

126. ಶತಕತ್ರಯಮ್ ”

127. ಜ್ಞಾನಶತಕಮ್ - ಸರ್ಪಭೂಷಣ ಶಿವ ಯೋಗಿ; (1795-1839)

128. ವೇದಾಂತಸಾರ ವೀರಶೈವಚಿಂತಾಮಣಿ : ನಿಟ್ಟೂರು ನಂಜಣಾರ್ಯ :

129. ಶಿವಯೋಗಚಿಂತಾರತ್ನ :- ವೃಷಭ ಯೋಗೀಂದ್ರ

130. ವೀರಶೈವಾನಂದಚಂದ್ರಿಕಾ - ಮರಿತೋಂಟದಾರ್ಯ : (ಸು–1744)

ಹೀಗೆಯೇ ಚಿಕ್ಕ ದೊಡ್ಡ ಗ್ರಂಥಗಳನ್ನು ಬೆಳಸುತ್ತಾ ಹೋದರೆ ಸುಮಾರು 300ಕ್ಕೂ ಮಿಗಿಲಾಗಬಹುದು. ವೀರಶೈವ ಸಂಸ್ಕೃತ ಸಾಹಿತ್ಯದ ಸಮಗ್ರ ಸರ್ವೆಯನ್ನು ಮಾಡಿ ತೋರಿಸುವುದು, ಈ ಪುಟ್ಟಲೇಖನದಲ್ಲಿ ಸಾಧ್ಯವಾಗದು. ಸ್ಥೂಳವಾಗಿ ಮಾತ್ರ ಇಲ್ಲಿ ದಿಗ್ದರ್ಶನ ಮಾಡಲಾಗಿದೆ.

ಇಷ್ಟು ವೀರಶೈವ ಸಂಸ್ಕೃತ ಸಾಹಿತ್ಯದ ಸಿಂಹಾವಲೋಕನ.

ಸಂಸ್ಕೃತದಲ್ಲಿ ವೀರಶೈವಸಾಹಿತ್ಯವನ್ನು ಕಾಲದೇಶವನ್ನು ಅನ್ನುಸರಿಸಿ ಇಲ್ಲಿ ಸಂಗ್ರಹಿಸಿದೆ. ವೀರಶೈವ ಮಹಾಸಭೆಯ ಕಾರ್ಯ ಕ್ಷೇತ್ರ ಹೇಗಿದೆ ಎಂಬುದು ನನಗೆ ತಿಳಿಯದು. ಸಾಧ್ಯವಾಡಲ್ಲಿ ವೀರಶೈವರ ಅಮುದ್ರಿತಗ್ರಂಥಗಳುನ್ನು ಸರಿಯಾದ ಅಂದರೆ ತಲೆ ಕೆಡಿಸಿಕೊಂಡಿಲ್ಲದ ಪಂಡಿತರಿಂದ ಶೋಧಿಸಿ ಅವುಗಳನ್ನು ಮುದ್ರಿಸುವುದಾದರೆ ಬಹಳ ಜನೋಪಕಾರಕವಾಗುತ್ತದೆ. ಸಂಸ್ಕೃತವನ್ನು ವೀರಶೈವರು ಕರಗತಮಾಡಿಕೊಳ್ಳುವುದು ಉತ್ತಮ. ವಾಚಕರಿಗೆ ಈ ಸಂಸ್ಕೃತ ಗ್ರಂಥ ಸಿದ್ಧಾಂತ ಹಾಗೂ ವಚನಶಾಸ್ತ್ರ ಸಿದ್ಧಾಂತ ಇವುಗಳಲ್ಲಿ ಯಾವುದು ಗ್ರಾಹ್ಯವೆಂದರೇ ತ್ರಿಕರಣಶುದ್ಧರಾದ ವಚನಕಾರರ ಸಿದ್ಧಾಂತವೇ ವೀರಶೈವ ಸಿದ್ಧಾಂತ. ಅದರ ಬೆಳಕಿನಲ್ಲಿ ಉಳಿದವನ್ನು ವಿವೇಚಿಸಬೇಕೆಂದೇ ನನ್ನ ಪ್ರಾರ್ಥನೆ. ಉಳಿದಂಶಗಳು ಮಹಾಜನರಿಗೆಸೇರಿದವು.

ಹಳ್ಳಿಗೊಂದು ಬಾವಿ

ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಕುಡಿಯಲು ಶುದ್ಧ ನೀರು ದೊರೆತರೆ ಮಾತ್ರ ಜನತೆಯ ಆರೋಗ್ಯ ರಕ್ಷಣೆಯಾಗುವುದು.

ರಾಜ್ಯದಲ್ಲಿಯ ಪ್ರತಿಯೊಂದು ಹಳ್ಳಿ ಮತ್ತು ಹಟ್ಟಿಗೆ ಒಂದಾದರೂ ಒಳ್ಳೆಯ ಕುಡಿಯುವ ನೀರಿನ ಬಾವಿಯನ್ನು ಒದಗಿಸಲು ಕರ್ನಾಟಕ ಸರ್ಕಾರ ಬದ್ಧಕಂಕಣವಾಗಿ ಭರದಿಂದ ಪ್ರಗತಿಯನ್ನು ಸಾಧಿಸುತ್ತಿದೆ.

ಕರ್ನಾಟಕದಲ್ಲಿ 26,826 ಹಳ್ಳಿ ಮತ್ತು 17,258 ಹಟ್ಟಿಗಳಿವೆ. ನಾಲ್ಕನೇ ಪಂಚ ವಾರ್ಷಿಕ ಯೋಜನೆಯ ಕೊನೆಗೆ ಕೇವಲ 227 ಹಳ್ಳಿ, 520 ಹಟ್ಟಿಗಳನ್ನು ಬಿಟ್ಟು ಉಳಿದ ಎಲ್ಲ ಗ್ರಾಮಗಳು ಮತ್ತು ಹಟ್ಟಿಗಳು ಕುಡಿಯುವ ನೀರಿನ ಸೌಲಭ್ಯವನ್ನು ಪಡೆದಿವೆ. ಬರ ಗಾಲಕ್ಕೆ ಹಾಗೂ ಸಾಂಕ್ರಾಮಿಕ ರೋಗಗಳಿಗೆ ಈಡಾಗುವ ಜಿಲ್ಲೆಗಳಲ್ಲಿ 210.55 ಲಕ್ಷ ರೂ.ಗಳ ವೆಚ್ಚದ 1,293 ಕೊಳವೆ ಬಾವಿಗಳ ಯೋಜನೆಯನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ ಈಗಾಗಲೇ 231 ಕೊಳವೆ ಬಾವಿಗಳ ನಿರ್ಮಾಣ ಕಾರ್ಯ ಮುಗಿದಿದೆ. ಕೊಳವೆ ಬಾವಿಗಳು ಸಾಂಕ್ರಾಮಿಕ ರೋಗಗಳ ಸಮಸ್ಯೆಯನ್ನು ನಿವಾರಿಸುತ್ತವೆ.

ದೊಡ್ಡ ಹಳ್ಳಿಗಳಿಗೆ ನಲ್ಲಿಯ ನೀರನ್ನು ಒದಗಿಸಲು ರಾಷ್ಟ್ರೀಯ ಯೋಜನೆಯೊಂದಿದೆ. ಇದರನ್ವಯ ಈವರೆವಿಗೆ 1,248 ಯೋಜನೆಗಳನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ 663 ಯೋಜನೆಗಳು ಪೂರ್ತಿ ಹೊಂದಿವೆ.

ಐದನೇ ಯೋಜನಾವಧಿಯಲ್ಲಿ ಎಲ್ಲ ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು "ಮೂಲ ಅಗತ್ಯತೆಗಳ ಕಾರ್ಯಕ್ರಮ"ವೊಂದನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ನೀರಿನ ಸೌಲಭ್ಯವಿಲ್ಲದೇ ಇರುವ ಎಲ್ಲ ಹಳ್ಳಿ ಮತ್ತು ಹಟ್ಟಿಗಳಿಗೆ ಬಾವಿಗಳನ್ನು ಒದಗಿಸಲಾಗುವುದು. ಅಲ್ಲದೆ 4,600 ಗ್ರಾಮಗಳಲ್ಲಿ 99,415 ಕೊಳವೆ ಬಾವಿಗಳನ್ನು ನಿರ್ಮಿಸುವ ಯೋಜನೆ ಇದೆ. 15 ಕೋಟಿ ರೂ.ಗಳನ್ನು ಇದರ ವೆಚ್ಚಕ್ಕಾಗಿ ತಾತ್ಕಾಲಿಕವಾಗಿ ನಿಗದಿ ಮಾಡಲಾಗಿದೆ.

(ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಿಂದ ಪ್ರಕಟಿತ)

ದಾನಿಗಳಿಗೊಂದು ಸದವಕಾಶ

ಇತ್ತೀಚೆಗೆ ಶ್ರೀ ಸಿದ್ಧಗಂಗಾ ಕ್ಷೇತ್ರದ ಶ್ರೀ ಶ್ರೀಗಳವರು ಸರ್ಕಾರೀ ಸಹಾಯ ಧನವನ್ನು ನಿರಾಕರಿಸಿದ್ದಾರೆ. ಪವಿತ್ರ ವಾತಾವರಣದಲ್ಲಿ ಉತ್ತಮ ಶಿಕ್ಷಣ ನೀಡಲು ನಿರ್ಧರಿಸಿದ್ದಾರೆ. ಸಂದರ್ಭದಲ್ಲಿ ಶ್ರೀ ಮಠದ ಭಕ್ತಮಂಡಳಿಯು ತನ್ನ ಸಹಕಾರ ಬೆಂಬಲಗಳನ್ನು ಸೂಚಿಸುವ ಸಲುವಾಗಿ ಕೆಳಕಂಡ ಎರಡು ಯೋಜನೆಗಳನ್ನು ರೂಪಿಸಿಕೊಂಡಿದೆ.

ಒಂದು ರೂ. ಯೋಜನೆ

(ಶ್ರೀ ಮಠದ ಎಲ್ಲಾ ರೀತಿಯ ಭಕ್ತಾಗ್ರಣಿಗಳಿಗಾಗಿ)

* ಪ್ರತಿ ತಿಂಗಳು ಒಂದು ರೂ. ಅರ್ಪಿಸುವುದು.
* ಮನಿಯಾರ್ಡರು ದ್ವಾರಾ ಕಳುಹಿಸಬಹುದು.
* ಮೊದಲ ಬಾರಿ ಶ್ರೀಗಳವರಿಂದ ಪತ್ರ ಬರುತ್ತದೆ.
* ಪ್ರತಿ ತಿಂಗಳು ಶ್ರೀಗಳವರೇ ಹಣ ಪಡೆದು ಸಹಿ ಮಾಡಿದ ಕೂಪನ್ ಬರುತ್ತದೆ.
* ಒಂದು ರೂಪಾಯಿ ಕಳಿಸುವುದು ಯಾರಿಗೂ ಹೊರೆಯಾಗಲಾರದು.
* ಪ್ರತಿಯೊಬ್ಬರ ಒಂದೊಂದು ರೂ. ಹಲವು ಸಹಸ್ರಗಳೇ ಆಗಿ ಶ್ರೀಗಳವರ ಪುಣ್ಯ ಕಾರ್ಯಕ್ಕೆ ಸಹಕಾರಿಯಾದೀತು.

ಪ್ರತಿ ಶತ ಒಂದು ರೂ. ಯೋಜನೆ

(ಶ್ರೀ ಮಠದ ಎಲ್ಲಾ ಹಳೆಯ ವಿದ್ಯಾರ್ಥಿಗಳು ಮತ್ತು ಆ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ)

* ನಿಮಗೆ ಪ್ರತಿ ಮಾಹೆ ನಿರ್ದಿಷ್ಟ ಆದಾಯ ಉಂಟು.
* ಅದರಲ್ಲಿ ಪ್ರತಿ ಶತ ಒಂದು ರೂ. (*One per cent*) ಶ್ರೀ ಮಠಕ್ಕೆ ಕಳುಹಿಸುವುದು.
* ಒಬ್ಬೊಬ್ಬರೇ ಕಳುಹಿಸಬಹುದು ಅಥವಾ ಹಲವರು ಒಟ್ಟಾಗಿ ಕಳಿಸಬಹುದು.
* ಚೆಕ್, ಡ್ರಾಫ್ಟ್ ಅಥವಾ ಎಂ.ಓ. ಕಳುಹಿಸಬಹುದು.
* ಶ್ರೀ ಶ್ರೀಗಳವರ ಹೆಸರಿಗೇ ಕಳುಹಿಸಬೇಕು.

ಜೀವನದಲ್ಲಿ ದಾನ ಮಾಡುವವರು ಇಷ್ಟು ಉತ್ಕೃಷ್ಟ ದಾನವನ್ನು ಮಾಡಲು ಹಿಂಜರಿಯಬಾರದು. ಇದಕ್ಕೂ ಶ್ರೇಷ್ಠ ಪಾತ್ರತ್ವ ನಿಮ್ಮ ದಾನಕ್ಕೆ ಅನ್ಯತ್ರ ದೊರೆಯದು. ಇದು ಸುಸಮಯ, ಅಪರೂಪದ ಅವಕಾಶ. ಈ ತಿಂಗಳಿನಿಂದಲೇ ಕಾರ್ಯರೂಪಕ್ಕೆ ತನ್ನಿ. ಇಂದೇ ಕಳಿಸಿರಿ. ಪುಣ್ಯ ಕಾರ್ಯಕ್ಕಾಗಿ ಉದಾರ ನೆರವು ನೀಡಿರಿ.

ಇತಿ

ಭಕ್ತ ಮಂಡಳಿ